ಹುಬ್ಬಳ್ಳಿ
ಶುಕ್ರವಾರ, 6 ಮಾರ್ಚ್ 2026
ಸಂಪುಟ 15, ಸಂಚಿಕೆ 347, ಪುಟಗಳು 12
■ಹುಬ್ಬಳ್ಳಿ ■ಬೆಂಗಳೂರು ■ಮಂಗಳೂರು ■ಶಿವಮೊಗ್ಗ ₹5
RNI No.KARKAN/ 2011/64413
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ನಾಲ್ಕನೇ ಬಾರಿ (2007, 2014, 2024, 2026) ಭಾರತ ಫೈನಲ್ ಪ್ರವೇಶ | ಮೂರನೇ ಬಾರಿ ಟ್ರೋಫಿ ಗೆಲ್ಲಲು ಭಾರತ ಪಣ

ಭಾರತ 253-7
ಇಂಗ್ಲೆಂಡ್ 246-7

ಟಿ 20 ವಿಶ್ವಕಪ್ ಫೈನಲ್‌ಗೆ ಭಾರತ

ಇಂಗ್ಲೆಂಡ್ ವಿರುದ್ಧ 7 ರನ್ ರೋಚಕ ಜಯ | ಫೈನಲ್‌ನಲ್ಲಿ ಕಿವೀಸ್ ಎದುರಾಳಿ

89 ರನ್

ಶುಭ ದಿನ

ಕಲಿಯುಗಾಬ್ಧ 5127, ವಿಶ್ವಾವಸು ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುನ ಮಾಸ, ಕೃಷ್ಣ ಪಕ್ಷ, ತಿಥಿ: ತದಿಗೆ, ನಕ್ಷತ್ರ: ಹಸ್ತ

ದಿನದ ಮಾತು

ಶರೀರವೇ ಉತ್ಕೃಷ್ಟ ಕಾರ್ಯಗಳನ್ನೂ ಶಕ್ತಿಯುತವಾದ ಸಾಧನೆಗಳನ್ನೂ ಮಾಡುವುದು.
▲ಸ್ವಾಮಿ ಶಿವಾನಂದ

ಖಮೇನಿಗೆ ಆಯಸ್ಸು ತುಂಬಿದ್ದೇ ಜಗತ್ತಿನ ಒಳ್ಳೆತನ!

ಉಘೇ ವೀರ ಭೂಮಿಗೆ
• ಸಂತೋಷ್ ತಮ್ಮಯ್ಯ

• ಪುಟ ೬

ಕಿರುಸುದ್ದಿ

ಪಿಯು ಇತಿಹಾಸ ಪರೀಕ್ಷೆಗೆ 12 ಸಾವಿರ ವಿದ್ಯಾರ್ಥಿಗಳು ಗೈರು

• **ಬೆಂಗಳೂರು:** ಗುರುವಾರ ದ್ವಿತೀಯ ಪಿಯುಸಿ ಪರೀಕ್ಷೆ-1ರ ಇತಿಹಾಸ ಪರೀಕ್ಷೆ ಸುಸೂತ್ರವಾಗಿ ನಡೆದಿದ್ದು, ಒಟ್ಟು 12,670 ವಿದ್ಯಾರ್ಥಿಗಳು ಗೈರು ಹಾಜರಾಗಿದ್ದಾರೆ. ಪರೀಕ್ಷೆಗೆ ಒಟ್ಟು 2,25,361 ಮಂದಿ ಈ ವಿಷಯಗಳಿಗೆ ನೋಂದಣಿ ಮಾಡಿಕೊಂಡಿದ್ದು 2,12,691 ಮಂದಿ ಪರೀಕ್ಷೆಗೆ ಹಾಜರಾಗಿದ್ದಾರೆ. ಈ ಮೂಲಕ ಶೇ.94.38 ರಷ್ಟು ಹಾಜರಾತಿ ದಾಖಲಾಗಿದೆ. ವಿಜಯಪುರ 1,142, ಬೀದರ್ 1,052, ರಾಯಚೂರು 1,111, ಕಲಬುರಗಿ 981, ಬಳ್ಳಾರಿ 763, ಚಿಕ್ಕೋಡಿ 715 ಜಿಲ್ಲೆಗಳಲ್ಲಿ ವಿದ್ಯಾರ್ಥಿಗಳು ಗರಿಷ್ಠ ಗೈರು ಹಾಜರಾಗಿದ್ದಾರೆ. ಉಡುಪಿ ಜಿಲ್ಲೆಯಲ್ಲಿ 41 ವಿದ್ಯಾರ್ಥಿಗಳು ಕನಿಷ್ಠ ಗೈರಾಗಿದ್ದಾರೆ. ಕಳೆದ ಫೆ.28ರಿಂದ ಪ್ರಾರಂಭವಾದ ಪಿಯು ಪರೀಕ್ಷೆ, ಈವರೆಗೂ 4 ಪರೀಕ್ಷೆ ನಡೆದಿವೆ. ಇಂದು ಭೌತಶಾಸ್ತ್ರ ಪರೀಕ್ಷೆ ನಡೆಯಲಿದೆ.

ಸಾಮಾನ್ಯ ಜನರ ಅಭಿವೃದ್ಧಿಗೆ ಏಕಾಗ್ರಚಿತ್ತ ಮೋದಿ: ಕಾರ್ನಿ

• ಪುಟ ೭

ಪ.ಬಂಗಾಳ ರಾಜ್ಯಪಾಲ ದಿಢೀರ್ ರಾಜೀನಾಮೆ

• ಪುಟ ೭

ನೇಪಾಳದಲ್ಲಿ ಮತದಾನ ಶಾಂತಿಯುತವಾಗಿ ಪೂರ್ಣ

• ಪುಟ ೭

ಲೋಕಾ ದಾಳಿ: ಕೋಟ್ಯಂತರ ಮೌಲ್ಯದ ಸ್ಥಿರ-ಚರಾಸ್ತಿ ಪತ್ತೆ

• ಪುಟ ೪

ಇಂದು ಗುತ್ತಿಗೆದಾರರ ಸಂಘದಿಂದ ಪ್ರತಿಭಟನೆ

• ಪುಟ ೫

ಜಾಗತಿಕ ಪೂರೈಕೆಯಲ್ಲಿ ವ್ಯತ್ಯಯ | ಆಪತ್ಕಾಲದಲ್ಲಿ ರಷ್ಯಾ ನೆರವು

ಭಾರತಕ್ಕೆ ತೈಲ ಭರವಸೆ



• **ಹೊಸದಿಲ್ಲಿ:** ಮಧ್ಯಪ್ರಾಚ್ಯದಲ್ಲಿ ನಡೆಯುತ್ತಿರುವ ಯುದ್ಧದ ಪರಿಣಾಮವಾಗಿ ಜಾಗತಿಕ ತೈಲ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಿ ರುವ ಸಂಕಷ್ಟದ ಸಮಯದಲ್ಲಿ ರಷ್ಯಾ, ಭಾರತಕ್ಕೆ ನೆರವಿನ ಹಸ್ತ ಚಾಚಿದ್ದು, ರಷ್ಯಾದಿಂದ ತೈಲ ಹೊತ್ತ ಮೂರು ಬೃಹತ್ ಟ್ಯಾಂಕರ್‌ಗಳು ಭಾರತದತ್ತ ಮುಖಮಾಡಿವೆ ಎಂದು ವರದಿಯಾಗಿದೆ.

ಅಂತಾರಾಷ್ಟ್ರೀಯ ಮಾಧ್ಯಮಗಳ ವರದಿ ಪ್ರಕಾರ, ರಷ್ಯಾದಿಂದ ಹೊರಟ ಈ ಮೂರು ಹಡಗುಗಳಲ್ಲಿ ಒಟ್ಟು 21 ಲಕ್ಷಕ್ಕೂ ಹೆಚ್ಚು ಬ್ಯಾರಲ್ ಕಚ್ಚಾ ತೈಲವಿದೆ. ಒಡುನೆ, ಮಟಾರಿ ಮತ್ತು ಇಂದ್ರಿ ಎಂಬ ಮೂರು ಟ್ಯಾಂಕರ್‌ಗಳ ಮೂಲಕ ಈ ತೈಲ ಭಾರತಕ್ಕೆ ಸಾಗುತ್ತಿದೆ. ಇವುಗಳಲ್ಲಿ ಒಡುನೆ ಮತ್ತು



ಇಂದ್ರಿ ಸ್ಯೂಜ್ಮ್ಯಾಕ್ಸ್ ದರ್ಜೆಯ ಹಡಗುಗಳಾಗಿದ್ದು ಪ್ರತಿಯೊಂದು ಸುಮಾರು 7.3 ಲಕ್ಷ ಬ್ಯಾರಲ್ ತೈಲ ಸಾಗಿಸುವ ಸಾಮರ್ಥ್ಯ ಹೊಂದಿವೆ. ಮಟಾರಿ ಟ್ಯಾಂಕರ್ ಅಫ್ರಾಮ್ಯಾಕ್ಸ್ ದರ್ಜೆಗೆ ಸೇರಿದ್ದು, ಇದು ಸುಮಾರು 7 ಲಕ್ಷ ಬ್ಯಾರಲ್ ಕಚ್ಚಾ ತೈಲವನ್ನು ಹೊತ್ತು ಸಾಗುತ್ತಿದೆ.

7.3 ಲಕ್ಷ ಬ್ಯಾರಲ್ ತೈಲವನ್ನು ಹೊತ್ತ ಒಡುನೆ ಟ್ಯಾಂಕರ್ ಈಗಾಗಲೇ ಭಾರತದ ಪಾರದೀಪ್ ಬಂದರನ್ನು ತಲುಪಿದೆ ಎಂದು ತಿಳಿದುಬಂದಿದೆ. ಮತ್ತೊಂದು ಹಡಗು ಮಟಾರಿ ಗುಜರಾತಿನ ವಾಡಿನರ್ ಬಂದರಿನತ್ತ ಸಾಗುತ್ತಿದೆ. ಇದೇ ವೇಳೆ, ಮೂಲತಃ ಸಿಂಗಾಪುರದತ್ತ ಪ್ರಯಾಣಿಸುತ್ತಿದ್ದ ಇಂದ್ರಿ ಟ್ಯಾಂಕರ್ ತನ್ನ ದಿಕ್ಕನ್ನು ಬದಲಿಸಿ ಭಾರತದತ್ತ ಬರುತ್ತಿದೆ ಎಂಬ ಮಾಹಿತಿ ಲಭ್ಯವಾಗಿದೆ.

ಪಶ್ಚಿಮ ಏಷ್ಯಾದ ಅಶಾಂತಿ ಮತ್ತು ಗಲ್ಫ್ ದೇಶಗಳಿಂದ ತೈಲ ಪೂರೈಕೆ ಕುಂಠಿತಗೊಂಡಿರುವ ಹಿನ್ನೆಲೆ ಭಾರತದಲ್ಲಿ ತೈಲ ಸರಬರಾಜು ಕುರಿತು ಚಿಂತನೆ ಹೆಚ್ಚಾಗಿದೆ. ಪುಟ ೪

ಖಮೇನಿ ಸಾವಿಗೆ ಭಾರತ ಸಂತಾಪ

• **ಹೊಸದಿಲ್ಲಿ:** ಇರಾನ್‌ನ ಸರ್ವೋಚ್ಚ ನಾಯಕ ಅಯತೊಲ್ಲಾ ಅಲಿ ಖಮೇನಿ ನಿಧನಕ್ಕೆ ಭಾರತ ಗುರುವಾರ ಅಧಿಕೃತವಾಗಿ ಸಂತಾಪ ವ್ಯಕ್ತಪಡಿಸಿದೆ. ಭಾರತದ ವಿದೇಶಾಂಗ ಕಾರ್ಯದರ್ಶಿ ವಿಕ್ರಮ್ ಮಿಸ್ರಿ, ಇರಾನ್ ರಾಯಭಾರ ಕಚೇರಿಗೆ ಭೇಟಿ ನೀಡಿ, ಸರ್ಕಾರದ ಪರವಾಗಿ ಶೋಕ ಪುಸ್ತಕಕ್ಕೆ ಸಹಿ ಹಾಕಿದರು.

ಹಾರ್ಮುಜ್ ಜಲಸಂಧಿ ಆಯ್ದ ರಾಷ್ಟ್ರಗಳಷ್ಟೇ ಮುಕ್ತ: ಇರಾನ್

• **ಹೊಸದಿಲ್ಲಿ:** ಹಾರ್ಮುಜ್ ಜಲಸಂಧಿಯನ್ನು ಮುಕ್ತಗೊಳಿಸಲಾಗಿದೆ ಎಂದು ಇರಾನ್‌ನ ರೆವಲ್ಯೂಷನರಿ ಗಾರ್ಡ್ ಕಾರ್ಪ್ಸ್ (ಐಆರ್‌ಜಿಸಿ) ಘೋಷಿಸಿದೆ. ಆದರೆ ಹಡಗುಗಳ ಸಂಚಾರಕ್ಕೆ ಕಟ್ಟುನಿಟ್ಟಾದ ನಿರ್ಬಂಧಗಳನ್ನು ಹೇರಲಾಗಿದೆ. ಗುರುವಾರ ಹೊರಡಿಸಲಾದ ಹೇಳಿಕೆಯ ಪ್ರಕಾರ, ಈ ಪ್ರಮುಖ ಜಲಮಾರ್ಗವನ್ನು ಅಮೆರಿಕ, ಇಸ್ರೇಲ್, ಯುರೋಪ್ ಮತ್ತು ಅವರ ಪಾಶ್ಚಿಮಾತ್ಯ ಮಿತ್ರರಾಷ್ಟ್ರಗಳ ಹಡಗುಗಳಿಗೆ ಸಂಪೂರ್ಣವಾಗಿ ಮುಚ್ಚಲಾಗಿದೆ. ಯುದ್ಧದ ಸಮಯದಲ್ಲಿ ಜಲಸಂಧಿಯ ಸಂಚಾರವನ್ನು ನಿಯಂತ್ರಿಸುವ ಹಕ್ಕನ್ನು ಅಂತಾರಾಷ್ಟ್ರೀಯ ಕಾನೂನಿನಲ್ಲಿ ಇರಾನ್ ಕಾಯ್ದಿರಿಸಿಕೊಂಡಿದೆ ಎಂದು ಐಆರ್‌ಜಿಸಿ ಸ್ಪಷ್ಟಪಡಿಸಿದೆ. ಪಾಶ್ಚಿಮಾತ್ಯ ರಾಷ್ಟ್ರಗಳಿಗೆ ಸೇರಿದ ಹಡಗುಗಳು ಕಂಡುಬಂದಲ್ಲಿ ದಾಳಿ ನಡೆಸಲಾಗುವುದು ಎಂದು ಎಚ್ಚರಿಸಲಾಗಿದೆಯಾದರೂ, ಚೀನಾ ಧ್ವಜ ಹೊಂದಿರುವ ಹಡಗುಗಳಿಗೆ ರಾಜತಾಂತ್ರಿಕ ಸೌಜನ್ಯದ ಭಾಗವಾಗಿ ಪ್ರವೇಶ ನೀಡಲಾಗಿದೆ.

ಸಂಘರ್ಷ ಕೂಡಲೇ ಅಂತ್ಯಗೊಳಿಸಲು ಪ್ರಧಾನಿ ಮೋದಿ ಕರೆ

• **ಹೊಸದಿಲ್ಲಿ:** ಯಾವುದೇ ಸಮಸ್ಯೆಯನ್ನು ಸೇನಾ ಸಂಘರ್ಷದಿಂದ ಮಾತ್ರವೇ ಬಗೆಹರಿಸಲಾಗದು ಎಂದು ಅಭಿಪ್ರಾಯಪಟ್ಟಿರುವ ಪ್ರಧಾನಿ ನರೇಂದ್ರ ಮೋದಿ, ಮಧ್ಯಪ್ರಾಚ್ಯ



ಸಂಘರ್ಷವನ್ನು ಆದಷ್ಟು ಬೇಗ ಅಂತ್ಯಗೊಳಿಸುವಂತೆ ಕರೆ ನೀಡಿದ್ದಾರೆ. ಫಿನ್‌ಲ್ಯಾಂಡ್ ಅಧ್ಯಕ್ಷ ಅಲೆಕ್ಸಾಂಡರ್ ಸ್ಟಬ್ ಜತೆ ಹಲವು ಸುತ್ತಿನ ಮಾತುಕತೆ ಬೆನ್ನಲ್ಲೇ, ಪ್ರಧಾನಿ ಮೋದಿ ಈ ರೀತಿ ಕರೆ ನೀಡಿದ್ದಾರೆ. ಇರಾನ್ ವಿರುದ್ಧದ ಅಮೆರಿಕ-ಇಸ್ರೇಲ್‌ಗಳ ಸಮರ ಆರನೇ ದಿನಕ್ಕೆ ಕಾಲಿರಿಸಿದ್ದು, ಇತ್ತಂಡಗಳು ಹೊಸ ದಾಳಿ ಮುಖೇನ ವಲಯಾದ್ಯಂತ ಉದ್ವಿಗ್ನತೆಯನ್ನು ತಾರಕಕ್ಕೇರಿಸಿರುವ ಹಿನ್ನೆಲೆಯಲ್ಲಿ, ಪ್ರಧಾನಿ ಮೋದಿ ಸಂಘರ್ಷ ನಿಲ್ಲಿಸಲು ಮನವಿ ಮಾಡಿದ್ದಾರೆ. ಪುಟ ೪

ರಾಜ್ಯ ಆಯವ್ಯಯ

ಸಿದ್ದರಾಮಯ್ಯರ 17ನೇ ಬಜೆಟ್ ಇಂದು



• **ಬೆಂಗಳೂರು:** ಹಣಕಾಸು ಸಚಿವರೂ ಆದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶುಕ್ರವಾರ ಬೆಳಗ್ಗೆ 10.15ಕ್ಕೆ 2026-27ನೇ ಸಾಲಿನ ರಾಜ್ಯದ ಆಯ-ವ್ಯಯ ಮಂಡಿಸಲಿದ್ದು, ಈ ಬಜೆಟ್ ವಿಶೇಷತೆ ಏನು, ಈ ಬಜೆಟ್ ಯಾವ ವಲಯಕ್ಕೆ ಆದ್ಯತೆ ಸಿಗಬಹುದು ಎಂಬ ಕುತೂಹಲ ಜನಸಾಮಾನ್ಯರಲ್ಲಿದೆ.

ಆಯ-ವ್ಯಯ ಮಂಡಿಸುವಲ್ಲಿ ಪ್ರವೀಣರಾಗಿರುವ ಸಿದ್ದರಾಮಯ್ಯ ಅವರ ಪ್ರತಿ ಬಜೆಟ್ ವಿಶೇಷತೆಯಿಂದ ಕೂಡಿರುತ್ತದೆ ಎಂಬ ನಿರೀಕ್ಷೆ ಜನರಲ್ಲಿದೆ. ಇದು ಅವರ 17ನೇ ಬಜೆಟ್ ಆಗಿರುವುದರಿಂದ ಆರ್ಥಿಕ ಸೋರಿಕೆಗೆ ಕಡಿವಾಣ ಹಾಕಿ ಜನಪರ ಬಜೆಟ್ ಮಂಡಿಸಲಿದ್ದಾರೆ ಎಂದು ಅವರ ಸಂಪುಟ ಸಹೋ



ದ್ಯೋಗಿಗಳು ತಿಳಿಸಿದ್ದಾರೆ. ಸಂಪನ್ಮೂಲ ಕ್ರೋಢೀಕರಣಕ್ಕಾಗಿ ಈ ಬಾರಿಯ ಬಜೆಟ್‌ನಲ್ಲಿ ಹಲವು ಸೆಸ್‌ಗಳನ್ನು ಜಾರಿ ಮಾಡುವ ಸಾಧ್ಯತೆ ಇದೆ. ಆದರೆ, ಈ ಸೆಸ್ ಜನಸಾಮಾನ್ಯರ ವರ್ಗಕ್ಕೆ ಹೊರೆಯಾಗದಂತೆ ನೋಡಿಕೊಳ್ಳುವ ಅನಿವಾರ್ಯತೆ ಸರ್ಕಾರಕ್ಕೆ ಇರುವುದರಿಂದ ಯಾವ ರೀತಿಯ ಸೆಸ್ ಇರಲಿದೆ ಎಂಬುವುದು ಬಜೆಟ್‌ನಲ್ಲಿ ತಿಳಿಯಲಿದೆ. ಉದ್ಯಮಿಗಳು, ಕೈಗಾರಿಕೋದ್ಯಮಿಗಳು ಹಣಕಾಸು ತಜ್ಞರು, ಚಿಲ್ಲರೆ ವ್ಯಾಪಾರಿಗಳು, ಕೃಷಿಕರು ಸೇರಿದಂತೆ ಉದ್ಯೋಗಿಗಳು ಬಹು ನಿರೀಕ್ಷೆಯಿಂದ ಇದ್ದಾರೆ. ಈ ಬಜೆಟ್ ಜನಪರ ಆಗುತ್ತಾ? ಅಥವಾ ಜನಪ್ರಿಯ ಬಜೆಟ್ ಆಗುತ್ತಾ? ಎಂಬುದು ಗೊತ್ತಾಗಲಿದೆ.

ಭರಪೂರ ಅನುದಾನ?: ರಾಜ್ಯದ ಮಹತ್ವದ ಯೋಜನೆಗಳಾದ ಕೃಷ್ಣಾ ಮೇಲ್ದಂಡೆ ಯೋಜನೆ, ಕಲ್ಯಾಣ ಕರ್ನಾಟಕದ ಅಭಿವೃದ್ಧಿಗೆ, ಬೆಂಗಳೂರು ಮೂಲಸೌಕರ್ಯ, ಕರಾವಳಿ, ಮಲೆನಾಡು ಭಾಗದ ಪ್ರಮುಖ ಯೋಜನೆಗಳಿಗೆ ಈ ಆಯ-ವ್ಯಯದಲ್ಲಿ ದೊಡ್ಡ ಮೊತ್ತದ ಅನುದಾನದ ನಿರೀಕ್ಷೆ ಇದೆ.

> **ಸಿಎಂ ಸಿದ್ದರಾಮಯ್ಯ ಅವರು 17ನೇ ಬಾರಿ ಬಜೆಟ್ ಮಂಡಿಸುವ ಮೂಲಕ ಹೊಸ ದಾಖಲೆ ಸೃಷ್ಟಿಸುತ್ತಿದ್ದಾರೆ. ಈ ಮಹತ್ವದ ಬಜೆಟ್ ಮಂಡನೆ ನೇರ ಪ್ರಸಾರವನ್ನು ಜನತೆಗೆ ತಲುಪಿಸಲು ವಿಶೇಷ ವ್ಯವಸ್ಥೆ ಮಾಡಲಾಗಿದೆ.**
> ■ **ಹೇಮಂತ್ ಎಂ. ನಿಂಬಾಳ್ಕರ್,** ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಆಯುಕ್ತ

ಬಸ್ ನಿಲ್ದಾಣಗಳಲ್ಲಿ ಬಜೆಟ್ ನೇರ ಪ್ರಸಾರ

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಂಡಿಸಲಿರುವ 2026-27ನೇ ಸಾಲಿನ ರಾಜ್ಯದ ಆಯ-ವ್ಯಯದ ಭಾಷಣವನ್ನು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ರಾಜ್ಯದ ಆಯ್ದ ಬಸ್ ನಿಲ್ದಾಣಗಳಲ್ಲಿರುವ ಎಲ್‌ಇಡಿ ಮತ್ತು ಟಿವಿ ಪರದೆಗಳ ಮೂಲಕ ಮೊಟ್ಟ ಮೊದಲ ಬಾರಿಗೆ ನೇರ ಪ್ರಸಾರ ಮಾಡುತ್ತಿದೆ. ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು ಬೆಂಗಳೂರು ಮೂಲದ ವೃತ್ತಿ ಮೀಡಿಯಾ ಸಲ್ಯೂಷನ್ಸ್ ಸಂಸ್ಥೆಯ ಸಹಭಾಗಿತ್ವದಲ್ಲಿ ರಾಜ್ಯಾದ್ಯಂತ 230 ಸರ್ಕಾರಿ ಬಸ್ ನಿಲ್ದಾಣಗಳಲ್ಲಿ ಅಳವಡಿಸಿರುವ ಡಿಜಿಟಲ್ ಡಿಸ್ಪ್ಲೇ (ಎಲ್‌ಇಡಿ) ಮತ್ತು ಟಿವಿ ಪರದೆಗಳ ಮೂಲಕ ಬಜೆಟ್ ಮಂಡನೆಯ ನೇರ ಪ್ರಸಾರವನ್ನು ಬೆಳಗ್ಗೆ 10.15 ಗಂಟೆಯಿಂದ ನೇರಪ್ರಸಾರ ಮಾಡಲಿದೆ ಎಂದು ವಾರ್ತಾ ಇಲಾಖೆಯ ಆಯುಕ್ತರು ತಿಳಿಸಿದ್ದಾರೆ. ಪುಟ ೪

ರಾಜ್ಯಸಭೆ ಚುನಾವಣೆಗೆ ಸಿಎಂ ನಿತೀಶ್ ಕುಮಾರ್ ಸ್ಪರ್ಧೆ

ಬಿಹಾರದಲ್ಲಿ ಬಿಜೆಪಿ ಮುಖ್ಯಮಂತ್ರಿ?

• **ಹೊಸದಿಲ್ಲಿ/ಪಾಟ್ನಾ:** ಮುಖ್ಯಮಂತ್ರಿ ನಿತೀಶ್ ಕುಮಾರ್ ರಾಜ್ಯಸಭೆಚುನಾವಣೆಸ್ಪರ್ಧೆ ಹಿನ್ನೆಲೆ, ಬಿಹಾರಮುಂದಿನಸಿಎಂ ಬಿಜೆಪಿಯಿಂದ ಆಯ್ಕೆಯಾಗುವ ಸಾಧ್ಯತೆ ಇದೆ. ನಿತೀಶ್ ಅವರ ಪುತ್ರ ನಿಶಾಂತ್ ಕುಮಾರ್ ಅವರನ್ನು ಉಪಮುಖ್ಯಮಂತ್ರಿಯಾಗಿ ನೇಮಕ ಮಾಡಬಹುದು ಎಂದು ರಾಜಕೀಯ ಮೂಲಗಳು ತಿಳಿಸಿವೆ.

ಹಲವಾರು ಬಿಜೆಪಿ ನಾಯಕರ ಹೆಸರುಗಳು ಸಿಎಂ ಸ್ಥಾನಕ್ಕೆ ಕೇಳಿಬರುತ್ತಿವೆ. ಉಪಮುಖ್ಯಮಂತ್ರಿ ಸಾಮ್ರಾಟ್ ಚೌಧರಿ ಮತ್ತು ಕೇಂದ್ರ ಗೃಹ ಖಾತೆ ರಾಜ್ಯ ಸಚಿವ ನಿತ್ಯಾನಂದ ರೈ ಮುಂಚೂಣಿಯಲ್ಲಿದ್ದಾರೆ. ಶಾಸಕ ಸಂಜೀವ್ ಚೌರಾಸಿಯಾ ಅವರ ಹೆಸರೂ ರಾಜಕೀಯ ಚರ್ಚೆಗಳಲ್ಲಿ ಮುನ್ನಲೆಗೆ ಬಂದಿದೆ ಎನ್ನಲಾಗಿದೆ. ರಾಜ್ಯದ ಚುನಾವಣಾ ಸಮೀಕರಣಗಳನ್ನು ಗಮನದಲ್ಲಿಟ್ಟುಕೊಂಡು, ಮುಖ್ಯಮಂತ್ರಿ ಹುದ್ದೆಯನ್ನು ಹಿಂದುಳಿದ ವರ್ಗದ ನಾಯಕರೊಬ್ಬರಿಗೆ ನೀಡಬಹುದು ಎಂದು ಪಕ್ಷದ ಆಂತರಿಕ ಮೂಲಗಳು ಸುಳಿವು ನೀಡಿವೆ. ಪುಟ ೪



ಬಿಹಾರದ ಸುದೀರ್ಘ ಸಿಎಂ ಖ್ಯಾತಿ

75 ವರ್ಷದ ನಿತೀಶ್ ಕುಮಾರ್ ಬಿಹಾರದ ಸುದೀರ್ಘ ಅವಧಿಯ ಸಿಎಂ ಆಗಿದ್ದು, ದಾಖಲೆಯ 10 ಬಾರಿ ಪ್ರಮಾಣ ಸ್ವೀಕರಿಸಿದ್ದಾರೆ. ಜಿತನ್ ರಾಮ್ ಮಾಂಜಿ ಸಿಎಂ ಆಗಿದ್ದ ಅಲ್ಪ ಅವಧಿಯನ್ನು ಹೊರತುಪಡಿಸಿ, 2015 ರಿಂದ ಅವರು ಸತತವಾಗಿ ಅಧಿಕಾರದಲ್ಲಿದ್ದಾರೆ. ಪುಟ ೪

ಸಿಎಂರಿಂದ ಶೀಘ್ರ ಅಂತಿಮ ತೀರ್ಮಾನ: ಎಚ್.ಕೆ. ಪಾಟೀಲ್

ಒಳ ಮೀಸಲು ಕಲ್ಪಿಸಲು ಸರ್ಕಾರ ಬದ್ಧ

• **ಬೆಂಗಳೂರು:** ನೇರ ನೇಮಕಾತಿಯಲ್ಲಿ ಪರಿಶಿಷ್ಟ ಜಾತಿಗೆ ಒಳ ಮೀಸಲಾತಿ ಕಲ್ಪಿಸುವ ವಿಚಾರವಾಗಿ ಗುರವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದಲ್ಲಿ ನಡೆದ ಸಚಿವ ಸಂಪುಟ



ಸಭೆಯಲ್ಲಿ ಚರ್ಚಿಸಲಾಗಿದೆ. ಆದರೆ, ಸುದೀರ್ಘವಾಗಿ ಚರ್ಚೆ ನಡೆದರೂ ಅಂತಿಮ ತೀರ್ಮಾನಕ್ಕೆ ಬರಲಾಗಿಲ್ಲ.

ಒಳ ಮೀಸಲಾತಿ ಕಲ್ಪಿಸಲು ಸರ್ಕಾರ ಬದ್ಧವಾಗಿದೆ. ಈ ವಿಚಾರವಾಗಿ ಸರ್ಕಾರದ ನಿಲುವಿನಲ್ಲಿ ಯಾವುದೇ ಬದಲಾವಣೆಯಿಲ್ಲ. ಈ ಕುರಿತ ಚರ್ಚೆ ಅಪೂರ್ಣವಾಗಿದೆ, ಚರ್ಚೆ ಮುಂದುವರಿದಿದೆ. ತೀವ್ರವಾಗಿ ಚರ್ಚೆ ನಡೆಸುವುದಕ್ಕೆ ಯಾವಾಗ ಸಭೆಸೇರುವುದು ಎಂಬುದನ್ನು ಮುಖ್ಯಮಂತ್ರಿ ತೀರ್ಮಾನತೆಗೆದುಕೊಳ್ಳುತ್ತಾರೆ ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ. ಪಾಟೀಲ್ ತಿಳಿಸಿದ್ದಾರೆ. ಈ ಹಿಂದೆ ಮೀಸಲಾತಿ ಶೇ.56 ಎಂದು ನಿರ್ಣಯ ಮಾಡಲಾಗಿತ್ತು. ಪುಟ ೪

ಆರೋಗ್ಯ ಇಲಾಖೆ ಎಲ್ಲಾ ನೌಕರರು ಎಸ್ಮಾ ವ್ಯಾಪ್ತಿಗೆ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಇಲಾಖೆಯಲ್ಲಿ ಕಾಯಂ ಮತ್ತು ಗುತ್ತಿಗೆ ಆಧಾರದ ಮೇಲೆ ಅಥವಾ ತಾತ್ಕಾಲಿಕ ಆಧಾರದ ಮೇಲೆ ಅಥವಾ ಹೊರಗುತ್ತಿಗೆ ಆಧಾರದ ಮೇಲೆ ನೇಮಕಗೊಂಡಿರುವ ಅಧಿಕಾರಿಗಳು, ವೈದ್ಯರು ಮತ್ತು ಇತರೆ ಸಿಬ್ಬಂದಿಯ ಸೇವೆಯನ್ನು ಕರ್ನಾಟಕ ಅತ್ಯಾವಶ್ಯಕ ಸೇವೆಗಳ ನಿರ್ವಹಣಾ ಅಧಿನಿಯಮ(ಎಸ್ಮಾ)-2013ರಡಿ ಅಧಿಸೂಚಿಸುವ ಬಗ್ಗೆ ಚರ್ಚೆ ನಡೆಸಲಾಗಿದೆ. ಈ ವೇಳೆ ಇಲಾಖಾ ಸಚಿವರು ನೌಕರರೊಂದಿಗೆ ಮಾತುಕತೆ ನಡೆಸಿ ಮನವೊಲಿಸಲು ತೀರ್ಮಾನಿಸಲಾಗಿದೆ ಎಂದು ಸಚಿವ ಎಚ್.ಕೆ. ಪಾಟೀಲ್ ತಿಳಿಸಿದರು.

ರಾಜಗೋಪುರಗಳ ಲೋಕಾರ್ಪಣೆ ಮಾಡಿ ಉಪರಾಷ್ಟ್ರಪತಿ ಅಭಿಪ್ರಾಯ

ಹಿಂದು ಪ್ರಜ್ಞೆ ವಿಧಾನ ಮಾತ್ರವಲ್ಲ, ಜೀವನ

• **ಚಿಕ್ಕೋಡಿ:** ಹಿಂದು ಪ್ರಜ್ಞೆ ಕೇವಲ ಧಾರ್ಮಿಕ ವಿಧಿ ವಿಧಾನ ಮಾತ್ರವಲ್ಲ, ಜೀವನದಲ್ಲಿ ಅನುಸರಿಸಿಕೊಂಡು ಹೋಗಬೇಕಾಗಿರುವ ಪದ್ಧತಿಯಾಗಿದೆ. ನದಿ, ಪರ್ವತ, ಪ್ರಾಣಿ ಸೇರಿದಂತೆ ಪ್ರತಿಯೊಂದರಲ್ಲಿಯೂ ಮನುಷ್ಯ ದೈವತ್ವವನ್ನು ನೋಡುವುದಾಗಿದೆ ಎಂದು ಉಪರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್ ಹೇಳಿದರು. ತಾಲೂಕಿನ ಯಡೂರ ಗ್ರಾಮದಲ್ಲಿ ಶ್ರೀ ವೀರಭದ್ರೇಶ್ವರ ದೇವಸ್ಥಾನ ಹಾಗೂ ಕಾಡಸಿದ್ದೇಶ್ವರ ಮಠದಿಂದ ಗುರುವಾರ ಹಮ್ಮಿಕೊಂಡಿದ್ದ ರಾಜಗೋಪುರಗಳ ಲೋಕಾರ್ಪಣೆಗೊಳಿಸಿ, ವೀರಶೈವ ಲಿಂಗಾಯತ ಧರ್ಮೋತ್ಥಾನ ಸಮ್ಮೇಳನದಲ್ಲಿ ಭಾಗವಹಿಸಿ ಅವರು ಮಾತನಾಡಿದರು. ಪುಟ ೪



ಟ್ರಂಪ್‌ಗೆ ಮತ್ತೆ ದೊಡ್ಡ ಹಿನ್ನಡೆ

ಪ್ರತಿಸುಂಕದ ಹಣ ವಾಪಸ್‌ಗೆ ಆದೇಶ



• **ನ್ಯೂಯಾರ್ಕ್:** ಸುಪ್ರೀಂ ಕೋರ್ಟ್ ಕಾನೂನುಬಾಹಿರವೆಂದು ಘೋಷಿಸಿದ್ದ ಪ್ರತಿಸುಂಕದ ಹಣ ತಮ್ಮಲ್ಲೇ ಉಳಿಸಿಕೊಳ್ಳಲು ಟ್ರಂಪ್ ಆಡಳಿತಕ್ಕೆ ಯಾವುದೇ ಹಕ್ಕುಗಳಿಲ್ಲ, ಸುಂಕ ಪಾವತಿಸಿದ್ದ ಕಂಪನಿಗಳಿಗೆ ಹಣ ಹಿಂದಿರುಗಿಸಬೇಕು ಎಂದು ನ್ಯೂಯಾರ್ಕ್ ಫೆಡರಲ್ ಕೋರ್ಟ್ ಆದೇಶಿಸಿದೆ. ಇದು ಟ್ರಂಪ್ ಆಡಳಿತಕ್ಕೆ ದೊಡ್ಡ ಹಿನ್ನಡೆಯಾಗಿದೆ. ಪುಟ ೪

ಬೆಳ್ಳಿ ಬಂಗಾರ (ಬೆಂಗಳೂರು) ಬೆಳ್ಳಿ: 2,85,000 (2,85,000) ಅಪರಂಜಿ ಚಿನ್ನ: 1,62,880 (1,64,510) ಆಭರಣ ಚಿನ್ನ: 1,49,300 (1,50,800) ಚಿನ್ನ 10 ಗ್ರಾಂ.ಗೆ, ಬೆಳ್ಳಿ 1 ಕೆ.ಜಿಗೆ, ರೂ.ಗಳಲ್ಲಿ (ಆವರಣದಲ್ಲಿ ಹಿಂದಿನ ದಿನದ ದರ)

ಷೇರು ಸೂಚ್ಯಂಕ ಬಿಎಸ್‌ಇ 80,015 (899↑) ಎನ್‌ಎಸ್‌ಇ 24,765 (285↑)

$1 = ₹92.15

ಕಿರುಸುದ್ದಿ

ಸೇವಾ ಭದ್ರತೆ ನೀಡಿ

ಹುಬ್ಬಳ್ಳಿ: ರಾಜ್ಯದ ಸರ್ಕಾರಿ ಪ್ರಥಮ ದರ್ಜೆ ಕಾಲೇಜ್‌ಗಳಲ್ಲಿ ಸೇವೆ ಸಲ್ಲಿಸಿ ಯುಜಿಸಿ ಹಾಗೂ ನಾನ್ ಯುಜಿಸಿ ಅಭ್ಯರ್ಥಿಗಳಿಗೆ ಸರ್ಕಾರ ಸೇವಾ ಭದ್ರತೆ ನೀಡಬೇಕು. ಬಜೆಟ್‌ನಲ್ಲಿ ಸರ್ಕಾರ ಸಿಹಿ ಸುದ್ದಿ ನೀಡಬೇಕು ಎಂದು ರಾಜ್ಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜ್‌ಗಳ ಅತಿಥಿ ಉಪನ್ಯಾಸಕರ ಸಂಘ ರಾಜ್ಯಾಧ್ಯಕ್ಷ ಡಾ.ಹನುಮಂತಗೌಡ ಕಲ್ಮನಿ ಆಗ್ರಹಿಸಿದರು.

ನಗರದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇಲ್ಲವಾದರೆ ತುಮಕೂರಿನಿಂದ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನವನದ ವರೆಗೆ ಬೃಹತ್ ಪಾದಯಾತ್ರೆ ಮಾಡಿ ನಮ್ಮ ಬೇಡಿಕೆ ಈಡೇರುವರೆಗೂ ಹೋರಾಟ ಮಾಡಲಾಗುವುದು. 9375 ಅತಿಥಿ ಉಪನ್ಯಾಸಕರು ಸೇವೆ ಸಲ್ಲಿಸುತ್ತಿದ್ದು, 6300 ನಿವೃತ್ತಿ ಹೊಂದಿದ್ದಾರೆ ಎಂದರು. ಹಿಂದೆ ಚಳಿಗಾಲದ ಅಧಿವೇಶನ ಸಮಯದಲ್ಲಿ ಅತಿಥಿ ಉಪನ್ಯಾಸಕರಿಗೆ ಸೇವಾ ಭದ್ರತೆ ನೀಡಬೇಕು ಎಂದು ಆಗ್ರಹಿಸಿ ಬೃಹತ್ ಪ್ರತಿಭಟನೆ ಮಾಡಲಾಗಿತ್ತು. ಆಗ ಸರ್ಕಾರದ ಪ್ರತಿನಿಧಿಗಳು ಸಮಸ್ಯೆ ಪರಿಹರಿಸುವ ಭರವಸೆ ನೀಡಿದ್ದರು. ಎರಡು ಮೂರು ದಿನ ಬೇಡಿಕೆ ಈಡೇರಿಸುವುದಾಗಿ ಹೇಳಿದ್ದರು. ಮೂರು ತಿಂಗಳು ಕಳೆದರು ಸರ್ಕಾರದ ಸ್ಪಂದಿಸದಿರುವುದು ನೋವಿನ ಸಂಗತಿ ಎಂದು ಬೇಸರ ವ್ಯಕ್ತಪಡಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ, ಉನ್ನತ ಶಿಕ್ಷಣ ಸಚಿವ ಸುಧಾಕರ, ಕಾನೂನು ಸಚಿವ ಎಚ್.ಕೆ.ಪಾಟೀಲ, ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರು ಬರುವ ಬಜೆಟ್ ಪೂರ್ವ ದಿನ ಇಲ್ಲವೇ ಬಜೆಟ್ ದಿನ ನಮ್ಮ ಬೇಡಿಕೆ ಈಡೇರಿಸಿ ಸಿಹಿ ಸುದ್ದಿ ನೀಡಬೇಕು ಎಂದು ಆಗ್ರಹಿಸಿದರು. ಪ್ರಭುರಾಜ ಗೌಡ ಪಾಟೀಲ, ವಿಜಯಕುಮಾರ ದೇಸಾಯಿ, ಜಯಕುಮಾರ, ಲಕ್ಷ್ಮಣ ಗೌಡರ ಇದ್ದರು.

ಉದ್ಘಾಟನೆ ಇಂದು

ಹುಬ್ಬಳ್ಳಿ: ಕರ್ನಾಟಕ ರಾಜ್ಯ ಹಿರಿಯ ನಾಗರಿಕರು ಹಾಗೂ ನಿವೃತ್ತ ನೌಕರರ ಕ್ಷೇಮಾಭಿವೃದ್ಧಿ ಸಂಘಕ್ಕೆ ಗ್ರಂಥಾಲಯ ಇಲಾಖೆ ಹಿರಿಯ ನಾಗರಿಕರಿಗಾಗಿ ವಾಚನಾಲಯ ಸೇವಾ ಕೇಂದ್ರ ಮಂಜೂರ ಮಾಡಿದ್ದು, ಇದರ ಉದ್ಘಾಟನೆ ಸಮಾರಂಭ ಮಾ.6ರಂದು ಸಂಜೆ 5.30ಕ್ಕೆ ಹೊಸೂರಿನಲ್ಲಿರುವ ಸಂಘದ ಕಚೇರಿಯಲ್ಲಿ ನಡೆಯಲಿದೆ. ಮೇಯರ್ ಜ್ಯೋತಿ ಪಾಟೀಲ ಚಾಲನೆ ನೀಡಲಿದ್ದಾರೆ. ಮುಖ್ಯ ಅತಿಥಿ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷೆ ಡಾ. ಮಾನಸಾ, ಗ್ರಾಮೀಣ ತಾಲೂಕು ತಹಶೀಲ್ದಾರ್ ಜೆ.ಬಿ. ಮಜ್ಜಗಿ, ನಗರ ಕೇಂದ್ರ ಗ್ರಂಥಾಲಯ ಉಪನಿರ್ದೇಶಕ ಅಜಯ ಕುಮಾರ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ. ಲಿಂಗರಾಜ ಅಂಗಡಿ ಆಗಮಿಸುವರು. ಸಮಾರಂಭದ ಅಧ್ಯಕ್ಷತೆಯನ್ನು ಸಂಘದ ರಾಜ್ಯಾಧ್ಯಕ್ಷ ಬಿ.ಎ. ಪಾಟೀಲ ವಹಿಸುವರು.

ಸಂಗೀತದಿಂದ ನೆಮ್ಮದಿ

ಹುಬ್ಬಳ್ಳಿ: ಜಂಜಾಟದ ಇಂದಿನ ದಿನಮಾನದಲ್ಲಿ ಸಂಗೀತದಂತಹ ದೇಶಿಯ ಕಲೆಗೆ ಪ್ರಾಶಸ್ತ್ಯ ಕೊಡುವುದರಿಂದ ಮನಸ್ಸಿಗೆ ಒಂದಿಷ್ಟು ನೆಮ್ಮದಿ, ಆನಂದ ಸಿಗುತ್ತದೆ. ಶಾಸ್ತ್ರೀಯ ಸಂಗೀತ ತನ್ನದೇ ಆದ ಮಹತ್ವ ಇಂದಿಗೂ ಉಳಿಸಿಕೊಂಡು ಬಂದಿದೆ ಎಂದು ಸಭಾಪತಿ ಬಸವರಾಜ ಹೊರಟ್ಟಿ ಹೇಳಿದರು.

ಮಂಗಳವಾರ ಗದುಗಿನ ವೀರೇಶ್ವರ ಪುಣ್ಯಾಶ್ರಮದ ಡಾ. ಪುಟ್ಟರಾಜ ಗವಾಯಿಗಳ 115ನೇ ಜನ್ಮದಿನೋತ್ಸವ ಅಂಗವಾಗಿ ಧಾರವಾಡದ ಡಾ. ಪುಟ್ಟರಾಜ ಗವಾಯಿ ಪ್ರತಿಷ್ಠಾನ ಇಲ್ಲಿಯ ಸವಾಯಿ ಗಂಧರ್ವ ಹಾಲ್‌ನಲ್ಲಿ ಏರ್ಪಡಿಸಿದ್ದ ಸಮಾರಂಭದಲ್ಲಿ 2026ರ ಪುಟ್ಟರಾಜ ಸಮ್ಮಾನ ರಾಷ್ಟ್ರೀಯ ಪುರಸ್ಕಾರವನ್ನು ಹಿರಿಯ ವಯೋಲಿನ್ ವಾದಕ ಪಂ. ಬಿ.ಎಸ್. ಮಠ ಅವರಿಗೆ ಪ್ರದಾನ ಮಾಡಿ ಅವರು ಮಾತನಾಡಿದರು.

ಇಂತಹ ಸಂಗೀತ ಕಾರ್ಯಕ್ರಮಗಳಿಗೆ ಇಂದಿನ ಯುವ ಪೀಳಿಗೆ ಮಾತ್ರವಲ್ಲ ಅನೇಕ ಹಿರಿಯರಿಂದಲೂ ಸ್ಪಂದನೆ ಸಿಗದಿರುವುದು ಬೇಸರದ ಸಂಗತಿ. ಇಂದಿನ ಒತ್ತಡದ ಬದುಕಿಗೆ ಶಾಸ್ತ್ರೀಯ ಸಂಗಿತ ಪರಿಹಾರವಾಗಬಲ್ಲದು. ಮುಂಬರುವ ದಿನಗಳಲ್ಲಿ ಜೀವನ ಇನ್ನಷ್ಟು ಜಠಿಲಗೊಳ್ಳುತ್ತದೆ. ವಿಜ್ಞಾನ, ತಂತ್ರಜ್ಞಾನ ಎಷ್ಟೇ ಬೆಳೆದರೂ ಮಕ್ಕಳಿಗೆ ದೇಶಿಯ ಕಲೆಗಳಲ್ಲಿಯೂ ಅಭಿರುಚಿ ಬೆಳೆಸುವುದು ಅಗತ್ಯ ಎಂದರು.

ಶಾಸಕ ಮಹೇಶ ಟೆಂಗಿನಕಾಯಿ ಮಾತನಾಡಿ, ಇಂದು ಎಲ್ಲೇ ಹೋದರೂ ಟೆನ್ಶನ್ ಎನ್ನುತ್ತಾರೆ. ಯಾವುದೇ ದುಡ್ಡಿಲ್ಲದೇ ಇದಕ್ಕೆ ಪರಿಹಾರ ನೀಡುವ ಶಕ್ತಿ ಸಂಗೀತಕ್ಕೆ ಇದೆ ಎಂದರು.

ಮೇಯರ್ ಜ್ಯೋತಿ ಪಾಟೀಲ ಮಾತನಾಡಿ, ಸಂಗೀತ ಪರಂಪರೆ ಉಳಿಸಿಕೊಂಡು ಹೋಗುವಲ್ಲಿ ಪಾಲಿಕೆಯಿಂದ ಅಗತ್ಯ ಸಹಕಾರ ನೀಡುವುದಾಗಿ ಹೇಳಿದರು. ಪ್ರಶಸ್ತಿ ಸ್ವೀಕರಿಸಿದ ಪಂ. ಬಿ.ಎಸ್. ಮಠ ಮಾತನಾಡಿದರು. ಡಾ. ಮಲ್ಲಿಕಾರ್ಜುನ ಸ್ವಾಮೀಜಿ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು. ಪ್ರತಿಷ್ಠಾನದ ಅಧ್ಯಕ್ಷ ಮಹಾಬಲೇಶ್ವರ ಹಾಸಿನಾಳ ಅಧ್ಯಕ್ಷತೆ ವಹಿಸಿದ್ದರು. ಕಾರ್ಯದರ್ಶಿ ಪಂ. ವೆಂಕಟೇಶಕುಮಾರ, ಪಿ.ಎಂ. ಪಾಟೀಲ, ಉದಯ ದೇಸಾಯಿ, ಮಜೇಥಿಯಾ ಫೌಂಡೇಷನ್ ಚೇರ್ಮನ್ ಜಿತೇಂದ್ರ ಮಜೇಥಿಯಾ ಇತರರು ಪಾಲ್ಗೊಂಡಿದ್ದರು. ರವಿ ಕುಲಕರ್ಣಿ, ಉಪಾಧ್ಯಕ್ಷ ಶಂಕರ ಕುಂಬಿ, ಶುಭಾಂಗಿ ಜಾಧವ ಇದ್ದರು.



ಹುಬ್ಬಳ್ಳಿ: ಹಲಗಿ-ಬಾರಸುವರಿಗೆ ಹಾಗೂ ಚಪ್ಪಲಿ ಹೊಲಿಯುವ ದಲಿತ ಕಾರ್ಮಿಕರಿಗೆ ಸಹಾಧನ ನೀಡಬೇಕು ಎಂದು ಆಗ್ರಹಿಸಿ ದಲಿತ ಕಾರ್ಮಿಕರ ಅಸಂಘಟಿತ ಒಕ್ಕೂಟ ತಹಶೀಲ್ದಾರ್ ಮೂಲಕ ಮುಖ್ಯಮಂತ್ರಿಗೆ ಮನವಿ ಸಲ್ಲಿಸಿದರು.

ನೇಮಕಾತಿ ಪ್ರಕ್ರಿಯೆಯಿಂದ ಅನ್ಯಾಯ: ಅಶೋಕ

ಹುಬ್ಬಳ್ಳಿ: ರಾಜ್ಯ ಸರ್ಕಾರ 56,432 ಹುದ್ದೆಗಳ ಭರ್ತಿ ಮಾಡಲು ಮುಂದಾಗಿದ್ದು, ಶೇ. 56 ರ ಮೀಸಲಾತಿಯನ್ನು ಹೊರಗಿಟ್ಟು ನೇಮಕಾತಿ ಮಾಡುತ್ತಿರುವುದು ದಲಿತರಿಗೆ ಮಾಡುತ್ತಿರುವ ಅನ್ಯಾಯವಾಗಿದೆ ಎಂದು ಧಾರವಾಡ ಜಿಲ್ಲಾ ಎಸ್‌ಟಿ ಮೋರ್ಚಾ ಅಧ್ಯಕ್ಷ ಅಶೋಕ ವಾಲ್ಮೀಕಿ ಅಸಮಾಧಾನ ವ್ಯಕ್ತಪಡಿಸಿದರು.

ಗುರುವಾರ ಇಲ್ಲಿಯ ಅರವಿಂದ ನಗರದ ಬಿಜೆಪಿ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನ್ಯಾಯಮೂರ್ತಿ ನಾಗಮೋಹನ ದಾಸ್ ಆಯೋಗ ರಚಿಸುವಾಗ ಹಾಗೂ ಸರ್ಕಾರ ಒಳಮೀಸಲಾತಿ ಮಸೂದೆ ಮಂಡಿಸಿ ರಾಜ್ಯಪಾಲರ ಅನುಮೋದನೆ ಪಡೆಯುವಾಗ ಶೇ. 56 ರ ಮೀಸಲಾಯಿ ಇತ್ತು. ಈಗ ಏಕಾಏಕಿ ಶೇ. 56ರಿಂದ ಶೇ. 50 ಕ್ಕೆ ಇಳಿಸಿದ್ದು, ದಲಿತ ನಾಯಕರ ಹಾಗೂ ಹೋರಾಟಗಾರರ ಪರಿಗಣಿಸದೆ ಕಡೆಗಣಿಸಲಾಗಿದೆ ಎಂದರು.

ರಾಜ್ಯ ಎಸ್‌ಸಿ ಮೋರ್ಚಾ ಪ್ರಧಾನ ಕಾರ್ಯದರ್ಶಿ ಮಹೇಂದ್ರ ಕೌತಾಳ ಮಾತನಾಡಿ, ಅಕ್ಟೋಬರ್ 2025ರಲ್ಲಿ ರಾಜ್ಯ ಹೈಕೋರ್ಟ್ ಶೇ. 56ರ ಮೀಸಲಾತಿಗೆ ಮಧ್ಯಂತರ ಆದೇಶದಲ್ಲಿ ಭಾಗಶಃ ತಡೆ ನೀಡಿರುವುದು ನಿಜ. ಆದರೆ ಸರ್ಕಾರ ನ್ಯಾಯಾಲಯದಲ್ಲಿ ತನ್ನ ಬಲವಾಗಿ ನಿರ್ಧಾರವನ್ನು ಸಮರ್ಥಿಸುವ, ದಾಖಲೆಗಳನ್ನು ಸಲ್ಲಿಸುವಲ್ಲಿ ವಿಫಲವಾಗಿದೆ. ಸರ್ಕಾರ ಸರ್ವಪಕ್ಷಗಳ ಪ್ರಮುಖರ ಸಭೆ ಕರೆದು ಈ ಸಂಬಂಧ ಚರ್ಚೆ ಕೈಗೊಳ್ಳಬೇಕು ಎಂದು ಆಗ್ರಹಿಸಿದರು. ಗ್ರಾಮಾಂತರ ಜಿಲ್ಲಾ ಬಿಜೆಪಿ ಅಧ್ಯಕ್ಷ ನಿಂಗಪ್ಪ ಸುತಗಟ್ಟಿ, ಮಹಾನಗರ ಜಿಲ್ಲಾ ಎಸ್‌ಸಿ ಮೋರ್ಚಾ ಅಧ್ಯಕ್ಷ ಹನಮಂತ ಹರಿವಾಣ, ಗ್ರಾಮಾಂತರ ಜಿಲ್ಲಾ ಎಸ್‌ಸಿ ಮೋರ್ಚಾ ಅಧ್ಯಕ್ಷ ಸಹದೇವ ಮಳಗಿ, ಮುಖಂಡರಾದ ಮಾರುತಿ ಚಾಕಲಬ್ಬಿ, ಹನಮಂತ ಗೌಡ್ರ, ಸುಭಾಷ ಅಂಕಲಕೋಟೆ, ಮಂಜುನಾಥ ಬಿಜವಾಡ ಇದ್ದರು.



ಹುಬ್ಬಳ್ಳಿ: ಇಲ್ಲಿಯ ಹುಬ್ಬಳ್ಳಿ ಕೆಎಲ್‌ಇ ತಾಂತ್ರಿಕ ವಿಶ್ವವಿದ್ಯಾಲಯದ ಭೌತ ಶಾಸ್ತ್ರ ವಿಭಾಗ ವತಿಯಿಂದ ರಾಷ್ಟ್ರೀಯ ವಿಜ್ಞಾನ ದಿನದ ಅಂಗವಾಗಿ ವಿಜ್ಞಾನ ಕ್ಷೇತ್ರ ಹಾಗೂ ವಿಕಸಿತ ಭಾರತದಲ್ಲಿ ಮಹಿಳೆಯರ ಪಾತ್ರ ಕುರಿತು ಉಪನ್ಯಾಸ ಕಾರ್ಯಕ್ರಮ ಆಯೋಜಿಸಲಾಗಿತ್ತು. ಐಐಐಟಿ ಸುರತ್‌ನ ಮಾಜಿ ನಿರ್ದೇಶಕ ಪ್ರೊ. ಜಿ.ಎಸ್. ಭಟ್ ಅವರು ಉಪನ್ಯಾಸ ಮಾಡಿದರು. ಡಾ. ಎಸ್.ಎನ್ ಮಠದ, ಡಾ. ರಾಜಶ್ರೀ ಹೊದಲೂರ ಇದ್ದರು.

ದಶದಿಕ್ಕುಗಳಲ್ಲೂ ಅನುರಣಿಸಿದ ಜಗ್ಗಲಗಿ



ಹುಬ್ಬಳ್ಳಿ: ಹೋಳಿ ಹಬ್ಬದ ಹಿನ್ನೆಲೆ ಹುಬ್ಬಳ್ಳಿ ಜಗ್ಗಲಗಿ ಹಬ್ಬದ ಸಮಿತಿ ವತಿಯಿಂದ ಗುರುವಾರ ನಗರದ ದಶದಿಕ್ಕುಗಳಲ್ಲೂ ಜಗ್ಗಲಗಿಗಳು ಅನುರಣಿಸಿದವು. ರಾಜ್ಯದ ವಿವಿಧ ಭಾಗಗಳಿಂದ ಬಂದಿದ್ದ ಹಲಗಿ, ಡೋಲು ವಾದ್ಯಗಳು, ಕೋಲಾಟದ ತಂಡಗಳು, ವೇಷಧಾರಿಗಳು, ಬಣ್ಣದ ಎರಚಾಟ ಹಬ್ಬಕ್ಕೆ ಮೆರಗು ತಂದಿತು. ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಮಾತನಾಡಿ, ಹೋಳಿ ಹುಣ್ಣಿಮೆಗೆ ಐತಿಹಾಸಿಕ ಮಹತ್ವವಿದೆ. ಹಿಂದು ಪಂಚಾಂಗದ ಪ್ರಕಾರ ಇದು ಪ್ರಸ್ತುತ ವರ್ಷದ ಕೊನೆಯ ಹಬ್ಬವಾಗಿದ್ದು, ಈ ಹಬ್ಬದ ಮೂಲಕ ಹೊಸ ವಸಂತ ಕಾಲವನ್ನು ಸ್ವಾಗತ ಮಾಡಲಾಗುತ್ತಿದೆ. ಇದವೇ ಹೋಳಿ ಹುಣ್ಣಿಮೆ ಹಬ್ಬದ ವಿಶೇಷ ಎಂದರು.

ಹುಬ್ಬಳ್ಳಿ ಜಗ್ಗಲಗಿ ಹಬ್ಬದ ಆಯೋಜಕ ಹಾಗೂ ಶಾಸಕ ಮಹೇಶ ಟೆಂಗಿನಕಾಯಿ ಮಾತನಾಡಿ, ಹುಬ್ಬಳ್ಳಿ ಜಗ್ಗಲಗಿ ಹಬ್ಬ ನಾಡಿ ಸಂಸ್ಕೃತಿ ಬೆಳೆಸುವ ಆಯಾಮವಾಗಿದೆ. ಕಳೆದ 14 ವರ್ಷದಿಂದ ಆಚರಿಸಲಾಗುತ್ತಿದ್ದು, ಹಿಂದೂ ಸಮಾಜ ಸಂಘಟಿಸುವ ಕಾರ್ಯವಾಗುತ್ತಿದೆ. ಹಬ್ಬದಲ್ಲಿ 60 ಜನ ಕಲಾ ತಂಡಗಳು ಭಾಗವಹಿಸಿವೆ ಹಾಗೂ 22 ಜನ ಸ್ವಾಮೀಜಿ ಆಶೀರ್ವಾದ ಮಾಡಲು ಬಂದಿದ್ದಾರೆ ಎಂದು ತಿಳಿಸಿದರು.

- ಹಬ್ಬದ ಮೆರವಣಿಗೆಯನ್ನು ಕಣ್ತುಂಬಿಕೊಳ್ಳಲು ದಾರಿಯುದ್ದಕ್ಕೂ ಜಮಾಯಿಸಿದ್ದ ಜನ, ಕುಣಿದು ಕುಪ್ಪಳಿಸಿದರು
- ಕೇಂದ್ರ ಸಚಿವ ಪ್ರಹ್ಲಾದ ಜೋಶಿ, ಮೂರು ಸಾವಿರ ಮಠದ ಗುರುಸಿದ್ಧರಾಜಯೋಗೀಂದ್ರ ಸ್ವಾಮೀಜಿ ಸೇರಿದಂತೆ 22 ಕ್ಕೂ ಹೆಚ್ಚು ಸ್ವಾಮೀಜಿಗಳು ಜಗ್ಗಲಗಿ ಹಬ್ಬಕ್ಕೆ ಚಾಲನೆ ನೀಡಿದರು
- 60 ಕಲಾವಿದರ ತಂಡಗಳು ನೂರಾರು ಜನರು ಹಬ್ಬದಲ್ಲಿ ಭಾಗಿ

ಬಸವಲಿಂಗ ಸ್ವಾಮೀಜಿ, ಶಿವಕುಮಾರ ಸ್ವಾಮೀಜಿ, ಅಮರ ಸಿದ್ದೇಶ್ವರ ಸ್ವಾಮೀಜಿ, ಅಮರೇಶ್ವರ ಸ್ವಾಮೀಜಿ, ಸಿದ್ದಲಿಂಗ ಸ್ವಾಮೀಜಿ, ಚಂದ್ರಶೇಖರ ಸ್ವಾಮೀಜಿ ಸೇರಿದಂತೆ ಅನೇಕ ಸ್ವಾಮೀಜಿಗಳು ಸಾನ್ನಿಧ್ಯ ವಹಿಸಿದ್ದರು. ಬಿಜೆಪಿ ಶಿಸ್ತು ಸಮಿತಿ ಅಧ್ಯಕ್ಷ ಲಿಂಗರಾಜ ಪಾಟೀಲ, ಮಾಜಿ ಶಾಸಕ ಅಶೋಕ ಕಾಟವೆ, ಮೇಯರ್ ಜ್ಯೋತಿ ಪಾಟೀಲ, ಉಪಮೇಯರ್ ಸಂತೋಷ ಚವ್ಹಾಣ, ಮಹೇಂದ್ರ ಕೌತಾಳ, ದತ್ತಮೂರ್ತಿ ಕುಲಕರ್ಣಿ, ಚಂದ್ರಿಕಾ ಮೇಸ್ತ್ರಿ, ಉಮಾ ಮುಕುಂದ ಇದ್ದರು.

ಪ್ರಶಸ್ತಿಕ್ಕಿಂತ ದೊಡ್ಡದು

ಹುಬ್ಬಳ್ಳಿ ಜಗ್ಗಲಗಿ ಹಬ್ಬವನ್ನು ದೇಶ ಮೂಲೆ ಮೂಲೆಯಿಂದ ಜನರ ಬಂದು ನೋಡುತ್ತಿದ್ದಾರೆ. ವಿಶ್ವದ ಅರ್ಧದಷ್ಟು ದೇಶದಲ್ಲಿ ಯುದ್ಧ ನಡೆಯುತ್ತಿದೆ. ಆ ದೇಶಗಳಲ್ಲಿ ರಕ್ತದೋಕಳಿ ಆಗುತ್ತಿದ್ದು, ಭಾರತದಲ್ಲಿ ನಾವು ಬಣ್ಣದ ಓಕಳಿ ಆಡುತ್ತಿದ್ದೇವೆ. ಇದು ಭಾರತ ದೇಶದ ವಿಶೇಷ. ನಾವೆಲ್ಲರೂ ಭಾರತದಲ್ಲಿ ಜನಿಸಿರುವುದು ಎಲ್ಲ ಪ್ರಶಸ್ತಿಗಳ ಪಡೆದಿರುವುದಕ್ಕಿಂತ ದೊಡ್ಡದು ಎಂದು ಮಣಕವಾಡ ಅಭಿನವ ಮೃತ್ಯುಂಜಯ ಸ್ವಾಮೀಜಿ ಹೇಳಿದರು.

> ಭಾರತ ಅರಿಯಬೇಕಾದರೆ ವಿವೇಕಾನಂದ ಅಧ್ಯಯನ ಮಾಡಬೇಕು. ದೇಶ ಸಂಸ್ಕೃತಿ ಅರಿಯಬೇಕಾದರೆ ಹುಬ್ಬಳ್ಳಿ ಜಗ್ಗಲಗಿ ಹಬ್ಬ ನೋಡಬೇಕು. ಐತಿಹಾಸಿ ಘಟನೆಗಳಿಗೆ ಸಾಕ್ಷಿಯಾದ ಹುಬ್ಬಳ್ಳಿ 15 ವರ್ಷದಿಂದ ಜಗ್ಗಲಗಿ ಹಬ್ಬ ಮಾಡಲಾಗುತ್ತಿದೆ.
> ■ ಸದಾಶಿವ ಸ್ವಾಮೀಜಿ, ಹುಕ್ಕೇರಿ

ನಾಡಿನ ಸಂಸ್ಕೃತಿ, ಪರಂಪರೆ ಉಳಿವು



ಹುಬ್ಬಳ್ಳಿ ಜಗ್ಗಲಗಿ ಹಬ್ಬಕ್ಕೆ ಶಾಸಕ ಮಹೇಶ ಟೆಂಗಿನಕಾಯಿ ಅವರು ಮೂಲ ಕಾರಣ. ಈ ಹಬ್ಬ ಆಚರಿಸುವ ಮೂಲಕ ಎಂಎಲ್ಎ ಆಗಿದ್ದಾರೆ. ಒಬ್ಬ ಶಾಸಕರಾಗಿ ನಾಡಿನ ಸಂಸ್ಕೃತಿ, ಪರಂಪರೆ ಬೆಳೆಸುವ ಕಾರ್ಯ ಮಾಡುತ್ತಿದ್ದು, ಉಳಿದವರಿಗೆ ಮಾದರಿಯಾಗಿದ್ದಾರೆ ಎಂದು ಮೂರು ಸಾವಿರ ಮಠದ ಗುರುಸಿದ್ಧರಾಜಯೋಗೀಂದ್ರ ಸ್ವಾಮೀಜಿ ಹೇಳಿದರು.

ಎಸ್‌ಐಆರ್ ರದ್ದತಿ ಅವಶ್ಯ: ಶಿವಸುಂದರ

ಹುಬ್ಬಳ್ಳಿ: ಜನರಲ್ಲಿ ಮತದಾರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಬಗ್ಗೆ ಜಾಗೃತಿ ಮೂಡಿಸಿ ಯುದ್ಧೋಪಾಯದಲ್ಲಿ ಹೋರಾಟ ಮಾಡಿದರೆ ಅದನ್ನು ರದ್ದುಪಡಿಸಲು ಸಾಧ್ಯ. ಇಲ್ಲವಾದರೆ ಅದು ನಮ್ಮನ್ನು ರದ್ದು ಮಾಡುತ್ತದೆ. ನಾವು ನಾಗರಿಕರಾಗಿ ಉಳಿಯಬೇಕಾದರೆ ಎಸ್‌ಐಆರ್ ರದ್ದಾಗಬೇಕು ಎಂದು ಚಿಂತಕ ಬೆಂಗಳೂರಿನ ಶಿವಸುಂದರ ತಿಳಿಸಿದರು.

ಗುರುವಾರ ಜೆ.ಸಿ.ನಗರದ ಅಕ್ಕನ ಬಳಗದಲ್ಲಿ ಮೇ ಸಾಹಿತ್ಯ ಮೇಳ ಬಳಗ ಹಾಗೂ ಸಂವಿಧಾನ ಸುರಕ್ಷಾ ಸಮಿತಿ ವತಿಯಿಂದ ಹಮ್ಮಿಕೊಂಡಿದ್ದ ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್) ಪೌರತ್ವದ ಪ್ರಶ್ನೆ: ಪ್ರಭುತ್ವದ ಹುನ್ನಾರಗಳು ವಿಚಾರವಾಗಿ ಸಂವಾದ ಗೋಷ್ಠಿಯಲ್ಲಿ ಅವರು ಮಾತನಾಡಿದರು.

ಸಂವಿಧಾನಾತ್ಮಕವಾಗಿ ಎಲ್ಲರಿಗೂ ಮತದಾನದ ಹಕ್ಕು ಸಿಗಬೇಕು ಎಂಬುವುದು ಪ್ರಜಾಪ್ರಭುತ್ವದಲ್ಲಿ ಇದೆ. ನಾವು ಮತದಾರ ಪಟ್ಟಿ ಪರಿಷ್ಕರಣೆ ವಿರೋಧಿಸುತ್ತಿಲ್ಲ, ಆದರೆ ಮತದಾರ ಪಟ್ಟಿ ಪರಿಷ್ಕರಣೆಗೆ ವಿಧಾನಕ್ಕೆ ನಮ್ಮ ವಿರೋಧವಿದೆ ಎಂದರು.

ಸಂವಿಧಾನ ಬಾಹಿರವಾಗಿ ನಾಗರಿಕತ್ವದಿಂದ ಕಿತ್ತು ಹಾಕುವುದೆ ಎಸ್‌ಐಆರ್ ಆಗಿದೆ. ಸರ್ಕಾರ ಕೇಳುವ 11 ದಾಖಲೆಗಳು ನಮ್ಮಲ್ಲಿ ಇಲ್ಲ. ಇದು ನಮ್ಮ ಮೇಲೆ ಆಗುತ್ತಿರುವ ಯುದ್ಧ ಆಗಿದೆ. ದೇಶದ ನಾಗರಿಕನಾಗಿದ್ದರೆ ಮಾತ್ರ ಸಂವಿಧಾನ ನಮ್ಮನ್ನು ರಕ್ಷಿಸುತ್ತದೆ. ಇದು ಮತದ ಪ್ರಶ್ನೆ ಅಲ್ಲ, ನಮ್ಮ ಅಸ್ತಿತ್ವದ ಪ್ರಶ್ನೆ ಆಗಿದೆ. ಅಲ್ಪಸಂಖ್ಯಾತರು, ಹಿಂದೂಳಿದವರು ಎಸ್‌ಐಆರ್‌ಗೆ ಬಲಿಯಾಗುತ್ತಾರೆ ಎಂದು ತಿಳಿಸಿದರು.

ಚಿಂತಕ ಧಾರವಾಡದ ಡಾ. ಜಿ.ಎನ್. ದೇವಿ ಮಾತನಾಡಿ, ದೇಶದಲ್ಲಿ ಸಂವಿಧಾನ ಬದಲಿಸುವ ಪ್ರಕ್ರಿಯೆ ನಡೆದಿದೆ. ಎಸ್‌ಐಆರ್ ಜೊತೆಗೆ ರಾಷ್ಟ್ರೀಯ ಜನಸಂಖ್ಯೆ ವರದಿ(ಎನ್‌ಪಿಆರ್) ಸಹ ನಡೆಯುತ್ತಿದೆ. 2027 ಕ್ಕೆ ಇದನ್ನು ಪೂರ್ಣಗೊಳಿಸಿ ನಂತರ ಡಿಲಿಮಿಟೇಷನ್ ಮಾಡಲಿದ್ದಾರೆ. ಮುಸ್ಲಿಂ ಮತದಾರರ ಹೆಚ್ಚಿರುವ ಕ್ಷೇತ್ರ ಇಬ್ಭಾಗಿಸುವ ಮೂಲಕ ಲೋಕಸಭೆಯಲ್ಲಿ ತಮ್ಮ ಬಲ ಹೆಚ್ಚಿಸಿಕೊಳ್ಳುವ ಹುನ್ನಾರ ನಡೆದಿದೆ ಎಂದರು. ಹಿರಿಯ ಪತ್ರಕರ್ತ ಸನತಕುಮಾರ ಬೆಳಗಲಿ ಅಧ್ಯಕ್ಷತೆ ವಹಿಸಿ ಮಾತನಾಡಿ, ಬಿಜೆಪಿ ಸರ್ಕಾರ ದೇಶದಲ್ಲಿ ಆಡಳಿತಕ್ಕೆ ಬಂದ ಮೇಲೆ ಹೊಸ ಹೊಸ ಅಜೆಂಡಾಗಳ ತರಲಾಗುತ್ತಿದೆ. ಪ್ರಜಾಪ್ರಭುತ್ವ ನಾಶ ಮಾಡುವ ಮೂಲಕ ಮನುವಾದಿ ಸಂಸ್ಕೃತಿ ಬೆಳೆಸಲಾಗುತ್ತಿದೆ ಎಂದು ಆರೋಪಿಸಿದರು. ಮಾಜಿ ಸಂಸದ ಐ.ಜಿ. ಸನದಿ, ಬಿ.ಎಸ್. ಸೊಪ್ಪಿನ, ಸಿದ್ದು ತೇಜಿ, ಅನ್ವರ ಮುಧೋಳ, ಮಹೇಂದ್ರ ಸಿಂಘಿ, ರಾಜಶೇಖರ ಮೆಣಸಿನಕಾಯಿ, ಸಂಗಮೇಶ ಮೆಣಸಿನಕಾಯಿ, ಗುರುನಾಥ ಉಳ್ಳಿಕಾಶಿ ಇದ್ದರು.





ಕಲಘಟಗಿ: ತಾಲೂಕಿನ ಬಮ್ಮಿಗಟ್ಟಿ ಗ್ರಾಮದಲ್ಲಿ ಹೋಳಿ ಹಬ್ಬದ ಅಂಗವಾಗಿ ಜನತೆ ಸಂಭ್ರಮದಿಂದ ಬಣ್ಣದಾಟವಾಡಿದರು.

ರಾಷ್ಟ್ರಮಟ್ಟದ ಸಂಕಲ್ಪದ ಕೈಪಿಡಿ ಬಿಡುಗಡೆ

ಧಾರವಾಡ: ನಗರದ ಜನತಾ ಶಿಕ್ಷಣ ಸಮಿತಿಯ ಶ್ರೀ ಮಂಜುನಾಥೇಶ್ವರ ಸ್ನಾತಕ ಹಾಗೂ ಸ್ನಾತಕೋತ್ತರ ಅಧ್ಯಯನ ಕೇಂದ್ರದಲ್ಲಿ ಮಾ.27 ಮತ್ತು 28ರಂದು ನಡೆಯಲಿರುವ ರಾಷ್ಟ್ರಮಟ್ಟದ ಸಂಕಲ್ಪ-2026ರ ಕಾರ್ಯಕ್ರಮದ ಕೈಪಿಡಿ ಮತ್ತು ಭಿತ್ತಿಪತ್ರ ಸಂಸ್ಥೆಯ ಕಾರ್ಯದರ್ಶಿ ಡಾ.ಅಜಿತ ಪ್ರಸಾದ ಬಿಡುಗಡೆಗೊಳಿಸಿದರು.

ಈ ಸಂದರ್ಭದಲ್ಲಿ ಪ್ರೊ. ವೆಂಕಟೇಶ ಮುತಾಲಿಕ್, ಡಾ. ಸೂರಜ್ ಜೈನ್, ಮಹಾವೀರ ಉಪಾಧ್ಯೆ, ಆರ್.ವಿ. ಚಿಟಗುಪ್ಪಿ, ವಿವೇಕ ಲಕ್ಷ್ಮೇಶ್ವರ, ಜ್ಯೋತಿ ಅಕ್ಕಿ, ಶೃತಿ ಶೆಟ್ಟಿ ಇದ್ದರು.



ಶಿಕ್ಷಣಕ್ಕೆ ಹೆಚ್ಚು ಆದ್ಯತೆ ನೀಡಿ: ಕೋನರಡ್ಡಿ



ನವಲಗುಂದ: ಗ್ರಾಮೀಣ ಭಾಗದಲ್ಲಿಯೂ ಕೂಡಾ ಶಿಕ್ಷಣಕ್ಕೆ ಹೆಚ್ಚು ಆದ್ಯತೆ ಕೊಟ್ಟು, ಶೈಕ್ಷಣಿಕ ಪ್ರಗತಿಯ ಜೊತೆಗೆ ಸರ್ವಾಂಗೀಣ ಅಭಿವೃದ್ಧಿಗೆ ಸರ್ಕಾರ ಹಲವು ಯೋಜನೆಗಳನ್ನು ಜಾರಿಗೊಳಿಸಿದೆ ಎಂದು ಶಾಸಕ ಎನ್.ಎಚ್. ಕೋನರಡ್ಡಿ ಹೇಳಿದರು.

ತಾಲೂಕಿನ ಕಡದಳ್ಳಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶಾಲಾ ವಾರ್ಷಿಕೋತ್ಸವ ಹಾಗೂ 8ನೇ ವರ್ಗದ ವಿದ್ಯಾರ್ಥಿಗಳ ಬೀಳ್ಕೊಡುವ ಸಮಾರಂಭ ಉದ್ಘಾಟಿಸಿ ಮಾತನಾಡಿದರು. ತಹಶೀಲ್ದಾರ್ ಸುಧೀರ ಸಾಹುಕಾರ, ತಾಪಂ ಇಒ ಪಿ. ಆರ್. ಬಡೇಖಾನವರ, ಮಲಪ್ರಭಾ ನೀರು ಬಳಕೆದಾರರ ಸಂಘದ ಅಧ್ಯಕ್ಷ ಸದುಗೌಡ ಪಾಟೀಲ, ನಾಗನೂರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘದ ಅಧ್ಯಕ್ಷ ನಿಂಗರಡ್ಡಿ ಕರಮಳ್ಳಿ ಆಗಮಿಸಿದ್ದರು. ಶಾಲಾ ಎಸ್.ಡಿ.ಎಂ.ಸಿ ಅಧ್ಯಕ್ಷ ಕಲ್ಲಪ್ಪ ಕುಂಬಾರ ಅಧ್ಯಕ್ಷತೆ ವಹಿಸಿದ್ದರು. ಪ್ರಧಾನ ಗುರುಗಳಾದ ಬಿ.ಕೆ.ಹಾಲವರ, ಹಿರಿಯ ಶಿಕ್ಷಕ ಡಾ. ಸಿದ್ಧಲಿಂಗೇಶ ಹಂಡಿಗಿ, ಸುನಂದಾ ಕುಂಬಾರ, ಜ್ಯೋತಿ ಉಪ್ಪಾರ, ಬಸವರಾಜ ಸಾಲಿಮಠ, ಗಣ್ಯರಾದ ಕಲ್ಲೋಳೆಪ್ಪ ಕರಿಕಟ್ಟಿ, ರುದ್ರಪ್ಪ ಕುಂಬಾರ, ಕಲ್ಲನಗೌಡ ಗುರನಗೌಡ್ರ, ಭೀಮಪ್ಪ ಕೊಳ್ಳಾರ, ಅಲ್ಲಾಸಾಬ ಕಲ್ಲಕುಟ್ರಿ, ಹೆಬ್ಬೆಳೆವ್ವ ಮಾದರ, ದಾಕ್ಷಾಯಿಣಿ ಬಡಿಗೇರ ಮುಂತಾದವರು ಉಪಸ್ಥಿತರಿದ್ದರು.



ಉಪ್ಪಿನಬೆಟಗೇರಿ: ಸಮೀಪದ ಹನುಮನಹಾಳ ಗ್ರಾಮದ ಚಿಣ್ಣರು ಹಾಗೂ ಯುವಕರು ಹೋಳಿ ಹಬ್ಬವನ್ನು ಬುಧವಾರದಂದು ಸಂಭ್ರಮದಿಂದ ಆಚರಿಸಿದರು.

ಜಗದೋದ್ಧಾರಕ ಬೂದೀಶ್ವರ ಸ್ವಾಮಿಗಳು: ಚಿಲುಮಿ

ಧಾರವಾಡ: ಬೂದೀಶ್ವರ ಸ್ವಾಮಿಜಿಗಳು ಮಠದ ಅಧಿಪತಿಗಳಾಗಿರಲಿಲ್ಲ, ಲೋಕ ಕಲ್ಯಾಣಕ್ಕೆ ಸಂಚಾರ ಮಾಡುತ್ತಾ 12ನೇ ಶತಮಾನದ ಶರಣರ ಆಶಯಗಳನ್ನು ಅಕ್ಷರಶಃ ಪಾಲಿಸಿದವರು ಎಂದು ಶರಣ ಸಂಸ್ಕೃತಿಯ ಚಿಂತಕ ರುದ್ರಣ್ಣ ಚಿಲುಮಿ ಹೇಳಿದರು.

ನಗರದ ಕರ್ನಾಟಕ ವಿದ್ಯಾವರ್ಧಕ ಸಂಘದ ರಾ.ಹ.ದೇಶಪಾಂಡೆ ಸಭಾಂಗಣದಲ್ಲಿ ಗುರುವಾರ ನಡೆದ ಬೂದೀಶ್ವರ ಸ್ವಾಮೀಜಿ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ ಹೊಸಹಳ್ಳಿ ಬೂದೀಶ್ವರ ಸ್ವಾಮಿಗಳ ಜೀವನ ದರ್ಶನ ಕುರಿತು ಅವರು ಉಪನ್ಯಾಸ ನೀಡಿದರು. ಶರಣ ಸಂಸ್ಕೃತಿಯಲ್ಲಿ ಅರಿವು, ಆಚಾರಕ್ಕೆ ಪ್ರಾಮುಖ್ಯತೆ ಇದೆ. ಶರಣ ಸಂಸ್ಕೃತಿ ಅಂದರೆ ಕೇವಲ ವಚನಗಳನ್ನು ಓದುವುದಲ್ಲ, ಆ ವಚನದಂತೆ ಬದುಕುವುದು. ಬೂದೀಶ್ವರ ಶ್ರೀಗಳು ಅಕ್ಷರಶಃ ಒಬ್ಬ ನಡೆದಾಡುವ ಶರಣರಾಗಿದ್ದರು ಎಂದರು. 12ನೇ ಶತಮಾನದಲ್ಲಿ ಅನುಭವ ಮಂಟಪದಲ್ಲೂ ಕೆಲಸ ಮಾಡಿದ ಬೂದೀಶ್ವರ ಶ್ರೀಗಳು, ಕಲ್ಯಾಣ ಕ್ರಾಂತಿಯ ಬಳಿಕ ಚನ್ನಬಸವಣ್ಣವರ ಆಜ್ಞೆಯಂತೆ ವಚನಗಳು, ಶರಣ ಸಂಸ್ಕೃತಿ ಹಾಗೂ ಲಿಂಗಾಯತ ಧರ್ಮ ಪ್ರಸಾರಕ್ಕೆ ಅಣಿಯಾದರು ಎಂದರು. ಅಡವಿಸಿದ್ಧೇಶ್ವರ ಶ್ರೀಗಳು, ಗರಗದ ಮಡಿವಾಳ, ಸಂತ ಶಿಶುವಿನಾಳ ಷರೀಫರು, ನವಲಗುಂದ ನಾಗಲಿಂಗ ಶ್ರೀಗಳು, ದೇವರಹುಬ್ಬಳ್ಳಿ ನಾಗಭೂಷಣ ಶ್ರೀಗಳು, ಗದಗ ಶಿವಾನಂದ ಶ್ರೀಗಳ ಸಮಕಾಲೀನರಾಗಿ ಲೋಕ ಸಂಚಾರ ಮಾಡಿದ್ದಾಗಿ ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ಡಿ.ಎಂ.ನಿಡವಣಿ ಮಾತನಾಡಿ, ಜಾಗತೀಕರಣದ ಅಬ್ಬರದಲ್ಲಿ ನಮ್ಮ ಮೂಲ ಬೇರುಗಳು ಮರೆಯುತ್ತಿದ್ದೇವೆ. ಇಂತಹ ಕಾಲಘಟ್ಟದಲ್ಲಿ ಬೂದೀಶ್ವರ ಶ್ರೀಗಳಂತಹ ಸಂತರ ಸರಳತೆ, ನಿಷ್ಠೆ ಮತ್ತು ನಿಸ್ವಾರ್ಥ ಸೇವೆಯೇ ನಮಗೆ ದಾರಿದೀಪವಾಗಬೇಕು ಎಂದರು. ಇಂದಿನ ಸಮಾಜದಲ್ಲಿ ನೈತಿಕ ಮೌಲ್ಯಗಳು ಕುಸಿಯುತ್ತಿವೆ. ನಮ್ಮಲ್ಲಿರುವ ಭೇದ-ಭಾವ ಅಳಿಸಿ ಹಾಕಿ, ಸಮಾನತೆಯ ಸಮಾಜ ನಿರ್ಮಾಣ ಮಾಡಬೇಕು. ಮುಂದಿನ ದಿನಗಳಲ್ಲಿ ಈ ದತ್ತಿ ಕಾರ್ಯಕ್ರಮ ಶಾಲಾ-ಕಾಲೇಜಿನಲ್ಲಿ ಏರ್ಪಡಿಸುವ ಆಶಯ ವ್ಯಕ್ತಪಡಿಸಿದರು.

ವೇದಿಕೆಯಲ್ಲಿ ದತ್ತಿದಾನಿ ಸಾಗರ ನಿಡವಣಿ, ಮಡಿವಾಳಪ್ಪ ಶಿರಿಯಣ್ಣವರ ಇದ್ದರು. ಕಾರ್ಯಕ್ರಮದಲ್ಲಿ ಹೊಸಹಳ್ಳಿ, ಹಾಲಕುಸಗಲ್ಲ ಗ್ರಾಮಸ್ಥರು ಪಾಲ್ಗೊಂಡಿದ್ದರು. ಕವಿಸಂ ಸದಸ್ಯ ಶಂಕರ ಕುಂಬಿ ಪ್ರಾಸ್ತಾವಿಸಿದರು. ವೀರಣ್ಣ ಒಡ್ಡೀನ ಸ್ವಾಗತಿಸಿದರು.



ಕನ್ನಡ ಸಿನಿಮಾ ಬಿಡುಗಡೆ ಇಂದು



ಹುಬ್ಬಳ್ಳಿ: ಮಲ್ಲುಲಿಗಾನ ಪ್ರೊಡಕ್ಷನ್ ಅವರ ರೈತರ ಮಕ್ಕಳಿಗೆ ಹೆಣ್ಣು ಕೊಡಿ ಎಂಬ ಕನ್ನಡ ಸಿನಿಮಾ ಮಾ.6ರಂದು ಹುಬ್ಬಳ್ಳಿಯಲ್ಲಿ ಮಾತ್ರ ಬಿಡುಗಡೆಯಾಗಲಿದೆ ಎಂದು ನಿರ್ಮಾಪಕ ಹಾಗೂ ನಿರ್ದೇಶಕ ಕೆಂಪರಾಮ್ ಹೆಡಿಯಾಳ ಹೇಳಿದರು.

ನಗರದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇದು ಕರುನಾಡು ಮಣ್ಣಿಕಥೆ, ಮಣ್ಣಿನ ಮಗನ ಜೀವನ ಗಾಥೆಯಾಗಿದೆ. ರೈತರು ದೇಶ ಬೆನ್ನೆಲಬು ಆಗಿದ್ದು, ಅವರ ಕುರಿತು ಸಿನಿಮಾ ಮಾಡಬೇಕು ಎಂಬುವುದು ನನ್ನ ಆಸೆ ಇತ್ತು ಎಂದರು.

ಸಿನಿಮಾದಲ್ಲಿ ಜಗದೀಶ ಮೂಕಿ, ಅಶ್ವಿನಿ, ಮೋಹನ ದಾಸ ಸೇರಿದಂತೆ ಉತ್ತರ ಕರ್ನಾಟಕ ಭಾಗದ ರಂಗ ಭೂಮಿಯ 68 ಜನ ಕಲಾವಿದರು ಅಭಿನಯಿಸಿದ್ದಾರೆ. ಸಿನಿಮಾ ಛಾಯಾಗ್ರಹಣ, ಸಂಗೀತ ರೋಹನ್ ದೇಸಾಯಿ, ಸಾಹಸ ಸಂತೋಷ ರಾಥೋಡ್, ನೃತ್ಯ ಆಕುಲ್ ಮಾಸ್ಟರ್, ಅಜಯ್ ಜೈ ಕೃಷ್ಣ, ಸಾಕ್ಷಿ ಕರೊಕೆ, ಶಬ್ದ, ಬೆಳಕು ಸಂಕೇತ ನಾಯಕ್ ನಿರ್ವಹಿಸಿದ್ದಾರೆ. ನಾಲ್ಕು ಹಾಡುಗಳಿದ್ದು, ಮೂರು ಫೈಟ್‌ಗಳಿವೆ. ಹುಬ್ಬಳ್ಳಿಯ ಸುತ್ತಮುತ್ತ ಕುಂಕೂರು, ಮಳಲಿ, ಬೆಳಗಾವಿ, ಮಹಾರಾಷ್ಟ್ರ ಗಡಿಯಲ್ಲಿ ಚಿತ್ರೀಕರಣ ಮಾಡಲಾಗಿದೆ ಎಂದು ಹೇಳಿದರು.

ಸಿನಿಮಾ ಛಾಯಾಗ್ರಾಹಕ ರೋಹನ್ ದೇಸಾಯಿ, ನಟ ಜಗದೀಶ ಮೂಕಿ, ಅಶ್ವಿನಿ, ಜೈ ಮೋಹನ ದಾಸ್ ಇದ್ದರು.

ಎಸ್‌ಡಿಎಂನಲ್ಲಿ ವಿಶ್ವ ಶ್ರವಣ ದಿನಾಚರಣೆ

ಧಾರವಾಡ: ಸತ್ತೂರಿನ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ವೈದ್ಯಕೀಯ ವಿಜ್ಞಾನ ಕಾಲೇಜು, ಆಸ್ಪತ್ರೆಯ ವಾಕ್-ಶ್ರವಣ ವಿಭಾಗ, ಎನ್ನೆಸ್ಸೆಸ್ ಘಟಕ, ಇಎನ್‌ಟಿ ವಿಭಾಗ ಹಾಗೂ ಮಕ್ಕಳ ವಿಭಾಗದ ಸಹಯೋಗದಲ್ಲಿ ವಿಶ್ವ ಶ್ರವಣ ದಿನಾಚರಣೆ ಆಚರಿಸಲಾಯಿತು.

ಪೋಸ್ಟರ್ ಬಿಡುಗಡೆ ಮೂಲಕ ಉದ್ಘಾಟಿಸಿದ ಎಸ್‌ಡಿಎಂ ವಿವಿ ಉಪಕುಲಪತಿ ಡಾ. ನಿರಂಜನಕುಮಾರ್ ಮಾತನಾಡಿ, ಭವಿಷ್ಯದ ಆಸ್ತಿಗಳಾದ ಮಕ್ಕಳ ಆರೋಗ್ಯದ ದೃಷ್ಟಿಯಿಂದ ಎರಡು ತಿಂಗಳು ಈ ಕಾರ್ಯಕ್ರಮ ನಡೆಯಲಿದ್ದು, ಸಮಾಜ ಹಾಗೂ ಮಕ್ಕಳ ಆರೋಗ್ಯ ಗುರಿಯೊಂದಿಗೆ ನಡೆಯುವ ಈ ತಪಾಸಣೆ ಶಿಬಿರಗಳು ಗ್ರಾಮೀಣ, ಉಪನಗರ ಹಾಗೂ ನಗರ ಪ್ರದೇಶಗಳಲ್ಲಿ ಜರುಗಿಸಲಿದ್ದು, ಶ್ರವಣದೋಷ, ಕಿವಿ ಸಂಬಂಧಿತ ಸಮಸ್ಯೆ ಪತ್ತೆ ಜತೆ ಚಿಕಿತ್ಸೆಯೂ ನಡೆಯಲಿದೆ ಎಂದರು.

ಶ್ರವಣ ದೋಷದ ಆರಂಭಿಕ ಲಕ್ಷಣಗಳು ಮತ್ತು ಸೂಚನೆಗಳು ಗುರುತಿಸುವುದು, ವಿವಿಧ ಮಕ್ಕಳ ಶ್ರವಣ ಸಮಸ್ಯೆಗಳ ಅರಿವು, ಸಮಯೋಚಿತ ನಿರ್ಣಯ ಹಾಗೂ ಚಿಕಿತ್ಸೆಯ ಮಹತ್ವ ಹಾಗೂ ಸೂಕ್ತ ನಿರ್ವಹಣಾ ವಿಧಾನಗಳ ಕುರಿತಂತೆ ಮಾಹಿತಿ ನೀಡಿದರು. ಡಾ. ಅರುಣಕುಮಾರ್ ಜೆ.ಎಸ್., ಡಾ. ಸಂತೋಷ ಶ್ರೀಕಾಂತ ಗರಗ, ಡಾ.ಕುಲಕರ್ಣಿ ಪೂರ್ಣಿಮಾ ಪ್ರಕಾಶ ಡಾ.ಕಾಮಗೊಂಡ ಜಾಲಿಕರ್ ಸೇರಿ ಅನೇಕರು ಇದ್ದರು. ಶಿಬಿರದಲ್ಲಿ ಮಕ್ಕಳ ಮಾತು, ಭಾಷಾ ಅಭಿವೃದ್ಧಿ ಕುರಿತು ಒತ್ತಿ ಹೇಳಲಾಯಿತು.



ಗ್ರಾಮೀಣ ಪ್ರದೇಶಗಳ ಅಭಿವೃದ್ಧಿಗೆ ಆದ್ಯತೆ



ಕುಂದಗೋಳ: ತಾಲೂಕಿನ ಮತ್ತಿಗಟ್ಟಿ ಗ್ರಾಮದಲ್ಲಿ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ ರಾಜ್ ಇಲಾಖೆಯ ಲೆಕ್ಕಶೀರ್ಷಿಕೆ 5054 ಅಡಿಯಲ್ಲಿ ರೂ.50 ಲಕ್ಷ ವೆಚ್ಚದ ಕಾಮಗಾರಿಗೆ ಶಾಸಕ ಎಂ.ಆರ್. ಪಾಟೀಲ ಭೂಮಿಪೂಜೆ ನೆರವೇರಿಸಿ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ಗ್ರಾಮೀಣ ಭಾಗದ ಅಭಿವೃದ್ಧಿಗೆ ಮೂಲಸೌಕರ್ಯಗಳ ನಿರ್ಮಾಣ ಅತ್ಯಂತ ಅಗತ್ಯವಾಗಿದೆ. ಉತ್ತಮ ರಸ್ತೆ ಹಾಗೂ ಅಗತ್ಯ ಕಾಮಗಾರಿಗಳು ನಿರ್ಮಾಣವಾದರೆ ಗ್ರಾಮಸ್ಥರಿಗೆ ಸಂಚಾರ ಸುಲಭವಾಗುವುದಲ್ಲದೆ ಗ್ರಾಮಗಳ ಸಮಗ್ರ ಅಭಿವೃದ್ಧಿಗೂ ಸಹಕಾರಿ ಆಗುತ್ತದೆ ಎಂದರು. ನನ್ನ ಅವಧಿಯಲ್ಲಿ ಗ್ರಾಮೀಣ ಪ್ರದೇಶಗಳ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡುತ್ತಿದ್ದು, ಅದರ ಸದುಪಯೋಗ ಪಡೆದು ಗ್ರಾಮಗಳಲ್ಲಿ ಅಗತ್ಯ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುತ್ತಿದೆ. ಮುಂದಿನ ದಿನಗಳಲ್ಲಿಯೂ ಕ್ಷೇತ್ರದ ವಿವಿಧ ಗ್ರಾಮಗಳಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಮುಂದುವರಿಸಲಾಗುವುದು ಎಂದರು. ತಾಲೂಕಿನ ಬಿಜೆಪಿ ಅಧ್ಯಕ್ಷ ನಾಗನಗೌಡ ಸಾತ್ಮಾರ, ಮುಖಂಡರಾದ ಪ್ರಕಾಶ ಕುಬಿಹಾಳ, ವೀರಪ್ಪ ಕಲಕುಟಕರ್, ಆರ್.ಜಿ. ಅಳಗವಾಡಿ, ಎಸ್.ಎನ್. ನೆಲಿವಾಲ್, ಕೆ.ವಿ. ದೊಡ್ಡಮನಿ, ಆರ್.ಬಿ. ಹುಡೆದ, ಟಿ.ಕೆ. ಕುಲಕರ್ಣಿ, ಆರ್.ಬಿ. ಭೀಮಕ್ಕನವರ್, ಎಂ.ಎನ್. ಅಳಗವಾಡಿ, ಎಸ್.ವೈ. ಅಂಗಡಿ, ಈರಣ್ಣ ಕಲಕುಟಕರ್ ಇತರರಿದ್ದರು.

ಪರಿಸರ ಮಿತ್ರ ಪ್ರಶಸ್ತಿ

ಕುಂದಗೋಳ: ಹುಬ್ಬಳ್ಳಿ-ಧಾರವಾಡ ನಾಗರಿಕ ಪರಿಸರ ಸಮಿತಿ ಹಾಗೂ ಶಾಲಾ ಶಿಕ್ಷಣ ಸಮಿತಿ ಧಾರವಾಡ ವತಿಯಿಂದ ಧಾರವಾಡದ ಆಲೂರು ವೆಂಕಟರಾಯ ಸಭಾಭವನದಲ್ಲಿ ಗುರುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ತಾಲೂಕಿನ ಗುಡೇನಕಟ್ಟಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಪರಿಸರ ಮಿತ್ರ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಶಾಲೆಯಲ್ಲಿ ಉತ್ತಮ ಪರಿಸರ ಸಂರಕ್ಷಣೆ ಹಾಗೂ ಹಸಿರು ವಾತಾವರಣವನ್ನು ಕಾಪಾಡಿಕೊಂಡಿರುವ ಹಿನ್ನೆಲೆಯಲ್ಲಿ ಈ ಪ್ರಶಸ್ತಿಯನ್ನು ನೀಡಿ ನಗದು ಪುರಸ್ಕಾರ ಹಾಗೂ ಪ್ರಶಸ್ತಿ ಪತ್ರವನ್ನು ವಿತರಿಸಲಾಯಿತು.

ಈ ಸಂದರ್ಭದಲ್ಲಿ ಶಾಲೆಯ ಎಸ್‌ಡಿಎಂಸಿ ಅಧ್ಯಕ್ಷ ಗೋಪಾಲ ದೊಡ್ಡಮನಿ, ಸದಸ್ಯರಾದ ಉಮೇಶ್ ಕಮ್ಮಾರ, ನಿಂಗಪ್ಪ ನೀರಲಗಿ, ಬಸವರಾಜ ದಾನಂನವರ, ದನಪಾಲ ಮಲ್ಲಿಗವಾಡ, ವಿರುಪಾಕ್ಷಿ ಬಡಿಗೇರ, ಬಸವರಾಜ ಯೋಗಪ್ಪನವರ, ಬಸು ಚಿಂತಲಿ, ಮುಖ್ಯೋಪಾಧ್ಯಯ ಎಸ್.ಎಂ. ಮುಲ್ಲಾ, ಶಿಕ್ಷಕರು, ವಿದ್ಯಾರ್ಥಿಗಳು ಸೇರಿದಂತೆ ಅನೇಕರಿದ್ದರು.



ನೇಕಾರರ ಸಂಕಷ್ಟಕ್ಕೆ ಪೂರಕವಾಗುವುದೇ ಬಜೆಟ್?

ಮಲ್ಲಿಕಾರ್ಜುನ ತುಂಗಳ

ದಿಗಂತ ವಿಶೇಷ

ರಬಕವಿ-ಬನಹಟ್ಟಿ: ಬಹು ವರ್ಷಗಳಿಂದ ನನೆಗುದಿಗೆ ಬಿದ್ದಿದ್ದ ಜವಳಿ ಪಾರ್ಕ್ ಘೋಷಣೆಯು ರಬಕವಿ-ಬನಹಟ್ಟಿ ಜನತೆ ನೈಜ ಸಂಕಷ್ಟ ಎದುರಿಸುತ್ತಿರುವ ನೇಕಾರರಿಗೆ ಶುಕ್ರವಾರ ನಡೆಯುವ ಬಜೆಟ್ ಪೂರಕವಾಗುವುದೇ ಎಂಬ ನಿರೀಕ್ಷೆಯಲ್ಲಿ ಲಕ್ಷಾಂತರ ನೇಕಾರರು ಎದುರು ನೋಡುವಲ್ಲಿ ಕಾರಣವಾಗಿದೆ.

ಕೋನ್ ಡೈಯಿಂಗ್: ನೇಕಾರಿಕೆ ಉದ್ದಿಮೆಯ ಅಭಿವೃದ್ಧಿಗೆ ದಶಕದ ಹಿಂದೆಯೇ ಮುಖ್ಯವಾದ ಕೋನ್ ಡೈಯಿಂಗ್ ಇನ್ನೂ ನಿರ್ಮಾಣವಾಗಿಲ್ಲ. ಇದರಿಂದ ಸೀರೆಗಳ ಉತ್ಪಾದನೆಯಲ್ಲಿ ವಿವಿಧ ಬಣ್ಣ-ಬಣ್ಣದ ರೀತಿಯಲ್ಲಿ ವೈಭವದ ಸೀರೆಗಳನ್ನು ತಯಾರಿಸುವ ಮೂಲಕ ಜವಳಿ ಕ್ಷೇತ್ರಕ್ಕೆ ಹೊಸ ಸ್ಪರ್ಶ ದೊರಕುವಲ್ಲಿ ಕಾರಣವಾಗಲಿದೆ.

ಮಾರುಕಟ್ಟೆಯಿಲ್ಲ: ಇಲ್ಲಿನ ಸೀರೆಗಳು ದೇಶವಷ್ಟೇ ಅಲ್ಲ, ಇದೀಗ ವಿದೇಶಕ್ಕೂ ತೆರಳುತ್ತಿವೆ. ಆದರೆ, ಸೀರೆಗಳ ರಫ್ತಿಗೆ ಪ್ರಮುಖವಾದ ಮಾರುಕಟ್ಟೆ ಸಮಸ್ಯೆ ಕಾರಣ ಸರ್ಕಾರದಿಂದ ಜವಳಿ ಮಾರುಕಟ್ಟೆ ಅನಿವಾರ್ಯವಾಗಿದೆ.



ಕೆಎಚ್‌ಡಿಸಿ ಪುನಶ್ಚೇತನ: ಹುಬ್ಬಳ್ಳಿ ನಂತರದ ಪ್ರಧಾನ ಕಛೇರಿ ಹೊಂದಿರುವ ಕೈಮಗ್ಗ ಅಭಿವೃದ್ಧಿ ನಿಗಮದಡಿ ನೇಯ್ಗೆ ಮಾಡುತ್ತಿರುವ ನೇಕಾರರಿಗೆ ಶಾಶ್ವತ ಉದ್ಯೋಗ ದೊರಕಿಸುವ ಕಾರ್ಯ ಸರ್ಕಾರದ ಹೆಗಲ ಮೇಲಿದೆ. ಕಳೆದೆರಡು ದಶಕಗಳಿಂದ ಇಳಿವಯಸ್ಸಿನಲ್ಲಿರುವ ಕೈಮಗ್ಗ ನೇಕಾರರ ಜೀವನಮಟ್ಟ ಸುಧಾರಣೆಗೆ ಹೊಸ ಯೋಜನೆಗಳನ್ನು ಒದಗಿಸುವ ಮೂಲಕ ಮುಖ್ಯ ವಾಹಿನಿಗೆ ಕರೆತರುವ ಜವಾಬ್ದಾರಿಯಾಗಿದೆ.

ಸಬ್ಸಿಡಿಯಾಗಲಿ: ಕೈಮಗ್ಗ ನೇಕಾರರಿಗೆ ಎನ್ ಸಿಡಿಸಿಯಿಂದ ಕಚ್ಚಾ ನೂಲು ಖರೀದಿಗೆ ದೊರಕುವ ಶೇ.10ರಷ್ಟು ರಿಯಾಯ್ತಿ ಪಾವರ್‌ಲೂಮ್ ನೇಕಾರರಿಗೂ ಒದಗಿಸಬೇಕು. ಇದರಿಂದ ನೇಕಾರಿಕೆ ಕೊಂಚ ಸಬಲ ಹೊಂದಲು ಕಾರಣವಾಗಲಿದೆ.

ಸಾಲ ವಿಸ್ತರಣೆಯಿಲ್ಲ: ಬಿಡಿಸಿಸಿ ಬ್ಯಾಂಕ್‌ನಿಂದ ಸರ್ಕಾರದ ಆದೇಶದಂತೆ 3 ಲಕ್ಷದವರೆಗೆ ಶೇ.1ರ ಬಡ್ಡಿ ದರದಲ್ಲಿ ಹಾಗು 5 ಲಕ್ಷದವರೆಗಿನ ಶೇ.3ಬಡ್ಡಿ ದರದ ಆಕರಣೆ ಸಾಲವನ್ನು 25 ಲಕ್ಷ ರೂ.ಗಳವರೆಗೆ ವಿಸ್ತರಿಸಿದ್ದಲ್ಲಿ, ನೇಕಾರಿಕೆ ಉತ್ತೇಜನ ವಸ್ತು ಖರೀದಿಸಲು ಸಾಧ್ಯವಾಗುವುದು.

ಸಂಪೂರ್ಣ ಸಾಲ ಮನ್ನಾ ನಿರೀಕ್ಷೆ: ಅಲ್ಪ ಪ್ರಮಾಣದಲ್ಲಿರುವ ನೇಕಾರರ ಸಾಲವನ್ನು ಸಂಪೂರ್ಣ ಮನ್ನಾ ಮಾಡಬೇಕೆಂಬ ಕೂಗು ನೇಕಾರರದ್ದಾಗಿದೆ. ಅತ್ಯಂತ ದಯನೀಯ ಸ್ಥಿತಿಯಲ್ಲಿರುವ ನೇಕಾರ ವರ್ಗಕ್ಕೆ ಸಾಲಮನ್ನಾ ಅನಿವಾರ್ಯವಾಗಿದೆ.

ಸಾಮಗ್ರಿ ಖರೀದಿಗೆ ಸಬ್ಸಿಡಿ: ಹೊಸ ಹೊಸ ತಂತ್ರಜ್ಞಾನದಲ್ಲಿರುವ ಜವಳಿ ಇಲಾಖೆಯಲ್ಲಿ ಉಚಿತವಾಗಿ ನೇಕಾರರಿಗೆ ತರಬೇತಿ ಒದಗಿಸುವ ಅವಶ್ಯಕತೆಯಿದೆ. ಸಾಮಗ್ರಿ ಖರೀದಿಯಲ್ಲಿ ಸಬ್ಸಿಡಿಯನ್ನಾಗಿಸಿದ್ದಲ್ಲಿ ಜವಳಿ ಉನ್ನತೀಕರಣಕ್ಕೆ ಹೊಸ ಆಯಾಮ ಸೃಷ್ಟಿಯಾಗುವದು. ಜನಪ್ರತಿನಿಧಿಗಳು ಇವೆಲ್ಲವನ್ನೂ ಜಾರಿಗೆ ತಂದರೂ ಅಧಿಕಾರಿಗಳು ಮಾತ್ರ ತಾರತಮ್ಯವೆಸಗುತ್ತ ಷರತ್ತುಗಳನ್ನು ಅನ್ವಯಿಸುವದಲ್ಲದೆ ನೇಕಾರರು ಅಭಿವೃದ್ಧಿ ಹೊಂದದಿರುವಂತೆ ಯೋಜನೆ ರೂಪಿಸುವಲ್ಲಿ ಕಾರಣವಾಗಿದೆ.

ಸಹಾಯ ಬಡ್ಡಿಯಿಲ್ಲ: 2017-18ರಲ್ಲಿ ಇದೇ ಘಟನೆ ಮರುಕಳಿಸಿದ ಸಂದರ್ಭ ಸರ್ಕಾರದ ಜನಪ್ರತಿನಿಧಿಗಳ ಮಧ್ಯಸ್ಥಿಕೆಯಿಂದ ಸರಳೀಕರಣಗೊಳಿಸಿ ಸಹಾಯ ಬಡ್ಡಿ ಬಿಡುಗಡೆ ಮಾಡಿತ್ತು. ಇದೇ ಪ್ರಸಂಗ ಮತ್ತೇ ಬಂದಿದ್ದು, ಕಳೆದ 2018-19 ರಿಂದ 2022-23 ವರೆಗೆ 5 ವರ್ಷಗಳಿಂದ ಸುಮಾರು 250 ಕೋಟಿ ರೂ.ಗಳಷ್ಟು ಸಹಾಯ ಬಡ್ಡಿ ದೊರಕದ ಕಾರಣ ನೇಕಾರರು ಸಂಪೂರ್ಣ ಬಡ್ಡಿಯನ್ನು ಸಾಲ ಪಡೆದಿರುವ ಸಹಕಾರಿ ಸಂಘ ಹಾಗು ಬ್ಯಾಂಕ್‌ಗಳಿಗೆ ಭರಣಾ ಮಾಡಿದ್ದಾರೆ. ಇಲ್ಲಿಯವರೆಗೂ ಬಾರದ ಕಾರಣ ಹೆಚ್ಚಿನ ಬಡ್ಡಿ ತುಂಬಿರುವ ನೇಕಾರರಿಗೆ ಮತ್ತಷ್ಟು ಆರ್ಥಿಕ ಸಂಕಷ್ಟ ಎದುರಾಗುವಲ್ಲಿ ಕಾರಣವಾಗಿದೆ.

ಕಿರುಸುದ್ದಿ

ನಕಲಿ ಪತ್ರಕರ್ತನ ಬಂಧನ


ಹಾವೇರಿ: ಪಿಎಂಇಜಿಪಿಯಲ್ಲಿ ಲೋನ್ ಕೊಡಿಸುವುದಾಗಿ ನಂಬಿಸಿದ ನಕಲಿ ಪತ್ರಕರ್ತನೋರ್ವ ಅತ್ಯಾಚಾರ ನಡೆಸಿ ನಂತರ ಖಾಸಗಿ ವಿಡಿಯೋ ಇಟ್ಟುಕೊಂಡು ಬ್ಲಾಕ್ ಮೇಲ್ ಮಾಡಿದ ಹಿನ್ನೆಲೆಯಲ್ಲಿ ಬಂಧಿಸಲಾಗಿದೆ. ದೀಪಕ್ ಉಪಳೆ ಬಂಧಿತ ನಕಲಿ ಪತ್ರಕರ್ತ. 5ಲಕ್ಷ ರೂಪಾಯಿ ಲೋನ್ ಕೊಡಿಸುವುದಾಗಿ ನಂಬಿಸಿದ್ದ ಆರೋಪಿ, ಮಹಿಳೆಯನ್ನು ಆಕೆಯನ್ನ ಪುಸಲಾಯಿಸಿ ಅತ್ಯಾಚಾರ ಎಸಗಿದ ಆರೋಪ ಕೇಳಿಬಂದಿದೆ. ಲಾಡ್ಜ್‌ಗಳು ಸೇರಿದಂತೆ ನಿರ್ಜನ ಪ್ರದೇಶಕ್ಕೆ ಕರೆದೊಯ್ದು ಅತ್ಯಾಚಾರ ಎಸಗಿ ಬಳಿಕ ಖಾಸಗಿ ವಿಡಿಯೋಗಳನ್ನು ಇಟ್ಟುಕೊಂಡು ಬ್ಲಾಕ್ ಮೇಲ್ ನಡೆಸಿದ್ದಾನೆ. ನಿರಂತರ ಲೈಂಗಿಕ ಸಂಪರ್ಕದಲ್ಲಿರುವಂತೆ ಸಂತ್ರಸ್ತೆಗೆ ಬೆದರಿಕೆ ಹಾಕಿದ್ದು, ಇಲ್ಲದಿದ್ದಲ್ಲಿ ವಿಡಿಯೋ ಹರಿ ಬಿಡುವುದಾಗಿ ಬೆದರಿಕೆ ಹಾಕಿದ್ದಾನೆ. ಇದರಿಂದ ಬೇಸತ್ತ ಮಹಿಳೆ ನಕಲಿ ಪತ್ರಕರ್ತನ ವಿರುದ್ಧ ಹಾವೇರಿ ಜಿಲ್ಲೆ ಬಂಕಾಪೂರ ಪೊಲೀಸ್ ಠಾಣೆಗೆ ದೂರು ಸಲ್ಲಿಸಿದ್ದು, ದೂರು ಆಧರಿಸಿ ನಕಲಿ ಪತ್ರಕರ್ತ ಬಂಕಾಪೂರ ಪೊಲೀಸರು ಬಂಧಿಸಿದ್ದಾರೆ.



ಲೋನ್ ಕೊಡಿಸೋದಾಗಿ ನಂಬಿಸಿ ಅತ್ಯಾಚಾರ

ಚೀಲದಲ್ಲಿ ಮೃತದೇಹ ಪತ್ತೆ

ಹೂವಿನಹಡಗಲಿ: ತಾಲೂಕಿನ ಬೀರಬ್ಬಿ ಗ್ರಾಮದಲ್ಲಿ ಬೀರೇಶ (25) ಎಂಬ ಯುವಕನನ್ನು ದುಷ್ಕರ್ಮಿಗಳು ಕೊಲೆ ಮಾಡಿ, ದೇಹವನ್ನು ಕತ್ತರಿಸಿ ಚೀಲದಲ್ಲಿ ತುಂಬಿ ಹಾಕಿದ ಪ್ರಕರಣ ತಡವಾಗಿ ಬೆಳಕಿಗೆ ಬಂದಿದೆ. ಕುರಿ ಕಾಯುವ ಕೆಲಸ ಮಾಡುತ್ತಿದ್ದ ಬೀರೇಶ ಕಳೆದ 15 ದಿನಗಳಿಂದ ಕಾಣೆಯಾಗಿದ್ದರು. ಆದರೆ, ಬುಧವಾರ ಸಂಜೆ ಬೀರೇಶ ಅವರ ಮನೆಯ ಹಿಂಭಾಗದಲ್ಲಿ ಮೃತದೇಹ ಪತ್ತೆಯಾಗಿದೆ. ಪ್ರಾಣಿ ಸತ್ತಿರುವ ವಾಸನೆ ಬರುತ್ತಿದೆ ಎಂದು ಸ್ಥಳೀಯರು ಗಮನಿಸಿದಾಗ ಒಂದು ಚೀಲ ಕಂಡು ಬಂದಿದ್ದು, ಅದನ್ನು ತೆರೆದಾಗ ಬೀರೇಶ ಅವರ ದೇಹದ ಭಾಗಗಳು ತುಂಡು ತುಂಡಾಗಿರುವಂತಹ ದೃಶ್ಯ ಕಂಡು ಬಂದಿದೆ. ಕೂಡಲೇ ಗ್ರಾಮಸ್ಥರು ಹಿರೇಹಡಗಲಿ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಸ್ಥಳಕ್ಕಾಗಮಿಸಿದ ಪೊಲೀಸರು ಪರಿಶೀಲನೆ ನಡೆಸಿ ಪ್ರಕರಣ ದಾಖಲಿಸಿಕೊಂಡಿದ್ದಾರೆ. ಬೀರೇಶ್ ಅವರ ಮೃತದೇಹದ ಭಾಗಗಳಿರುವ ಚೀಲ ದೊರೆತ ಸ್ಥಳಕ್ಕೆ ಎಸ್ಪಿ ಜಾಹ್ನವಿ ಎಸ್ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಡಿವೈಎಸ್‌ಪಿ ಸಂತೋಷ್ ಚೌವ್ಹಾಣ್, ಸಿಪಿಐ ಮಲ್ಲಪ್ಪ ಹೂಗಾರ ಹಾಗೂ ಇತರರಿದ್ದರು.



ಬೀರಬ್ಬಿಯಲ್ಲಿ ಯುವಕನ ಕೊಲೆ

ಹುಬ್ಬಳ್ಳಿ ಇಂದಿನ ಉತ್ಪನ್ನವಾರು ದರ

ಉತ್ಪನ್ನಗಳು	₹ಕನಿಷ್ಠ (ಕ್ವಿಂ)	₹ಗರಿಷ್ಠ (ಕ್ವಿಂ)
ಅಲಸಂದೆ ಕಾಳು	5825	5825
ಕಡಲೆಕಾಳು	1610	5599
ಉದ್ದಿನಬೇಳೆ	9310	9350
ಉದ್ದಿನಕಾಳು	4029	7175
ತೆಂಗಿನಕಾಯಿ	20000	20000
ಧನಿಯಾ	8925	11915
ಹೆಸರುಬೇಳೆ	9000	9025
ಬಟಾಣಿ	5650	6050
ಹೆಸರುಕಾಳು	999	8900
ಹುರುಳಿ ಕಾಳು	3725	3725
ಬೆಲ್ಲ	5100	5100
ಜೋಳ	1810	3935
ಮೆಕ್ಕೆಜೋಳ	1583	1775
ಮಡಿಕೆ (ಮಟಕಿ)	9001	13621
ಈರುಳ್ಳಿ	400	2000
ಆಲೂಗಡ್ಡೆ	1100	1900
ಅಕ್ಕಿ	5767	8200
ಕುಸುಬೆ	5355	5355
ಸೋಯಾಬಿನ್	1235	5507
ತೊಗರಿ	2119	5745
ತೊಗರಿ ಬೇಳೆ	6800	11501
ಗೋಧಿ	2010	4775

ಲವ್ ಜಿಹಾದ್ ವಿರುದ್ಧ ಕಾನೂನು ಜಾರಿಯಾಗಲಿ: ಮುತಾಲಿಕ್

ಹುಬ್ಬಳ್ಳಿ: ಕೇಂದ್ರ ಸರ್ಕಾರ ಲವ್ ಜಿಹಾದ್ ವಿರುದ್ಧ ಕಾನೂನು ಜಾರಿಗೆ ತರಬೇಕು ಎಂದು ಶ್ರೀರಾಮ ಸೇನೆ ಸಂಸ್ಥಾಪಕ ಅಧ್ಯಕ್ಷ ಪ್ರಮೋದ ಮುತಾಲಿಕ್ ಆಗ್ರಹಿಸಿದರು.

ನಗರದಲ್ಲಿ ಲಕ್ಷ್ಮೀ ಮಾಲ್‌ನಲ್ಲಿ ಕೇರಳಾ ಸ್ಟೋರಿ 2 ಸಿನಿಮಾ ವೀಕ್ಷಿಸಿ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಲವ್ ಜಿಹಾದ ಪ್ರಕರಣಗಳು ಹೆಚ್ಚಾಗುತ್ತಿವೆ. ಕಳೆದ 20 ವರ್ಷದಲ್ಲಿ ಶ್ರೀರಾಮ ಸೇನೆ 4800 ಹಿಂದು ಯುವತಿಯರ ರಕ್ಷಿಸಿದೆ. ಕಳೆದು ಎರಡು ವರ್ಷದಿಂದ ಹೆಲ್ಪ್‌ಲೈನ್ ಆರಂಭವಾಗಿದ್ದು, ಇಲ್ಲಿಯವರೆಗೆ 8 ಸಾವಿರ ಕರೆಗಳು ಬಂದಿವೆ. ಶೇ.70ರಷ್ಟು ಪ್ರಕರಣಗಳ ಬಗೆಹರಿಸಿದ್ದು, ಪ್ರತಿದಿನ 4-5 ಕೇಸ್ ಶ್ರೀರಾಮ ಸೇನೆಕಾರ್ಯಕರ್ತರುನಿರ್ವಹಣೆಮಾಡುತ್ತಿದ್ದಾರೆ ಎಂದರು.

ಹುಬ್ಬಳ್ಳಿ ಪ್ರತಿಷ್ಠಿತ ಹೈಸ್ಕೂಲ್‌ನಲ್ಲಿ ಮುಸ್ಲಿಂ ವಿದ್ಯಾರ್ಥಿಯೋರ್ವ ಮೂರು ಹಿಂದು ಹುಡಗಿಯರಿಗೆ ನಮಾಜ್, ಉಪವಾಸ ಮಾಡುವಂತೆ ಮೈಂಡ್ ವಾಶ್ ಮಾಡಿದ್ದ. ಶ್ರೀರಾಮ ಸೇನೆ ಶಾಲೆಗೆ ಭೇಟಿ ನೀಡಿ ಆಗ ಯುವಕ ಶಾಲೆಯಿಂದ ಅಮಾನತು ಮಾಡಿಸಿದೆ. ಇದು ಒಂದು ಉದಾಹರಣೆಯಾಗಿದ್ದು ಇಂತಹ ಅನೇಕ ಪ್ರಕರಣಗಳು ನಡೆದಿವೆ. ಮುಸ್ಲಿಂ ವಿದ್ಯಾರ್ಥಿ ಹಾಗೂ ವಿದ್ಯಾರ್ಥಿನಿಯರು ಲವ್ ಜಿಹಾದ್, ಅಪಹರಣ, ಹಿಂದು ಯುವತಿಯರ ಮನವೊಲಿಸುವ ಕೆಲಸ ಮಾಡುತ್ತಿದ್ದಾರೆ ಎಂದು ತಿಳಿಸಿದರು. ಬೆಂಗಳೂರಿನ ವೈಟ್‌ಫಿಲ್ಡ್‌ನಲ್ಲಿರುವ ಐಟಿ ಕಂಪನಿಯಲ್ಲಿ ಕೆಲಸ ಮಾಡುವ ಸಾವಿರಾರೂ ಯುವತಿಯರು ಜಿಹಾದಿಗಳ ಜಾಲದಲ್ಲಿ ಸಿಲುಕಿದ್ದಾರೆ. ಶ್ರೀರಾಮ ಸೇನೆ ದಾಖಲೆ ಸಹಿತಿ ಗೃಹ ಸಚಿವರ ಭೇಟಿಯಾಗಿ ನೀಡಲಿದೆ. ಈ ಪ್ರಕರಣವನ್ನು ಎಎನ್‌ಐ ತನಿಖೆ ನಡೆಸಬೇಕು ಎಂದು ಆಗ್ರಹಿಸುವುದಾಗಿ ಹೇಳಿದರು.

ಕಾರಿನಲ್ಲಿ ಬಾರ್ ಮಾಡಿಕೊಂಡವರಿಗೆ ಪೊಲೀಸ್ ಇಲಾಖೆ ಶಾಕ್

ಬೆಳಗಾವಿ: ನಗರ ಹಾಗೂ ಗ್ರಾಮೀಣ ಪ್ರದೇಶದ ವ್ಯಾಪ್ತಿಯಲ್ಲಿ ಕಾರನ್ನೇ ಬಾರ್ ಮಾಡಿಕೊಂಡವರಿಗೆ ಬೆಳಗಾವಿ ಖಾಕಿಪಡೆ ಶಾಕ್ ನೀಡಿದ್ದಾರೆ.

ರಸ್ತೆ ಪಕ್ಕ ಕಾರು ನಿಲ್ಲಿಸಿ ಅಕ್ರಮವಾಗಿ ಮದ್ಯ ಸೇವಿಸುತ್ತಿದ್ದವರ ವಿರುದ್ಧ ಕೇಸ್ ದಾಖಲಿಸಿಕೊಂಡು ಕಠಿಣ ಕ್ರಮ ಕೈಗೊಳುವುದಕ್ಕೆ ಪೊಲೀಸರು ಇದೀಗ ಮುಂದಾಗಿದ್ದಾರೆ.

ಬೆಳಗಾವಿ ಮಹಾನಗರದ ಅಷ್ಟೇ ಅಲ್ಲದೆ ಗ್ರಾಮೀಣ ಭಾಗದಲ್ಲಿ ಕಾರನಲ್ಲಿಯೇ ಮದ್ಯ ಸೇವನೆ ಮಾಡುತ್ತಿದ್ದ ಒಟ್ಟು 24 ಪ್ರಕರಣಗಳು ದಾಖಲಾಗಿವೆ. ಒಂದು ವಾರದಲ್ಲಿ 24 ಪ್ರಕರಣಗಳ ಪೈಕಿ 36 ಜನರ ವಿರುದ್ಧ ಮಹಾನಗರ ಪೊಲೀಸರು ಕೇಸ್ ದಾಖಲಿಸಿ ಕಾನೂನಿನ ಕ್ರಮ ಕೈಗೊಂಡಿದ್ದಾರೆ. ಸಾರ್ವಜನಿಕ ಸ್ಥಳಗಳಲ್ಲಿ, ಕಾರು, ಜಮೀನು, ಮೈದಾನ ಸೇರಿದಂತೆ ವಿವಿಧೆಡೆ ಪಾರ್ಟಿ ಮಾಡ್ತಿದ್ದವರಿಗೆ ಈ ಮೂಲಕ ಬಿಸಿ ಮುಟ್ಟಿಸುವ ಕೆಲಸಕ್ಕೆ ಬೆಳಗಾವಿ ಪೊಲೀಸ್ ಇಲಾಖೆಯು ಮುಂದಾಗಿದೆ.



ಬಾರ್ ಮತ್ತು ರೆಸ್ಟೋರೆಂಟ್ ಇರುವಾಗಲೂ ಕಾರಲ್ಲಿ ಕುಳಿತು ಎಣ್ಣೆ ಪಾರ್ಟಿ ಮಾಡುತ್ತಿದ್ದವರಿಗೆ ಹಾಗೂ ರಸ್ತೆ ಪಕ್ಕ ಕಾರಲ್ಲಿ ಕುಳಿತು ಎಣ್ಣೆ ಪಾರ್ಟಿ ಮಾಡುವವರಿಗೂ ಸಹ ಪೊಲೀಸ್ ಆಯುಕ್ತ ಭೂಷಣ್ ಬೋರಸೆ ಎಚ್ಚರಿಕೆ ನೀಡಿದ್ದಾರೆ. ಅಲ್ಲದೆ, ರಸ್ತೆ ಅಕ್ಕಪಕ್ಕ ರಾತ್ರಿ ವೇಳೆ ನಿಲುಗಡೆ ಆಗುವ ಕಾರುಗಳನ್ನ ತಪಾಸಣೆ ಮಾಡಲು ಪೊಲೀಸರು ಕಾರ್ಯಾಚರಣೆ ಪ್ರಾರಂಭಿಸಿದ್ದು, ಈ ಮೂಲಕ ಡ್ರಂಕ್ ಆ್ಯಂಡ್ ಡ್ರೈವ್ ಪ್ರಕರಣ ತಗ್ಗಿಸಲು ಬೆಳಗಾವಿ ಪೊಲೀಸರು ಹೊಸ ಪ್ರಯತ್ನಕ್ಕೆ ಮುಂದಾಗಿದ್ದು, ಈ ರೀತಿಯಲ್ಲಿ ಪ್ರರಿಶೀಲನೆಯ ವೇಳೆ ಸುಮಾರು 24 ಪ್ರಕರಣಗಳನ್ನು ದಾಖಲಿಸಿಕೊಂಡಿದ್ದಾರೆ.

ಮಧ್ಯಪ್ರಾಚ್ಯದಲ್ಲಿನ ಯುದ್ಧದ ಭೀತಿ

ಪೆಟ್ರೋಲ್ ಬಂಕ್‌ಗಳಲ್ಲಿ ಜನಜಂಗುಳಿ

ದಾಂಡೇಲಿ: ಮಧ್ಯಪ್ರಾಚ್ಯದಲ್ಲಿನ ಯುದ್ಧದ ಭೀತಿಯಿಂದಾಗಿ ದಾಂಡೇಲಿ ನಗರದ 2 ಪೆಟ್ರೋಲ್ ಬಂಕ್‌ಗಳಲ್ಲಿ ಸರತಿಯ ಸಾಲಿನಲ್ಲಿ ವಾಹನಗಳು ಇಂಧನ ತುಂಬಿಸಿಕೊಳ್ಳಲು ನಿಂತುಕೊಂಡಿದ್ದು, ಜನಜಂಗುಳಿ ಉಂಟಾಗಿದೆ. ಇರಾನ್ ಹೋರ್ಮುಜ್ ಜಲಸಂಧಿಯನ್ನು ಬಂದ್ ಮಾಡುವ ಎಚ್ಚರಿಕೆ ನೀಡಿರುವ ಹಿನ್ನಲೆ ಜಾಗತಿಕ ತೈಲ ಮಾರುಕಟ್ಟೆಯಲ್ಲಿ ಬೆಲೆ ಏರಿಕೆಯ ಆತಂಕ ಸೃಷ್ಟಿಯಾಗಿರುವುದರಿಂದ ನಗರದಲ್ಲಿ ಇಂಧನಕ್ಕಾಗಿ ಜನ ಮುಗಿಬಿದ್ದಿದ್ದಾರೆ.

ಮಧ್ಯಪ್ರಾಚ್ಯದಲ್ಲಿ ಉಲ್ಬಣಗೊಳ್ಳುತ್ತಿರುವ ಯುದ್ಧ ಸನ್ನಿವೇಶದ ಹಿನ್ನೆಲೆ ಪೆಟ್ರೋಲ್ ಮತ್ತು ಡೀಸೆಲ್ ಕೊರತೆ ಉಂಟಾಗಬಹುದು ಹಾಗೂ ಇಂಧನದ ದರ ಭಾರೀ ಪ್ರಮಾಣದಲ್ಲಿ ಏರಿಕೆಯಾಗಬಹುದು ಎಂಬ ವದಂತಿ ಹರಡಿದ ಪರಿಣಾಮವಾಗಿ, ನಗರದ 2 ಪೆಟ್ರೋಲ್ ಬಂಕ್‌ಗಳ ಮುಂದೆ ವಾಹನಗಳ ಉದ್ದುದ್ದ ಸಾಲು ಗುರುವಾರವು ಮುಂದುವರಿದಿದೆ.



ಸಿಎಂ ಸಿದ್ದರಾಮಯ್ಯರಿಂದ ಇಂದು ವಿನೂತನ ದಾಖಲೆ: ದೇಶಪಾಂಡೆ



ಹಳಿಯಾಳ: ಆತ್ಮೀಯ ಸ್ನೇಹಿತ ಹಾಗೂ ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯರಿಂದ ವಿನೂತನ ದಾಖಲೆ ಮಾಡಿದ್ದು, ಇಂದು ವಿಧಾನಸೌಧದಲ್ಲಿ ಮಂಡಿಸಲಿರುವ ಬಜೆಟ್ ದೇಶದ ಯಾವುದೇ ರಾಜ್ಯದ ಯಾವುದೇ ಮುಖ್ಯಮಂತ್ರಿಯಿಂದ ಮಂಡಿಸಲಾಗದಿರುವ 17ನೇ ಬಜೆಟ್ ಮಂಡನೆಯ ಕೀರ್ತಿ ಅವರದ್ದಾಗಲಿದೆ ಎಂದು ಕರ್ನಾಟಕ ರಾಜ್ಯ ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷ ಹಾಗೂ ಹಳಿಯಾಳ ಕ್ಷೇತ್ರದ ಹಿರಿಯ ಶಾಸಕ ಆರ್.ವಿ.ದೇಶಪಾಂಡೆ ಹೇಳಿದ್ದಾರೆ.

ಅವರು ತಮ್ಮ ಗೃಹ ಕಚೇರಿಯಲ್ಲಿ ಕರೆದ ಪತ್ರಿಕಾಗೋಷ್ಠಿನ್ನುದ್ದೇಶಿಸಿ ಮಾತನಾಡಿದರು.

2025-26ನೇ ಸಾಲಿನ ಲೆಕ್ಕ ಶೀರ್ಷಿಕೆ 5054 ಅಡಿಯಲ್ಲಿ ಕ್ಷೇತ್ರದ ವ್ಯಾಪ್ತಿಯ ಗ್ರಾಮೀಣ ರಸ್ತೆ ಕಾಮಗಾರಿಗಳಿಗೆ 1.5 ಕೋಟಿ ರೂ.ಗಳ ಅನುದಾನ ಮಂಜೂರಾಗಿದೆ. ಅರಣ್ಯ ಹಾಗೂ ಅರಣ್ಯದಂಚಿನ ಹಳ್ಳಿಗಳಲ್ಲಿ ವಾಸಿಸುವ ಪರಿಶಿಷ್ಟ ಪಂಗಡಗಳ ಸಮುದಾಯಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಸಲುವಾಗಿ ಟಿ ಎಸ್ ಪಿ ಯೋಜನೆಯಡಿ 1ಕೋಟಿ ರೂ.ಅನುದಾನ ಮಂಜೂರು ಮಾಡಲಾಗಿದೆ.

ಕೇಂದ್ರ ಇಂಧನ ಸಚಿವ ಪ್ರಹ್ಲಾದ ಜೋಷಿ ಯವರು ಪತ್ರ ವ್ಯವಹಾರದ ಮನವಿಯಂತೆ ಮನೆ ಮಠಗಳು, ಸರ್ಕಾರಿ ಕಚೇರಿಗಳು, ಸಾರ್ವಜನಿಕ ಕಟ್ಟಡಗಳ ಮೇಲ್ಛಾವಣಿಯಲ್ಲಿ ಸೌರಫಲಕ ಜೋಡಣೆಯೊಂದಿಗೆ ಸೌರ ಘಟಕಗಳನ್ನು ಎಂ ಸೂರ್ಯ ಘರ್- ಮುಫ್ತ್ ಬಿಜ್ಲಿ ಯೋಜನೆಯಲ್ಲಿ ಸ್ಥಾಪಿಸಿ ನವೀಕರಿಸಬಹುದಾದ ಇಂಧನ ಯೋಜನೆಯಡಿ ವಿದ್ಯುತ್ ಬಿಲ್ ಕಡಿಮೆ ಮಾಡುವದಾಗಿದ್ದು ನಮ್ಮ ಕ್ಷೇತ್ರದಲ್ಲಿ ಅನುಷ್ಠಾನಕ್ಕೆಸಿದ್ಧತೆಮಾಡಿಕೊಳ್ಳಲಾಗುತ್ತಿದೆ. ಈ ಯೋಜನೆಯಲ್ಲಿ 3 ಇಗಿ ಘಟಕದ ಅಳವಡಿಕೆಗೆ 78000 ರೂ.ಗಳ ಸಬ್ಸಿಡಿ ಸಿಗಲಿದೆ ಎಂದರು.

ಈ ಸಂದರ್ಭದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೃಷ್ಣ ಪಾಟೀಲ, ರವಿ ತೋರಣಗಟ್ಟಿ, ಶಿರೋಜಿ ದೆಮಾನಿ ಹಾಗೂ ವಿಆರ್‌ಡಿಎಮ್ ಟ್ರಸ್ಟ್ ಆಡಳಿತಾಧಿಕಾರಿ ಪ್ರಕಾಶ ಪ್ರಭು ಉಪಸ್ಥಿತರಿದ್ದರು.

ದುಬೈನಲ್ಲಿ ಸಿಲುಕಿದ್ದ ಬಳ್ಳಾರಿಯ 33 ಜನರು ಬೆಂಗಳೂರಿಗೆ

ಬಳ್ಳಾರಿ: ಇಸ್ರೇಲ್, ಇರಾನ್ ಮಧ್ಯೆ ನಡೆಯುತ್ತಿರುವ ವೈಮಾನಿಕ ದಾಳಿ ಹಿನ್ನೆಲೆಯಲ್ಲಿ ದುಬೈನಲ್ಲಿ ಸಿಲುಕಿದ್ದ ಬಳ್ಳಾರಿಯ 33ಜನರು ಸುರಕ್ಷಿತವಾಗಿ ಗುರುವಾರ ಬೆಂಗಳೂರಿಗೆ ಬಂದಿಳಿದಿದ್ದಾರೆ.



ಬಳ್ಳಾರಿ ಗ್ರಾಮೀಣ ಶಾಸಕ, ಮಾಜಿ ಸಚಿವ ಬಿ.ನಾಗೇಂದ್ರ ಅವರು, ಎಲ್ಲರನ್ನೂ ಪ್ರೀತಿಯಿಂದ ಸ್ವಾಗತಿಸಿದರು. ಈ ವೇಳೆ ಬಳ್ಳಾರಿ ಜಿಲ್ಲಾಡಳಿತದ ವತಿಯಿಂದ ಹೂ ನೀಡಿ ಎಲ್ಲರನ್ನೂ ಬರಮಾಡಿಕೊಂಡರು. ಪ್ರವಾಸಕ್ಕೆಂದು ದುಬೈಗೆ ತೆರಳಿದ ಬಳ್ಳಾರಿಯ ಈ ತಂಡ, ವಾಪಸ್ ಭಾರತಕ್ಕೆ ಮರಳುವ ವೇಳೆ, ಇಸ್ರೇಲ್, ಇರಾನ್ ವೈಮಾನಿಕ ದಾಳಿಗೆ ಮುಂದಾಗಿದ್ದವು. ಏರ್ ಸ್ಟ್ರೈಕ್‌ನಿಂದ ಅವರೆಲ್ಲರ ಪ್ರಯಾಣ ರದ್ದಾಗಿತ್ತು. ಬಳ್ಳಾರಿ ನಗರ ಶಾಸಕ ನಾರಾ ಭರತ್ ರೆಡ್ಡಿ ಹಾಗೂ ಅವರ ಕುಟುಂಬದ ಸದಸ್ಯರು ದುಬೈನಲ್ಲೇ ಸಿಲುಕಿಕೊಂಡಿದ್ದರು. ಅವರು ಮಂಗಳವಾರ ಭಾರತಕ್ಕೆಸುರಕ್ಷಿತವಾಗಿ ಮರಳಿದ್ದಾರೆ. ಗ್ರಾಮೀಣ ಶಾಸಕ, ಮಾಜಿ ಸಚಿವ ಬಿ.ನಾಗೇಂದ್ರ ಅವರು ಸರ್ಕಾರದೊಂದಿಗೆ ಮಾತನಾಡಿ, ಎಲ್ಲರಿನ್ನೂ ಕರೆತರಲು ಸಾಕಷ್ಟು ಶ್ರಮಿಸಿದ್ದರು ಹಾಗೂ ಜಿಲ್ಲಾಡಳಿತ ನಿರಂತರ ಎಲ್ಲರೊಂದಿಗೂ ಸಂಪರ್ಕದಲ್ಲಿದ್ದರು.

ದುಬೈನಿಂದ ನೇರವಾಗಿ ಬೆಂಗಳೂರಿನ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ವಾಪಸ್ ಬಂದಿಳಿಯುತ್ತಿದ್ದಂತೆಯೇ, ಕಾದು ಕುಳಿತಿದ್ದ ಕುಟುಂಬದ ಸದಸ್ಯರಲ್ಲಿ ಸಂತಸ, ಸಂಭ್ರಮ ಮನೆ ಮಾಡಿತ್ತು.

ರಾಜ್ಯ ತನ್ನ ಪಾಲಿನ ಕೆಲಸ ಮಾಡಲಿ: ಜಾಧವ

ಕಲಬುರಗಿ: ಪಿಎಂ ಮಿತ್ರ ಮೆಗಾ ಟೆಕ್ಸ್‌ಟೈಲ್ ಪಾರ್ಕ್‌ನಲ್ಲಿ ರಾಜ್ಯ ಸರ್ಕಾರ ತನ್ನ ಪಾಲಿನ ಕೆಲಸ ಮಾಡಿ ಮುಗಿಸಲಿ. 1 ದಿನವೂ ವಿಳಬವಾಗದಂತೆ ತಾವೇ ಮುಂದಾಗಿ ಕೇಂದ್ರದ ಕೆಲಸಗಳನ್ನು ಮಾಡಿಸುತ್ತೇನೆ ಎಂದು ಕಲಬುರಗಿ ಮಾಜಿ ಸಂಸದ ಡಾ. ಉಮೇಶ ಜಾಧವ ಹೇಳಿದರು.

ನಗರದ ಪತ್ರಿಕಾ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಪಿಎಂ ಮಿತ್ರ ಜವಳಿ ಪಾರ್ಕ್ ವಿಚಾರದಲ್ಲಿ ಕೇಂದ್ರದ ವಿಳಂಬವಿಲ್ಲ, ಸುಮ್ಮನೇ ಕೇಂದ್ರ ಸರ್ಕಾರ ಇದಕ್ಕಾಗಿ ಮುತುವರ್ಜಿ ವಹಿಸುತ್ತಿಲ್ಲ ಎನ್ನುವುದು ಶುದ್ಧ ಸುಳ್ಳು. ಕಲಬುರಗಿ ವಿಮಾನ ನಿಲ್ದಾಣದಿಂದ ವೈಮಾನಿಕ ಸೇವೆ ಆರಂಭಿಸಲು ಕೇಂದ್ರದ ಮುಂದೆ ಇಲ್ಲಿನ ಸಂಸದರು ಬೇಡಿಕೆ ಮಂಡಿಸಿ ಬೆನ್ನು ಬೀಳಬೇಕು. ಅಲ್ಲಿಗೆ ಹೋಗದೆ ಇಲ್ಲೇ ಬೆಂಗಳೂರಲ್ಲೇ ಉಳಿದರೆ ಕೆಲಸಗಳು ಆಗುವುದಿಲ್ಲ ಎಂದರು.

ಪಂಚ ಗ್ಯಾರಂಟಿ ಯೋಜನೆಗಳಿಗೆ ರಾಜ್ಯ ಸರ್ಕಾರ ಕಳೆದ 3 ವರ್ಷದಿಂದ ಎಸ್ಸಿ ಎಸ್ಟಿ ಪ್ರಗತಿಗಾಗಿ ಇಡಲಾಗಿದ್ದ ಎಸ್‌ಸಿಪಿ,ಟಿಎಸ್ಪಿ ಹಣವನ್ನೇ ಬಳಸುತ್ತಿದೆ. ಇದರಿಂದ ದಲಿತರ ಏಳಿಗೆಗೆ ಗ್ರಹಣ ಆವರಿಸಿದೆ. ಈ ವಿಚಾರದಲ್ಲಿ ಅದೇ ಸಮುದಾಯದ ಕಾಂಗ್ರೆಸ್ ಸಚಿವರು,ಶಾಸಕರು ಮಾತನಾಡುತ್ತಿಲ್ಲ, ಸದನದ ಒಳಗೆ ಹೊರಗೆ ತಾವು ಹೋರಾಟ ಮಾಡಲಾಗುವುದು. ಜಿಲ್ಲೆಯ ಅಭಿವೃದ್ಧಿ ವಿಷಯಗಳ ಗಂಭೀರವಾಗಿ ಚರ್ಚೆ ನಡೆಯಬೇಕಿದ್ದ ದಿಶಾ ಸಭೆ ಆನ್‌ಲೈನ್ ನಡೆಸಿ ಸಭೆಯ ಗಂಭೀರತೆಯನ್ನೇ ಕಳೆಯಲಾಗಿದೆ. ಮುಖಾಮುಖಿ ಹೇಳಿದರೇ ಕೇಳದ ಜಿಲ್ಲಾಡಳಿತ, ಅಧಿಕಾರಿಗಳು ಇರುವಾಗ ಈ ರೀತಿ ಗಾಳಿಯಲ್ಲಿ ಸಭೆ ಮಾಡಿದ್ರೆ ಅಭಿವೃದ್ಧಿ ಆಗ್ತದೆಯೆ? ತೋರಿಕೆಗೆ ಸಭೆ ಮಾಡಿ ಕೈ ತೊಳೆದುಕೊಂಡಿರೋದನ್ನ ಖಂಡಿಸುತ್ತೇವೆ ಎಂದರು.



> ಕಲಬುರರಿಗೆ ಡಾ. ಖರ್ಗೆಯವರ ಅಳಿಯ ರಾಧಾಕೃಷ್ಣ ಅವರೇ ಸಂಸದರಾಗಿದ್ದಾರೆ. ಈಗ ದಿಶಾ ಸಭೆಗೆ ಸಂಸದರೇ ಅಧ್ಯಕ್ಷರು. ನಾನು ಸಂಸದನಿದ್ದಾಗ ನನಗೆ ಆ ಅವಕಾಶ ವಂಚಿತ ಮಾಡಿ ತಾವು ಅಧ್ಯಕ್ಷರಾಗಿದ್ದ ದೊಡ್ಡ ಖರ್ಗೆ ಸಾಹೇಬರು ಈಗ ಅಳಿಯನಿಗೆ ಮಣೆ ಹಾಕಿದ್ದಾರೆ. ಅಧಿಕಾರ ತಮ್ಮ ಪರಿವಾರದಲ್ಲೇ ಇರಲಿ ಎನ್ನುವ ಜಾಯಮಾನವೇ ಇಂತಹದ್ದಕ್ಕೆಲ್ಲ ಕಾರಣ.
> ■ ಡಾ.ಉಮೇಶ ಜಾಧವ, ಮಾಜಿ ಸಂಸದ

ಸುದ್ದಿಗೋಷ್ಠಿಯಲ್ಲಿ ಶಾಸಕ ಬಸವರಾಜ ಮತ್ತಿಮಡು,ಮಾಜಿ ಶಾಸಕ ರಾಜಕುಮಾರ್ ಪಾಟೀಲ್, ಬಿಜೆಪಿ ಜಿಲ್ಲಾಧ್ಯಕ್ಷ ಅಶೋಕ್ ಬಗಲಿ ಮಾತನಾಡಿದರು.ಬಿಜೆಪಿ ಪ್ರಮುಖರಾದ ಎಂಎಲ್‌ಸಿ ಶಶಿಲ್ ನಮೋಶಿ, ಶಿವರಾಜ್ ಪಾಟೀಲ್, ಅವ್ವಣ್ಣ ಮ್ಯಾಕೆರಿ , ಶರಣಪ್ಪಾ ತಲವಾರ್, ಮಾಧ್ಯಮ ಸಮಿತಿಯ ವೆಂಕಟಪ್ರಸಾದ್ ಮಾಲೆಪಾಟಿ, ಉಮೇಶ್ ಪಾಟೀಲ್ ಶಿವಯೋಗಿ ನಾಗನಹಳ್ಳಿ ಶೇಕ್ ರೆಡ್ಡಿ, ಮಹೇಂದ್ರ ಎನ್ ಪೂಜಾರಿ, ಮಲ್ಲಿಕಾರ್ಜುನ ಜಿನ್ನಕೇರಿ,ಗುರು ನರ್ಸೋಳ್ಳಿ ಇದ್ದರು.

ಹೋಟೆಲ್‌ಗೆ ನುಗ್ಗಿ ಗಲಾಟೆ: ಮೂವರ ವಿರುದ್ಧ ದೂರು

ಭಟ್ಕಳ: ತಾಲೂಕಿನ ಹೆಬಳೆ ಗ್ರಾಮದ ಗಾಂಧಿನಗರದಲ್ಲಿರುವ ಹೋಟೆಲ್‌ಗೆ ನುಗ್ಗಿ ಗಲಾಟೆ ನಡೆಸಿ ವಸ್ತುಗಳನ್ನು ಒಡೆದು ಹಾಕಿ ವ್ಯಕ್ತಿಯೊಬ್ಬರ ಮೇಲೆ ಹಲ್ಲೆ ನಡೆಸಿದ ಆರೋಪದಲ್ಲಿ ಮೂವರ ವಿರುದ್ಧ ಇಲ್ಲಿನ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಲಾಗಿದೆ.

ಹೆಬಳೆ ಗ್ರಾಮದ ಗಾಂಧಿನಗರ ನಿವಾಸಿ ಗೋವಿಂದಯ್ಯ ನಾಯ್ಕ (41) ಅವರು ನೀಡಿದ ದೂರಿನ ಮೇರೆಗೆ ದರ್ಶನ ಮೊಗೇರ್, ಮಂಜು ಗೊಂಡ ಹಾಗೂ ಹೇಮಂತ ನಾಯ್ಕ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಗೋವಿಂದಯ್ಯ ನಾಯ್ಕ ತಮ್ಮ ಹೋಟೆಲ್‌ನಲ್ಲಿ ಗ್ರಾಹಕರಿಗೆ ಚಹಾ ಹಾಗೂ ತಿಂಡಿ ನೀಡುತ್ತಿದ್ದ ವೇಳೆ ಆರೋಪಿಗಳು ಹೋಟೆಲ್‌ಗೆ ನುಗ್ಗಿ ಗಲಾಟೆ ನಡೆಸಿದ್ದಾರೆ ಎನ್ನಲಾಗಿದೆ.

ಹೋಟೆಲ್ ಬಂದ್ ಮಾಡುವಂತೆ ಒತ್ತಾಯಿಸಿ ಕೌಂಟರ್‌ನಲ್ಲಿದ್ದ ಹಣದ ಪೆಟ್ಟಿಗೆಯಲ್ಲಿ ಕೈ ಹಾಕಿ ಹಣ ತೆಗೆದುಕೊಳ್ಳಲು ಯತ್ನಿಸಿರುವುದಾಗಿ ದೂರಿನಲ್ಲಿ ಉಲ್ಲೇಖಿಸಲಾಗಿದೆ.

ಇದೇ ವೇಳೆ ಹೋಟೆಲ್‌ನಲ್ಲಿದ್ದ ಟೀ ಗ್ಲಾಸ್ ಹಾಗೂ ಬಾಟಲ್‌ಗಳನ್ನು ಒಡೆದು ಹಾಕಿ, ಟೇಬಲ್ ಮತ್ತು ಕುರ್ಚಿಗಳನ್ನು ಎಸೆದು ಅಲ್ಲಿ ಇದ್ದವರಲ್ಲಿ ಭಯದ ವಾತಾವರಣ ಸೃಷ್ಟಿಸಿದ್ದಾರೆ ಎಂದು ಹೇಳಲಾಗಿದೆ. ಹೋಟೆಲ್‌ಗೆ ಚಹಾ ಕುಡಿಯಲು ಬಂದಿದ್ದ ದುರ್ಗಪ್ಪ ನಾರಾಯಣ ಮೊಗೇರ್ (53) ಅವರನ್ನು ತಡೆದು ಕೈ ಹಾಗೂ ಕುರ್ಚಿಯಿಂದ ಹೊಡೆದು ಗಾಯಪಡಿಸಿದ್ದಲ್ಲದೆ, ಮತ್ತೆ ಹೋಟೆಲ್ ತೆರೆದರೆ ಪರಿಣಾಮ ಎದುರಿಸಬೇಕಾಗುತ್ತದೆ ಎಂದು ಬೆದರಿಕೆ ಹಾಕಿ ಆರೋಪಿಗಳು ಸ್ಥಳದಿಂದ ತೆರಳಿದ್ದಾರೆ ಎಂದು ದೂರಿನಲ್ಲಿ ತಿಳಿಸಲಾಗಿದೆ.

ಈ ಕುರಿತು ಭಟ್ಕಳ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು ಪೊಲೀಸರು ತನಿಖೆ ಕೈಗೊಂಡಿದ್ದಾರೆ.

ಹೋಳಿ ಹಬ್ಬದ ವೇಳೆ ಬುರ್ಖಾ ಹಾಕಿಸಿ ಬಣ್ಣ ಹಚ್ಚಿದ ಆರೋಪ: ದೂರು ದಾಖಲು

ಕಲಬುರಗಿ: ಹೋಳಿ ಹಬ್ಬದ ಸಂದರ್ಭದಲ್ಲಿ ಒಬ್ಬ ವ್ಯಕ್ತಿಗೆ ಬುರ್ಖಾ ಹಾಕಿಸಿ ಬಣ್ಣ ಹಚ್ಚಿ ಅವಮಾನ ಮಾಡಲಾಗಿದೆ ಎಂಬ ಆರೋಪದ ಹಿನ್ನೆಲೆಯಲ್ಲಿ ದೂರು ದಾಖಲಾಗಿರುವ ಘಟನೆ ಕಲಬುರಗಿ ಜಿಲ್ಲೆಯ ಆಳಂದ ತಾಲೂಕಿನ ನಿಂಬರ್ಗಾ ಗ್ರಾಮದಲ್ಲಿ ನಡೆದಿದೆ.

ಈ ಸಂಬಂಧ ದಲಿತ ಸೇನೆ ಮುಖಂಡ ಸಮೀರ್ ಅವಂಟಿ ಅವರು ಪೊಲೀಸರಿಗೆ ದೂರು ಸಲ್ಲಿಸಿದ್ದಾರೆ. ಹೋಳಿ ಹಬ್ಬದ ವೇಳೆ ಕೆಲವು ಹಿಂದೂ ಯುವಕರು ಒಬ್ಬ ವ್ಯಕ್ತಿಗೆ ಬುರ್ಖಾ ಹಾಕಿಸಿ ಬಣ್ಣ ಹಚ್ಚಿ, ಹಿಜಾಬ್ ಹಾಗೂ ಬುರ್ಖಾ ಧರಿಸುವ ಪದ್ಧತಿಗೆ ಅವಮಾನ ಮಾಡಿದ್ದಾರೆ ಎಂದು ದೂರಿನಲ್ಲಿ ಆರೋಪಿಸಲಾಗಿದೆ.

ಘಟನೆಗೆಸಂಬಂಧಿಸಿನಿಂಬರ್ಗಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಪೊಲೀಸರು ಬಿಎನ್‌ಎಸ್ ಕಾಯ್ದೆಯ ಸೆಕ್ಷನ್ 196 ಮತ್ತು 299 ಅಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಿದ್ದಾರೆ.

ಘಟನೆಯ ಕುರಿತು ಹೆಚ್ಚಿನ ಮಾಹಿತಿ ಸಂಗ್ರಹಿಸಲಾಗುತ್ತಿದ್ದು, ಸ'ಂಬಂಧಿಸಿದ'ವ'ರ' ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಪೊಲೀಸರು ತಿಳಿಸಿದ್ದಾರೆ.

ಕೆಪಿಎಸ್‌ಸಿ ವಿರುದ್ಧ ಅಭ್ಯರ್ಥಿಗಳ ಆಕ್ರೋಶ

ಬೆಂಗಳೂರು: ಕರ್ನಾಟಕ ಲೋಕಸೇವಾ ಆಯೋಗ ಕಛೇರಿ ವಿರುದ್ಧ ಈಗ ಅಭ್ಯರ್ಥಿಗಳು ಆಕ್ರೋಶಗೊಂಡಿದ್ದು, ಕೆಇಎ ಮಾದರಿಯಲ್ಲಿ ಫಲಿತಾಂಶ ಪ್ರಕಟಿಸುವಂತೆ ಅಭ್ಯರ್ಥಿಗಳು ಒತ್ತಾಯಿಸಿದ್ದಾರೆ.

ಕೆಇಎ ಸ್ಪರ್ಧಾತ್ಮಕ ಪರೀಕ್ಷೆ ಉತ್ತರ ಪತ್ರಿಕೆಗಳ ಸ್ಕ್ಯಾನ್ ಪ್ರತಿಯನ್ನು ಎಲ್ಲರಿಗೂ ದೊರೆಯುವಂತೆ ವೆಬ್‌ಸೈಟ್‌ನಲ್ಲಿ ಅಪ್ಲೋಡ್ ಮಾಡುತ್ತಿದೆ. ಇದೇ ರೀತಿ ಕೆಪಿಎಸ್‌ಸಿ ಕೂಡ ಉತ್ತರ ಪತ್ರಿಕೆಗಳನ್ನು ಅಪ್ಲೋಡ್ ಮಾಡಿದರೆ ವಿದ್ಯಾರ್ಥಿಗಳ ಸಂದೇಹ ಬಗೆಹರಿಯಲಿದೆ. ಆಯೋಗದಲ್ಲಿ ಹಗರಣ ನಡೆದಿಲ್ಲ ಎನ್ನುವುದೇ ಆದರೆ, ಆರೋಪಿತ ಅಭ್ಯರ್ಥಿಗಳ ಉತ್ತರ ಪತ್ರಿಕೆಯನ್ನು ವೆಬ್‌ಸೈಟ್‌ನಲ್ಲಿ ಅಪ್ಲೋಡ್ ಮಾಡುವ ಧೈರ್ಯ ಪ್ರದರ್ಶಿಸಲಿ ಎಂದು ಅಭ್ಯರ್ಥಿಗಳು ಆಕ್ರೋಶ ಹೊರಹಾಕಿದ್ದಾರೆ. ಕೆಪಿಎಸ್‌ಸಿ ಕಚೇರಿಯನ್ನು ಬಂದ್ ಮಾಡುವ ಒತ್ತಾಯ ಕೂಡ ಹೆಚ್ಚಾಗುತ್ತಿದ್ದು, ಕೆಪಿಎಸ್‌ಸಿಯ ಗೆಜೆಟೆಡ್ ಪ್ರೊಬೆಷನರ್ಸ್ 384 ಹುದ್ದೆಗಳನ್ನು ಯಾರಿಗೆ ಕೊಡಬೇಕೆಂಬುದು ಈಗಾಗಲೇ ನಿರ್ಧಾರವಾಗಿದೆ. ನಾವು ಕಷ್ಟಪಟ್ಟು ಓದಿದವರಿಗೆ ಮೋಸವಾಗುತ್ತಿದೆ ಎಂದು ನೊಂದ ಅಭ್ಯರ್ಥಿಗಳು ಒತ್ತಾಯಿಸಿದ್ದಾರೆ.

ಆಧಾರ ರಹಿತ ಆರೋಪ ಸರಿಯಲ್ಲ: ಇತ್ತೀಚೆಗೆ ಕೆಪಿಎಸ್‌ಸಿ ವಿರುದ್ಧ ಹಲವು ಆರೋಪಗಳನ್ನು ಮಾಡಲಾಗಿತ್ತು. ಅದರಲ್ಲಿ ಯಾವುದು ಕೂಡ ಸಾಬೀತಾಗಿಲ್ಲ. ಒಂದು ಕೊಠಡಿಯಲ್ಲಿ 12, ಮತ್ತೊಂದು ಕೊಠಡಿಯಲ್ಲಿ 11, ಎರಡು ಕೊಠಡಿಗಳಲ್ಲಿ ತಲಾ 10 ಮಂದಿ ಉತ್ತೀರ್ಣರಾಗಿದ್ದಾರೆ. ಕೆಲವು ಕೊಠಡಿಗಳಲ್ಲಿ ಯಾವೊಬ್ಬ ಅಭ್ಯರ್ಥಿಯು ಆಯ್ಕೆಯಾಗಿಲ್ಲ. ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಹೀಗೆ ಆಯ್ಕೆಯಾಗುತ್ತಾರೆಂದು ನಿರೀಕ್ಷೆಯೂ ಮಾಡಲು ಸಾಧ್ಯವಿಲ್ಲ. ಯುಪಿಎಸ್‌ಸಿ ಉತ್ತೀರ್ಣರಾದವರಲ್ಲಿ ಕೆಲವರು ಕೆಎಎಸ್ ಪಾಸ್ ಆಗಿರದಿರುವ ಉದಾಹರಣೆಗಳಿವೆ. ಆದ್ದರಿಂದ ಬೇರೊಂದು ನೇಮಕಾತಿ ಮಂಡಳಿಯಲ್ಲಿ ಉತ್ತೀರ್ಣ ರಾಗದವರು ಇಲ್ಲಿ ಹೇಗೆ ಪಾಸ್ ಆದರು ಎಂದು ಪ್ರಶ್ನಿಸುವುದು ಮತ್ತು ಸುಖಾಸುಮ್ಮನೆ ಆರೋಪ ಮಾಡುವುದು ಸರಿಯಲ್ಲ ಎಂದು ಕೆಪಿಎಸ್‌ಸಿ ಕಾರ್ಯದರ್ಶಿ ಜ್ಯೋತಿ ಕೆ. ತಿಳಿಸಿದ್ದಾರೆ.

ವಿವಿಧ ಜಿಲ್ಲೆಗಳ ಅಭ್ಯರ್ಥಿಗಳಾಗಿದ್ದಾರೆ

ಕೆಲವು ಅಭ್ಯರ್ಥಿಗಳ ಮನೆತನದ ಹೆಸರಿನಿಂದ ನಾಲ್ವರು ಅಭ್ಯರ್ಥಿಗಳು ಆಯ್ಕೆಯಾಗಿರುವುದನ್ನು ನೋಡಿ ಆರೋಪಗಳನ್ನು ಕೂಡ ಮಾಡಲಾಗಿದೆ. ಆದರೆ, ಅವರೆಲ್ಲರೂ ಒಂದೇ ಕುಟುಂಬದವರಲ್ಲ ಎಂದು ಖಚಿತಪಡಿಸಿಕೊಳ್ಳಲಾಗಿದೆ. ವಿವಿಧ ಊರುಗಳಲ್ಲಿದ್ದು, ಒಂದೇ ಮನೆತನದ ಹೆಸರುಗಳಿರುತ್ತವೆ. ಇದನ್ನೂ ಕೂಲಂಕಷವಾಗಿ ಪರಿಶೀಲನೆ ನಡೆಸಲಾಗಿದೆ. ಇವರೆಲ್ಲರೂ ವಿಜಯಪುರ, ಧಾರವಾಡ, ಹಾವೇರಿ, ಬಾಗಲಕೋಟೆ ಸೇರಿ ವಿವಿಧ ಜಿಲ್ಲೆಗಳ ಅಭ್ಯರ್ಥಿಗಳಾಗಿದ್ದಾರೆ ಎಂದು ಕೆಪಿಎಸ್‌ಸಿ ಕಾರ್ಯದರ್ಶಿ ಜ್ಯೋತಿ ಸ್ಪಷ್ಟಪಡಿಸಿದರು.

ಆರೋಗ್ಯ ಇಲಾಖೆ ನೌಕರರ ಬಗ್ಗೆ ಚರ್ಚೆಗೆ ತೀರ್ಮಾನ

ಬೆಂಗಳೂರು: ವೇತನ ಹೆಚ್ಚಳ, ಮುಂಬಡ್ತಿ, ಖಾಲಿ ಹುದ್ದೆ ಭರ್ತಿ ಸೇರಿ 14 ಬೇಡಿಕೆಗಳನ್ನು ಮುಂದಿಟ್ಟು ಮಾ.11ರಿಂದ ಅನಿರ್ದಿಷ್ಟಾವಧಿ ಮುಷ್ಕರಕ್ಕೆ ಮುಂದಾಗಿರುವ ಆರೋಗ್ಯ ಇಲಾಖೆ ನೌಕರರೊಂದಿಗೆ ಇಲಾಖೆ ಸಚಿವರು ಮಾತುಕತೆ ನಡೆಸುವುದಕ್ಕೆ ಸಚಿವ ಸಂಪುಟ ಸಭೆ ತೀರ್ಮಾನಿಸಿದೆ.



ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ಗುರುವಾರ ನಡೆದ ಸಚಿವ ಸಂಪುಟ ಸಭೆಯ ಬಳಿಕ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ. ಪಾಟೀಲ್ ಸಭೆಯ ನಿರ್ಣಯಗಳನ್ನು ಮಾಧ್ಯಮಗಳಿಗೆ ವಿವರಿಸಿದರು. ವೃಂದ ಮತ್ತು ನೇಮಕಾತಿ ನಿಯಮ ಪ್ರತಿ ಮೂರು ವರ್ಷಕ್ಕೊಮ್ಮೆ ತಿದ್ದುಪಡಿಯಾಗಬೇಕೆಂದಿದ್ದರೂ 1997ರಿಂದ ಈವರೆಗೆ ನಿಯಮ ತಿದ್ದುಪಡಿಯಾಗಿಲ್ಲ. ಇಲಾಖೆಯಲ್ಲಿ ಮಂಜೂರಾದ ಹುದ್ದೆಗಳ ಸಂಖ್ಯೆ 67 ಸಾವಿರದಷ್ಟಿದೆ. ಆದರೆ 37,620 ಹುದ್ದೆಗಳು ಖಾಲಿಯಿವೆ. ಸೇವಾನಿರತ ವೈದ್ಯರು, ಅಧಿಕಾರಿಗಳು, ನೌಕರರು ಉನ್ನತ ವ್ಯಾಸಂಗ ಕೈಗೊಳ್ಳಲು ಅವಕಾಶ ದೊರೆತಿಲ್ಲ. ವರ್ಗಾವಣೆ ಕಾಯ್ದೆ ಸರಿಪಡಿಸುವ ಬದಲು ಅವೈಜ್ಞಾನಿಕ ಕೌನ್ಸಿಲಿಂಗ್ ಮೂಲಕ ವರ್ಗಾವಣೆ ಮಾಡಲಾಗುತ್ತಿದೆ. ಆರೋಗ್ಯ ಇಲಾಖೆಯ ಎನ್ ಕೇಡರ್ ಹುದ್ದೆಗಳಿಗೆ ಆರೋಗ್ಯ ಇಲಾಖೆಯ ವೈದ್ಯರು, ಸಿಬ್ಬಂದಿ ನೇಮಿಸಬೇಕು ಇತ್ಯಾದಿ ಬೇಡಿಕೆಗಳನ್ನು ಮುಂದಿರಿಸಿ ಮಾ. 11ರಿಂದ ಅನಿರ್ದಿಷ್ಟಾವಧಿ ಮುಷ್ಕರ ನಡೆಸುವುದಾಗಿ ನೌಕರರು ಪ್ರಕಟಿಸಿದ್ದಾರೆ. ಮುಷ್ಕರ ನಡೆಸಿದರೆ ಕಾನೂನು ಕ್ರಮ ತೆಗೆದುಕೊಳ್ಳುವುದಾಗಿ ಇಲಾಖೆ ಎಚ್ಚರಿಕೆ ನೀಡಿದೆ.

ಸಂಪುಟದ ಇತರೆ ನಿರ್ಣಯಗಳು

- ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಕ್ಕೆ 144 ಬಿಎಸ್-6 ನಗರ ಸಾರಿಗೆ ಡೀಸೆಲ್ ಬಸ್ಸುಗಳನ್ನು 62 ಕೋಟಿ ರೂ.ಗಳ ಅಂದಾಜು ಮೊತ್ತದಲ್ಲಿ ಖರೀದಿಗೆ ಆಡಳಿತಾತ್ಮಕ ಅನುಮೋದನೆ
- ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲೂಕು ವ್ಯಾಪ್ತಿಯ ವಿರಿಜಾ, ದೇವರಾಯ, ಆರ್‌ಬಿಎಲ್‌ಎಲ್ ಮತ್ತು ಬಂಗಾರದೊಡ್ಡಿ ನಾಲೆಗಳ ವಿತರಣಾ ನಾಲೆಗಳ ಅಭಿವೃದ್ಧಿ ಕಾಮಗಾರಿಗಳನ್ನು 60 ಕೋಟಿ ರೂ.ಗಳ ಅಂದಾಜಿನಲ್ಲಿ ಕೈಗೊಳ್ಳಲು ಆಡಳಿತಾತ್ಮಕ ಒಪ್ಪಿಗೆ
- ಬೀದರ್ ಜಿಲ್ಲೆಯ ಮಾಂಜ್ರಾ ನದಿಗೆ ಅಡ್ಡಲಾಗಿ ಭಾಲ್ಕಿ ತಾಲೂಕಿನಲ್ಲಿ ನಿರ್ಮಿಸಿರುವ ಜೀರಗಿಯಾಳ್ ಮಾಣಿಕೇಶ್ವರ ಮತ್ತು ಚಂದಾಪುರ ಹಾಗೂ ಔರಾದ್ ತಾಲೂಕಿನಲ್ಲಿ ನಿರ್ಮಿಸಿರುವ ಹಾಲ್‌ಹಳ್ಳಿ ಒಟ್ಟು ಬ್ರಿಡ್ಜ್ ಕಂ ಬ್ಯಾರೇಜ್‌ಗಳ ಪುನಶ್ಚೇತನ ಕಾಮಗಾರಿಗಳನ್ನು 151.70 ಕೋಟಿ ರೂ.ಗಳ ಅಂದಾಜು ವೆಚ್ಚದಲ್ಲಿ ನಡೆಸಲು ಆಡಳಿತಾತ್ಮಕ ಸಮ್ಮತಿ
- ಕರ್ನಾಟಕ ಪುರಸಭೆಗಳ ಕಾಯ್ದೆ 1964 ಹಾಗೂ ಕರ್ನಾಟಕ ಮಹಾನಗರ ಪಾಲಿಕೆಗಳ ಕಾಯ್ದೆ 1976ರ ಕೆಲ ಪ್ರಕರಣಗಳಿಗೆ ತಿದ್ದುಪಡಿ ಮಾಡಲು ಅಸ್ತು
- ದಿವಂಗತ ಶಾಸಕ ಶಿವಾನಂದ ರುದ್ರಪ್ಪ ಅಂಬಡಗಟ್ಟಿ ಅವರಿಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಜಿ ಪ್ರವರ್ಗದಲ್ಲಿ ಬನಶಂಕರಿ 6ನೇ ಹಂತ 10ನೇ ಬ್ಲಾಕ್ ಬಡಾವಣೆಯಲ್ಲಿ ಹಂಚಿಕೆಯಾಗಿರುವ ನಿವೇಶನವನ್ನು ಅವರ ಪತ್ನಿ ಶೈಲಜಾ ಶಿವಾನಂದ ಅವರಿಗೆ ಶುದ್ಧ ಕ್ರಯಪತ್ರ ನೋಂದಾಯಿಸಲು ಸಮ್ಮತಿ
- ರಾಜ್ಯದಲ್ಲಿ ಐ.ಸಿ.ಜೆ.ಎಸ್ (ಇಂಟರ್-ಒಪರೆಬಲ್ ಕ್ರಿಮಿನಲ್ ಜಸ್ಟಿಸ್ ಸಿಸ್ಟಮ್) ಸೇವೆಗಳ ಅನುಷ್ಠಾನಕ್ಕೆ ಹಾರ್ಡ್‌ವೇರ್ ಮತ್ತು ಸಾಫ್ಟ್‌ವೇರ್‌ಗಳನ್ನು ಒಟ್ಟು 227.58 ಕೋಟಿ ರೂ.ಗಳ ಅಂದಾಜಿನಲ್ಲಿ ಪೊಲೀಸ್ ಆಧುನೀಕರಣ ಯೋಜನೆಯಡಿ ಖರೀದಿಸಲು ಆಡಳಿತಾತ್ಮಕ ಅನುಮೋದನೆ

ಕಿಡಿ ನುಡಿ

ವಾಸುದೇವರಾವ್ ಕಕ್ಕೆನೇಜಿ

ಮಣ್ಣು, ನೀರು, ಗಾಳಿ, ಆಹಾರ ಸಹಿತ ಎಲ್ಲವನ್ನೂ ಕೊಟ್ಟ ದೇವರನ್ನು ನಾವು ಮರೆಯಬಾರದು - ಶ್ರೀ ಯೋಗಾನಂದ ಸರಸ್ವತಿ ಸ್ವಾಮೀಜಿ
- ಅದು ಉಚಿತ ಕೊಡುಗೆ, ಹಾಗಾಗಿ ಮನುಷ್ಯನಿಗೆ ಮರೆತು ಹೋಗುತ್ತೆ!

ದಿನ ಭವಿಷ್ಯ

ಮೇಷ ಆಪ್ತರ ಜತೆಗೆ ಭಿನ್ನಮತ. ವಾಹನ ಚಾಲನೆಯಲ್ಲಿ ಎಚ್ಚರ ಇರಲಿ. ವಿದ್ಯಾರ್ಥಿಗಳ ಪ್ರಯತ್ನಕ್ಕೆ ಉತ್ತಮ ಫಲ. ಆರ್ಥಿಕ ಕೊರತೆ ನಿವಾರಣೆ.

ವೃಷಭ ತೋಚಿದ್ದನ್ನು ಖರೀದಿಸಬೇಕೆಂಬ ಅಭ್ಯಾಸ ಭಾರೀ ವೆಚ್ಚಕ್ಕೆ ಕಾರಣವಾದೀತು. ಕೌಟುಂಬಿಕ ಸಹಕಾರ. ವಿದ್ಯಾರ್ಥಿಗಳಿಗೆ ಯಶ.

ಮಿಥುನ ವೃತ್ತಿಯಲ್ಲಿ ಒತ್ತಡ ಹೆಚ್ಚು. ದಿನದಂತ್ಯಕ್ಕೆ ತೃಪ್ತಿಕರ ಫಲಿತಾಂಶ. ನಡೆನುಡಿಯಲ್ಲಿ ವಿನಯ ಇರಲಿ. ವಿದ್ಯಾರ್ಥಿಗಳಿಗೆ ತುಸು ಕಠಿಣ ಪರಿಸ್ಥಿತಿ.

ಕಟಕ ಆಶಾವಾದ ಬಿಡದಿರಿ. ಆರಂಭದಲ್ಲಿ ಪ್ರತಿಕೂಲ ಸ್ಥಿತಿಯಿದ್ದರೂ ಬಳಿಕ ಎಲ್ಲ ಪೂರಕವಾಗಲಿದೆ. ವಿದ್ಯಾರ್ಥಿಗಳಿಗೂ ಇದು ಅನ್ವಯ. ಆರ್ಥಿಕ ಉನ್ನತಿ.

ಸಿಂಹ ಕಠಿಣ ಕೆಲಸವನ್ನೂ ಸುಲಭದಲ್ಲಿ ಮುಗಿಸುವಿರಿ. ಆರೋಗ್ಯಕ್ಕೆ ಹೆಚ್ಚು ಗಮನ ಕೊಡಿ. ಅಪರಾಹ್ನ ಮನಸ್ಸು ಕೆಡಿಸುವ ಬೆಳವಣಿಗೆ ಉಂಟಾದೀತು.

ಕನ್ಯಾ ಜಾಗ ಖರೀದಿಯ ಯೋಚನೆಯಿದ್ದರೆ ಕಾಲ ಸೂಕ್ತವಾಗಿದೆ. ಮಕ್ಕಳ ಹಠಮಾರಿತನ ಕೋಪ ಬರಿಸಬಹುದು. ಅವರೆಡೆ ಹೆಚ್ಚು ಕಾಳಜಿ ತೋರಿ.

ತುಲಾ ಮನೆಯಲ್ಲಿ ನೆಮ್ಮದಿ, ಸಹಕಾರ. ವಿರಸ ಶಮನ. ಹೊರಗಿನ ಕೆಲಸದಲ್ಲಿ ಹೆಚ್ಚು ಶ್ರಮ ವಹಿಸುವಿರಿ. ಅಪೇಕ್ಷಿತ ಸಹಕಾರ ದೊರಕಲಾರದು.

ವೃಶ್ಚಿಕ ದೈಹಿಕ ನೋವು ಕಾಡಬಹುದು. ಹೊಸ ವ್ಯಕ್ತಿಗಳ ಪರಿಚಯ. ಕೆಲವರಿಗೆ ಪಿತ್ರಾರ್ಜಿತ ಆಸ್ತಿ ಲಭ್ಯತೆ. ವಿದ್ಯಾರ್ಥಿಗಳ ಪರಿಶ್ರಮ ಸಾರ್ಥಕ.

ಧನು ಕುಟುಂಬಸ್ಥರ ಮಾತಿಗೆ ಹೆಚ್ಚು ಗಮನ ಕೊಡಿ. ಅವರನ್ನು ನಿರ್ಲಕ್ಷಿಸಬೇಡಿ. ಆರೋಗ್ಯ ಏರುಪೇರು. ಅಜೀರ್ಣ ಸಮಸ್ಯೆ ಕಾಡಬಹುದು.

ಮಕರ ಕೆಲ ವಿಷಯಗಳಲ್ಲಿ ಅತಿರೇಕದ ವರ್ತನೆ ತೋರುವಿರಿ. ಇದು ಎಲ್ಲರಿಗೆ ಸಮ್ಮತವೆನಿಸದು. ಮನೆಯ ಸದಸ್ಯರ ಜತೆ ಉದ್ವಿಗ್ನ ಸ್ಥಿತಿ ಸಂಭವ.

ಕುಂಭ ಆತ್ಮೀಯರ ಸಂಗಡ ಸಂಘರ್ಷ ನಡೆದೀತು. ಎದುರುತ್ತರ ಕೊಡದೆ ಮೌನದಿಂದಿರಿ. ವೃತ್ತಿಯ ಮೇಲೆ ಪರಿಣಾಮ ಬೀರದಂತೆ ಎಚ್ಚರವಹಿಸಿ.

ಮೀನ ವೃತ್ತಿಯಲ್ಲಿ ಸಹೋದ್ಯೋಗಿ ಜತೆ ವಾಗ್ಯುದ್ಧ. ಬಸುರಿಯರು ಮಾನಸಿಕ ಒತ್ತಡಕ್ಕೆ ಒಳಗಾಗುವರು. ವಿದ್ಯಾರ್ಥಿಗಳಿಗೆ ಉನ್ನತಿ.

ರಾಹುಕಾಲ: 10.30-12.00
ಗುಳಿಕಕಾಲ: 7.30-9.00

ಅದೃಷ್ಟ ಸಂಖ್ಯೆ : 5,1,4,7

ಏಕಕಾಲಕ್ಕೆ 42 ಸ್ಥಳಗಳಲ್ಲಿ ಲೋಕಾಯುಕ್ತ ಅಧಿಕಾರಿಗಳ ದಾಳಿ

ಕೋಟ್ಯಂತರ ಸ್ಥಿರಾಸ್ತಿ ಪತ್ತೆ

ಬೆಂಗಳೂರು: ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿದ್ದ ಆರೋಪದ ಮೇಲೆ ಎಂಟು ಸರ್ಕಾರಿ ಅಧಿಕಾರಿಗಳ ಮನೆ-ಕಚೇರಿಗಳ ಮೇಲೆ ಲೋಕಾಯುಕ್ತ ಪೊಲೀಸರು ಗುರುವಾರ ದಾಳಿ ನಡೆಸಿದ್ದಾರೆ. ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಬೆಳ್ಳಂಬೆಳಗ್ಗೆ ಏಕಕಾಲಕ್ಕೆ 42 ಸ್ಥಳಗಳಲ್ಲಿ ದಾಳಿ ನಡೆಸಿ, ಕೋಟ್ಯಂತರ ರೂಪಾಯಿ ಮೌಲ್ಯದ ಸ್ಥಿರ ಮತ್ತು ಚರ ಆಸ್ತಿಗಳನ್ನು ಪತ್ತೆಹಚ್ಚಿದ್ದಾರೆ.

ಆರೋಪಿತ ಅಧಿಕಾರಿಗಳ ಸಂಬಂಧಿಕರ ಮನೆ ಹಾಗೂ ಕಚೇರಿ ಸೇರಿದಂತೆ ಒಟ್ಟು 42 ಕಡೆ ಲೋಕಾಯುಕ್ತ ಅಧಿಕಾರಿಗಳು ತಪಾಸಣೆ ನಡೆಸಿದ್ದಾರೆ. ಈ ವೇಳೆ ಅಪಾರ ಪ್ರಮಾಣದ ನಗದು, ಚಿನ್ನಾಭರಣಗಳು, ಬೆಲೆಬಾಳುವ ವಾಹನಗಳು ಹಾಗೂ ಕೃಷಿ ಭೂಮಿಯ ದಾಖಲೆಗಳನ್ನು ವಶಪಡಿಸಿಕೊಂಡಿದ್ದಾರೆ. ಒಟ್ಟು 35.65 ಕೋಟಿ ರೂ. ಮೌಲ್ಯದ ಅಕ್ರಮ ಆಸ್ತಿ ಪತ್ತೆಹಚ್ಚಿದ್ದು, ಬೆಂಗಳೂರು ನಗರ, ಮಂಡ್ಯ, ಗದಗ, ಮೈಸೂರು, ವಿಜಯಪುರ ಮತ್ತು ಯಾದಗಿರಿ ಲೋಕಾಯುಕ್ತ ಪೊಲೀಸ್ ಠಾಣೆಗಳಲ್ಲಿ ಪ್ರತ್ಯೇಕ ಪ್ರಕರಣಗಳು ದಾಖಲಾಗಿವೆ.



ಡಾ. ಎಚ್.ಸಿ.ಇಂದ್ರೇಶ್, ಸಹ ಪ್ರಾಧ್ಯಾಪಕ (ಪಶುವೈದ್ಯಕೀಯ ಕಾಲೇಜು, ಹೆಬ್ಬಾಳ)

ಇವರಿಗೆ ಸಂಬಂಧಿಸಿದ 6 ಸ್ಥಳಗಳಲ್ಲಿ ದಾಳಿ ಹಾಗೂ ತಪಾಸಣೆ ವೇಳೆ 10 ನಿವೇಶನಗಳು, 2 ಮನೆಗಳು ಪತ್ತೆಯಾಗಿದೆ. ಸುಮಾರು 2.53 ಕೋಟಿ ರೂ. ಮೌಲ್ಯದ ಆಸ್ತಿ ಪತ್ತೆಯಾಗಿದೆ.

ವಸಂತ್ ವಾಲಪ್ಪ ನಾಯಿಕ್ ಮುಖ್ಯ ಅಭಿಯಂತರ, ಪಿಡಬ್ಲ್ಯೂಡಿ (ಕೆ.ಶಿಪ್)

ಇವರಿಗೆ ಸೇರಿದ ಒಟ್ಟು 10 ಸ್ಥಳಗಳಲ್ಲಿ ದಾಳಿ, ಕಾರ್ಯಾಚರಣೆ ವೇಳೆ 64.04 ಕೋಟಿ ರೂ. ಮೌಲ್ಯದ ಆಸ್ತಿ ಪತ್ತೆಯಾಗಿದೆ.

5.15 ಕೋಟಿ ರೂ. ಅಕ್ರಮ ಆಸ್ತಿ ಪತ್ತೆ

ಶಶಿಧರ್ ಆರ್. ಸಿಇಒ (ರೈತ ಸೇವಾ ಸಹಕಾರ ಸಂಘ ಬೆಂಗಳೂರು), ಇವರಿಗೆ ಸೇರಿದ 5 ಸ್ಥಳಗಳ ಮೇಲೆ ದಾಳಿ ನಡೆಸಿ, ಇವರಿಗೆ ಸೇರಿದ 4 ನಿವೇಶನಗಳು, 2 ಮನೆಗಳು, 2 ಎಕರೆ ಕೃಷಿ ಭೂಮಿ ಪತ್ತೆ ಹಚ್ಚಿದ್ದಾರೆ. ಇವರ ಒಟ್ಟು ಆಸ್ತಿ 5.15 ಕೋಟಿ ರೂ. ಎಂದು ಅಂದಾಜಿಸಲಾಗಿದೆ.

ಸತೀಶ್ ಎಸ್., ಎಇಇ, (ಪಿಡಬ್ಲ್ಯೂಡಿ ಮಂಡ್ಯ)

ಇವರಿಗೆ ಸೇರಿದ ಒಟ್ಟು 4 ಸ್ಥಳಗಳಲ್ಲಿ ದಾಳಿ ನಡೆಸಿದ್ದಾರೆ. ಈ ವೇಳೆ 3 ನಿವೇಶನ, 2 ಮನೆಗಳು, 6 ಎಕರೆ ಕೃಷಿ ಭೂಮಿ ಪತ್ತೆಯಾಗಿದೆ. ಇವರ ಒಟ್ಟು ಆಸ್ತಿ 44.65 ಕೋಟಿ ರೂ. ಎಂದು ತಿಳಿದು ಬಂದಿದೆ.

ಎಂ.ಕೆ. ಸುರಕೋಡ್, ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ (ಗದಗ),

ಇವರಿಗೆ ಸೇರಿದ ಒಟ್ಟು 6 ಸ್ಥಳಗಳಲ್ಲಿ ದಾಳಿ, 6 ನಿವೇಶನ, 1 ಮನೆ, 29 ಎಕರೆ ಕೃಷಿ ಭೂಮಿ ಪತ್ತೆಯಾಗಿದೆ. ಇವರ ಒಟ್ಟು ಆಸ್ತಿ ಮೌಲ್ಯ 21.23 ಕೋಟಿ ರೂ. ಮೌಲ್ಯದ ಆಸ್ತಿ ಪತ್ತೆಯಾಗಿದೆ.

ಆಸಿಫ್ ಇಕ್ಬಾಲ್ ಖಲೀಲ್, ಎಇಇ (ಮೈಸೂರು ನಗರ ನೀರು ಸರಬರಾಜು, ಒಳಚರಂಡಿ ಮಂಡಳಿ)

ಇವರಿಗೆ ಸೇರಿದ 4 ಸ್ಥಳಗಳಲ್ಲಿ ದಾಳಿ, ದಾಳಿ ವೇಳೆ 5 ನಿವೇಶನ, 7 ಮನೆ ಪತ್ತೆಯಾಗಿದೆ. ಇವರ ಒಟ್ಟು ಆಸ್ತಿ ಮೌಲ್ಯ 88.13 ಕೋಟಿ ರೂ. ಮೌಲ್ಯದ ಆಸ್ತಿ ಪತ್ತೆಯಾಗಿದೆ.

ಪ್ರಕಾಶ್ ಈರಪ್ಪ ಗೋಡ್ಖೋಲೆ, ಚೆಇ, (ಕೆಬಿಜೆಎನ್ಎಲ್ ವಿಜಯಪುರ)

ಇವರಿಗೆ ಸೇರಿದ ಒಟ್ಟು 4 ಕಡೆ ದಾಳಿ, 2 ಮನೆ, 1 ಶಾಲಾ ಕಟ್ಟಡ ಪತ್ತೆಯಾಗಿದೆ. ಇವರ ಒಟ್ಟು ಆಸ್ತಿ ಮೌಲ್ಯ 46.09 ಕೋಟಿ ರೂ. ಮೌಲ್ಯದ ಆಸ್ತಿ ಪತ್ತೆಯಾಗಿದೆ.

ವೀರೇಶ್ ರುದ್ರಯ್ಯ ಹಿರೇಮಠ್, ಎಲೆಕ್ಟ್ರಿಕ್ ಇನ್ಸ್‌ಪೆಕ್ಟರ್ (ಇಂಧನ ಇಲಾಖೆ, ಯಾದಗಿರಿ)

ಇವರಿಗೆ ಸೇರಿದ ಒಟ್ಟು ಮೂರು ಸ್ಥಳಗಳಲ್ಲಿ ದಾಳಿ, 5 ನಿವೇಶನಗಳು, 2 ಮನೆ, 8 ಎಕರೆ 34 ಗುಂಟೆ ಕೃಷಿ ಭೂಮಿ ಪತ್ತೆಯಾಗಿದೆ. ಇವರ ಒಟ್ಟು ಆಸ್ತಿ 15.45 ಕೋಟಿ ರೂ. ಮೌಲ್ಯದ ಆಸ್ತಿ ಪತ್ತೆಯಾಗಿದೆ.

49 ಜನರ ವಿರುದ್ಧ ಪ್ರಕರಣ ದಾಖಲು

ಬೀದರ್: ಜಿಲ್ಲೆಯ ಬಸವಕಲ್ಯಾಣ ನಗರದ ಯಾತ್ರಿ ನಿವಾಸದ ಬಳಿ ಸಂಜೆ ವಾಕಿಂಗ್‌ಗೆ ತೆರಳಿದ್ದ ಖಾಸಗಿ ಶಾಲೆಯಲ್ಲಿ ಶಿಕ್ಷಕರಾಗಿರುವ ಇಬ್ಬರು ಮುಸ್ಲಿಂರ ಮೇಲೆ ಅಪರಿಚಿತ ವ್ಯಕ್ತಿಗಳು ಹಲ್ಲೆ ನಡೆಸಿದ್ದಾರೆ ಎಂಬ ಆರೋಪದಡಿ ಬಸವಕಲ್ಯಾಣ ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಾ.3ರಂದು ಮಂಗಳವಾರ 6-7 ಜನರು ಸೇರಿಕೊಂಡು ಏಕಾಏಕಿ ಹಲ್ಲೆ ನಡೆಸಿ ಇಬ್ಬರು ಶಿಕ್ಷಕರಿಗೆ ಜೀವ ಬೆದರಿಕೆ ಹಾಕಿದ್ದರು ಎಂದು ಆರೋಪಿಸಿ ಹಲ್ಲೆಗೊಳಗಾದ ಮುಹಮ್ಮದ್ ಆರಿಫ್ ಹಾಗೂ ಸೈಯದ್ ಇಮ್ರಾನ್ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಾಗಿದೆ. ಈ ಪ್ರಕರಣ ಸಂಬಂಧ ಮುಸ್ಲಿಂ ಸಮುದಾಯದವರು ಅದೇ ದಿನ ರಾತ್ರಿ ಪೊಲೀಸ್ ಠಾಣೆ ಎದುರು ಜಮಾಯಿಸಿ ಪೊಲೀಸರ ಮೇಲೆ ಕಲ್ಲು ತೂರಾಟ ನಡೆಸಿದ ಕಾರಣ ಉದ್ರಿಕ್ತ ವಾತಾವರಣ ನಿರ್ಮಾಣ ಆಗಿತ್ತು.

ಠಾಣೆ ಎದುರು ಜಮಾಯಿಸದಂತೆ ಪೊಲೀಸರು ಹೇಳಿದರೂ ಕೇಳದ ಜನರು ಪೊಲೀಸರ ಮೇಲೆ ಕಲ್ಲಿನಿಂದ ಹಲ್ಲೆ ನಡೆಸಿ ಕರ್ತವ್ಯಕ್ಕೆ ಅಡ್ಡಿಪಡಿಸಿದ್ದರು. ಈ ವೇಳೆ ಎಎಸ್ಐ ಮುಕ್ತಾರ್ ಪಟೇಲ್ ಅವರಿಗೆ ಗಾಯಗಳಾಗಿದ್ದ ಕಾರಣ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ದಾಖಲಿಸಲಾಗಿದೆ. ಅಕ್ರಮ ಗುಂಪು ಕಟ್ಟಿಕೊಂಡು ಪೊಲೀಸರ ಮೇಲೆ ಕಲ್ಲು ತೂರಾಟ ನಡೆಸಿ, ಕರ್ತವ್ಯಕ್ಕೆ ಅಡ್ಡಿಪಡಿಸಿದ ಸಂಬಂಧ ಠಾಣೆಯ



ಸಿಬ್ಬಂದಿ ನೀಡಿದ ದೂರಿನಂತೆ 49 ಜನ ಮುಸ್ಲಿಂ ಸಮುದಾಯದವರ ಮೇಲೆ ಪ್ರಕರಣ ದಾಖಲಿಸಲಾಗಿದೆ.

ನಿನ್ನೆ ತಡರಾತ್ರಿಯಿಂದ ಬಸವಕಲ್ಯಾಣ ನಗರದಲ್ಲಿ ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾಗಿದ್ದು, ಡಿಐಜಿಪಿ ಮತ್ತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪೊಲೀಸ್ ಠಾಣೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ ಎಂದು ತಿಳಿದು ಬಂದಿದೆ.

ಜಿಲ್ಲೆಯಲ್ಲಿ ಕೆಲ ಕಿಡಿಗೇಡಿಗಳು ಕೋಮು ಗಲಭೆಗೆ ಪ್ರಚೋದಿಸಲು ಪ್ರಚೋದನಕಾರಿ ದ್ವೇಷ ಭಾಷಣ, ವಿವಾದಾತ್ಮಕ ಹೇಳಿಕೆ, ಅಂಶಗಳ ಪೋಸ್ಟ್, ವಿಡಿಯೋ ಮಾಡಿ ಸಮಾಜದ ಸ್ವಾಸ್ಥ್ಯ ಕೆಡಿಸಲು ಪ್ರಯತ್ನಿಸುತ್ತಿರುವುದು ಕಂಡು ಬಂದಲ್ಲಿ ಅಂತವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಬೀದರ್ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪ್ರದೀಪ ಗುಂಟೆ ಎಚ್ಚರಿಸಿದ್ದಾರೆ.

ಟ್ರಂಪ್‌ಗೆ ಮತ್ತೆ ದೊಡ್ಡ ಹಿನ್ನಡೆ

ಪುಟ ೧→ ಟ್ರಂಪ್ ಆಡಳಿತ ಹಲವು ರಾಷ್ಟ್ರಗಳ ಆಮದುದಾರರ ಮೇಲೆ ಅಂತಾರಾಷ್ಟ್ರೀಯ ತುರ್ತು ಆರ್ಥಿಕ ಅಧಿಕಾರ ಕಾಯ್ದೆ (ಐಇಇಪಿಎ) ಅನ್ವಯ ಹೇರಲಾದ ಪ್ರತಿಸುಂಕ ಅಸಂವಿಧಾನಿಕ, ವಸೂಲಿ ಮಾಡಿದ ಪ್ರತಿಸುಂಕದಲ್ಲಿ



ಹೆಚ್ಚುವರಿ ಹಣ ಆಮದುದಾರ ಕಂಪನಿಗಳಿಗೆ ವಾಪಸ್ ಕೊಡಬೇಕೆಂದು ನ್ಯೂಯಾರ್ಕ್ ಫೆಡರಲ್ ನ್ಯಾಯಾಲಯವು ಆದೇಶ ಹೊರಡಿಸಿದೆ. ಆದಾಗ್ಯೂ, ಮೇಲ್ಮನವಿ ಸಲ್ಲಿಸಲು ಅಥವಾ ಹೆಚ್ಚಿನ ಕಾಲಾವಕಾಶ ಪಡೆಯಲು ಸರ್ಕಾರಕ್ಕೆ ಅವಕಾಶವಿದೆ. ಸುಂಕವನ್ನು ಕಾನೂನುಬಾಹಿರವೆಂದು ಸುಪ್ರೀಂ ಘೋಷಿಸಿದ್ದರೂ, ಹಣ ಹಿಂದಿರುಗಿಸುವ ವಿಷಯದ ಕುರಿತು ತನ್ನ ಆದೇಶದಲ್ಲಿ ಸ್ಪಷ್ಟವಾಗಿ ಉಲ್ಲೇಖಿಸಿರಲಿಲ್ಲ. ಆದರೆ ಫೆಬ್ರವರಿ ತೀರ್ಪಿನ ನಂತರ ದೊಡ್ಡ ಮತ್ತು ಸಣ್ಣ ಅನೇಕ ಕಂಪನಿಗಳು ಕಳೆದ ಹಲವು ತಿಂಗಳಿನಲ್ಲಿ ಪಾವತಿಸಿದ ಸುಂಕದ ಹಣ ಹಿಂತಿರುಗಿಸಲು ನ್ಯಾಯಾಲಯದ ನಿರ್ದೇಶನ ಕೋರಿ ಅರ್ಜಿ ಸಲ್ಲಿಸಿದ್ದವು.

175 ಶತಕೋಟಿ ವಾಪಸ್?

ಟ್ರಂಪ್ ಸರ್ಕಾರವು ಡಿಸೆಂಬರ್ ಮಧ್ಯಭಾಗದವರೆಗೆ ಐಇಇಪಿಎ ಸುಂಕಗಳ ಮೂಲಕ 130 ಶತಕೋಟಿ ಡಾಲರ್‌ಗಿಂತ ಹೆಚ್ಚು ಹಣ ಸಂಗ್ರಹಿಸಿದೆ ಎಂದು ವರದಿಯಾಗಿದೆ. ಅಂದಾಜು 175 ಶತಕೋಟಿ ಡಾಲರ್ ಹಣವನ್ನು ಸರ್ಕಾರ ಹಿಂದಿರುಗಿಸಬೇಕಾದ ಪರಿಸ್ಥಿತಿ ಎದುರಾಗಿದೆ. ಫೆ.20ರಂದು ಸುಪ್ರೀಂ ಕೋರ್ಟ್ ತೀರ್ಪು ಹೊರಬಂದಿದ್ದು, ಅದಾದ ಬಳಿಕ ಅಮೆರಿಕ ಅಧ್ಯಕ್ಷ ಟ್ರಂಪ್ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳ ಮೇಲೆ ತೀವ್ರ ಟೀಕೆ ನಡೆಸಿದ್ದರು.

ಭಾರತಕ್ಕೆ ಲಾಭ ಹೇಗೆ?

- ಅಮೆರಿಕದಲ್ಲಿ ಭಾರತೀಯ ಉತ್ಪನ್ನಗಳು ಆಗಲಿವೆ ಅಗ್ಗ
- ಅಮೆರಿಕ ಕಂಪನಿಗಳಿಂದ ಹೆಚ್ಚಲಿದೆ ಆಮದು ಬೇಡಿಕೆ
- ಭಾರತೀಯ ಉತ್ಪನ್ನಗಳಿಗೆ ಹೆಚ್ಚಲಿವೆ ಬೇಡಿಕೆ
- ಅಮೆರಿಕದೊಂದಿಗೆ ಹೆಚ್ಚಿನ ವ್ಯಾಪಾರ

ಹಿಂದು ಪ್ರಜ್ಞೆ ವಿಧಾನ ಮಾತ್ರವಲ್ಲ, ಜೀವನ

ಪುಟ ೧→ ವೀರಶೈವ ಮಠ ಮಂದಿರ ಕರ್ನಾಟಕ ರಾಜ್ಯದಲ್ಲಿ ಸಮಾಜಕ್ಕೆ ಅಪಾರವಾದ ಕೊಡುಗೆ ನೀಡಿವೆ. ಕೃಷ್ಣಾ ನದಿ ತಟದಲ್ಲಿರುವ ಯಡೂರ ಕ್ಷೇತ್ರ ದಕ್ಷಬ್ರಹ್ಮನ ಕತೆಯಲ್ಲಿ ಪ್ರಸ್ತಾಪ ಇದೆ.

ಶಿವಯೋಗಿ ಕಾಡಸಿದ್ದೇಶ್ವರಿಂದ ಯಡೂರ ಕ್ಷೇತ್ರದ ಮಹಿಮೆ ಜಗತ್ತಿಗೆ ತಿಳಿಯುವಂತಾಗಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಪ್ರಯತ್ನದಿಂದ ಇದೀಗ ಭಾರತ ಜಗತ್ತಿನಲ್ಲಿಯೇ ಪ್ರಭಾವಶಾಲಿಯಾಗಿದೆ. ತಾಂತ್ರಿಕವಾಗಿ ಹಾಗೂ ಆರ್ಥಿಕವಾಗಿ ದೇಶ ಸಾಕಷ್ಟು ಬೆಳೆದಿದೆ. ವಿಕಾಸದ ಕಡೆಗೆ ಭಾರತ ಹೆಜ್ಜೆ ಇಡುತ್ತಿದೆ ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ರಾಜ್ಯಪಾಲ ಥಾವರಚಂದ್ ಗೆಹಲೋತ್ ಮಾತನಾಡಿ, ವಸುಧೈವ ಕುಟುಂಬಕಂ ಎಂಬ ಸಂದೇಶ ಭಾರತ ಜಗತ್ತಿಗೆ ನೀಡಿದೆ. ಅಹಿಂಸೆ, ಕರುಣೆ, ಸತ್ಯ ನಮ್ಮ ತತ್ವಗಳಾಗಿವೆ. ವಿಶ್ವ ಕಲ್ಯಾಣಕ್ಕಾಗಿ ಜಗತ್ತಿನ ಹಲವು ದೇಶಗಳು ಭಾರತದತ್ತ ನೋಡುತ್ತಿವೆ. ಸರ್ವೇ ಜನ ಸುಖಿನೋಭವಂತು ಎಂಬಂತೆ ಎಲ್ಲರೂ ಸುಖ ಶಾಂತಿ ಸಮೃದ್ಧಿ ನೆಮ್ಮದಿಯಿಂದ ಇರಬೇಕೆಂಬುವುದು ಭಾರತದ ಆಶಯವಾಗಿದೆ ಎಂದರು.

ಭಾರತ ಯುದ್ಧ ನಿಲ್ಲಿಸಬೇಕು: ಕಾರ್ಯಕ್ರಮದ ಸಾನ್ನಿಧ್ಯ ವಹಿಸಿದ್ದ ಶ್ರೀಶೈಲ ಪೀಠದ ಚನ್ನಸಿದ್ಧರಾಮ ಪಂಡಿತಾರಾಧ್ಯ ಸ್ವಾಮೀಜಿ ಮಾತನಾಡಿ, ಇರಾನ್ ಇರಾಕ್, ಇಸ್ರೇಲ್, ಅಮೆರಿಕ ಮುಂತಾದ ಕಡೆ ನಡೆಯುತ್ತಿರುವ ಯುದ್ಧ ನಿಲ್ಲಬೇಕು.

ಭಾರತ ಈ ಯುದ್ಧ ನಿಲ್ಲಿಸಲು ಪ್ರಯತ್ನಿಸಬೇಕು. ಭಾರತದಲ್ಲಿ ಏಕರೂಪ ನಾಗರಿಕ ಸಂಹಿತೆ ಕಾನೂನು ಜಾರಿಗೊಳಿಸಬೇಕಿರುವುದು ಅವಶ್ಯಕವಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಉಜ್ಜಯಿನಿ ಪೀಠದ ಸಿದ್ಧಲಿಂಗ ರಾಜದೇಶಿಕೇಂದ್ರ ಶಿವಾಚಾರ್ಯ ಸ್ವಾಮೀಜಿ, ಕಾಶಿ ಪೀಠದ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ, ಮಲ್ಲಿಕಾರ್ಜುನ ವಿಶ್ವಾರಾಧ್ಯ ಶಿವಾಚಾರ್ಯ ಸ್ವಾಮೀಜಿಯವರ ಸಾನ್ನಿಧ್ಯದಲ್ಲಿ ನಡೆದ ಕಾರ್ಯಕ್ರಮದಲ್ಲಿ ಬೆಳಗಾವಿಯ ಕೆಎಲ್ಇ ಸಂಸ್ಥೆಯ ಗೌರವ ಕಾರ್ಯಾಧ್ಯಕ್ಷ ಪ್ರಭಾಕರ ಕೋರೆ, ಕರ್ನಾಟಕ ಸರ್ಕಾರದ ದಿಲ್ಲಿ ವಿಶೇಷ ಪ್ರತಿನಿಧಿ ಪ್ರಕಾಶ ಹುಕ್ಕೇರಿ, ಚಿಕ್ಕೋಡಿ ಸದಲಗಾ ಶಾಸಕ ಗಣೇಶ ಹುಕ್ಕೇರಿ, ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ, ರಾಜ್ಯಸಭಾ ಸದಸ್ಯ ಈರಣ್ಣ ಕಡಾಡಿ ಇತರರು ಇದ್ದರು.

'ವಿಕಾಸವೀರ ಪ್ರಶಸ್ತಿ' ಪ್ರದಾನ

ಇದೇ ಸಂದರ್ಭದಲ್ಲಿ ಕರ್ನಾಟಕ ಸರ್ಕಾರದ ದಿಲ್ಲಿ ವಿಶೇಷ ಪ್ರತಿನಿಧಿ ಪ್ರಕಾಶ ಹುಕ್ಕೇರಿ ಅವರಿಗೆ ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಹಾಗೂ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಶ್ರೀ ಮಠದಿಂದ ಕೊಡ ಮಾಡುವ 'ವಿಕಾಸವೀರ ಪ್ರಶಸ್ತಿ' ಪ್ರದಾನ ಮಾಡಿದರು.

ಮುತ್ಯಾ ಪ್ರಕರಣ: ತನಿಖೆ ಚುರುಕು

ಯಾದಗಿರಿ: ಜಿಲ್ಲೆಯ ಶಹಾಪುರದ ಮಹಲ್ ರೋಜಾದ (ಚಾಂಗ್ ದೇವ್) ಯಮನೂರಪ್ಪ ದೇವಸ್ಥಾನದ ಪೀಠಾಧಿಪತಿ ಮಲ್ಲಿಕಾರ್ಜುನ ಮುತ್ಯಾ ಅವರ ಮೇಲೆ ದಾಖಲಾಗಿರುವ ಪೋಕ್ಸೋ ಪ್ರಕರಣಕ್ಕೆ ಸಂಬಂಧಿಸಿದಂತೆ ಈಗ ತನಿಖೆ ಚುರುಕುಗೊಂಡಿದೆ.

ಪೋಕ್ಸೋ ಪ್ರಕರಣ ಎದುರಿಸುತ್ತಿರುವ ಮಲ್ಲಿಕಾರ್ಜುನ ಮುತ್ಯಾ ಅವರು ಬುಧವಾರ ರಾತ್ರಿ, ಗುರುವಾರ ಶಹಾಪುರ ಸಿಪಿಐ ಕಚೇರಿಯಲ್ಲಿ ವಿಚಾರಣೆಗೆ ಹಾಜರಾಗಿದ್ದಾರೆ. ವಿಚಾರಣೆಯ ನಂತರ ಪೊಲೀಸರು ಮುತ್ಯಾ ಅವರನ್ನು ಶಹಾಪುರದಲ್ಲಿ ವೈದ್ಯಕೀಯ ತಪಾಸಣೆಗೆ ಒಳಪಡಿಸಿದ್ದಾರೆ. ತನಿಖೆಗೆ ಸಹಕರಿಸದಿದ್ದರೆ ಬಂಧನವಾಗುವ ಸಾಧ್ಯತೆ ಇದ್ದಿದ್ದರಿಂದ ಅವರು ಸ್ವತಃ ವಿಚಾರಣೆಗೆ ಬಂದಿದ್ದಾರೆ ಎಂದು ವರದಿಯಾಗಿದೆ. ಶಹಾಪುರ ಗ್ರಾಮೀಣ ಸಿಪಿಐ ಶರಣಗೌಡ ನ್ಯಾಮಣ್ಣನವರ ನೇತೃತ್ವದಲ್ಲಿ ಪ್ರಕರಣದ ಸಮಗ್ರ ತನಿಖೆ ನಡೆಯುತ್ತಿದೆ.

ಪ್ರಕರಣದ ಹಿನ್ನೆಲೆ: ಅಪ್ರಾಪ್ತ ಬಾಲಕಿಯೊಂದಿಗೆ ಅನುಚಿತವಾಗಿ ವರ್ತಿಸಿದ ಆರೋಪದ ಮೇಲೆ ಇವರ ವಿರುದ್ಧ ಪೋಕ್ಸೋ ಕಾಯಿದೆಯಡಿ ಪ್ರಕರಣ ದಾಖಲಾಗಿತ್ತು. ಮಲ್ಲಿಕಾರ್ಜುನ ಮುತ್ಯಾ ಅವರು ಕರ್ನಾಟಕ, ತೆಲಂಗಾಣ ಮತ್ತು ಮಹಾರಾಷ್ಟ್ರದಲ್ಲಿ ಅಪಾರ ಭಕ್ತ ಸಮೂಹವನ್ನು ಹೊಂದಿದ್ದಾರೆ.

ಕಾನೂನಿಗೆ ತಲೆ ಬಾಗುವೆ ಎಂದ ಮುತ್ಯಾ: ಪೋಕ್ಸೋ ಪ್ರಕರಣದಡಿ ಶಹಾಪುರ ಪಟ್ಟಣದ ಸಿಪಿಐ ಕಚೇರಿಯಲ್ಲಿ ಸುದೀರ್ಘ ವಿಚಾರಣೆ ನಂತರ ಮಾಧ್ಯಮಗಳಿಗೆ ಮಲ್ಲಿಕಾರ್ಜುನ ಮುತ್ಯಾ ಸ್ಪಷ್ಟನೆ ನೀಡಿದ್ದು, ನಾನು ಕಾನೂನಿಗೆ ತಲೆ ಬಾಗುವೆ ಎಂದಿದ್ದಾರೆ.

ಸೋಶಿಯಲ್ ಮಿಡಿಯಾದಲ್ಲಿ ಹರಿದಾಡಿದ ವಿಡಿಯೋಗಳ ಬಗ್ಗೆ ಪೊಲೀಸರು ಕೇಳಿದ ಎಲ್ಲ ಪ್ರಶ್ನೆಗಳಿಗೆ ಉತ್ತರಿಸಿದ್ದೇನೆ. ಮಠದ ಜಾತ್ರೆ ನಿಮಿತ್ತ ನಾನು ಹೊರಗಡೆ ತೆರಳಿದ್ದೆ. ನಂತರ ನನಗೆ ಆರೋಗ್ಯದಲ್ಲಿ ಏರುಪೇರಾಗಿತ್ತು. ಹೀಗಾಗಿ ವಿಚಾರಣೆಗೆ ಹಾಜರಾಗಲು ತಡವಾಗಿದೆ. ಕಾನೂನಿಗೆ ತಲೆ ಬಾಗುವೆ ಎಂದು ಹೇಳಿದರು.

ಬಸ್ ನಿಲ್ದಾಣಗಳಲ್ಲಿ ಬಜೆಟ್ ನೇರ ಪ್ರಸಾರ

ಪುಟ ೧→ ವಿಧಾನಸೌಧದಲ್ಲಿ ನಡೆಯುವ ಬಜೆಟ್ ಮಂಡನೆ ಹಾಗೂ ನಂತರ ನಡೆಯಲಿರುವ ಮುಖ್ಯಮಂತ್ರಿಗಳ ಪತ್ರಿಕಾಗೋಷ್ಠಿಯನ್ನೂ ಇದೇ ಪರದೆಗಳ ಮೂಲಕ ರಾಜ್ಯದ ವಿವಿಧ ಬಸ್ ನಿಲ್ದಾಣಗಳಲ್ಲಿ ನೇರವಾಗಿ ಪ್ರಸಾರ ಮಾಡಲಾಗುತ್ತದೆ. ಇದರ ಮೂಲಕ ಸಾರ್ವಜನಿಕರು ಬಸ್ ನಿಲ್ದಾಣಗಳಲ್ಲಿಯೇ ಈ ಮಹತ್ವದ ಕಾರ್ಯಕ್ರಮವನ್ನು ವೀಕ್ಷಿಸುವ ಅವಕಾಶವನ್ನು ಪಡೆಯಲಿದ್ದಾರೆ. ರಾಜ್ಯದಲ್ಲಿಯೇ ಮೊದಲ ಬಾರಿಗೆ ಬಸ್ ನಿಲ್ದಾಣಗಳ ಮೂಲಕ ಜನಸಾಮಾನ್ಯರಿಗೆ ಬಜೆಟ್ ಮಂಡನೆಯ ನೇರ ಪ್ರಸಾರವನ್ನು ತಲುಪಿಸುವ ಪ್ರಯತ್ನವನ್ನು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಕೈಗೊಂಡಿದೆ. ಸಾರ್ವಜನಿಕರು ಈ ನೇರ ಪ್ರಸಾರದ ಸದುಪಯೋಗವನ್ನು ಪಡೆದುಕೊಳ್ಳುವಂತೆ ಆಯುಕ್ತರು ಮನವಿ ಮಾಡಿದ್ದಾರೆ.

ಒಳ ಮೀಸಲು ಕಲ್ಪಿಸಲು ಸರ್ಕಾರ ಬದ್ಧ

ಪುಟ ೧→ ಆದಕ್ಕೆ ನ್ಯಾಯಾಲಯದಲ್ಲಿ ಹಿನ್ನಡೆಯಾದ್ದರಿಂದ ಶೇ.50 ಮೀಸಲಾತಿಗೆ ಬರಬೇಕೆಂದು ಹೇಳಲಾಗಿದೆ. ಈಗ ಮೀಸಲಾತಿ ಎಷ್ಟು ಎಂಬುದು ನಿರ್ಣಯವಾಗದಿರುವುದರಿಂದ ಸಮಸ್ಯೆಯಾಗಿದೆ. ಆದರೆ, ಈಗಾಗಲೇ 56,432 ಹುದ್ದೆಗಳ ನೇಮಕಾತಿಗೆ ಹೊರಡಿಸಿರುವ ಆದೇಶಕ್ಕೆ ಯಾವುದೇ ರೀತಿ ಪರಿಣಾಮ ಬೀರುವಂತಹ ನಿರ್ಣಯ ಸಂಪುಟ ಸಭೆಯಲ್ಲಿ ಕೈಗೊಂಡಿಲ್ಲ. ಒಳ ಮೀಸಲಾತಿ ಸಂಬಂಧಿಸಿ ಸರ್ಕಾರದ ನಿಲುವು ಬದಲಾಗುವುದಿಲ್ಲ ಎಂದವರು ಹೇಳಿದ್ದಾರೆ. ಕಳೆದ ಸಚಿವ ಸಂಪುಟದಲ್ಲಿ ನ್ಯಾಯಾಲಯದ ತೀರ್ಮಾನದಂತೆ ಸಚಿವ ಸಂಪುಟವು 56,432 ಹುದ್ದೆಗಳಿಗೆ ನೇರ ನೇಮಕಕ್ಕೆ ಒಂದು ತಿಂಗಳೊಳಗೆ ಪ್ರಕ್ರಿಯೆ ಪ್ರಾರಂಭಿಸಲು ತೀರ್ಮಾನ ಕೈಗೊಳ್ಳಲಾಗಿತ್ತು.

ಬಿಹಾರದಲ್ಲಿ ಬಿಜೆಪಿ ಮುಖ್ಯಮಂತ್ರಿ?

ಪುಟ ೧→ **ನಿತೀಶ್, ನಿತಿನ್ ರಾಜ್ಯಸಭೆ ಸ್ಪರ್ಧೆ:** ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಹಾಗೂ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್ ಸೇರಿ ಎನ್‌ಡಿಎಯ ಐವರು ರಾಜ್ಯಸಭೆಗೆ ಆಯ್ಕೆ ಬಯಸಿ ಗುರುವಾರ ತಮ್ಮ ನಾಮಪತ್ರಗಳನ್ನು ಸಲ್ಲಿಸಿದರು. ಈ ವೇಳೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಉಪಸ್ಥಿತರಿದ್ದರು.

ಇದು ನನ್ನ ಆಕಾಂಕ್ಷೆ: ಬಿಹಾರ ವಿಧಾನಸಭೆಯ ಉಭಯ ಸದನಗಳ ಮತ್ತು ಸಂಸತ್ತಿನ ಉಭಯ ಸದನಗಳ ಸದಸ್ಯನಾಗಬೇಕೆಂಬುದು, ತಾನು ಮೊದಲ ಬಾರಿ ಸಂಸದನಾದಾಗಲೆ ತನ್ನ ಆಕಾಂಕ್ಷೆಯಾಗಿತ್ತು. ಈ ಆಕಾಂಕ್ಷೆಯ ಸಾಕಾರಕ್ಕಾಗಿ ಇದೀಗ ರಾಜ್ಯಸಭಾ ಸದಸ್ಯತ್ವಕ್ಕೆ ನಾಮಪತ್ರ ಸಲ್ಲಿಸಿರುವೆ. ಕಳೆದೆರಡು ದಶಕಗಳ ಮೀರಿದವಧಿಗೆ ನೀವೆಲ್ಲರು ನನ್ನ ಮೇಲೆ ಸಂಪೂರ್ಣ ವಿಶ್ವಾಸ ಇರಿಸಿದ್ದೀರಿ ಮತ್ತು ನನ್ನನ್ನು ಬೆಂಬಲಿಸಿದ್ದೀರಿ. ನಿಮ್ಮ ವಿಶ್ವಾಸದ ಬಲದಲ್ಲೇ ನಾವು ಬಿಹಾರದ ಹಾಗೂ ನಿಮ್ಮೆಲ್ಲರ ಸೇವೆಯನ್ನು ಸಮರ್ಪಣಾ ಭಾವದಿಂದ ಮಾಡಿದ್ದೇವೆ ಎಂದು ನಿತೀಶ್‌ಕುಮಾರ್ ಎಕ್ಸ್‌ಗೆ ಹಾಕಿರುವ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ.

ನಿಶಾಂತ್ ಕುಮಾರ್ ಮುಂದಿನ ನಾಯಕ: ನಿತೀಶ್ ಕುಮಾರ್ ರಾಜ್ಯಸಭೆಗೆ ತೆರಳಲಿರುವ ಹಿನ್ನೆಲೆಯಲ್ಲಿ, ಅವರ ಪುತ್ರ ನಿಶಾಂತ್ ಕುಮಾರ್ ಶೀಘ್ರ ಸಕ್ರಿಯ ರಾಜಕಾರಣ ಪ್ರವೇಶಿಸಲಿದ್ದಾರೆ ಎನ್ನಲಾಗಿದೆ. ನಿಶಾಂತ್ ಡಿಸಿಎಂ ಆಗಲಿದ್ದಾರೆ ಎಂಬ ಮಾತು ಮಿತ್ರಕೂಟದಲ್ಲಿ ಕೇಳಿಬಂದಿದೆಯಾದರೂ, ನಿಶಾಂತ್ ನಿಖರವಾಗಿ ಯಾವ ಹುದ್ದೆ ಅಲಂಕರಿಸುವರು ಅಥವಾ ಜವಾಬ್ದಾರಿ ವಹಿಸುವರೆಂಬ ಬಗ್ಗೆ ಸ್ಪಷ್ಟ ಮಾಹಿತಿ ಇಲ್ಲ.



> ನಿತೀಶ್ ಕುಮಾರ್ 2005ರಿಂದ ಇಲ್ಲಿಯವರೆಗೆ ಬಿಹಾರದ ಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸಿದ್ದಾರೆ. ಅವರ ಅಧಿಕಾರಾವಧಿ ಅದ್ಭುತವಾಗಿತ್ತು. ಈ ಅವಧಿಯು ಬಿಹಾರದ ಇತಿಹಾಸದಲ್ಲಿ ಸುವರ್ಣ ಅಧ್ಯಾಯವಾಗಿ ಬರೆಯಲ್ಪಡುತ್ತದೆ. ಶಾಸಕ, ಸಂಸದ, ಸಿಎಂ ಮತ್ತು ಕೇಂದ್ರ ಸಚಿವರಾಗಿ ಅವರ ಸುದೀರ್ಘ ವೃತ್ತಿಜೀವನ ಎಂದಿಗೂ ಕಳಂಕಿತವಾಗಿಲ್ಲ, ಅವರ ಇಡೀ ಜೀವನ ಭ್ರಷ್ಟಾಚಾರ ಆರೋಪಗಳಿಂದ ಮುಕ್ತವಾಗಿತ್ತು.
>
> ■ ಅಮಿತ್ ಶಾ, ಕೇಂದ್ರ ಗೃಹ ಸಚಿವ

ಭಾರತಕ್ಕೆ ತೈಲ ಭರವಸೆ

ಪುಟ ೧→ ಈ ಹಿನ್ನೆಲೆಯಲ್ಲಿ ಭಾರತದ ಪೆಟ್ರೋಲಿಯಂ ರಿಫೈನರಿ ಕಂಪನಿಗಳು ರಷ್ಯಾದಿಂದ ಹೆಚ್ಚಿನ ಪ್ರಮಾಣದಲ್ಲಿ ಕಚ್ಚಾ ತೈಲವನ್ನು ಆಮದು ಮಾಡಿಕೊಳ್ಳುವ ಕುರಿತು ಕೇಂದ್ರ ಸರ್ಕಾರದೊಂದಿಗೆ ಸಮಾಲೋಚನೆ ನಡೆಸುತ್ತಿರುವುದು ತಿಳಿದುಬಂದಿದೆ. ಉಕ್ರೇನ್ ಯುದ್ಧ ಆರಂಭವಾದ ನಂತರ ರಷ್ಯಾ ಮೇಲೆ ಪಾಶ್ಚಿಮಾತ್ಯ ದೇಶಗಳು ವಿಧಿಸಿದ ನಿರ್ಬಂಧಗಳ ಪರಿಣಾಮವಾಗಿ ರಷ್ಯಾ ಕಡಿಮೆ ಬೆಲೆಗೆ ತೈಲ ಮಾರಾಟ ಮಾಡುತ್ತಿತ್ತು. ಈ ಅವಕಾಶವನ್ನು ಬಳಸಿಕೊಂಡು ಭಾರತ ಮತ್ತು ಚೀನಾ ರಷ್ಯಾದಿಂದ ಹೆಚ್ಚಿನ ಪ್ರಮಾಣದಲ್ಲಿ ತೈಲ ಖರೀದಿಸುತ್ತಿದ್ದವು. ಆದರೆ, ಅಮೆರಿಕದ ಒತ್ತಡದ ಹಿನ್ನೆಲೆಯಲ್ಲಿ ಭಾರತ ಕೆಲವು ಕಾಲ ರಷ್ಯಾದಿಂದ ತೈಲ ಖರೀದಿಯನ್ನು ಕಡಿಮೆ ಮಾಡಿತ್ತು. ಇದೀಗ ಗಲ್ಫ್ ಪ್ರದೇಶದಲ್ಲಿ ತೈಲ ಪೂರೈಕೆ ಸ್ಥಗಿತಗೊಳ್ಳುತ್ತಿರುವ ಕಾರಣ ಮತ್ತೆ ರಷ್ಯಾ ತೈಲಕ್ಕೆ ಬೇಡಿಕೆ ಹೆಚ್ಚುತ್ತಿರುವುದು ಗಮನಾರ್ಹವಾಗಿದೆ.

ಯುರೋಪ್‌ಗೆ ಅನಿಲ ಪೂರೈಕೆ ನಿಲ್ಲಿಸಲು ಪುಟಿನ್ ಚಿಂತನೆ: ಇರಾನ್ ಯುದ್ಧದಿಂದ ಜಾಗತಿಕ ತೈಲ ಬೆಲೆ ಏರಿಕೆಯಾಗುತ್ತಿದ್ದು, ರಷ್ಯಾ ಅನಿಲ ಮತ್ತು ದ್ರವೀಕೃತ ನೈಸರ್ಗಿಕ ಅನಿಲ ಖರೀದಿ ಮೇಲೆ ಐರೋಪ್ಯ ಒಕ್ಕೂಟ (ಇಯು) ನಿಷೇಧ ಹೇರಲು ಮುಂದಾಗಿರುವ ಹಿನ್ನೆಲೆ ಯುರೋಪ್‌ಗೆ ಅನಿಲ ಪೂರೈಕೆ ನಿಲ್ಲಿಸಲು ಯೋಚಿಸಿದ್ದೇವೆ ಎಂದು ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಎಚ್ಚರಿಕೆ ನೀಡಿದ್ದಾರೆ.

ಅಮೆರಿಕಕ್ಕಿಂತ ಶ್ರೇಷ್ಠ ಬದಲಿ ಆಯ್ಕೆ ಬೇರಿಲ್ಲ

ಭಾರತ ಪುನಃ ರಷ್ಯಾ ತೈಲ ಖರೀದಿಸುವುದರ ಕುರಿತು ಗುರುವಾರ ಪ್ರತಿಕ್ರಿಯಿಸಿದ ಅಮೆರಿಕದ ಉಪ ಕಾರ್ಯದರ್ಶಿ ಕ್ರಿಸ್ಟೋಫರ್ ಲ್ಯಾಂಡೌ, ಭಾರತ ಬದಲಿ ಆಯ್ಕೆ ಹುಡುಕುತ್ತಿದೆ ಎಂದು ಭಾವಿಸುತ್ತೇನೆ. ಅಮೆರಿಕಕ್ಕಿಂತ ಶ್ರೇಷ್ಠ ಬದಲಿ ಆಯ್ಕೆಯು ಬೇರೊಂದಿಲ್ಲ ಎಂದಿದ್ದಾರೆ. ದಿಲ್ಲಿಯಲ್ಲಿ ನಡೆದ ರೈಸಿನಾ ಸಂವಾದದಲ್ಲಿ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು.

ಸಂಘರ್ಷ ಅಂತ್ಯಗೊಳಿಸಲು ಪ್ರಧಾನಿ ಮೋದಿ ಕರೆ

ಪುಟ ೧→ ಪಶ್ಚಿಮ ಏಷ್ಯಾ ಬಿಕ್ಕಟ್ಟಿನ ಬಗ್ಗೆ ಉಭಯ ನಾಯಕರು ಮಹತ್ವದ ನೆಲೆಯಲ್ಲಿ ಚರ್ಚಿಸಿದರು. ಕಾನೂನು ಸುವ್ಯವಸ್ಥೆ, ಮಾತುಕತೆ, ರಾಜತಾಂತ್ರಿಕತೆಯಲ್ಲಿ ಭಾರತ-ಫಿನ್ಲೆಂಡ್‌ಗಳಿಗೆ ಬಲವಾದ ನಂಬಿಕೆ. ಮಿಲಿಟರಿ ಸಂಘರ್ಷ ಮಾತ್ರದಿಂದಲೆ ಯಾವುದೇ ಸಮಸ್ಯೆ ಬಗೆಹರಿಸಲಾಗದು ಎಂಬುದು ನಮ್ಮ ಅಭಿಮತ. ಅದು ಉಕ್ರೇನ್ ಇರಲಿ ಅಥವಾ ಪ.ಏಷ್ಯಾವೇ ಆಗಿರಲಿ, ಸಂಘರ್ಷಗಳು ತ್ವರಿತ ಕೊನೆಗಾಣಬೇಕು, ಶಾಂತಿ ಸ್ಥಾಪನೆ ನಿಟ್ಟಿನಲ್ಲಿ ನಡೆವ ಪ್ರಯತ್ನಗಳನ್ನು ನಾವು ನಿರಂತರ ಬೆಂಬಲಿಸುತ್ತೇವೆ ಎಂದು ಪ್ರಧಾನಿ ಮೋದಿ ಪುನರುಚ್ಚರಿಸಿದ್ದಾರೆ. ಭಾರತ-ಯುರೋಪ್ ಬಾಂಧವ್ಯಗಳು ಉಚ್ಛ್ರಾಯ ಘಟ್ಟದಲ್ಲಿರುವ ವಾಸ್ತವವನ್ನು ಕೂಡ ಪ್ರಧಾನಿ ಮೋದಿ ಮಾತುಕತೆ ಸಂದರ್ಭ ಉಲ್ಲೇಖಿಸಿದ್ದಾರೆ. ಏಕಕಾಲಕ್ಕೆ ಜಗತ್ತಿನ ಎರಡು ಪ್ರಮುಖ ರಾಜತಾಂತ್ರಿಕ ಶಕ್ತಿಗಳಾಗಿರುವ ಭಾರತ ಮತ್ತು ಯುರೋಪ್ ತಮ್ಮ ಬಾಂಧವ್ಯಗಳ ಸ್ವರ್ಣಕಾಲವನ್ನು ಪ್ರವೇಶಿಸುತ್ತಿವೆ ಎಂದು ಬಣ್ಣಿಸಿದ್ದಾರೆ.

ಹಿರಿಯ ಪತ್ರಕರ್ತ ವಿಶ್ವೇಶ್ವರ ಭಟ್ಟರಿಗೆ ರಾಷ್ಟ್ರೀಯ ಸೌರಭ ಸಮ್ಮಾನ್ ಪ್ರಶಸ್ತಿ



ಕುಮಟಾ: ಕಳೆದ 30 ವರ್ಷಗಳಿಂದ ಅಸ್ತಿತ್ವದಲ್ಲಿರುವ ಕುಮಟಾದ ಹಿರಿಯ ಸಾಂಸ್ಕೃತಿಕ ಸಂಘಟನೆ- ಸೌರಭ (ಸದಭಿರುಚಿಯ ಸಾಂಸ್ಕೃತಿಕ ಸಂಗಮ) ನೀಡುವ ಮಹತ್ವದ 'ರಾಷ್ಟ್ರೀಯ ಸೌರಭ ಸಮ್ಮಾನ್'ಪ್ರಶಸ್ತಿಯನ್ನು ಪ್ರಕಟ ಮಾಡಿದೆ.

ಜಿಲ್ಲೆಯಲ್ಲಿ ಹುಟ್ಟಿ ಬೆಳೆದು ರಾಷ್ಟ್ರೀಯ-ಅಂತಾರಾಷ್ಟ್ರೀಯ ಮಟ್ಟದಲ್ಲಿ ತನ್ನ ವಿಶೇಷ ಸಾಧನೆಯಿಂದ ಮನ್ನಣೆಗಳಾದ ಸಾಹಿತ್ಯ-ಸಾಂಸ್ಕೃತಿಕ ಕ್ಷೇತ್ರದ ಸಾಧಕರಿಗೆ ನೀಡುವ ಘನತೆಯ ಪ್ರಶಸ್ತಿ ಇದು. ಈ ವರ್ಷ ಈ ಪ್ರಶಸ್ತಿಗೆ ಭಾರತದ ಪತ್ರಿಕಾ ರಂಗಕ್ಕೆ ಹಾಗೂ ಸಾರಸ್ವತ ಲೋಕಕ್ಕೆ ಮಹತ್ವದ ಕೊಡುಗೆಗಳನ್ನು ಕೊಟ್ಟಿರುವ, ಹಿರಿಯ ಪತ್ರಕರ್ತ ವಿಶ್ವೇಶ್ವರ ಭಟ್ಟ ಇವರಿಗೆ ನೀಡುವುದೆಂದು ಸೌರಭದ ವಿಶ್ವಸ್ತರು ತಿಳಿಸಿದ್ದಾರೆ.

> ರಾಷ್ಟ್ರೀಯ-ಅಂತಾರಾಷ್ಟ್ರೀಯ ಮಟ್ಟದಲ್ಲಿ ವಿಶೇಷ ಸಾಧನೆ

ಕಳೆದ ಬಾರಿ ಈ ಪುರಸ್ಕಾರವನ್ನು ಖ್ಯಾತನಾಮರಾದ ಹಿಂದುಸ್ತಾನಿ ಶಾಸ್ತ್ರೀಯ ಸಂಗೀತ ಗಾಯಕ ಪಂ.ಹಾಸಣಗಿ ಗಣಪತಿ ಭಟ್ಟ ಅವರಿಗೆ ನೀಡಿರುವುದನ್ನು ಇಲ್ಲಿ ಸ್ಮರಿಸಬಹುದು. ವಿಶ್ವೇಶ್ವರ ಭಟ್ಟರು ಕುಮಟಾ ತಾಲೂಕಿನ ಮೂರೂರಿನಲ್ಲಿ ಹುಟ್ಟಿ ಬೆಳೆದು, ಪತ್ರಿಕೋದ್ಯಮದಲ್ಲಿ ಸ್ನಾತಕೋತ್ತರ ಪದವಿ ಪಡೆದು ಹಲವಾರು ಪತ್ರಿಕೆಗಳಲ್ಲಿ ಸಂಪಾದಕರಾಗಿ ಸೇವೆ ಸಲ್ಲಿಸಿ, ವಿಶ್ವವಾಣಿ ಪತ್ರಿಕಾ ಬಳಗ ಸೃಷ್ಟಿಸಿ, ಹಳ್ಳಿ ಹಳ್ಳಿಗಳಲ್ಲಿ ನೂರಾರು ಪತ್ರಕರ್ತರನ್ನು ಸೃಷ್ಟಿಸಿದ, ಸಾವಿರಾರು ಬರಹಗಾರರ ಜನಪ್ರಿಯರಾದ ಹಾಗೂ ನೂರಕ್ಕೂ ಹೆಚ್ಚು ಪುಸ್ತಕಗಳನ್ನು ಬರೆದ, ವಿಶ್ವಾದ್ಯಂತ ಅಧ್ಯಯನಾರ್ಥವಾಗಿ ಸುತ್ತಿ, ಅನುಭವಗಳ ಮಹತ್ವಪೂರ್ಣ ಕೊಡುಗೆಗಳನ್ನು ಕೊಡುತ್ತಿರುವವರು.

ಈ ವರ್ಷ ವಿಶ್ವೇಶ್ವರ ಭಟ್ಟರಿಗೆ ಈ ಪ್ರಶಸ್ತಿಯನ್ನು ಕೊಡಲು ಸೌರಭ ತೀರ್ಮಾನಿಸಿದೆ. ಏ.26ರಂದು ಕುಮಟಾದಲ್ಲಿ ನಡೆಯುವ ಸೌರಭದ ವಾರ್ಷಿಕೋತ್ಸವ ಸಮಾರಂಭದಲ್ಲಿ ದೇಶದ ಖ್ಯಾತನಾಮರಾದ ಅಭ್ಯಾಗತ ಸಮ್ಮುಖದಲ್ಲಿ ಈ ಪ್ರಶಸ್ತಿಯನ್ನು ಪ್ರದಾನ ಮಾಡಲಾಗುವುದು ಎಂದು ಸೌರಭದ ಅಧ್ಯಕ್ಷ ಶ್ರೀಕಾಂತ ಕೆ.ಭಟ್ ಮತ್ತು ಕಾರ್ಯದರ್ಶಿ ಅರುಣ ಹೆಗಡೆಯವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ತೆರಿಗೆ ಹೊರೆ ಕಡಿಮೆ ಮಾಡಲಿ: ಅಶೋಕ



ಬೆಂಗಳೂರು: ಸಿಎಂ ಸಿದ್ದರಾಮಯ್ಯ ಆಯವ್ಯಯದಲ್ಲಿ ಇಲ್ಲದ ಆದಾಯವನ್ನು ಸೃಷ್ಟಿಸಿ ಜಿಎಸ್‌ಡಿಪಿಗೆ ಹೋಲಿಕೆ ಮಾಡುವ ಕಸರತ್ತು ಪ್ರಮಾಣವನ್ನು ಕಡಿಮೆ ಇರುವಂತೆ ತೋರಿಸುತ್ತಾರೆ. ಈ ಮೂಲಕ ಆರ್ಥಿಕ ಶಿಸ್ತು ಪಾಲಿಸಿದ್ದೇವೆ ಎಂದು ಸುಳ್ಳಾಗಿ ತೋರಿಸುತ್ತಾರೆ ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ ಹೇಳಿದರು.

ವಿಧಾನಸೌಧದಲ್ಲಿ ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿ, ಆಯವ್ಯಯ ಎಂದರೆ ಆದಾಯ ಹೆಚ್ಚಿಸಿ, ಜನರಿಗೆ ಹೊರೆಯಾಗದಂತೆ ಮಾಡಬೇಕು. ಇದನ್ನೇ ಆರ್ಥಿಕ ಪರಿಣತಿ ಎಂದು ಹೇಳುತ್ತಾರೆ. ಸಾಲ ಮಾಡಿ ಸರ್ಕಾರ ನಡೆಸಲು ಇವರೇ ಬೇಕಿಲ್ಲ, ರಾಜ್ಯದ ಆರ್ಥಿಕ ಪರಿಸ್ಥಿತಿ ಸುಧಾರಣೆಯಾಗಲಿದೆ ಎಂದು ಜನರು ಅಂದುಕೊಂಡಿದ್ದ ಸಂಪೂರ್ಣ ಸುಳ್ಳಾಗಿದೆ ಎಂದರು.

ಸಿದ್ದರಾಮಯ್ಯ ಎಂದರೆ ತೆರಿಗೆ ಹೇರುವ ರಾಮಯ್ಯ ಆಗಿದ್ದಾರೆ. ಈ ಬಾರಿಯ ಕೇಂದ್ರ ಬಜೆಟ್‌ನಲ್ಲಿ ಸಚಿವೆ ನಿರ್ಮಲಾ ಸೀತಾರಾಮನ್ ತೆರಿಗೆ ಹೊರೆ ಕಡಿಮೆ ಮಾಡಿದ್ದಾರೆ. ಆದರೆ, ಸಿದ್ದರಾಮಯ್ಯನವರು ನಾಲ್ಕಾರು ತೆರಿಗೆ ಹಾಕುತ್ತಾರೆ. ಈಗಾಗಲೇ 36 ತೆರಿಗೆಗಳನ್ನು ಜನರ ಮೇಲೆ ಹೇರಿದ್ದಾರೆ. ಚುನಾವಣೆ ಸಮಯದಲ್ಲಿ ಜನರ ಮೇಲೆ ಹೊರೆ ಹಾಕದೆ ಗ್ಯಾರಂಟಿ ತರುತ್ತೇನೆ ಎಂದು ಭರವಸೆ ನೀಡಿ, ಈಗ ತೆರಿಗೆಗಳ ಹೊರೆ ಹೇರಿದ್ದಾರೆ. ಕಾಂಗ್ರೆಸ್ ಪ್ರತಿ ವರ್ಷ ಸಾಲ ಪಡೆಯುತ್ತಲೇ ಇದೆ. ಈ ಬಾರಿ 1.15 ಲಕ್ಷ ಕೋಟಿ ರೂ. ಸಾಲ ಪಡೆಯಲಿದ್ದಾರೆ. ಸಾಲವನ್ನು ಜನರ ತಲೆ ಮೇಲೆ ಹೇರುವ ಆಯವ್ಯಯವನ್ನು ಈ ಬಾರಿ ಮಂಡಿಸುತ್ತಾರೆ. ಸಿದ್ದರಾಮಯ್ಯ ಅವರ ಅವಧಿ ಮುಗಿಯುವ ವೇಳೆಗೆ ಒಟ್ಟು ಸಾಲ 8 ಲಕ್ಷ ಕೋಟಿ ರೂ. ಮೀರಲಿದೆ ಎಂದು ವಿವರಿಸಿದರು.

ಕೆಪಿಎಸ್‌ಸಿ ಹಗರಣ ಅಧಿವೇಶನದಲ್ಲಿ ಪ್ರಸ್ತಾಪ

ಕೆಪಿಎಸ್‌ಸಿ ಎಂದರೆ ಕಳ್ಳರ ದಂಧೆಯ ಕೇಂದ್ರ. ಹಣ ಕೊಡುವುದಿಲ್ಲ ಎಂದರೆ ಕಚೇರಿಯ ಒಳಗೂ ಬಿಡುವುದಿಲ್ಲ. ಕುಟುಂಬ, ಜಾತಿ ಎನ್ನುವುದು ಇಲ್ಲಿ ಮಾನದಂಡವೇ ಹೊರತು ಅಂಕ, ಪ್ರತಿಭೆ ಮುಖ್ಯವಲ್ಲ. ಕೆಪಿಎಸ್‌ಸಿ ಮುಚ್ಚಿ ಕೇಂದ್ರದ ಯುಪಿಎಸ್‌ಸಿ ಮಾದರಿಯ ಒಂದು ಸಂಸ್ಥೆಯನ್ನು ನಿರ್ಮಿಸಬೇಕು. ಈ ಬಗ್ಗೆ ವಿಧಾನಸಭೆ ಅಧಿವೇಶನದಲ್ಲಿ ಮಾತನಾಡುತ್ತೇನೆ. ಜೊತೆಗೆ ಕಾನೂನು ಸುವ್ಯವಸ್ಥೆ, ಪ್ರತಿಭಟನೆಗಳು, ಮೊದಲಾದ ವಿಷಯಗಳ ಬಗ್ಗೆ ಮಾತನಾಡುತ್ತೇನೆ ಎಂದರು.

ನಂಜುಂಡಪ್ಪ ವರದಿಯಲ್ಲಿದ್ದ ಹಿಂದುಳಿದ ತಾಲೂಕುಗಳ ಸಂಖ್ಯೆ, ಗೋವಿಂದರಾವ್ ವರದಿಯಲ್ಲಿ ಇನ್ನಷ್ಟು ಅಧಿಕವಾಗಿದೆ. ಹಿಂದುಳಿದ ತಾಲೂಕುಗಳ ಅಭಿವೃದ್ಧಿಗೆ ಪ್ರತಿ ವರ್ಷ 15,000 ಕೋಟಿ ರೂ. ಮೀಸಲಿಡಬೇಕೆಂದು ಸರ್ಕಾರಕ್ಕೆ ಪತ್ರ ಬರೆದಿದ್ದೇನೆ. ಈ ಆಯವ್ಯಯದಲ್ಲಿ ಸರ್ಕಾರ ಇಷ್ಟು ಅನುದಾನವನ್ನು ಮೀಸಲಿಡಬೇಕು ಎಂದು ಆಗ್ರಹಿಸಿದರು.

ಕೇಂದ್ರವನ್ನು ಟೀಕಿಸುವ ಆಯವ್ಯಯ ಇರಲಿದೆ: ಮುಖ್ಯಮಂತ್ರಿ ಹುದ್ದೆಗಾಗಿ ಕಚ್ಚಾಟ ನಡೆಯುತ್ತಿದೆ. ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿ ಆಗದಿದ್ದರೆ ರಾಜೀನಾಮೆ ನೀಡುತ್ತೇನೆಂದು ಶಾಸಕ ಇಕ್ಬಾಲ್ ಹುಸೇನ್ ಹೇಳಿದ್ದಾರೆ. ಇಂತಹ ಸ್ಥಿತಿಯಲ್ಲಿ ಮಂಡಿಸುವ ಬಜೆಟ್‌ನಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ಟೀಕಿಸುವ ಅಂಶಗಳಿರುತ್ತದೆ. ಆದೇಶ ಹೊರಡಿಸಲಾಗಿದೆ, ಅಭಿಪ್ರಾಯ ಸಂಗ್ರಹಣೆ ಎಂಬುದನ್ನೇ ಸಾಧನೆಯಾಗಿ ಈ ಬಜೆಟ್‌ನಲ್ಲಿ ತೋರಿಸುತ್ತಾರೆ ಎಂದರು.

ಸಿಎಂ ಬೃಹತ್ ಚಿತ್ರ ರಚನೆ



ಮೈಸೂರು: ಹಣಕಾಸು ಸಚಿವರೂ ಆಗಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ನವರು 17ನೇ ಬಜೆಟ್ ಮಂಡಿಸುತ್ತಿರುವ ಹಿನ್ನೆಲೆಯಲ್ಲಿ ತವರು ಜಿಲ್ಲೆ ಮೈಸೂರು ನಗರದ ಆಲನಹಳ್ಳಿ ಬಳಿಯ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಮುಂಭಾಗ ವಿಧಾನಪರಿಷತ್ ಸದಸ್ಯ ಡಾ. ಯತೀಂದ್ರ ಸಿದ್ದರಾಮಯ್ಯ ಯುವ ಬ್ರಿಗೇಡ್ ವತಿಯಿಂದ 125 ಅಡಿ ಉದ್ದ ಹಾಗೂ 65 ಅಡಿ ಅಗಲದ ಸುಮಾರು 8000 ಚದುರ ಅಡಿಯಲ್ಲಿ ಸಿದ್ದರಾಮಯ್ಯ ಅವರ ಚಿತ್ರವನ್ನು ಬಿಡಿಸಿ ಅನಾವರಣಗೊಳಿಸಲಾಗಿದೆ.

ಭುವನ್ ಫೌಂಡೇಷನ್‌ಯ ಕಲಾವಿದರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬಜೆಟ್ ಪ್ರತಿಯ ಸೂಟ್‌ಕೇಸ್ ಹಿಡಿದಿರುವ ಹಾಗೂ ಹಿಂಬದಿಯಲ್ಲಿ ಕರ್ನಾಟಕದ ಮ್ಯಾಪ್ ಇರುವ ಬೃಹತ್ ಚಿತ್ರವನ್ನು ರಚಿಸಲಾಗಿದೆ. ಇದಕ್ಕಾಗಿ ಸತತ 10 ಗಂಟೆಗಳ ಕಾಲ 5 ಮಂದಿ ಕಲಾವಿದರು ಶ್ರಮ ಹಾಕಿದ್ದಾರೆ. ಕಲಾವಿದರಾದ ಪುನೀತ್, ಲಕ್ಷ್ಮೀ ಸಿ. ರವಿಚಂದ್ರನ್, ಸಂಜಯ್, ಕಂಸಾಳೆ ರವಿ ಅವರು ಈ ಚಿತ್ರಕಲೆಯನ್ನು ರಚಿಸಿದ್ದಾರೆ.

ಈ ಚಿತ್ರಕಲೆಯನ್ನು ಉದ್ಘಾಟಿಸಲು ಡಾ. ಯತೀಂದ್ರ ಸಿದ್ದರಾಮಯ್ಯ ಆಗಮಿಸಬೇಕಾಗಿತ್ತು. ಇವರ ಅನುಪಸ್ಥಿತಿಯಲ್ಲಿ ಡಿಸಿಸಿ ಅಧ್ಯಕ್ಷ ಡಾ. ಬಿ.ಜೆ. ವಿಜಯಕುಮಾರ್ ಮತ್ತು ಪದಾಧಿಕಾರಿಗಳು ಸಾಂಕೇತಿಕವಾಗಿ ಚಿತ್ರವನ್ನು ಅನಾವರಣಗೊಳಿಸಿದರು.

ಕಿರುಸುದ್ದಿ

ಸರ್ಕಾರಕ್ಕೆ ಸಮಗ್ರ ವರದಿ: ಚೌಧರಿ

ಮಂಗಳೂರು: ರಾಜ್ಯಾದ್ಯಂತ ಪ್ರವಾಸ ಕೈಗೊಳ್ಳುವ ಮೂಲಕ ಮಹಿಳೆಯರಲ್ಲಿ ಜಾಗೃತಿ ಮೂಡಿಸುವ ಕೆಲಸ ನಡೆಯುತ್ತಿದೆ ಎಂದು ಕರ್ನಾಟಕ ಮಹಿಳಾ ಆಯೋಗದ ಅಧ್ಯಕ್ಷೆ ಡಾ.ನಾಗಲಕ್ಷ್ಮಿ ಚೌಧರಿ ಹೇಳಿದ್ದಾರೆ. ಮಂಗಳೂರಿನಲ್ಲಿಂದು ವಿವಿಧ ಸಂಸ್ಥೆಗಳಿಗೆ ಭೇಟಿ ನೀಡಿದ ಅವರು, ಅಲ್ಲಿ ಕೆಲಸ ಮಾಡುತ್ತಿರುವ ಮಹಿಳೆಯರ ಸಮಸ್ಯೆಗಳನ್ನು ಆಲಿಸಿದರು. ಮಂಗಳೂರಿನ ಬಲ್ಮಠದಲ್ಲಿನ ಸರ್ಕಾರಿ ಮಹಿಳಾ ಪದವಿ ಕಾಲೇಜಿಗೆ ಭೇಟಿ ನೀಡಿ ವಿದ್ಯಾರ್ಥಿನಿಯರೊಂದಿಗೆ ಸಂವಾದ ನಡೆಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿ, ಮಹಿಳಾ ದೌರ್ಜನ್ಯ ಹೆಚ್ಚಾಗಲು ಮೊಬೈಲ್‌ಗಳಲ್ಲಿನ ಅಶ್ಲೀಲ ವಿಡಿಯೋಗಳು ಕೂಡ ಕಾರಣವಾಗುತ್ತಿದೆ. ವಿದ್ಯಾರ್ಥಿಗಳು ಮಾದಕ ದ್ರವ್ಯ ಸೇವನೆಯಂತಹ ಚಟಗಳಿಗೆ ಬಲಿಯಾಗುತ್ತಿದ್ದು, ಈ ನಿಟ್ಟಿನಲ್ಲಿ ಸಮಾಜ ಜಾಗೃತವಾಗಬೇಕಿದೆ. ಪ್ರತಿ ಮನೆಯಲ್ಲಿ ತಮ್ಮ ಮಕ್ಕಳ ಬಗ್ಗೆ ವಿಶೇಷ ಕಾಳಜಿ ವಹಿಸಬೇಕು ಎಂದರು.

ಗ್ಯಾರಂಟಿಗೆ ಎಸ್‌ಸಿಪಿ, ಟಿಎಸ್‌ಪಿ ಬಳಕೆಗೆ ಖಂಡನೆ

ಚಿಕ್ಕಮಗಳೂರು: ಈ ಬಾರಿ ರಾಜ್ಯ ಬಜೆಟ್‌ನಲ್ಲಿ ಗ್ಯಾರಂಟಿ ಯೋಜನೆಗಳಿಗೆ ಎಸ್‌ಸಿಪಿ, ಟಿಎಸ್‌ಪಿ ಅನುದಾನವನ್ನು ಮೀಸಲಿಡಬಾರದು ಎಂದು ವಿಧಾನ ಪರಿಷತ್ ಸದಸ್ಯ ಸಿ.ಟಿ. ರವಿ ಮುಖ್ಯಮಂತ್ರಿಗಳನ್ನು ಆಗ್ರಹಿಸಿದ್ದಾರೆ. ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 3 ವರ್ಷಗಳಿಂದ ರಾಜ್ಯ ಸರ್ಕಾರ ಹರಿಜನ, ಗಿರಿಜನರ ಕಲ್ಯಾಣಕ್ಕೆ ಮೀಸಲಾದ ಎಸ್‌ಸಿಪಿ, ಟಿಎಸ್‌ಪಿ ಅನುದಾನಕ್ಕೆ ಕನ್ನಾ ಹಾಕಿದೆ. ಈ ವರ್ಷ ಇದೇ ಅನ್ಯಾಯ ಮುಂದುವರಿಯಬಾರದು ಎಂದು ಆಗ್ರಹಿಸಿದರು. ಈ ವಿಚಾರವನ್ನು ನಾವು ಪರಿಷತ್‌ನಲ್ಲಿ ಪ್ರಶ್ನಿಸಿದಾಗ ಸಚಿವ ಮಹದೇವಪ್ಪ ಅವರು ಅಸಹಾಯಕತೆ ವ್ಯಕ್ತಪಡಿಸಿದ್ದಾರೆ. ಕಳೆದ 3 ವರ್ಷದಲ್ಲಿ 39 ಸಾವಿರ ಕೋಟಿ ರೂ. ಎಸ್‌ಸಿಪಿ, ಟಿಎಸ್‌ಪಿ ಅನುದಾನವನ್ನು ದುರ್ಬಳಕೆ ಮಾಡಿಕೊಳ್ಳಲಾಗಿದೆ. ಈ ವರ್ಷವೂ ಸುಮಾರು 15 ಸಾವಿರ ಕೋಟಿ ರೂ. ಅನುದಾವನ್ನು ಬಳಸಿಕೊಳ್ಳಲು ಸರ್ಕಾರ ಸಿದ್ಧತೆ ನಡೆಸಿದೆ ಎನ್ನುವ ಮಾಹಿತಿ ಇದೆ. ಹಾಗೆ ಆದಲ್ಲಿ 54 ಸಾವಿರ ಕೋಟಿ ರೂ. ದುರ್ಬಳಕೆ ಆದಂತಾಗುತ್ತದೆ ಎಂದು ದೂರಿದರು. ದಲಿತರು, ಆದಿವಾಸಿಗಳ ಸರ್ವಾಂಗೀಣ ಅಭಿವೃದ್ಧಿ, ಶಿಕ್ಷಣ, ಆರೋಗ್ಯ, ವಸತಿ ಸೇರಿದಂತೆ ಸ್ವಾವಲಂಬಿ ಯೋಜನೆಗಳಿಗೆ ಎಸ್‌ಸಿಪಿ, ಟಿಎಸ್‌ಪಿ ಅನುದಾನ ಸಂಪೂರ್ಣವಾಗಿ ಬಳಕೆ ಆಗಬೇಕು ಎಂದು ಆಗ್ರಹಿಸಿದರು.

ಸಂಕೇತ್ ಹತ್ಯೆ ಪ್ರಕರಣ ಎನ್‌ಐಎಗೆ ವಹಿಸಿ: ಚನ್ನಬಸಪ್ಪ

ಶಿವಮೊಗ್ಗ: ಸಮೀಪದ ಊರುಗಡೂರಿನ ಬಳಿ ನಡೆದ ವಿದ್ಯಾರ್ಥಿ ಸಂಕೇತ್ ಹತ್ಯೆ ಪ್ರಕರಣವನ್ನು ಎನ್‌ಐಎಗೆ ವಹಿಸಬೇಕು ಎಂದು ಶಾಸಕ ಎಸ್.ಎನ್.ಚನ್ನಬಸಪ್ಪ ಒತ್ತಾಯಿಸಿದ್ದಾರೆ. ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಅಪ್ರಾಪ್ತ ವಯಸ್ಸಿನ ಮುಸ್ಲಿಂ ಸಮುದಾಯದ ಮಕ್ಕಳೇ ಮಾದಕವಸ್ತು, ಗಾಂಜಾ ಸೇವನೆ ಮಾಡಿ, ಹಿಂದೂ ಯುವಕರನ್ನು ಹತ್ಯೆಮಾಡುವ, ಕಲ್ಲು ತೂರಾಟ ಮಾಡುವ ಕೃತ್ಯ ಹೆಚ್ಚಾಗುತ್ತಿದೆ. ಅದಕ್ಕೆ ಉದಾಹರಣೆ ಇತ್ತೀಚೆಗೆ ಸೂಳೆಬೈಲಿನಲ್ಲಿ ನಡೆದ ಸಂಕೇತ್ ಎಂಬ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಯ ಹತ್ಯೆ. ಮುಸ್ಲಿಂ ಅಪ್ರಾಪ್ತರಿಂದಲೇ ಗಾಂಜಾ ಸೇವಿಸಿ ಅನೇಕ ಕಡೆ ಕಲ್ಲು ತೂರಾಟ, ಗಲಭೆ ಆಗಿವೆ. 8–9ನೇ ತರಗತಿಯಲ್ಲಿ ಫೇಲಾದ ಮುಸ್ಲಿಂ ಅಪ್ರಾಪ್ತರೇ ಎಲ್ಲಾ ಕುಕೃತ್ಯಗಳಿಗೆ ಕಾರಣರಾಗುತ್ತಿದ್ದಾರೆ. ಅಪ್ರಾಪ್ತರು ಎನ್ನುವ ಕಾರಣಕ್ಕಾಗಿ ಪೊಲೀಸರು ಇವರ ವಿರುದ್ಧ ಏನನ್ನೂ ಮಾಡಲಾಗುತ್ತಿಲ್ಲ ಎಂದು ಆಗ್ರಹಿಸಿದರು.

ರಾಜ್ಯ ಉಸ್ತುವಾರಿ ರಾಧಾಮೋಹನ್ ದಾಸ್ ಅಗರ್ವಾಲ್ ಕರೆ

ನಮ್ಮಲ್ಲಿ ವ್ಯಕ್ತಿಗಿಂತ ಪಕ್ಷ ಮುಖ್ಯ

ದಾವಣಗೆರೆ: ನಮ್ಮಲ್ಲಿ ವ್ಯಕ್ತಿ ಮುಖ್ಯವಲ್ಲ, ಪಕ್ಷ ಮುಖ್ಯ. ಬಿಜೆಪಿಯ ಕಮಲದ ಚಿಹ್ನೆ ಸಿಕ್ಕವರು ಶತೃವಾಗಿದ್ದರೂ ಸರಿ, ಪಕ್ಷದ ಕಾರ್ಯಕರ್ತರು ಅಂತಹವರ ಜತೆ ನಿಂತು ಗೆಲ್ಲಿಸಬೇಕು ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ, ರಾಜ್ಯ ಉಸ್ತುವಾರಿ ರಾಧಾಮೋಹನ್ ದಾಸ್ ಅಗರ್ವಾಲ್ ಕರೆ ನೀಡಿದರು.

ನಗರದ ಗುಂಡಿ ಮಹಾದೇವಪ್ಪ ಕಲ್ಯಾಣ ಮಂಟಪದಲ್ಲಿ ಗುರುವಾರ ನಡೆದ ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಕಾರ್ಯಕರ್ತರು ಹಾಗೂ ವಿಸ್ತಾರಕರ ಅಭಿನಂದನಾ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು. ನಮ್ಮದು ಕೇಡರ್ ಪಕ್ಷವೇ ಹೊರತು ಲೀಡರ್‌ಗಳ ಪಾರ್ಟಿಯಲ್ಲ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ದಾವಣಗೆರೆ ದಕ್ಷಿಣ ಕ್ಷೇತ್ರದ ನಮ್ಮ 220 ಬೂತ್‌ಗಳಲ್ಲಿ ಪ್ರತಿ ಬೂತ್‌ಗೆ ಮೂರು ಜನರಂತೆ ಕಾರ್ಯಕರ್ತರಿದ್ದರೂ ಸೋಲನುಭವಿಸಿದ್ದು ದುರಂತ.

ಈ ಬಾರಿ ಶತಾಯಗತಾಯ ದಾವಣಗೆರೆ ದಕ್ಷಿಣವನ್ನು ಗೆಲ್ಲಲೇಬೇಕು. ಯಾರಿಗೆ ಟಿಕೆಟ್ ಸಿಗುತ್ತದೋ ಗೊತ್ತಿಲ್ಲ ಆದರೆ ಟಿಕೆಟ್ ಸಿಕ್ಕವರ ಗೆಲುವು ಗ್ಯಾರಂಟಿ. ಈ ದಿಸೆಯಲ್ಲಿ ಕಮಲದ ಚಿಹ್ನೆ ಹಾಗೂ ನರೇಂದ್ರ ಮೋದಿಗಾಗಿ ಕಾರ್ಯಕರ್ತರು ಕೆಲಸ ಮಾಡಬೇಕು. 2028ರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಮತ್ತೆ ಅಧಿಕಾರಕ್ಕೆ ಬರುವಂತಾಗಲು ದಾವಣಗೆರೆ ದಕ್ಷಿಣದ ಗೆಲುವು ಮುನ್ನುಡಿ ಬರೆಯಬೇಕು ದಾವಣಗೆರೆ ದಕ್ಷಿಣವನ್ನು ಗೆದ್ದರೆ ಕರ್ನಾಟಕದಲ್ಲಿ ಬಿಜೆಪಿ ಸರ್ಕಾರ ಬರುವುದು ನಿಶ್ಚಿತವಾಗುತ್ತದೆ ಎಂದರು.

ಬೂತ್ ಬಿಟ್ಟು ಹೋಗುವಂತಿಲ್ಲ: ಉಪಚುನಾವಣೆಗೆ ಇನ್ನೊಂದು ತಿಂಗಳು ಮಾತ್ರ ಸಮಯ ಇದೆ. ಚುನಾವಣೆ ಮುಗಿಯುವವರೆಗೂ ಕಾರ್ಯಕರ್ತರು ಬೂತ್ ಬಿಟ್ಟು ಹೋಗುವಂತಿಲ್ಲ, ನಾಯಕರು ಕೂಡ ಕೆಲಸ ಮಾಡುವಂತೆ ಕಾರ್ಯಕರ್ತರು ಅವರ ಮೇಲೆ ಕಣ್ಣಿಡಬೇಕು. ಪ್ರಾಮಾಣಿಕವಾಗಿ ಕೆಲಸ ಮಾಡದ ನಾಯಕರಿಗೆ ಮುಂದಿನ ಚುನಾವಣೆಯಲ್ಲಿ ಪಾಠ ಕಲಿಸಬೇಕು. ಪಕ್ಷದ ನಾಯಕರು ಕೂಡ 2–3 ಶಕ್ತಿಕೇಂದ್ರಗಳ ಹೊಣೆ ಹೊತ್ತುಕೊಂಡು ಕೆಲಸ ಮಾಡಬೇಕು. ಕಳಪೆ ಪ್ರದರ್ಶನ ನೀಡುವ ನಾಯಕರಿಗೆ ಮುಂದಿನ ಚುನಾವಣೆಯಲ್ಲಿ ಟಿಕೆಟ್ ಇಲ್ಲ ಎಂದು ಅವರು ಎಚ್ಚರಿಸಿದರು.

ಬಿಜೆಪಿ ಸುವರ್ಣ ಯುಗ ಆರಂಭ: ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಮಾತನಾಡಿ, ಯಾವತ್ತೇ ಚುನಾವಣೆ ನಡೆದರೂ ರಾಜ್ಯದಲ್ಲಿ ಬಿಜೆಪಿ ಸುವರ್ಣ ಯುಗ ಆರಂಭವಾಗುವುದು ಖಚಿತ. ಬಾಗಲಕೋಟೆ ಹಾಗೂ ದಾವಣಗೆರೆ ದಕ್ಷಿಣ ಉಪ ಚುನಾವಣೆಗಳ ಬಿಜೆಪಿ ಗೆಲುವು ರಾಜ್ಯ ರಾಜಕೀಯದ ದಿಕ್ಕು ಬದಲಾಯಿಸುತ್ತದೆ. ಕಾರ್ಯಕರ್ತರ ಸಂಘಟನೆ ಶಕ್ತಿಯಿಂದ ಈ ಬಾರಿ ದಾವಣಗೆರೆ ದಕ್ಷಿಣದಲ್ಲಿ ಕಮಲ ಅರಳುವುದನ್ನು ತಡೆಯಲು ಯಾರಿಗೂ ಸಾಧ್ಯವಿಲ್ಲ. ಚುನಾವಣೆಯನ್ನು ಗಂಭೀರವಾಗಿ ತೆಗೆದುಕೊಳ್ಳಬೇಕು. ಸವಾಲಾಗಿ ಸ್ವೀಕರಿಸಿ ಚುನಾವಣೆ ಎದುರಿಸಬೇಕು ಎಂದು ಸಲಹೆ ನೀಡಿದರು. ವಿಧಾನ ಪರಿಷತ್ ಮಾಜಿ ಮುಖ್ಯ ಸಚೇತಕ ಡಾ.ಎ.ಹೆಚ್. ಶಿವಯೋಗಿಸ್ವಾಮಿ, ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ, ಕರುಣಾಕರ ರೆಡ್ಡಿ, ಮಾಜಿ ಶಾಸಕರಾದ ಮಾಡಾಳು ವಿರುಪಾಕ್ಷಪ್ಪ, ಎಂ. ಬಸವರಾಜ ನಾಯ್ಕ, ಎಸ್.ವಿ. ರಾಮಚಂದ್ರ, ವಿಭಾಗ ಪ್ರಭಾರಿ ಮೇಘರಾಜ್, ದಾವಣಗೆರೆ ಜಿಲ್ಲಾಧ್ಯಕ್ಷ ಎನ್. ರಾಜಶೇಖರ್, ಶಿವಮೊಗ್ಗ ಜಿಲ್ಲಾಧ್ಯಕ್ಷ ಜಗದೀಶ್, ಮುಖಂಡರಾದ ಲೋಕಿಕೆರೆ ನಾಗರಾಜ್, ಬಿ.ಜಿ. ಅಜಯ್ ಕುಮಾರ್ ಇದ್ದರು.



> ಇಂದು ಜಿಲ್ಲೆಯ ಅನೇಕ ಮುಖಂಡರನ್ನು ಭೇಟಿಯಾಗಿ ಸಮಾಧಾನಪಡಿಸುವ ಪ್ರಯತ್ನ ಮಾಡಿದ್ದೇವೆ. ಆದರೆ ಎಲ್ಲರೂ ಒಂದನ್ನು ಅರ್ಥ ಮಾಡಿಕೊಳ್ಳಬೇಕು. ಪಕ್ಷಕ್ಕಿಂತ ದೊಡ್ಡವರು ಯಾರು ಅಲ್ಲ, ನಾನೂ ಅಲ್ಲ.
> ■ ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ

> ದಾವಣಗೆರೆ ದಕ್ಷಿಣ ಕ್ಷೇತ್ರದ ಟಿಕೆಟ್ ಆಕಾಂಕ್ಷಿ ಬಿ.ಜಿ. ಅಜಯ್‌ಕುಮಾರ್ ಜೊತೆ ಇಂದು ಕಮಲ ಇದೆ, ನಾಳೆ ಇರುತ್ತೋ ಇಲ್ಲವೋ ಗೊತ್ತಿಲ್ಲ, ಕಮಲದ ಚಿಹ್ನೆ ಪಡೆದವರೇ ನಮ್ಮ ಅಧಿಕೃತ ಅಭ್ಯರ್ಥಿಗಳು. ಯಾರಿಗೇ ಟಿಕೆಟ್ ಸಿಕ್ಕರೂ ಕ್ಷೇತ್ರದಲ್ಲಿ ಬಿಜೆಪಿ ಗೆಲ್ಲಬೇಕು.
> ■ ರಾಧಾಮೋಹನದಾಸ್ ಅಗರ್ವಾಲ್, ರಾಜ್ಯ ಬಿಜೆಪಿ ಉಸ್ತುವಾರಿ

ಧರ್ಮದಲ್ಲಿ ರಾಜಕಾರಣ ಸಲ್ಲ: ಡಿ.ಕೆ. ಶಿವಕುಮಾರ



ಚಿಕ್ಕೋಡಿ: ಧರ್ಮ ಉಳಿಸಿದರೆ, ಅದು ನಮ್ಮನ್ನು ಕಾಪಾಡುತ್ತದೆ. ಅದು ನಮಗೆ ಶಕ್ತಿ ತುಂಬುತ್ತದೆ. ಮನುಷ್ಯರಿಗೆ ದೇವರು ಬೇಕು. ಇಲ್ಲವಾದಲ್ಲಿ ಬದುಕಿಗೆ ಅರ್ಥಕೊಡಲು ಸಾಧ್ಯವಿಲ್ಲ ಎಂದು ಡಿಸಿಎಂ ಡಿ.ಕೆ. ಶಿವಕುಮಾರ ಹೇಳಿದರು.

ತಾಲೂಕಿನ ಯಡೂರ ಗ್ರಾಮದಲ್ಲಿ ವೀರಭದ್ರ ದೇವಸ್ಥಾನ ಹಾಗೂ ಕಾಡಸಿದ್ದೇಶ್ವರ ಮಠದ ವತಿಯಿಂದ ಗುರುವಾರ ಹಮ್ಮಿಕೊಂಡ ವೀರಶೈವ ಲಿಂಗಾಯತ ಧರ್ಮೋತ್ಥಾನ ಸಮ್ಮೇಳನದಲ್ಲಿ ಭಾಗವಹಿಸಿ ಮಾತನಾಡಿ, ದೇವರು ವರವನ್ನೂ ಕೊಡುವುದಿಲ್ಲ, ಶಾಪವನ್ನೂ ಕೊಡುವುದಿಲ್ಲ. ಅವಕಾಶ ವನ್ನು ಮಾತ್ರ ಕೊಡುತ್ತಾನೆ. ನಾವು ಎಷ್ಟು ದಿನ ಇರುತ್ತೇವೆ ಅನ್ನುವುದು ಮುಖ್ಯವಲ್ಲ, ಹೇಗೆ ಇರುತ್ತವೆ ಎನ್ನುವುದು ಮುಖ್ಯವಾಗುತ್ತದೆ. ರಾಜಕಾರಣದಲ್ಲಿ ಧರ್ಮ ಇರಬೇಕು. ಆದರೆ, ಧರ್ಮದಲ್ಲಿ ರಾಜಕಾರಣ ಇರಬಾರದು ಎಂದರು.

ಚಿಕ್ಕೋಡಿ ಭಾಗದಲ್ಲಿ ನೀರಾವರಿ ಕ್ಷೇತ್ರದ ಅಭಿವೃದ್ಧಿಗೆ ಸದಾ ಬದ್ಧನಾಗಿದ್ದೇನೆ. ಕ್ಷೇತ್ರದಲ್ಲಿ ಶಾಸಕ ಗಣೇಶ ಹುಕ್ಕೇರಿ ಅವರು ಅಭಿವೃದ್ಧಿ ಕೆಲಸಗಳನ್ನು ಮಾಡುತ್ತಿದ್ದಾರೆ. ನೋಡಿ ನನಗೆ ಹೆಮ್ಮೆ ಎನಿಸಿದೆ. ಜನರಿಗೆ ಅನ್ನ ನೀಡುವ ರೈತರ ಮೇಲೆ ಸದಾ ಅಭಿಮಾನ ಇರಲಿ. ನಾವೆಲ್ಲರೂ ಅವರ ಋಣದಲ್ಲಿದ್ದೇವೆ ಎಂದು ಹೇಳಿದರು. ಉಜ್ಜಯಿನಿ ಪೀಠದ ಸಿದ್ಧಲಿಂಗ ಶಿವಾಚಾರ್ಯ ದೇಶಿಕೇಂದ್ರ ಸ್ವಾಮೀಜಿ, ಶ್ರೀಶೈಲ ಪೀಠದ ಚನ್ನಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ, ಕಾಶಿ ಪೀಠದ ಮಲ್ಲಿಕಾರ್ಜುನ ವಿಶ್ವಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಇದ್ದರು.

> ಧರ್ಮ ಗುರುಗಳನ್ನು ಕಂಡರೆ ಡಿ.ಕೆ. ಶಿವಕುಮಾರ ತಮ್ಮನ್ನೇ ತಾವು ಸಮರ್ಪಿಸಿಕೊಳ್ಳುತ್ತಾರೆ. ಹಾಗಾಗಿ ಅವರನ್ನು ಕಂಡರೆ ನಾನು ವೈಯಕ್ತಿಕವಾಗಿ ಇಷ್ಟ ಪಡುತ್ತೇನೆ. ಡಿ.ಕೆ.ಶಿವಕುಮಾರ ಅವರು ಮುಂದಿನ ಮುಖ್ಯಮಂತ್ರಿಯಾಗುತ್ತಾರೆ.
> ■ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ, ಹುಕ್ಕೇರಿ ಹಿರೇಮಠ

ಇಂದು ಗುತ್ತಿಗೆದಾರರ ಸಂಘದಿಂದ ಪ್ರತಿಭಟನೆ

ಬೆಂಗಳೂರು: ಸರ್ಕಾರದ ವಿವಿಧ ಇಲಾಖೆಗಳಲ್ಲಿ ಬಾಕಿ ಇರುವ ಸುಮಾರು 37 ಸಾವಿರ ಕೋಟಿ ಮೊತ್ತದ ಬಿಲ್ ಪಾವತಿಸುವುದು ಸೇರಿದಂತೆ ಹಲವು ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ, ರಾಜ್ಯದ ಎಲ್ಲ ಭಾಗಗಳಲ್ಲಿ ಮಾರ್ಚ್ 6ರಂದು ಕಾಮಗಾರಿಗಳನ್ನು ನಿಲ್ಲಿಸಿ ರಾಜ್ಯ ಗುತ್ತಿಗೆದಾರರ ಸಂಘ ಹೋರಾಟ ನಡೆಸಲಿದೆ. ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ದೊಡ್ಡಮಟ್ಟದ ಹೋರಾಟ ನಡೆಯಲಿದೆ.

ಫ್ರೀಡಂ ಪಾರ್ಕ್‌ನಲ್ಲಿ ನಡೆಯಲಿರುವ ಪ್ರತಿಭಟನೆಯಲ್ಲಿ ರಾಜ್ಯದ ಎಲ್ಲ ಜಿಲ್ಲೆಗಳಿಂದಲೂ ಸುಮಾರು 15 ರಿಂದ 20 ಸಾವಿರ ಗುತ್ತಿಗೆದಾರರು ಭಾಗವಹಿಸಲಿದ್ದಾರೆ ಎಂದು ರಾಜ್ಯ ಗುತ್ತಿಗೆದಾರರ ಸಂಘ ತಿಳಿಸಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ರವರೊಂದಿಗೆ ಸಂಬಂಧಿಸಿದ ಇಲಾಖೆಗಳ ಸಚಿವರನ್ನು ಭೇಟಿ ಮಾಡಿ ವಿವರವಾಗಿ ಎರಡು ವರ್ಷದಿಂದ ಮನವಿ ಮಾಡುತ್ತಾ ಬಂದಿದ್ದೇವೆ. ಆದರೆ, ನಮ್ಮ ಬೇಡಿಕೆಗಳು ಈವರೆಗೆ ಈಡೇರಿಲ್ಲ. ಹೀಗಾಗಿ ನಾವು ಮುಷ್ಕರ ನಡೆಸಲು ನಿರ್ಧರಿಸಿದ್ದೇವೆ ಎಂದು ಸಂಘ ತಿಳಿಸಿದೆ. ರಾಜ್ಯ ಗುತ್ತಿಗೆದಾರರ ಸಂಘ ಹೋರಾಟಕ್ಕೆ ಗ್ರೇಟರ್ ಬೆಂಗಳೂರು ನಗರ ಪಾಲಿಕೆಗಳ ಗುತ್ತಿಗೆದಾರರ ಸಂಘ ಬೆಂಬಲ ನೀಡುವುದಾಗಿ ತಿಳಿಸಿದೆ.

ತ್ರೈಮಾಸಿಕ ಕಂತಿನ ಅನುದಾನ ಬಿಡುಗಡೆ

ಗುತ್ತಿಗೆದಾರ ಹೋರಾಟದ ನಿರ್ಧಾರದ ನಡುವೆ ಗ್ರೇಟರ್ ಬೆಂಗಳೂರು ಪ್ರಾಧಿಕಾರ ವ್ಯಾಪ್ತಿಯ 2025–26ನೇ ಸಾಲಿನ ವಿಶೇಷ ಮೂಲಸೌಕರ್ಯ ಅಭಿವೃದ್ಧಿಗೆ ನಿಗದಿಪಡಿಸಿದ್ದ 3,000 ಕೋಟಿ ರೂ.ಗಳ ಅನುದಾನದಲ್ಲಿ ನಾಲ್ಕನೇ ಕಂತಾಗಿ 750 ಕೋಟಿ ರೂ.ಬಿಡುಗಡೆ ಮಾಡಿ ಸರ್ಕಾರ ಆದೇಶ ಹೊರಡಿಸಿದೆ. ರಾಜ್ಯ ಸರ್ಕಾರವು 2025–26ನೇ ಸಾಲಿನ ವಿಶೇಷ ಮೂಲಸೌಕರ್ಯಕ್ಕೆ ಬಂಡವಾಳ ಬೆಂಬಲ ಯೋಜನೆ ಅಡಿಯಲ್ಲಿ ಜಿಬಿಎಗೆ ಒಟ್ಟು 23,000 ಕೋಟಿ ರೂ. ಅನುದಾನವನ್ನು ನಿಗದಿ ಮಾಡಿತ್ತು. ಇದೀಗ ನಾಲ್ಕನೇ ಕಂತಿನಲ್ಲಿ 750 ಕೋಟಿ ರೂ.ಬಿಡುಗಡೆ ಮಾಡಲಾಗಿದ್ದು, ಸರ್ಕಾರ ಅನುಮೋದಿಸಿರುವ ಕ್ರಿಯಾ ಯೋಜನೆ ಕಾಮಗಾರಿಗಳಿಗೆ ಮಾತ್ರ ಈ ಹಣವನ್ನು ಬಳಕೆ ಮಾಡುವಂತೆ ಸೂಚಿಸಲಾಗಿದೆ. ಹೊಸ ಕಾಮಗಾರಿಗಳಿಗೆ ಈ ಅನುದಾನವನ್ನು ಬಳಸಬಾರದು ಎಂದು ಸ್ಪಷ್ಟನೆ ನೀಡಲಾಗಿದೆ. ಆದರೆ ಈಗ ಬಿಡುಗಡೆಯಾಗಿರುವುದು ಸರ್ಕಾರದ ತ್ರೈಮಾಸಿಕ ಕಂತಿನ ಅನುದಾನವೇ ಹೊರತು, ಜಿಬಿಎ ವ್ಯಾಪ್ತಿಯ ಗುತ್ತಿಗೆದಾರರ ಬಾಕಿ ಹಣವಲ್ಲ.ಪ್ರಮುಖವಾಗಿ 2020 ರಿಂದ ಬಾಕಿ ಇರುವ ಶೇ. 10 ರಷ್ಟು ಹಣವನ್ನು ಬಿಡುಗಡೆ ಮಾಡುವುದು ಈ ಹೋರಾಟದ ಪ್ರಮುಖ ಉದ್ದೇಶವಾಗಿದೆ ಜಿಬಿಎ ಗುತ್ತಿಗೆದಾರರ ಸಂಘ ತಿಳಿಸಿದೆ.

> ಈಗ ಬಿಡುಗಡೆಯಾಗಿರುವುದು ಸರ್ಕಾರದ ತ್ರೈಮಾಸಿಕ ಕಂತಿನ ಅನುದಾನವೇ ಹೊರತು, ಜಿಬಿಎ ವ್ಯಾಪ್ತಿಯ ಗುತ್ತಿಗೆದಾರರ ಬಾಕಿ ಹಣವಲ್ಲ.ಪ್ರಮುಖವಾಗಿ 2020 ರಿಂದ ಬಾಕಿ ಇರುವ ಶೇ. 10 ರಷ್ಟು ಹಣವನ್ನು ಬಿಡುಗಡೆ ಮಾಡುವುದು ಈ ಹೋರಾಟದ ಪ್ರಮುಖ ಉದ್ದೇಶವಾಗಿದೆ.
> ■ ಎನ್.ಚೇತನ್‌ಕುಮಾರ್, ಜಿಬಿಎ ಗುತ್ತಿಗೆದಾರ ಸಂಘದ ಪ್ರ.ಕಾರ್ಯದರ್ಶಿ

ಸರ್ಕಾರದಿಂದ ದಲಿತರಿಗೆ ಮೋಸ: ಬೆಲ್ಲದ್



ಬೆಂಗಳೂರು: ಎಸ್‌ಸಿಎಸ್‌ಪಿ–ಟಿಎಸ್‌ಪಿ ಹಣವನ್ನು ದಲಿತರಿಗೆ ಬಳಸದೆ ಗ್ಯಾರಂಟಿಗಳಿಗೆ ವಿನಿಯೋಗಿಸಿ ಸಿದ್ದರಾಮಯ್ಯ ಅವರ ಸರ್ಕಾರ ದಲಿತರಿಗೆ ಮೋಸ ಮಾಡಿದೆ. ಸರ್ಕಾರ ಹಗಲು ದರೋಡೆ ಮಾಡುತ್ತಿದೆ ಎಂದು ಎಂದು ವಿಧಾನಸಭೆಯ ಪ್ರತಿಪಕ್ಷದ ಉಪ ನಾಯಕ ಅರವಿಂದ ಬೆಲ್ಲದ್ ಆರೋಪಿಸಿದರು.

ಬಿಜೆಪಿ ರಾಜ್ಯ ಕಾರ್ಯಾಲಯದಲ್ಲಿ ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿ, ದಲಿತರು ಮತ್ತು ಹಿಂದುಳಿದವರ ಹೆಸರಿನಲ್ಲಿ ಅಧಿಕಾರಕ್ಕೆ ಬಂದ ಸಿದ್ದರಾಮಯ್ಯ ಅವರ ಸರ್ಕಾರ ದಲಿತರಿಗೆ ಏನು ಮಾಡದೇ ಹಗಲು ದರೋಡೆ ಮಾಡುತ್ತಿದೆ. ರಾಜ್ಯದ ಕಾಂಗ್ರೆಸ್ ಸರ್ಕಾರ 3 ವರ್ಷಗಳಿಂದ ಎಸ್‌ಸಿಎಸ್‌ಪಿ–ಟಿಎಸ್‌ಪಿಯಿಂದ 38,859 ಕೋಟಿ ರೂ.ಗಳನ್ನು ಗ್ಯಾರಂಟಿಗಳಿಗೆ ಬಳಸಿದೆ ಎಂದು ದೂರಿದರು.

ಈ ಬಾರಿಯ ಆಯವ್ಯಯದಲ್ಲಿ ದಲಿತರ ಹಣ ಬಳಸಿರುವುದನ್ನು ವಾಪಸ್ ಕೊಡಬೇಕು. ಇದರೊಂದಿಗೆ ದಲಿತರಿಗೆ ಹೊಸದಾಗಿಯೂ ಹಣ ಕೊಡಬೇಕು. ಎಸ್‌ಸಿ-ಎಸ್‌ಟಿ ನಿಗಮಗಳಿಗೆ ಆಯವ್ಯಯದಲ್ಲಿ ಕನಿಷ್ಠ 1 ಸಾವಿರ ಕೋಟಿ ನೀಡಬೇಕು. 7ಸಿ ಮೂಲಕ ದುರ್ಬಳಕೆಯಾಗುವುದನ್ನು ತಡೆಯಲು ಅದನ್ನು ತೆಗೆಯಬೇಕು. ದಲಿತರ ಹಣವನ್ನು ಗ್ಯಾರಂಟಿಗಳಿಗೆ ಬಳಸುವುದಿಲ್ಲ ಎಂಬ ವಾಗ್ದಾನ ಮಾಡಲಿ ಎಂದು ಆಗ್ರಹಿಸಿದರು.

ದಲಿತರ ಜನಸಂಖ್ಯೆ ಪ್ರಕಾರ ಇಲಾಖೆಯಿಂದ ವೆಚ್ಚ ಮಾಡಬೇಕು. ದಲಿತರ, ವನವಾಸಿಗಳ ಸಬಲೀಕರಣಕ್ಕೆ ಆದ್ಯತೆ ನೀಡಬೇಕು ಎಂಬ ನಿಯಮವಿದೆ. ಅವರಿಗಾಗಿ ಕುಡಿಯುವ ನೀರು, ಆರೋಗ್ಯ, ಶಿಕ್ಷಣ, ಯೋಜನೆಗಳಿಗೆ ಉಪಯೋಗ ಮಾಡಬೇಕು. ಆದರೆ ಇವರು ಗ್ಯಾರಂಟಿಗೆ ಹಣ ಬಳಸಿದ್ದಾರೆ. ದಲಿತರಿಗೆ ಮಾತ್ರ ಬಳಕೆಯಾಗಬೇಕಾದ ಹಣ ಸವರ್ಣೀಯರಿಗೆ, ಅಲ್ಪಸಂಖ್ಯಾತರಿಗೆ ಬಳಕೆಯಾಗುತ್ತಿರುವುದು ಎಷ್ಟು ಸರಿ ಎಂದು ಪ್ರಶ್ನಿಸಿದರು.


ಕಳೆದ ಬಾರಿಯ ಆಯವ್ಯಯದಲ್ಲೂ ಎಸ್‌ಸಿಎಸ್‌ಪಿ–ಟಿಎಸ್‌ಪಿಗೆ 42,018 ಕೋಟಿ ರೂ. ಇಡಲಾಗಿತ್ತು. ಆದರೆ, ಅದನ್ನೂ ಸರಿಯಾಗಿ ಬಳಸಲಿಲ್ಲ, ಹಣ ದುರುಪಯೋಗ ಮಾಡಿದರೆ ಶಿಕ್ಷೆ ಕೊಡಬೇಕು ಎಂದು ಕಾನೂನು ಇದೆ. ಹಾಗಾದರೆ, ಸಿದ್ದರಾಮಯ್ಯ ಅವರೇ ನಿಮ್ಮನ್ನು ಜೈಲಿಗೆ ಹಾಕಬೇಕಾ, ಸಚಿವರನ್ನು ಜೈಲಿಗೆ ಹಾಕಬೇಕಾ? ಇದಕ್ಕೆ ಉತ್ತರ ಕೊಡಿ ಎಂದರು.

ನಿಗಮಗಳಿಗೆ ಎಷ್ಟು ಹಣ ಕೊಟ್ಟಿದ್ದೀರಿ?

ಸರ್ಕಾರದಲ್ಲಿ ದಲಿತರಿಗೆ ಸಂಬಂಧಿಸಿದ ಹಲವು ನಿಗಮಗಳಿವೆ. ಅಂಬೇಡ್ಕರ್ ನಿಗಮ, ಆದಿ ಜಾಂಬವ ನಿಗಮ. ವಾಲ್ಮೀಕಿ ನಿಗಮ, ತಾಂಡಾ ಅಭಿವೃದ್ಧಿ ನಿಗಮ, ಲಿಡ್ಕರ್, ಸಫಾಯಿ, ಅರೆ ಅಲೆಮಾರಿ ಹೀಗೆ ಬಹಳಷ್ಟಿವೆ. ಇವಕ್ಕೆಲ್ಲ ಎಷ್ಟು ಹಣ ಕೊಟ್ಟಿದ್ದೀರಿ ಎಂಬುದನ್ನು ಹೇಳಿ. ಕೊಡದೇ ಇದ್ದರೂ ದಲಿತ ಶಾಸಕರು ಏಕೆ ಸುಮ್ಮನೆ ಇದ್ದಾರೆ ಎಂದು ಹೇಳಿದರು.

ರಾಜ್ಯದಲ್ಲಿ 5 ದಿನ ಶುಷ್ಕ ವಾತಾವರಣ

ಬಿಸಿಲಿನ ಝಳಕ್ಕೆ ಬೆಳಗಾವಿ ಹೈರಾಣ



▸ಬಾಳಗೌಡ ಪಾಟೀಲ

ಬೆಳಗಾವಿ: ರಾಜ್ಯದಲ್ಲಿ ಕಳೆದೊಂದು ವಾರದಿಂದ ಬಿಸಿಲು ವ್ಯಾಪಕವಾಗಿದ್ದು, ತಾಪಮಾನದಲ್ಲಿ ಗಣನೀಯವಾಗಿ ಏರಿಕೆ ಕಂಡಿದೆ. ಒಣ ಹವೆ ಮುಂದುವರಿಯಲಿದ್ದು, ರಾಜ್ಯದಲ್ಲಿ ಮುಂದಿನ 5 ದಿನ ಶುಷ್ಕವಾತಾವರಣ ಇರಲಿದೆ ಎಂದು ಹವಾಮಾನ ಇಲಾಖೆ ಎಚ್ಚರಿಕೆ ನೀಡಿದ್ದು, ಎಲ್ಲೂ ಮಳೆ ಬರುವ ಸೂಚನೆಗಳಿಲ್ಲ ಎಂದು ಹೇಳಲಾಗಿದೆ. ಒಣ ಹವೆ ಹೆಚ್ಚಾಗಿರುವುದರಿಂದ ಗಡಿ ಜಿಲ್ಲೆ ಬೆಳಗಾವಿ ಜನತೆ ಬಿಸಿಲಿನ ಝಳಕ್ಕೆ ಹೈರಾಣ ಆಗಿದ್ದಾರೆ.

ಕಲಬುರಗಿ, ರಾಯಚೂರು, ಬಳ್ಳಾರಿ, ಬೀದರ್, ವಿಜಯಪುರ ಜಿಲ್ಲೆಗಳಲ್ಲಿ ತಾಪಮಾನ ಏರಿಕೆ ಕಾಣಲಿದೆ ಎಂದು ಹವಾಮಾನ ಇಲಾಖೆ ಸೂಚನೆ ನೀಡಿದೆ. ಈ ಜಿಲ್ಲೆಗಳಲ್ಲಿ 35 ರಿಂದ 37 ಡಿಗ್ರಿ ಸೆಲ್ಸಿಯಸ್‌ವರೆಗೆ ತಾಪಮಾನ ದಾಖಲಾಗಬಹುದು ಎಂದು ನಿರೀಕ್ಷಿಸಲಾಗಿದೆ. ಬೆಳಗಾವಿ ಜಿಲ್ಲೆಯ ಬಹುಭಾಗ ತಂಪಾದ ಹವಾಮಾನದಿಂದಲೇ ಪ್ರಸಿದ್ಧಿ ಪಡೆದಿದೆ.

ದಿಗಂತ ವಿಶೇಷ

ಇಲ್ಲಿನ ಆಹ್ಲಾದಕರ ವಾತಾವರಣದ ಹಿನ್ನೆಲೆಯಲ್ಲಿ ಇತರ ಜಿಲ್ಲೆಗಳಿಂದ ಉದ್ಯೋಗದ ನಿಮಿತ್ತ ಬೆಳಗಾವಿಗೆ ಬಂದವರು ಇಲ್ಲೇ ನೆಲೆಯೂರಲು ಬಯಸುತ್ತಾರೆ. ಆದರೆ, ಪ್ರಸಕ್ತ ವರ್ಷ ಹವಾಮಾನ ಬದಲಾವಣೆ ಬೆಳಗಾವಿಗರಲ್ಲಿ ಆತಂಕ ಹುಟ್ಟಿಸುವಂತಿದೆ.

ಸಾಮಾನ್ಯವಾಗಿ ಬೆಳಗಾವಿಯಲ್ಲಿ ಬೇಸಿಗೆ ಆರಂಭದ ಅವಧಿಯಾದ ಮಾರ್ಚ್ ತಿಂಗಳ ಮೊದಲ ವಾರದಲ್ಲಿ ಸರಾಸರಿ ಗರಿಷ್ಠ ಉಷ್ಣಾಂಶ 30–32 ಡಿಗ್ರಿ ಇರುತ್ತಿತ್ತು. ಆದರೆ, ಈ ಬಾರಿ ಫೆಬ್ರವರಿ ಮೊದಲ ವಾರದಲ್ಲೇ ಗರಿಷ್ಠ ಉಷ್ಣಾಂಶ 35 ಡಿಗ್ರಿ ದಾಟಿದೆ.

ಉಷ್ಣಾಂಶ ಏರಿಕೆ ಪ್ರಮಾಣ

ದಿನಾಂಕ	ಗರಿಷ್ಠ ಉಷ್ಣಾಂಶ
ಫೆ.2	29.6 ಡಿಗ್ರಿ
ಫೆ.3	30.6 ಡಿಗ್ರಿ
ಫೆ.4	32.4 ಡಿಗ್ರಿ
ಫೆ.5	33.0 ಡಿಗ್ರಿ
ಫೆ.6	33.8 ಡಿಗ್ರಿ
ಫೆ.7	35.2 ಡಿಗ್ರಿ

> ಉತ್ತಮ ಎಳೆನೀರು ಈಗಾಗಲೇ 40 ರಿಂದ 60 ರೂ.ಗಳ ವರೆಗೆ ಮಾರಾಟ ಮಾಡಲಾಗುತ್ತಿದೆ. ಬಿಸಿಲು ಹೆಚ್ಚಾದಂತೆಯೇ ತಂಪು ಪಾನೀಯಗಳ ಬೆಲೆಯು ಹೆಚ್ಚಾಗಲಿದೆ. ಜನತೆಯು ಬೇಸಿಗೆಯಲ್ಲಿ ಆಹಾರಕ್ಕಿಂತ ಹೆಚ್ಚಾಗಿ ನೈಸರ್ಗಿಕ ತಂಪು ಪಾನೀಯಗಳ ಹೆಚ್ಚು ಸೇವನೆ ಮಾಡುತ್ತಿದ್ದಾರೆ. ಹಾಗಾಗಿ ಎಳನೀರುಗಳ ಬೆಲೆ ಏರಿಕೆಯಾಗಿದೆ.
> ■ ಸಿದ್ದಪ್ಪ, ಎಳನೀರು ವ್ಯಾಪಾರಿ, ಬೆಳಗಾವಿ ನಗರ



ಮಾರ್ಚ್‌ನಲ್ಲಿ ಹೆಚ್ಚಾಗಲಿದೆ ತಾಪಮಾನ

ಬೆಳಗಾವಿ ನಗರದಲ್ಲಿ ಮಾರ್ಚ್ ಎರಡನೇ ವಾರವೂ ಬಿಸಿಲಿನ ಝಳ ಹೆಚ್ಚಾಗಲಿದೆ. ಈ ಪರಿಣಾಮ ಜನರ ಆರೋಗ್ಯದ ಮೇಲೂ ಪರಿಣಾಮ ಬೀರುವ ಸಾಧ್ಯತೆ ಇದ್ದು, ಆರೋಗ್ಯ ಇಲಾಖೆ ಕೂಡಾ ಎಚ್ಚರಿಕೆಯಿಂದ ಇರುವಂತೆ ಸೂಚನೆ ನೀಡಿದೆ. ಬೆಳಗ್ಗೆ 11ರಿಂದ ಸಂಜೆ 4 ಗಂಟೆಯವರೆಗೆ ಅಗತ್ಯ ಇಲ್ಲದಿದ್ದರೆ, ಮನೆಯಿಂದ ಹೊರ ಹೋಗದಂತೆ ಸೂಚನೆ ನೀಡಲಾಗಿದೆ. ಈ ಸಮಯದಲ್ಲಿ ನಿರಂತರ ನೀರು, ತಂಪು ಪಾನೀಯ, ಆರೋಗ್ಯಕರ ಆಹಾರ ಸೇವಿಸಿದರೆ ಉತ್ತಮ ಎಂದು ಸಲಹೆ ನೀಡಿದ್ದಾರೆ. ಇದರಿಂದಾಗಿ ಜನತೆಯೂ ತಂಪಾದ ಪಾನೀಯಗಳ ಮೊರೆ ಹೋಗುತ್ತಿರುವುದರ ಜೊತೆಗೆ ಸ್ವಯಂ ರಕ್ಷಣೆ ಮಾಡಿಕೊಳ್ಳುತ್ತಿದ್ದಾರೆ.

ಬಿಸಿ ಝಳದ ಅನುಭವ

ಸಾಮಾನ್ಯವಾಗಿ ಏಪ್ರಿಲ್-ಮೇ ತಿಂಗಳಲ್ಲಿ ಬೆಳಗಾವಿಯ ತಾಪಮಾನ 39 ಡಿಗ್ರಿವರೆಗೂ ಏರಿಕೆಯಾಗುತ್ತದೆ. ಆದರೆ, ಫೆಬ್ರವರಿ ಮೊದಲ ವಾರದಲ್ಲಿ 35 ಡಿಗ್ರಿ ದಾಟುವುದು, ಮಾರ್ಚ್‌ನಲ್ಲಿ ಇನ್ನು ಹೆಚ್ಚಿಗೆಯಾಗುವ ಸಾಧ್ಯತೆ ಇದೆ ಎಂದು ಹೇಳಲಾಗುತ್ತಿದೆ. ಜಾಗತಿಕ ತಾಪಮಾನ ಏರಿಕೆಯಾಗಲಿದೆ.



> ಕಳೆದ ಬಾರಿಗಿಂತ ಈ ಬಾರಿ ಹೆಚ್ಚಿನ ಪ್ರಮಾಣದ ಬಿಸಿಲು ಇದ್ದು, ಬಿಸಿಲಿನ ಝಳಕ್ಕೆ ಮನೆ ಬಿಟ್ಟು ಹೊರಗಡೆ ಓಡಾಡುವುದಕ್ಕೂ ಆಗುತ್ತಿಲ್ಲ. ಮಕ್ಕಳು, ವೃದ್ಧರು ಬಿಸಿಲಿನ ತಾಪಮಾನಕ್ಕೆ ಹೈರಾಣ ಆಗುತ್ತಿದ್ದಾರೆ. ಇನ್ನು ಮಹಿಳೆಯರಂತೂ ಮನೆಯಿಂದ ಹೊರಗಡೆ ಹೋಗಬೇಕಾದರೆ ಸ್ವಯಂ ರಕ್ಷಣೆ ಮಾಡಿಕೊಂಡು ತೆರಳಬೇಕಾಗುತ್ತಿದೆ.
> ■ ದೀಪಾ ಪಾಟೀಲ, ಸಾಮಾಜಿಕ ಕಾರ್ಯಕರ್ತೆ

ಸಂಪಾದಕೀಯ

ಭಾರತಕ್ಕೂ ತಟ್ಟಲಿದೆ ಯುದ್ಧದ ಪರಿಣಾಮ

ಯಾವುದೇ ಯುದ್ಧದ ಪರಿಣಾಮವು ಈಗ ಸಮರಗ್ರಸ್ತ ಪ್ರದೇಶಕ್ಕಷ್ಟೇ ಸೀಮಿತವಾಗಿರುವುದಿಲ್ಲ, ಸಮರನಿರತರಷ್ಟೇ ಪರಿಣಾಮ ಎದುರಿಸುವುದೂ ಅಲ್ಲ. ಜಗತ್ತೇ ಒಂದು ಮನೆಯಂತಾಗಿರುವ ಈ ಸಂದರ್ಭದಲ್ಲಿ ಯಾವುದೇ ಮೂಲೆಯಲ್ಲಿ ನಡೆಯುವ ಯುದ್ಧವು ಮತ್ತಾವುದೋ ಪ್ರದೇಶದ ಜನಜೀವನದ ಮೇಲೆ ಪರಿಣಾಮ ಬೀರುತ್ತದೆ. ಈಗಲೂ ಅಷ್ಟೇ, ಕೊಲ್ಲಿಯಲ್ಲಿ ನಡೆಯುತ್ತಿರುವ ಯುದ್ಧದಲ್ಲಿ ಭಾರತವು ಯಾರದೇ ಪಕ್ಷ ವಹಿಸದೆ ತಟಸ್ಥವಾಗುಳಿದಿದ್ದರೂ ಯುದ್ಧದ ಪರಿಣಾಮಗಳು ಭಾರತವನ್ನೂ ಕಾಡುವುದು ನಿಶ್ಚಿತವಾಗಿದೆ. ಅದರಲ್ಲಿಯೂ ತೈಲ ಪೂರೈಕೆಯ ಕೇಂದ್ರವಾಗಿರುವ ಹಾಗೂ ಜಾಗತಿಕ ನೌಕಾ ಯಾನದ ಪ್ರಮುಖ ಕೊಂಡಿಯಾಗಿರುವ ಕೊಲ್ಲಿ ಪ್ರದೇಶದಲ್ಲಿ ಸಮರ ನಡೆಯುತ್ತಿರುವುದರಿಂದ ವಿಶ್ವದ ಎಲ್ಲಾ ದೇಶಗಳ ಮೇಲೂ ಅದರ ಪರಿಣಾಮ ಎದುರಾಗಲಿರುವುದು ಖಂಡಿತ.



ಈಗಂತೂ ಇರಾನ್ ಕೊಲ್ಲಿಯ ಎಲ್ಲಾ ದೇಶಗಳನ್ನು ಯುದ್ಧದ ಪರಿಧಿಯೊಳಗೆ ಸೆಳೆದುಕೊಂಡಿದೆ. ಸೌದಿ, ಬಹರೇನ್, ಯುಎಇ, ಟರ್ಕಿ, ಅಜರ್‌ಬೈಜಾನ್ ಮೊದಲಾದ ದೇಶಗಳೆಡೆಗೂ ಕ್ಷಿಪಣಿಗಳನ್ನು ಪ್ರಯೋಗಿಸಿದೆ. ತಾನು ನಾಶವಾಗುವುದಾದಲ್ಲಿ, ಇತರರನ್ನೂ ನಾಶಮಾಡಿಯೇ ಹೋಗುವುದು ಎಂಬಂತಹ ಧೋರಣೆಯನ್ನು ಪ್ರದರ್ಶಿಸುತ್ತಿದೆ.

ಯುದ್ಧದಲ್ಲಿ ನೇರ ಪಾಲುದಾರನಲ್ಲದಿದ್ದರೂ ಭಾರತವು ಅದರ ಪರೋಕ್ಷ ಪರಿಣಾಮಗಳನ್ನು ಅನುಭವಿಸುವುದು ಅನಿವಾರ್ಯವಾಗಿದ್ದು, ಅದನ್ನು ನಿಭಾಯಿಸಲು ಮುಂಜಾಗ್ರತಾ ಕ್ರಮ ಕೈಗೊಳ್ಳುವುದು ಈಗಿನ ಅಗತ್ಯವಾಗಿದೆ. ಮೊತ್ತಮೊದಲಾಗಿ ಕೊಲ್ಲಿಯಲ್ಲಿರುವ ಭಾರತೀಯರ ರಕ್ಷಣೆ ಆದ್ಯತೆಯಾಗಿದ್ದು, ಈ ನಿಟ್ಟಿನಲ್ಲಿ ಸರಕಾರವು ಈಗಾಗಲೇ ಸೂಕ್ತ ಕ್ರಮಗಳನ್ನು ಕೈಗೊಂಡಿರುವುದು, ಲಭ್ಯ ವಿಮಾನಗಳಲ್ಲಿ ಸಾಧ್ಯವಾದಷ್ಟು ಮಂದಿಯನ್ನು ಕರೆತರುತ್ತಿರುವುದು ಸ್ವಾಗತಾರ್ಹ. ಕೊಲ್ಲಿಯಲ್ಲಿರುವ ಲಕ್ಷಾಂತರ ಭಾರತೀಯರಿಂದ ಅವರ ಸುರಕ್ಷತೆಯು ಸದ್ಯಕ್ಕೆ ಮುಖ್ಯವಾಗಿ ಆಗಿದೆ.

ಕೊಲ್ಲಿ ಬಿಕ್ಕಟ್ಟಿನಿಂದಾಗಿ ತೈಲ ಪೂರೈಕೆಯಲ್ಲಿ ಕೊರತೆಯಾಗುವುದೂ ಖಂಡಿತ. ಹಾರ್ಮುಜ್ ಜಲಸಂಧಿಯಲ್ಲಿ ಸಂಚಾರ ಬಹುತೇಕ ಸ್ಥಗಿತವಾಗಿರುವುದರಿಂದ ತೈಲ ಪೂರೈಕೆ ಕಷ್ಟವಾಗಿದೆ. ಯುದ್ಧ ದೀರ್ಘವಾದಷ್ಟೂ ಸಮಸ್ಯೆ ಹೆಚ್ಚು. ಸದ್ಯಕ್ಕೆ ಭಾರತವು ಹಲವಾರು ದಿನಗಳಿಗಾಗುವಷ್ಟು ಮೀಸಲು ತೈಲ ಸಂಗ್ರಹ ಹೊಂದಿರುವುದು ಸಮಾಧಾನಕರ. ತದ್ವತ್, ರಷ್ಯಾವು ಭಾರತದ ತೈಲ ಸಮಸ್ಯೆ ನಿಭಾಯಿಸಲು ತೈಲ ಪೂರೈಕೆ ಮಾಡುವ ಭರವಸೆ ನೀಡಿರುವುದು ಕೂಡಾ ನಿರಾಳತೆ ತರುವ ವಿಚಾರ. ಇದರಲ್ಲದೆ, ಜನರು ಕೂಡಾ ಪೆಟ್ರೋಲಿಯಂ ತೈಲಗಳ ಬಳಕೆಯಲ್ಲಿ ತುಸು ಮಿತವ್ಯಯ ಸಾಧಿಸುವುದು ಅಗತ್ಯವಾಗಿದೆ. ಬಿಕ್ಕಟ್ಟಿನ ಸಂದರ್ಭದಲ್ಲಿ ರಾಷ್ಟ್ರಹಿತಕ್ಕೆ ಪೂರಕವಾಗುವ ಕ್ರಮಗಳನ್ನು ಅನುಸರಿಸಬೇಕಾಗಿದೆ.

ಹೊರ್ಮುಜ್ ಜಲಸಂಧಿಯಲ್ಲಿ ನೌಕೆಗಳ ಸಂಚಾರಕ್ಕೆ ಅಡ್ಡಿ ಬಂದಿರುವುದರಿಂದ ಪೆಟ್ರೋಲಿಯಂ ತೈಲ ಪೂರೈಕೆ ಮಾತ್ರವಲ್ಲದೆ ಇನ್ನಿತರ ಹಲವಾರು ಜೀವನಾವಶ್ಯಕ ವಸ್ತುಗಳ ಪೂರೈಕೆಗೂ ಅಡ್ಡಿಯಾಗಬಹುದು. ಪಾಮ್ ಆಯಿಲ್, ಸೂರ್ಯಕಾಂತಿ ಎಣ್ಣೆ, ಸೋಯಾಬೀನ್ ತೈಲ ಮೊದಲಾದವು ಕೂಡಾ ಭಾರತಕ್ಕೆ ವಿದೇಶಗಳಿಂದ ಆಮದಾಗುತ್ತವೆ. ಕೆಲವಾರು ಕಠಿಣ ರಸಾಯನಗಳು, ರಸಗೊಬ್ಬರಗಳು, ಪ್ಲಾಸ್ಟಿಕ್‌ಗಳು, ಔಷಧ ವಸ್ತುಗಳು ಕೂಡಾ ಪೂರೈಕೆಯಲ್ಲಿ ವ್ಯತ್ಯಯವಾಗುವ ಸಾಧ್ಯತೆಗಳಿವೆ. ಅದೇರೀತಿ, ಭಾರತದ ಕೆಲವು ರಫ್ತಿನ ಮೇಲೂ ದುಷ್ಪರಿಣಾಮವಾಗಲಿದೆ. ಇವೆಲ್ಲ ಪ್ರತಿಕೂಲ ಪರಿಣಾಮ ಗಳನ್ನು ಸಮರ್ಥವಾಗಿ ನಿಭಾಯಿಸಲು ದೇಶವು ಸನ್ನದ್ಧವಾಗಿರುವುದು ಅಗತ್ಯವಾಗಿದೆ.

ಖಮೇನಿಗೆ ಆಯಸ್ಸು ತುಂಬಿದ್ದೇ ಜಗತ್ತಿನ ಒಳ್ಳೆತನ!



• ಸಂತೋಷ್ ತಮ್ಮಯ್ಯ
santoshthammaiah@gmail.com

ಹದಿನೆಂಟನೆ ಶತಮಾನದ ಮಹತ್ತ್ವದ ಕವಿ ಪಿ.ಬಿ ಶೆಲ್ಲಿಯ 'ಓಜಿಮಂಡಿಯಾಸ್' (Ozymandias) ಕವನವನ್ನು ಕಾಲೇಜು ಮೆಟ್ಟಿಲೇರಿದವರಂತೂ ಓದಿಯೇ ಇರುತ್ತಾರೆ. ಕ್ರಿ.ಪೂ 13ನೇ ಶತಮಾನದ ಈಜಿಪ್ಟಿನ ರಾಜ ಎರಡನೆಯ ರಾಮೆಸೆಸ್ ಕುರಿತು ಶೆಲ್ಲಿ ಬರೆದ ಕವನ ಇಂದಿಗೂ ವಿಮರ್ಶೆಗೊಳಪಡುತ್ತಲೇ ಇದೆ. ಮರಳುಗಾಡಿನಲ್ಲಿ ದಾರಿಹೋಕನೊಬ್ಬ ಯಾವುದೋ ಕಾಲದಲ್ಲಿ ಶ್ರದ್ಧೆಯಿಂದ ಕೆತ್ತಿದ ಮೂರ್ತಿಯೊಂದನ್ನು ಕಾಣುತ್ತಾನೆ. ಅದರ ಅಂಗಾಂಗಗಳು ಮುರಿದಿವೆ. ರುಂಡರಹಿತವಾದ ಪ್ರತಿಮೆಯ ಕಾಲುಗಳೆರಡು ಮರಳಿನಲ್ಲಿ ಹೂತಿವೆ. ಅದರ ಪೀಠದಲ್ಲಿ "ನಾನು ಓಜಿಮಂಡಿಯಾಸ್, ಅರಸರ ಅರಸ. ಇದು ನಾನು ಸೃಷ್ಟಿಸಿದ ಮಹಾ ಸಾಮ್ರಾಜ್ಯ. ಎಲ್ಲರೂ ನನ್ನ ವೈಭವವನ್ನು ನೋಡಿ ಹೊಟ್ಟೆ ಉರಿದುಕೊಳ್ಳಿ" ಎಂಬ ಬರಹವಿರುತ್ತದೆ. ಆದರೆ ಕಣ್ಣುಹಾಯಿಸಿದಷ್ಟು ದೂರವೂ ಮರಳುಗಾಡು! ಅಹಂಕಾರದ ನಶ್ವರತೆ, ಕಾಲದ ಅನಿಶ್ಚಿತತೆಗಳನ್ನು ರೂಪಕದ ಮೂಲಕ ಕಟ್ಟಿಕೊಡುವ ಶೆಲ್ಲಿ ಕಾಲಕಾಲಕ್ಕೆ ಬದಲಾದ ಭೂರಾಜಕೀಯ ಮತ್ತು ಸ್ಥಿತ್ಯಂತರಗಳನ್ನು ಓಜಿಮಂಡಿಯಾಸ್ ಮೂಲಕ ನೆನಪಿಸುತ್ತಾನೆ.

ಬಹುಶ ಶೆಲ್ಲಿ ಈ ಕಾಲಘಟ್ಟದಲ್ಲಿ ಬದುಕಿದ್ದರೂ ಓಜಿಮಂಡಿಯಾಸ್ ಬರೆದಿರುತ್ತಿದ್ದ! ಈಜಿಪ್ಟಿನ ಮರಳುಗಾಡಿನಲ್ಲಿ ಕಂಡ ಚಿತ್ರಣವನ್ನು ಆತ ಇರಾನಿನ ಮರಳುಗಾಡಿನಲ್ಲೂ ಕಾಣುತ್ತಿದ್ದ. ರಾಮೆಸೆಸ್ ರಾಜನಂತೆ ಕೊಬ್ಬಿನಿಂದ "ನಾನು ಷಾಗಳ ಷಾ" ಎಂದಬ್ಬರಿಸಿ, ಮಾಡಬಾರದ ಅನಾಚಾರಗಳನ್ನು ಮಾಡಿ, ಜಗತ್‌ಕಂಟಕನಾಗಿ ಮೆರೆದು ಕೊನೆಗೆ ನಾಯಿಯಂತೆ ಸತ್ತ ಆಯತುಲ್ಲಾಹ್ ಖಮೇನಿಯನ್ನು ಅಧಿಕಾರದ ನಶ್ವರತೆ, ಪ್ರಕೃತಿಯ ಅಧಿಪತ್ಯ ಮತ್ತು ಅಹಂಕಾರದ ನಾಶಕ್ಕೆ ಉದಾಹರಣೆಯಾಗಿ ಬಳಸುತ್ತಿದ್ದ. ಅದರ ಜೊತೆಗೆ ಮತಾಂಧತೆಯ ಹುಚ್ಚುತನ ಎಂಬ ಇನ್ನೊಂದೆರಡು ಸಾಲುಗಳನ್ನೂ ಜೋಡಿಸಿರುತ್ತಿದ್ದ!

1979ರಿಂದ ನಿನ್ನೆಮೊನ್ನೆಯವರೆಗೆ 'ಷಾಗಳ ಷಾ' ಎನ್ನುತ್ತಿದ್ದ ಖಮೇನಿಯ ಚಿಂತನೆಗಳಿಗೆ ತಡವಾಗಿಯಾದರೂ ಜಗತ್ತು ಮದ್ದನ್ನು ಕಂಡುಕೊಂಡಿದೆ. ಇರಾನ್, ಪರ್ಷಿಯಾ ಆಗುವತ್ತ ಸಾಗುತ್ತಿದೆ ಎನ್ನುವಲ್ಲಿಯವರೆಗೆ ಕ್ಷಿಪಣಿಗಳು ಆರ್ಭಟಿಸುತ್ತಿವೆ. ಯುದ್ಧ ಕಾಲದಲ್ಲಿ ಹುಟ್ಟುವ ಎಗ್ಗಿಲ್ಲದ ಆಲೋಚನೆಗಳೆಲ್ಲವೂ ಇಂದು ಇರಾನ್ ಕೇಂದ್ರಿತವಾಗಿಯೇ ನೆಟ್ಟಿದೆ. ಗಡಿಗಳು ಅಳಿಯುವವೇ? ಹೊಸ ಗಡಿ ನಿರ್ಮಾಣವಾಗುತ್ತದೆಯೇ? ಹೊಸ ಶಕ್ತಿಯ ಅವತಾರವಾಗುತ್ತದೆಯೇ? ಪರಿಣಾಮವನ್ನು ದಕ್ಕಿಸಿಕೊಳ್ಳುವ ಸಾಮರ್ಥ್ಯ ಯಾರಿಗೆಲ್ಲಾ ಇದೆ? ಚೆಂದ ನೋಡುತ್ತಾ ಕುಳಿತವರಾರು? ಬೆಂಕಿ ಕಾಯಿಸಿಕೊಳ್ಳುತ್ತಿರುವವರಾರು?-ಇಂಥ ಲಗಾಮಿಲ್ಲದ ಚಿಂತನೆಗಳು ಅರ್ಧಗಂಟೆಯ ಟಿ.ವಿ ಚರ್ಚೆಯನ್ನು ನೋಡಿದ ಮನುಷ್ಯನಲ್ಲೂ ಹುಟ್ಟುತ್ತಿವೆ. ಅದಕ್ಕೆ ಆರ್ಭಟದ ಸದ್ದಿಗೆ ಕಿವಿ ನೆಡುವ ಮಾನವಸಹಜ ಗುಣವೆನ್ನಬೇಕೋ, ಮನುಷ್ಯನ ಕದನ ಕುತೂಹಲವೆನ್ನಬೇಕೋ ತಿಳಿಯದು. ಆದರೆ ಹುಟ್ಟುವ ಎಲ್ಲಾ ಚಿಂತನೆಗಳು, ಸತ್ತ ಖಮೇನಿಗಾಗಿ ಕರಳುಹಿಂಡುವಂತೆ ಅತ್ತವರಲ್ಲಿ ನಿಲ್ಲುತ್ತವೆ.



ಅಳುವವರ ಪಾಲಿಗೆ ಖಮೇನಿ ಧರ್ಮ ಗುರು. ಆದರೆ ಖಮೇನಿ ಸಾಯುವ ಹಿಂದಿನ ದಿನವರೆಗೂ ಅವರೆಲ್ಲರೂ ಅಮೆರಿಕಾ ಮತ್ತು ಇಸ್ರೇಲನ್ನು ಬಂಡವಾಳಶಾಹಿ ದೇಶಗಳ ಆಕ್ರಮಣಕಾರಿ ಧೋರಣೆ, ತೈಲ ರಾಜಕೀಯ, ಎಕನಾಮಿಕ್ ಹಿಟ್ಮನ್ ಗುಣ ಎಂದು ಟೀಕಿಸುತ್ತಿದ್ದರು! ಈ ಕಾರಣಗಳಿಂದ ಇರಾನ್ ಮೇಲೆ ದಾಳಿ ನಡೆದಿದೆ ಎನ್ನುವುದಾದರೆ ಖಮೇನಿ ಇರಾನಿನ ರಾಜಕೀಯ ಮುಖಂಡ ಮಾತ್ರ. ಆದರೆ ಸಾವಿಗೆ ಅಳುವವರದ್ದು ಶುದ್ಧ ಮತೀಯ ಶೋಕ! ಇದೇನು ವಿಚಿತ್ರ? ಕೆಲ ತಿಂಗಳ ಹಿಂದಿನವರೆಗೂ ಟಾರಿಫ್ ಹೇರಿದ ಟ್ರಂಪನನ್ನು ಅರೆಹುಚ್ಚ ಎಂದು ನಿಂದಿಸಿದ್ದವರೆಲ್ಲರೂ ಆತನ ಇರಾನ್ ವಿರುದ್ಧ ಹೇಳಿಕೆಗಳನ್ನೂ ಟೀಕಿಸಿದ್ದರು! ಟಾರಿಫ್ ಕಾರಣಕ್ಕೆ ಖಳನಾಗಿದ್ದ ಟ್ರಂಪ್, ಖಮೇನಿಯನ್ನು ಕೊಂದ ಕಾರಣಕ್ಕೆ ಹೀರೋ ಆಗಿಬಿಟ್ಟಿದ್ದಾನೆ! ಕೆಲವರು ಟ್ರಂಪನ ಹುಚ್ಚಾಟಗಳನ್ನು ಟೀಕಿಸಲು ಒಂದು ಹಂತದಲ್ಲಿ ಖಮೇನಿಗಾಗಿಯೂ ಮರುಗಿದ್ದರು. ಆದರೆ ಮಧ್ಯಪ್ರಾಚ್ಯದ ಅರಬ್ ರಾಷ್ಟ್ರೀಯತೆ, ಸರ್ವಾಧಿಕಾರದ ಹಿಂದಿನ ಮತೀಯ ಉದ್ದೇಶಗಳ ಹಿನ್ನೆಲೆ ತಿಳಿದವರಿಗೆ ಇಂದು ಉದುರಿದ ಕಣ್ಣೀರು ಆಶ್ಚರ್ಯ ತರಿಸುತ್ತಿಲ್ಲ. ಏಕೆಂದರೆ ಸುಮಾರು ನೂರು ವರ್ಷದ ಹಿಂದೆ ಕೂಡ ಹೀಗೆಯೇ ರಾಜಕೀಯ ನಾಯಕನ ಮುಸುಕು ಧರಿಸಿದ ಮತೀಯ ನಾಯಕನ ಸ್ಥಾನಪಲ್ಲಟಕ್ಕಾಗಿ ಭಾರತ ಎರಡಾಗಿತ್ತೆಂಬುದು ಕೆಲವರಿಗಾದರೂ ತಿಳಿದಿದೆ. ಖಮೇನಿಯಂತೆ ಅಂದು ಖಲೀಫನಿಗಾಗಿ ಬೆಂಕಿ ಹಚ್ಚಿ, ದ್ವಿರಾಷ್ಟ್ರವಾದದ ಬೀಜ ಬಿತ್ತಿ, ಗಾಂಧಿಯಂಥವರ ಬೆಂಬಲ ಪಡೆದು ದೇಶ ಒಡೆದು ಇಂದಿಗೂ ಅದು ವ್ರಣವಾಗಿ ಕಾಡುತ್ತಿದೆ. ಇಂದು ಖಮೇನಿಗಾಗಿ ಮಿಡಿದಂತೆ ಅಂದು ಹೃದಯಗಳು ಖಲೀಫನಿಗಾಗಿ ಮಿಡಿದಿತ್ತೆಂಬ ಇತಿಹಾಸ ನೆನಪಿರುವವರಿಗೆ ಈ ಅಳು ಕೇವಲ ಅಳುವಲ್ಲ, ಅದು ಭಯಾನಕವಾದ ಅಪಶಕುನ.

ಖಮೇನಿ ಮತೀಯ ಗುರುವೋ, ರಾಜಕೀಯ ನಾಯಕನೋ ಎಂಬ ಪ್ರಶ್ನೆಗೆ ಉತ್ತರವನ್ನು ಬ್ರಹ್ಮವಿದ್ಯೆಯಿಂದೇನೂ ಪಡೆಯಬೇಕಾಗಿಲ್ಲ. ಖಮೇನಿಯ ಆಡಳಿತದಲ್ಲೇ ಅದರ ಲಕ್ಷಣಗಳು ಎದ್ದುಕಾಣುತ್ತಿದ್ದವು. ಖಮೇನಿ ತನ್ನ ಕನಸಿನ ಇಸ್ಲಾಮಿಕ್ ಸ್ಟೇಟ್‌ಗಾಗಿ ಐದು ಅಂಶಗಳ ಕಾರ್ಯಗಳನ್ನು ಯೋಜಿಸಿದ್ದ. ಮತೀಯ ನಾಯಕನೇ (ಫಕೀಹ್) ದೇಶದ ಅಂತಿಮ ನಾಯಕನಾಗಿರಬೇಕೆಂದು ವಿಲಾಯತ್-ಎ-ಫಕೀಹ್ (Velayat-e Faqih) ಎಂಬ ಸುಪ್ರೀಂ ಲೀಡರ್ ಸ್ಥಾನವನ್ನು ಸೃಷ್ಟಿಸಲಾಯಿತು. ಪಶ್ಚಿಮದ ಪ್ರಭಾವಕ್ಕೆ ಒಳಗಾಗದ ಮತ್ತು ಅದರ ಸಂಸ್ಕೃತಿಯಿಂದ ಮುಕ್ತವಾಗಿರುವ ಸಮಾಜ ನಿರ್ಮಾಣ ಮಾಡಬೇಕು. ರಾಜಪ್ರಭುತ್ವದ ಅಂತ್ಯವಾಗಬೇಕು, ಶಿಯಾ ಆಧಾರದಲ್ಲಿ ವಿಶ್ವದ ಎಲ್ಲಾ ಮುಸ್ಲಿಮರು ಒಗ್ಗೂಡಬೇಕು, ಕಾನೂನು ಮತ್ತು ಜನಜೀವನ ಮತೀಯ ಆಧಾರದಲ್ಲಿರಬೇಕು ಎಂಬ ಐದು ನಿಯಮಗಳ ಆಧಾರದಲ್ಲಿ ಖಮೇನಿ ಹೊಸ ಇರಾನನ್ನು ಕಟ್ಟುವ ಸಂಕಲ್ಪಕ್ಕಿಳಿದಿದ್ದ. ಅಧಿಕಾರಕ್ಕೆ ಬಂದ ಮೊದಲ ದಿನದಿಂದಲೇ ಖಮೇನಿ ಇವುಗಳ ಅನುಷ್ಠಾನದಲ್ಲಿ ತೊಡಗಿದ್ದ. 1979ರ ಕ್ರಾಂತಿಯಲ್ಲಿ ಖಮೇನಿಯ ಅಣತಿಯ ಮೇರೆಗೆ ಇರಾನಿನ ಇಸ್ಲಾಮಿಕ್ ವಿದ್ಯಾರ್ಥಿ ಚಳವಳಿಗಾರರು ಟೆಹರಾನಿನ ಅಮೆರಿಕಾ ರಾಯಭಾರ ಕಛೇರಿಯ ಮೇಲೆ ದಾಳಿ ನಡೆಸಿ ಕಛೇರಿಯ 52 ಜನರನ್ನು 444 ದಿನಗಳ ಕಾಲ ಒತ್ತೆಯಾಳುಗಳನ್ನಿಟ್ಟುಕೊಂಡಿದ್ದರು. ಆಗ ಇಡೀ ಜಗತ್ತು ರಾಜ ಪಹ್ಲವಿಯನ್ನು ಅಮೆರಿಕಾ ಕೈಗೊಂಬೆಯಾಗಿಟ್ಟುಕೊಂಡಿದ್ದಕ್ಕೆ ಪ್ರತಿಕಾರ ಎಂದು ಬಿಂಬಿಸಿತ್ತು. ಹಾಗೆ ನೋಡಿದರೆ ಅಮೆರಿಕಾ ಅಧ್ಯಕ್ಷ ಜಿಮ್ಮಿ ಕಾರ್ಟರ್ ಅಂದೇ ಇರಾನ್ ಮೇಲೆ ಕ್ಷಿಪಣಿ ಉಡಾಯಿಸಿ ಖಮೇನಿಯನ್ನು ಹತ್ಯೆ ಮಾಡಬೇಕಿತ್ತು. ಅಮೆರಿಕಾ ಒಂದೇ ಅಲ್ಲ, ಜಗತ್ತಿನ ಶಾಂತಿಯನ್ನು ಬಯಸುವ ಯಾರೇ ಆದರೂ ಎಂದೋ ಇರಾನನ್ನು ಧ್ವಂಸ ಮಾಡಬೇಕಿತ್ತು. 2009ರಲ್ಲಿ ಸಿರಿಯಾದಲ್ಲಿ ದಂಗೆ ನಡೆದಾಗ ಅದನ್ನು ಕ್ರೂರವಾಗಿ ಅಡಗಿಸಲು ಖಮೇನಿ ಸಿರಿಯಾ ಅಧ್ಯಕ್ಷ ಬಶರ್ ಅಲ್-ಅಸ್ಸಾದ್‌ಗೆ ಸಲಹೆ ನೀಡಿದ್ದ. ಸಿರಿಯಾ ಅದನ್ನು ಕಾರ್ಯರೂಪಕ್ಕೂ ತಂದಿತ್ತು. 2015ರಲ್ಲಿ ವಿಶ್ವಸಂಸ್ಥೆ ಮತ್ತು ಜಗತ್ತಿನ ಬಹುತೇಕ ದೇಶಗಳು ಒಮ್ಮತದಿಂದ ಜಾರಿಗೊಳಿಸಿದ್ದ ಪರಮಾಣು ಶಸ್ತ್ರಾಸ್ತ್ರ ಒಪ್ಪಂದವನ್ನು ಮೈ ಫೂಟ್ ಎಂದು ತಿರಸ್ಕರಿಸಿದ ಇರಾನ್ ಪರಮಾಣು ಸಾಮರ್ಥ್ಯವಿರುವ ಬಾಲಿಸ್ಟಿಕ್ ಕ್ಷಿಪಣಿಗಳನ್ನು ಅಭಿವೃದ್ಧಿಪಡಿಸಿ ಪರೀಕ್ಷೆ ನಡೆಸಿತು. ಆಗಲೂ ಜಗತ್ತು ಇರಾನ್ ಮೇಲೆ ಆರ್ಥಿಕ ದಿಗ್ಬಂಧನವನ್ನು ಹೇರಿತೇ ಹೊರತು ದಾಳಿ ನಡೆಸಲಿಲ್ಲ. 2018ರಲ್ಲಿ ಹೊಸ ಕಾಯ್ದೆಯೊಂದನ್ನು ಜಾರಿಗೆ ತಂದ ಖಮೇನಿ ಇರಾನಿನ ಮತೀಯ ಅಲ್ಪಸಂಖ್ಯಾತ ಸಮುದಾಯಗಳಾದ ಜೊರಾಷ್ಟ್ರೀಯನ್ನರು, ಕ್ರೈಸ್ತರು, ಬಹಾಯಿಗಳು ಮತ್ತು ಸುನ್ನಿಗಳನ್ನು ಕಾರಣವಿಲ್ಲದೆ ಬಂಧಿಸುವ, ವಿಚಾರಣೆ ನಡೆಸುವ ಆದೇಶವನ್ನು ಜಾರಿಗೆ ತಂದ. ಆಗಲೂ ಅಮೆರಿಕ ನೇತೃತ್ವದಲ್ಲಿ ಕ್ರೈಸ್ತ ದೇಶಗಳು ಇರಾನಿನ ಮೇಲೆ ದಾಳಿ ನಡೆಸಬೇಕೆಂದು ಒತ್ತಡ ಅಂತಾರಾಷ್ಟ್ರೀಯ ಸಮುದಾಯದಲ್ಲಿ ವ್ಯಕ್ತವಾಗಿತ್ತು. ಅಂದರೆ ಅಮೆರಿಕಾಕ್ಕೆ ಅಂದೇ ಇರಾನಿನ ಮೇಲೆ ದಾಳಿ ನಡೆಸುವ ಎಲ್ಲಾ ಅವಕಾಶಗಳಿದ್ದವು. ಆದರೆ ಜಗತ್ತಿನ ದೊಡ್ಡಣ್ಣನೂ ತಾಳ್ಮೆ ವಹಿಸಿತು. ಅಷ್ಟೇ ಅಲ್ಲ, 1979ರ ಕ್ರಾಂತಿಯ ನಂತರ ಇರಾನ್ ಆಡಳಿತ 20ಕ್ಕೂ ಹೆಚ್ಚು ದೇಶಗಳಲ್ಲಿ ಭಯೋತ್ಪಾದಕ ದಾಳಿ ಮತ್ತು ಹತ್ಯೆಗಳನ್ನು ನಡೆಸಿತು. ಜುಲೈ 2018ರಲ್ಲಿ ಪ್ಯಾರಿಸ್‌ನಲ್ಲಿ ಖಮೇನಿ ವಿರೋಧಿ ಬಣದ ವಿರುದ್ಧ ನೇರ ಇರಾನ್ ಸರ್ಕಾರ ಭಯೋತ್ಪಾದಕ ಸಂಚನ್ನು ಹೂಡಿತು. 2019ರಲ್ಲಿ ಇರಾನ್, ಇರಾಕಿ ಪತ್ರಕರ್ತರೊಬ್ಬರನ್ನು ಅಪಹರಿಸಿ ಕೊಂದಿತು. ಅದೇ ವರ್ಷ ಟರ್ಕಿಯಲ್ಲಿ ವಿರೋಧ ಪಕ್ಷದ ನಾಯಕರೊಬ್ಬರನ್ನು ಕೊಂದಿತು. ಇವನ್ನೆಲ್ಲಾ ಖಮೇನಿ ನಿರ್ಭಿಡೆಯಿಂದ ಮಾಡಿದ. ಹಮಾಸ್, ಹಿಜ್ಬುಲ್ಲಾ ಮತ್ತು ಹೌತಿಗಳಿಗೆ ನೇರ ಹಣಸಹಾಯವನ್ನು ಮಾಡಿದ. ಜಗತ್ತಿನ ಎಲ್ಲಾ ದೇಶಗಳೂ ನೆರೆಯ ದೇಶಗಳಿಗೆ ಧನಸಹಾಯವನ್ನು ಮಾಡುತ್ತವೆ. ಆದರೆ ಇರಾನ್ ಅದನ್ನು ದ್ವೇಷ ಬಿತ್ತಲೆಂದೇ ಮಾಡಿದ. ಇಸ್ರೇಲ್ ವಿರುದ್ಧ ಖಮೇನಿ ಬೆನ್ನುಬಿದ್ದ ಪರಿಗೆ ಇಸ್ರೇಲ್ ಆತನನ್ನು ಇಷ್ಟು ವರ್ಷ ಬಿಟ್ಟಿದ್ದೇ ಹೆಚ್ಚು. ಕೊನೆಕೊನೆಗೆ ಇಸ್ರೇಲ್ ನಾಶವೇ ನನ್ನ ಮೊದಲ ಗುರಿ ಎನ್ನುತ್ತಿದ್ದಾಗಲೂ ಇಸ್ರೇಲ್ ಆತನನ್ನು ವರ್ಷಗಳ ಕಾಲ ಸಹಿಸುತ್ತಾ ಬಂತು.

ಇಷ್ಟೆಲ್ಲಾ ಇದ್ದರೂ ಶಿಯಾಗಳ ಹೊರತಾದ ಒಂದು ವರ್ಗ ಖಮೇನಿಯನ್ನು ಹೊಗಳುತ್ತದೆ ಎಂದರೆ ಅದಕ್ಕೆ ಏನನ್ನಬೇಕು? ಆತ ಸರ್ವಾಧಿಕಾರಿಯ ಜೊತೆಗೆ ಮತೀಯ ಗುರುವೇ ಇರಬಹುದು. ಆತನ ಧರ್ಮ ವರ್ತನೆ ಜಗತ್ತಿಗೆ ಕಂಟಕವಾದರೆ ಯಾರಾದರೊಬ್ಬರು ಆತನ ನಾಶಕ್ಕೆ ಮುಂದಾಗಲೇಬೇಕಿತ್ತು. ತನ್ನ ಶತ್ರುವನ್ನು ಜಗತ್ತು ನಾನಾ ಕಾರಣಗಳಿಗೆ ತೆಗಳುವುದನ್ನೇ ಗುರಾಣಿಯಂತೆ ಬಳಸಿಕೊಂಡ ಖಮೇನಿ ಇಷ್ಟು ವರ್ಷ ಪ್ರಾಣ ಉಳಿಸಿಕೊಂಡಿದ್ದ. ಇಂಥ ಖಮೇನಿಯ ಸಾವಿಗೆ ಭಾರತದ ಯಾವುದೋ ಮೂಲೆಯ ಒಂದು ಹಳ್ಳಿಯೂ ಮರುಗುತ್ತದೆಯೆಂದರೆ ಇತಿಹಾಸ ನೆನಪಿನಲ್ಲಿರುವವರಿಗೆ 'ಮಾಪ್ಲಾ ದಂಗೆ' ನೆನಪಾಗುವುದು ಸಹಜ. ಏಕೆಂದರೆ ಖಮೇನಿಗಾಗಿ ಮರುಗುವುದೆಂದರೆ ಹಿಂದೆ ಖಲೀಫನಿಗಾಗಿ ಮರುಗಿದ್ದಕ್ಕಿಂತಲೂ ಅಪಾಯಕಾರಿ.

ಏಕೆಂದರೆ ಐದಂಶಗಳ ಜಾರಿಯನ್ನು ಖಲೀಫನು ಖಮೇನಿಯಷ್ಟು ತೀವ್ರವಾಗಿ ಜಾರಿಗೆ ತರಲುಹೊರಟಿರಲಿಲ್ಲ. ಟರ್ಕಿಯ ಖಲೀಫ ಖಮೇನಿಯಂತೆ ಮತೀಯವಾದವನ್ನೇ ರಾಷ್ಟ್ರೀಯತೆ ಎಂದು ಈ ಪರಿಯಲ್ಲಿ ಹರಡಲು ಪಣತೊಟ್ಟಿರಲಿಲ್ಲ. ಹಿಂದಿನ ಖಲೀಫ ಖಮೇನಿಯಂತೆ ಇಷ್ಟು ಹಿಂಸೆಯ ದಾರಿಯನ್ನು ಹಿಡಿದಿರಲಿಲ್ಲ. ಆ ಖಲೀಫ ಖಮೇನಿಯಂತೆ ಕುಟಿಲ ಕುತಂತ್ರಿಯೂ ಆಗಿರಲಿಲ್ಲ. ಆದರೆ ಅಂಥ ಖಲೀಫನಿಗಾಗಿ ಬೀದಿಗಿಳಿದ ಪರಿಣಾಮ ಮಾತ್ರ ಘೋರವಾಗಿತ್ತು. ಪುಣ್ಯವಶಾತ್ ಖಮೇನಿಗಾಗಿ ಕೇವಲ ಕಣ್ಣೀರಷ್ಟೇ ಬಿತ್ತು. ಇಂದು ಇಸ್ಲಾಂ ಜಗತ್ತು ಭಾರತದಲ್ಲಿ ಕಣ್ಣೀರು ಸುರಿಸಿದವರಿಗಿಂತ ಪ್ರಬುದ್ಧವಾಗಿದೆ. ಹಾಗಾಗಿ ಇತಿಹಾಸದಲ್ಲಿ ಖಮೇನಿ ಸಾವಿಗೆ ದಕ್ಕುವುದು ಇಷ್ಟೇ. ಓಜಿಮಂಡಿಯಾಸ್ ಪದ್ಯದಂತೆ ಮುಂದಿನ ಜಗತ್ತು ಖಮೇನಿಯನ್ನು ನೆನಪಿಟ್ಟುಕೊಳ್ಳುವುದು ಬರಡು ಮರುಭೂಮಿಯಲ್ಲಿ ಮುರಿದ ಮೂರ್ತಿಗಳಂತೆ ಮತ್ತು ಪೀಠದಲ್ಲಿ ಬರೆದ 'ನಾನು ಷಾಗಳ ಷಾ' ಎಂಬ ಹಳಹಳಿಕೆಯ ಬರಹದಿಂದ ಮಾತ್ರ.

ಇಸ್ರೇಲ್: ನಿಖರ ಗುಪ್ತಚರ ಮಾಹಿತಿ, ಸುಸಜ್ಜಿತ ಯೋಜನೆ, ತಪ್ಪದ ಗುರಿಗಳು...

ದಿನೇಶ್

ಇರಾನಿನ ಸರ್ವೋಚ್ಚ ಮುಖಂಡ ಆಯತೊಲ್ಲಾ ಅಲಿ ಖಮೇನಿಯನ್ನು ಯುದ್ಧಾರಂಭದ ಮೊದಲ ದಿನವೇ ಇಸ್ರೇಲ್ ಮತ್ತು ಅಮೆರಿಕ ಕ್ಷಿಪಣಿ ದಾಳಿ ನಡೆಸಿ ಹತಗೊಳಿಸಿದ್ದು ಇಸ್ರೇಲಿನ ಗುಪ್ತಚರ ಸಂಸ್ಥೆಯ ಮಾಹಿತಿ ಸಂಗ್ರಹ ಸಾಮರ್ಥ್ಯ ಮತ್ತು ಸುಸಜ್ಜಿತ ಯೋಜನೆಯ ಸಂಕೇತ. ಖಮೇನಿಯ ಇರವನ್ನು ಸಂಪೂರ್ಣ ಖಚಿತಪಡಿಸಿಕೊಂಡು ಅವರಿದ್ದ ನಿಖರ ಪ್ರದೇಶಕ್ಕೆ ದಾಳಿ ಮಾಡಿ ಹತ್ಯೆಗೊಳಿಸಲಾಯಿತು. ಇದೇನೂ ತಕ್ಷಣದ ಬೆಳವಣಿಗೆಯಲ್ಲ. ಖಮೇನಿ ಹತ್ಯೆಗೆ ಇಸ್ರೇಲ್ ಕೆಲವಾರು ತಿಂಗಳುಗಳಿಂದಲೇ ತಂತ್ರ ಹೆಣೆಯುತ್ತಿತ್ತು. ಖಮೇನಿಯಷ್ಟೇ ಅಲ್ಲ, ಇಸ್ರೇಲಿಗೆ ವಿರೋಧಿಗಳಾಗಿರುವ ಹಲವಾರು ಮಂದಿಯನ್ನು ಇಸ್ರೇಲ್‌ನ ಗುಪ್ತಚರ ಸಂಸ್ಥೆ ಮೊಸಾದ್ ಸುಸಜ್ಜಿತ ಯೋಜನೆಯ ಮೂಲಕ ಹತ್ಯೆಗೈದ ಹಲವಾರು ನಿದರ್ಶನಗಳು ಇವೆ. ಇಸ್ರೇಲ್ ವಿರೋಧಿಗಳನ್ನು ಎಲ್ಲಿದ್ದರೂ ಪತ್ತೆ ಹಚ್ಚಿ ಅವರ ಹತ್ಯೆಗೆ ಸಂಚು ರೂಪಿಸಿ ಅದನ್ನು ಕಾರ್ಯಗತಗೊಳಿಸುವಲ್ಲಿ ಮೊಸಾದ್ ನಿಷ್ಣಾತ. ಇತ್ತೀಚಿನ ಕೆಲವು ವರ್ಷಗಳಲ್ಲೇ ಅಂತಹ ಕೆಲವು ಗುರಿನಿರ್ದೇಶಿತ ಹತ್ಯೆಗಳನ್ನು ಇಸ್ರೇಲ್ ಸಾಧಿಸಿದೆ.

ಆಯತೊಲ್ಲಾ ಖಮೇನಿ

ಆಯತೊಲ್ಲಾ ಖಮೇನಿ ಫೆ. 28ರಂದು ಮುಂಜಾನೆ ತಮ್ಮ ಕಚೇರಿಯಲ್ಲಿ ಆಪ್ತರೊಂದಿಗೆ ಸಭೆ ನಡೆಸುತ್ತಿದ್ದಾಗಲೇ ಕ್ಷಿಪಣಿ ದಾಳಿಗೆ ಬಲಿಯಾದರು. ಖಮೇನಿ ಜತೆಗೆ ಅವರ ಕುಟುಂಬ ಸದಸ್ಯರು ಕೂಡಾ ಮೃತರಾದರು. ಕೇವಲ 60 ಸೆಕೆಂಡುಗಳ ಅವಧಿಯಲ್ಲಿ ಇರಾನಿನ ಹಲವಾರು ಗುರಿಗಳ ಮೇಲೆ ಇಸ್ರೇಲ್ ಕ್ಷಿಪಣಿ ದಾಳಿ ನಡೆಸಿ ಆಡಳಿತದ 7 ಮಂದಿ ಉನ್ನತ ಅಧಿಕಾರಿಗಳು ಸೇರಿದಂತೆ 40 ಮಂದಿ ಮುಖಂಡರನ್ನು ಹತ್ಯೆ ಮಾಡಿತು.

ಈ ಯೋಜನೆಯನ್ನು ಕಾರ್ಯಗತಗೊಳಿಸಲು ಮೊಸಾದ್ ವರ್ಷದಿಂದಲೇ ಬಹಳಷ್ಟು ಗುಪ್ತಚರ ಮಾಹಿತಿಗಳನ್ನು ಸಂಗ್ರಹಿಸಿತ್ತು. ಇರಾನಿನ ಪ್ರತಿಯೊಬ್ಬ ಮುಖಂಡರ ಚಲನವಲನಗಳ ಮೇಲೆ ಕಣ್ಣಿಟ್ಟಿತ್ತು. ಖಮೇನಿಯ ಪ್ರತಿದಿನದ ದಿನಚರಿ ಹೇಗಿರುತ್ತದೆ, ಯಾವ ಜಾಗದಲ್ಲಿ ಯಾವಾಗ ಸೇರುತ್ತಾರೆ ಎಂಬ ಕುರಿತಂತೆ ಮೊಸಾದ್ ಕಡತ ರೆಡಿ ಮಾಡಿಟ್ಟಿತ್ತು. ಖಮೇನಿಯ ಕುಟುಂಬ ಸದಸ್ಯರು, ಅವರ ಸಹಚರರು, ಭದ್ರತಾ ಸಿಬ್ಬಂದಿಗಳು, ಅವರೊಂದಿಗೆ ಸಂಪರ್ಕದಲ್ಲಿದ್ದ ಇನ್ನಿತರ ಪ್ರಮುಖರು ಎಲ್ಲರ ಮಾಹಿತಿಯೂ ಮೊಸಾದ್‌ನ ಜೇಬಿನಲ್ಲಿತ್ತು.

ಖಮೇನಿ ಮತ್ತು ಇರಾನಿನ ಉನ್ನತ ನಾಯಕರ ಚಲನವಲನ ತಿಳಿಯಲು ಮೊಸಾದ್ ಇರಾನಿನ ಟ್ರಾಫಿಕ್ ಕ್ಯಾಮೆರಾಗಳನ್ನು ಕೂಡಾ ಹ್ಯಾಕ್ ಮಾಡಿತ್ತು. ಪ್ರತಿಯೊಂದು ಕ್ಯಾಮೆರಾದ ಲೈವ್ ಚಿತ್ರಣದ ಮಾಹಿತಿಯು ದೂರದ ಇಸ್ರೇಲ್‌ನಲ್ಲಿರುವ ಮೊಸಾದ್ ಕಚೇರಿಗೆ ಪ್ರತಿಕ್ಷಣವೂ ತಲುಪುತ್ತಿತ್ತು.

ತನ್ನಲ್ಲಿರುವ ಮಾಹಿತಿಗಳನ್ನು ಮೊಸಾದ್ ಅಮೆರಿಕದೊಂದಿಗೆ ಹಂಚಿಕೊಂಡುದರ ಫಲವಾಗಿಯೇ ಅಮೆರಿಕ ಮತ್ತು ಇಸ್ರೇಲ್ ಜಂಟಿ ಕಾರ್ಯಾಚರಣೆ ನಡೆಸಿ ಖಮೇನಿ ಮತ್ತು ಅವರ ಉನ್ನತ ಮುಖಂಡರನ್ನು ನಿರಾಯಾಸವಾಗಿ ಹತ್ಯೆಗೈಯಲು ಸಾಧ್ಯವಾಯಿತು.

"ಕೇವಲ 60 ಸೆಕೆಂಡುಗಳು! ಈ ಕಾರ್ಯಾಚರಣೆ ನಡೆಸಲು ಬೇಕಾದುದು ಕೇವಲ ಒಂದು ನಿಮಿಷ. ಆದರೆ ಇದು ಹಲವಾರು ವರ್ಷಗಳ ಪ್ರಯತ್ನದ ಫಲವಾಗಿ ನಡೆದುದು" ಎಂದು ಮೊಸಾದ್‌ನ ಮಾಜಿ ಮುಖ್ಯಸ್ಥರೊಬ್ಬರು ಹೇಳುತ್ತಾರೆ. "ಆಧುನಿಕ ಯುದ್ಧವು ಕೇವಲ ಟ್ಯಾಂಕ್ ಮತ್ತು ಯುದ್ಧವಿಮಾನಗಳಿಂದ ನಡೆಯುವುದಲ್ಲ. ಮಾಹಿತಿ ಸಂಗ್ರಹ, ಅದರ ವಿಶ್ಲೇಷಣೆ, ಅದನ್ನು ಅನುಸರಿಸಿ ರೂಪುಗೊಳ್ಳುವ ಯೋಜನೆ ಮುಂತಾದವುಗಳ ಸಮಗ್ರ ಆಧಾರದಲ್ಲಿ ನಡೆಯುತ್ತದೆ. ಕೇವಲ ಒಂದು ನಿಮಿಷ ಒಂದು ಪ್ರದೇಶದ ಚಿತ್ರಣವನ್ನೇ ಬದಲಿಸಬಲ್ಲುದು" ಎನ್ನುತ್ತಾರೆ ಅವರು.

ಹಸನ್ ನಸ್ರಲ್ಲಾ

ಲೆಬನಾನ್‌ನ ಹಿಜ್ಬುಲ್ ಸಂಘಟನೆಯ ಮುಖಂಡ ಹಸನ್ ನಸ್ರಲ್ಲಾನನ್ನು ಇಸ್ರೇಲ್ ಹತ್ಯೆಗೈದುದೂ ಯೋಜನಾಬದ್ಧವಾಗಿಯೆ. 2024ರ ಸೆಪ್ಟೆಂಬರ್‌ನಲ್ಲಿ ಲೆಬನಾನ್‌ನ ರಾಜಧಾನಿ ಬೆರೂತ್‌ನಲ್ಲಿಯೇ ಇಸ್ರೇಲ್ ಆತನನ್ನು ಹತ್ಯೆಗೈದಿತ್ತು. 2006ರಲ್ಲಿ ಮೂರು ಬಾರಿ ಆತನನ್ನು ಕೊಲ್ಲಲು ಇಸ್ರೇಲ್ ಪ್ರಯತ್ನಿಸಿತ್ತಾದರೂ ಅದು ಫಲ ನೀಡಿರಲಿಲ್ಲ.

ಕೊನೆಗೂ ನಸ್ರಲ್ಲಾನನ್ನು ಕೊನೆಗಾಣಿಸಲು ಇಸ್ರೇಲ್‌ಗೆ ನೆರವಿಗೆ ಬಂದುದು ಗುಪ್ತಚರ ಮಾಹಿತಿ. 2024ರ ಜುಲೈನಲ್ಲಿ ನಸ್ರಲ್ಲಾನ ಪ್ರಮುಖ ಸಹಚರ ಫಾವುದ್ ಶುಕ್ರ್‌ನನ್ನು ಹತ್ಯೆಗೈದ ಮೊಸಾದ್ ಆ ಬಳಿಕ ನಸ್ರಲ್ಲಾ ಕುರಿತಂತೆ ಮಾಹಿತಿ ಸಂಗ್ರಹಣೆ ಆರಂಭಿಸಿತು. ನಸ್ರಲ್ಲಾ ಇರಾನಿನ ಭದ್ರತಾ ಮುಖಂಡನೊಬ್ಬನನ್ನು ಲೆಬನಾನ್‌ನಲ್ಲಿ ಭೇಟಿಯಾಗುವುದರ ಮಾಹಿತಿ ಸಿಕ್ಕಿತು. ಆತ ಎಲ್ಲಿ ಈ ಭೇಟಿ ನಿಗದಿಪಡಿಸುತ್ತಾನೆ ಎಂಬ ಮಾಹಿತಿಯನ್ನೂ ಸಂಗ್ರಹಿಸಿತು. ಅತ್ತ ಇಸ್ರೇಲ್‌ನ ಯುದ್ಧ ವಿಮಾನಗಳು ಹಿಜ್ಬುಲ್‌ನ ಪ್ರದೇಶಗಳ ಮೇಲೆ ಬಾಂಬ್ ದಾಳಿ ನಡೆಸುತ್ತಿರಬೇಕಾದರೆ ಇತ್ತ ಮೊಸಾದ್‌ನ ಕೆಲವು ಏಜೆಂಟರು ರಹಸ್ಯವಾಗಿ ಬೆರೂತ್‌ನೊಳಕ್ಕೆ ನುಸುಳಿದರು. ಹಿಜ್ಬುಲ್‌ನ



ಮುಖ್ಯ ಕಚೇರಿಯ ನೆಲಮನೆಯಲ್ಲಿರುವ ಬಂಕರ್‌ನಲ್ಲಿ ಹಿಜ್ಬುಲ್ ಮುಖಂಡರು ಮತ್ತು ಇರಾನಿ ಮುಖಂಡರು ಸಭೆ ಸೇರುವುದರ ಮಾಹಿತಿ ಮೊಸಾದ್‌ಗೆ ದೊರಕಿತ್ತು. ಏಜಂಟರು ಆ ಬಂಕರ್‌ನೊಳಗೆ ಟ್ರ್ಯಾಕಿಂಗ್ ಸಾಧನವೊಂದನ್ನು ಅಳವಡಿಸಿ ಬಂದಂತೆಯೇ ಸದ್ದಿಲ್ಲದೆ ಮರಳಿದರು. ಬಳಿಕ ಆ ಜಾಗದಲ್ಲಿ ನಸ್ರುಲ್ಲಾ ತನ್ನ ಸಹಚರರೊಂದಿಗೆ ಸಭೆ ನಡೆಸುತ್ತಿರುವಾಗ ಇಸ್ರೇಲ್ ಗುರಿ ನಿರ್ದೇಶಿತ ಕ್ಷಿಪಣಿಗಳನ್ನು ಪ್ರಯೋಗಿಸಿ ಆ ಪ್ರದೇಶವನ್ನು ನೆಲಸಮಗೊಳಿಸಿತು.

ಲೆಬನಾನ್‌ನ ಪೇಜರ್ ಬಾಂಬಿಂಗ್

2024ರ ಸೆಪ್ಟೆಂಬರ್ 17ರಂದು ಲೆಬನಾನ್‌ನಾದ್ಯಂತ ಸಾವಿರಾರು ಪೇಜರ್‌ಗಳು ಸ್ಫೋಟಿಸಿ 12 ಮಂದಿ ಸಾವಿಗೀಡಾಗಿ 3000ಕ್ಕೂ ಅಧಿಕ ಮಂದಿ ಗಾಯಗೊಂಡರು. ಅದರ ಮರುದಿನವೇ ಸಾವಿರಾರು ವಾಕಿಟಾಕಿಗಳು ಸ್ಫೋಟಗೊಂಡವು. ಇಲ್ಲೂ 30 ಜನ ಸತ್ತು ಸಾವಿರಾರು ಮಂದಿ ಗಾಯಗೊಂಡರು.

ಎರಡು ತಿಂಗಳ ಬಳಿಕ ಇಸ್ರೇಲ್‌ನ ಪ್ರಧಾನಿ ಈ ಸ್ಫೋಟಗಳು ತಮ್ಮದೇ ಕೃತ್ಯವೆಂದು ಒಪ್ಪಿಕೊಂಡರು. ಬಳಿಕ ಮೊಸಾದ್‌ನ ಮಾಜಿ ಏಜೆಂಟರಿಬ್ಬರು ಈ ಸ್ಫೋಟ ಹೇಗೆ ನಡೆಸಲಾಯಿತು ಎಂಬುದನ್ನು ವಿವರಿಸಿದರು. ಇದಕ್ಕೆ ಸಿದ್ಧತೆ 10 ವರ್ಷಗಳ ಹಿಂದೆಯೆ ನಡೆದಿತ್ತು ಎಂಬುದು ಮಾತ್ರ ಆಶ್ಚರ್ಯವಾದರೂ ಸತ್ಯ. ಮೊಬೈಲ್‌ಗಳಿಂದ ತಮ್ಮನ್ನು ಟ್ರ್ಯಾಕ್ ಮಾಡುವುದು ಸುಲಭ ಎಂದು ಅರಿತಿದ್ದ ಹಿಜ್ಬುಲ್ ತನ್ನ ಸಂಘಟನೆಯ ಸದಸ್ಯರಿಗೆ ಪೇಜರ್ ಮತ್ತು ವಾಕಿಟಾಕಿಗಳನ್ನು ಬಳಸುವಂತೆ ಆದೇಶಿಸಿತ್ತು. ಇದನ್ನು ಕಂಡುಕೊಂಡ ಮೊಸಾದ್ ಅವುಗಳನ್ನೆ ಹಿಜ್ಬುಲ್ ವಿರುದ್ಧ ದಾಳಿ ನಡೆಸಲು ಬಳಸಿಕೊಂಡಿತು.

ಹಿಜ್ಬುಲ್ ಕಡಿಮೆ ಬೆಲೆಗೆ 16,000 ವಾಕಿಟಾಕಿಗಳನ್ನು ಹತ್ತು ವರ್ಷಗಳ ಹಿಂದೆಯೇ ಖರೀದಿಸಿತ್ತು. ಆದರೆ ಅದಕ್ಕೆ ವಾಕಿಟಾಕಿ ಪೂರೈಸಿದ ಕಂಪೆನಿ ನಕಲಿಯಾಗಿತ್ತು. ಅದು ಇಸ್ರೇಲ್ ಹುಟ್ಟು ಹಾಕಿದ ಕಂಪೆನಿ. ಇಸ್ರೇಲ್ ಈ ವಾಕಿಟಾಕಿಗಳ ಬ್ಯಾಟರಿಯಲ್ಲಿ ಅತೀ ಸಣ್ಣ ಸ್ಫೋಟಕವನ್ನು ಅಳವಡಿಸಿ ಅವುಗಳನ್ನು ಪೂರೈಸಿತ್ತು.

2022ರಲ್ಲಿ ಇಂತಹ ಪುಟ್ಟ ಸ್ಫೋಟಕ ಅಳವಡಿಸುವ ಕ್ರಿಯೆಯನ್ನು ಪೇಜರ್‌ಗಳಿಗೂ ವಿಸ್ತರಿಸಲಾಯಿತು. ಹಿಜ್ಬುಲ್ ತೈವಾನ್‌ನ ಕಂಪೆನಿಯೊಂದರಿಂದ ಪೇಜರ್ ಖರೀದಿಸುವುದನ್ನು ಅರಿತ ಮೊಸಾದ್ ಅದೇ ಕಂಪೆನಿಯ ಹೆಸರಿನಲ್ಲಿ ತನ್ನದೊಂದು ನಕಲಿ ಕಂಪೆನಿ ಸ್ಥಾಪಿಸಿತು. ಕಡಿಮೆ ಬೆಲೆಗೆ ಪೇಜರ್‌ಗಳನ್ನು ಪೂರೈಸುವ ಆಫರ್ ನೀಡಿತು. ಇಂತಹ 5,000 ಪೇಜರ್‌ಗಳನ್ನು ಹಿಜ್ಬುಲ್ ಖರೀದಿಸಿತು. ಪೇಜರ್ ಮತ್ತು ವಾಕಿಟಾಕಿಗಳಲ್ಲಿ ಅಳವಡಿಸಿದ್ದ ಸ್ಫೋಟಕವು ಅದರ ಬಳಕೆದಾರನಿಗೆ ಮಾತ್ರ ಹಾನಿ ಮಾಡುವಷ್ಟು ಪ್ರಬಲತೆ ಹೊಂದಿತ್ತೇ ಹೊರತು ಇಡೀ ಪ್ರದೇಶವನ್ನು ನಾಶ ಮಾಡುವಷ್ಟು ಸಾಮರ್ಥ್ಯ ಹೊಂದಿರಲಿಲ್ಲ. ಈ ಉಪಕರಣಗಳ ಬಗ್ಗೆ ಹಿಜ್ಬುಲ್‌ಗೆ ಅನುಮಾನ ಬರಲು ಶುರುವಾಗಿದೆ ಎಂಬ ಮಾಹಿತಿ ಬಂದ ಕೂಡಲೇ ಇಸ್ರೇಲ್ ತನ್ನಲ್ಲಿಂದಲೇ ರಿಮೋಟ್ ಕಂಟ್ರೋಲ್ ಮೂಲಕ ಅವುಗಳನ್ನೆಲ್ಲಾ ಸ್ಫೋಟಿಸಿತು.

ಇಸ್ಮಾಯಿಲ್ ಹನಿಯೆ

ಹಿಜ್ಬುಲ್ ಮುಖಂಡ ನಸ್ರುಲ್ಲಾನನ್ನು ಕೊಲ್ಲುವ ಮೊದಲು ಹಮಾಸ್ ಮುಖಂಡ ಇಸ್ಮಾಯಿಲ್ ಹನಿಯೆನನ್ನು ಕೂಡಾ ಇಸ್ರೇಲ್ ಕೊಲ್ಲಲು ಸಫಲವಾಗಿತ್ತು. ಹಮಾಸ್ ಮುಖಂಡ ಇಸ್ಮಾಯಿಲ್ ಇರಾನಿನ ಅಧ್ಯಕ್ಷರ ಪ್ರಮಾಣವಚನ ಸಮಾರಂಭದಲ್ಲಿ ಭಾಗಿಯಾಗಲೆಂದು ಟೆಹರಾನ್‌ಗೆ ತೆರಳಿದ್ದ. ಆತನ ಬೆಡ್‌ರೂಂನಲ್ಲಿ ಇಸ್ರೇಲ್ ಎರಡು ತಿಂಗಳ ಮೊದಲೇ ಸ್ಫೋಟಕವೊಂದನ್ನು ಅಳವಡಿಸಿತ್ತು. ಟೆಹರಾನ್‌ಗೆ ಬಂದ ಹನಿಯೆ ಆ ಬೆಡ್‌ರೂಂನಲ್ಲಿ ಬಂದು ತಂಗಿರುವುದನ್ನು ಖಚಿತಪಡಿಸಿಕೊಂಡ ಮೊಸಾದ್ ರಿಮೋಟ್ ಕಂಟ್ರೋಲ್ ಮೂಲಕ ಬಾಂಬ್ ಸ್ಫೋಟಗೊಳ್ಳುವಂತೆ ಮಾಡಿತು. ಹನಿಯೇ ಮತ್ತು ಆತನ ಅಂಗರಕ್ಷಕ ಸ್ಫೋಟದಲ್ಲಿ ಮೃತರಾದರು.

ಇರಾನ್‌ಗೆ ಬಂದಾಗ ಹನಿಯೆ ಉಳಿದುಕೊಳ್ಳುವುದು ಎಲ್ಲಿ ಎಂಬ ಖಚಿತ ಮಾಹಿತಿಯನ್ನು ಪಡೆದುಕೊಳ್ಳುವಲ್ಲಿ ಇಸ್ರೇಲ್ ಗುಪ್ತಚರ ಸಂಸ್ಥೆ ಸಫಲವಾದುದು ಈ ಕಾರ್ಯಾಚರಣೆ ಯಶಸ್ವಿಯಾಗಲು ಕಾರಣವಾಯಿತು. ಇಸ್ರೇಲ್‌ನ ಗುಪ್ತಚರರು ಇರಾನಿನ ಆಡಳಿತ ವ್ಯವಸ್ಥೆಯಲ್ಲೂ ತೂರಿಕೊಂಡಿದ್ದಾರೆ ಎಂಬುದು ಕೂಡಾ ಇದರಿಂದ ಸಾಬೀತಾಯಿತು.

ಮೊಹ್ಸಿನ್ ಫಕ್ರಿಜಾದ್

ಈತ ಇರಾನಿನ ಪರಮಾಣು ವಿಜ್ಞಾನಿ. ಇರಾನ್‌ನ ಪರಮಾಣು ಬಾಂಬು ತಯಾರಿ ಕಾರ್ಯಕ್ರಮದಲ್ಲಿ ಪ್ರಮುಖ ಪಾತ್ರ ವಹಿಸಿದ್ದವರು. 2020ರಲ್ಲಿ ಕಾರಿನಲ್ಲಿ ಕೂತಿದ್ದ ಅವರ ಮೇಲೆ ಗುಂಡು ಹಾರಿಸಿ ಕೊಲ್ಲಲಾಯಿತು ಎಂದು ವರದಿಯಾಯಿತು. ಅವರು ಮೃತಪಟ್ಟ ಕೆಲವೇ ಕ್ಷಣಗಳಲ್ಲಿ ಸಮೀಪದಲ್ಲೇ ಇದ್ದ ಒಂದು ಪಿಕಪ್ ಟ್ರಕ್ ಕೂಡಾ ಸ್ಫೋಟಗೊಂಡು ನಾಶವಾಯಿತು. ಈ ಹತ್ಯೆ ಕೂಡಾ ಇಸ್ರೇಲ್ ಮಾಡಿದ್ದೆಂಬುದು ಬಳಿಕ ಬಹಿರಂಗವಾಯಿತು. ರಿಮೋಟ್ ಕಂಟ್ರೋಲ್ ಬಂದೂಕಿನ ಮೂಲಕ ಈ ಹತ್ಯೆ ನಡೆಸಲಾಗಿತ್ತು. ಅದಕ್ಕೂ ಇಸ್ರೇಲ್ ಸಾಕಷ್ಟು ಪೂರ್ವ ಸಿದ್ಧತೆ ನಡೆಸಿತ್ತು. ಮೊದಲಿಗೆ ಅಮೆರಿಕ ನಿರ್ಮಿತ ಅತ್ಯಾಧುನಿಕ ಮೆಷಿನ್‌ಗನ್‌ನ್ನು ಬಿಡಿಬಿಡಿಯಾಗಿ ಇರಾನಿನೊಳಗೆ ತರಲಾಗಿತ್ತು. ಮೊಸಾದ್ ತಂಡವೊಂದು ಎಂಟು ತಿಂಗಳ ಕಾಲ ಶ್ರಮ ವಹಿಸಿ ಆ ಬಂದೂಕನ್ನು ಮರಳಿ ಜೋಡಿಸಿತ್ತು. ಅದಕ್ಕೆ ರಿಮೋಟ್ ಕಂಟ್ರೋಲ್ ಉಪಕರಣ ಕೂಡಾ ಅಳವಡಿಸಲಾಯಿತು. ಅದನ್ನು ಪಿಕಪ್ ಟ್ರಕ್‌ಗೆ ಅಳವಡಿಸಿ, ಆ ಟ್ರಕ್‌ನ್ನು ವಿಜ್ಞಾನಿ ಸಾಗುವ ದಾರಿಯಲ್ಲಿ ನಿಲ್ಲಿಸಲಾಯಿತು. ಕಾರಿನಲ್ಲೇ ವಿಜ್ಞಾನಿ ಜತೆಗೇ ಪ್ರಯಾಣಿಸುವ ಅವರ ಪತ್ನಿಗೆ ಯಾವುದೇ ಹಾನಿಯಾಗದಂತೆ, ದೂರ ನಿಯಂತ್ರಣದ ಮೂಲಕವೇ ಆ ಬಂದೂಕು ಚಲಾಯಿಸುವಂತೆ ಮಾಡಲಾಯಿತು. ಅದರಂತೆ ವಿಜ್ಞಾನಿ ಆ ದಾರಿಯಲ್ಲಿ ಸಾಗುತ್ತಿದ್ದಾಗ ರಿಮೋಟ್ ಕಂಟ್ರೋಲ್ ಮೂಲಕ ಆ ಮೆಷಿನ್‌ಗನ್ ಗುಂಡುಹಾರಿಸುವಂತೆ ಮಾಡಿ ಅವರನ್ನು ಹತ್ಯೆ ಮಾಡಲಾಯಿತು. ಅದರ ಕುರುಹು ಸಿಗದಂತೆ ಮಾಡಲು ಬಂದೂಕು ಇದ್ದ ಪಿಕಪ್ ಟ್ರಕ್ಕನ್ನೇ ಬಳಿಕ ಸ್ಫೋಟಿಸಲಾಯಿತು.

ಉನ್ನತ ಶಿಕ್ಷಣದ ಪುನರುತ್ಥಾನ

ಶಿಕ್ಷಣ ಎಂದಿಗೂ ನಿಂತ ನೀರಲ್ಲ. ಅದು ಆಕಾಶದಿಂದ ಭೂಮಿಗೆ ಬೀಳುವ ಮಳೆಯ ಹನಿಯಂತೆ ಹರಿಯುತ್ತಲೇ ಇರುತ್ತದೆ. ಬದಲಾವಣೆ ಅದರ ಸ್ವಭಾವ. ಪ್ರತಿಯೊಬ್ಬ ಶಿಕ್ಷಕರಿಗೂ ತಿಳಿದಿರುವ ಸತ್ಯ ಏನೆಂದರೆ ಕಲಿಕೆ ನಿರಂತರ. ಕಲಿಸುವುದು ನಿರಂತರ.

ಡಾ. ರವೀಶ ಎನ್.ಎಸ್.

ಉನ್ನತ ಶಿಕ್ಷಣ ವ್ಯವಸ್ಥೆ ತನ್ನ ಅಂತ್ಯಕಾಲವನ್ನು ಎದುರಿಸುತ್ತಿದೆ ಎನ್ನುವ ವಾದಗಳು ಇತ್ತೀಚಿನ ವರ್ಷಗಳಲ್ಲಿ ಕೇಳಿಬರುತ್ತಿವೆ. ಆದರೆ ವಾಸ್ತವದಲ್ಲಿ ನಡೆಯುತ್ತಿರುವುದು ಅಂತ್ಯವಲ್ಲ; ಅದು ಒಂದು ಆಳವಾದ ರೂಪಾಂತರ. ಹಿಂದೆ ಪದವಿ ಪ್ರಮಾಣಪತ್ರವೇ ಉದ್ಯೋಗದ ಪ್ರವೇಶಪತ್ರವಾಗಿತ್ತು. ಇಂದು ಉದ್ಯೋಗದಾತರು ಕೇವಲ ಪ್ರಮಾಣಪತ್ರವನ್ನಲ್ಲ, ವ್ಯಕ್ತಿಯ ನೈಜ ಸಾಮರ್ಥ್ಯ, ಸಮಸ್ಯೆ ಪರಿಹಾರ ಕೌಶಲ ಮತ್ತು ಅನ್ವಯಾತ್ಮಕ ಚಿಂತನೆಗಳನ್ನು ಅಳೆಯುತ್ತಿದ್ದಾರೆ. Indeed ಮತ್ತು LinkedIn ವರದಿಗಳ ಪ್ರಕಾರ ಅನೇಕ ಉದ್ಯೋಗ ಜಾಹೀರಾತುಗಳಲ್ಲಿ ಪದವಿ ಕಡ್ಡಾಯತೆಯನ್ನು ಸಡಿಲಗೊಳಿಸಲಾಗಿದೆ. ಆದರೆ ಇದರ ಅರ್ಥ 'ಪದವಿ ಬೇಡ' ಎನ್ನುವುದಲ್ಲ; 'ಪದವಿ ಮಾತ್ರ ಸಾಕಾಗುವುದಿಲ್ಲ' ಎನ್ನುವ ಹೊಸ ವಾಸ್ತವದ ಅಂಗೀಕಾರ. ಹೀಗಾಗಿ ಪ್ರಶ್ನೆ ಪದವಿಯ ಅಗತ್ಯತೆ ಕುರಿತಲ್ಲ; ಅದರ ಸ್ವರೂಪ ಮತ್ತು ಉದ್ದೇಶ ಮರುಪರಿಭಾಷೆಗೊಳ್ಳುತ್ತಿರುವುದು ಕುರಿತಾಗಿದೆ.

ಜಾಗತಿಕ ಮಟ್ಟದಲ್ಲಿ University of Kent ಮತ್ತು University of Greenwich ವಿಲೀನದಂತಹ ಬೆಳವಣಿಗೆಗಳು ಉನ್ನತ ಶಿಕ್ಷಣ ರಂಗ ಎದುರಿಸುತ್ತಿರುವ ಆರ್ಥಿಕ ಹಾಗೂ ರಚನಾತ್ಮಕ ಸವಾಲುಗಳನ್ನು ಸೂಚಿಸುತ್ತವೆ. ಜಗತ್ತಿನ ಪ್ರಸಿದ್ಧ Harvard University ಕೂಡ ಪದವಿಗಳ ಮೌಲ್ಯ ಬದಲಾಗುತ್ತಿರುವ ಬಗ್ಗೆ ಅಧ್ಯಯನ ನಡೆಸಿದೆ. ಜ್ಞಾನದ ಆಯುಷ್ಯ ಕಡಿಮೆಯಾಗುತ್ತಿರುವುದು ಸತ್ಯ. ತಂತ್ರಜ್ಞಾನದ ವೇಗದಿಂದ ನಾಲ್ಕು ವರ್ಷಗಳ ಪದವಿ ಮುಗಿಯುವ ಹೊತ್ತಿಗೆ ಕೆಲವು ವಿಷಯಗಳು ಹಳೆಯದಾಗಬಹುದು. ಆದರೆ ಈ ವಾಸ್ತವವು ವಿಶ್ವವಿದ್ಯಾಲಯಗಳ ಅಗತ್ಯ ಕಡಿಮೆಯಾಗಿದೆ ಎಂಬುದಕ್ಕೆ ಸಾಕ್ಷಿಯಲ್ಲ. ಬದಲಿಗೆ 'ಸ್ಥಿರ ಪಠ್ಯಕ್ರಮ' ಮಾದರಿಯಿಂದ 'ಚಲನೆಯ, ನವೀಕೃತ ಕಲಿಕಾ ವ್ಯವಸ್ಥೆ'ಗೆ ಬದಲಾವಣೆಯ ಅಗತ್ಯವನ್ನು ಎತ್ತಿ ತೋರಿಸುತ್ತದೆ. ಜ್ಞಾನವನ್ನು ಕೇವಲ ಬೋಧಿಸುವುದಲ್ಲ, ಜ್ಞಾನವನ್ನು ನಿರ್ಮಿಸುವ, ಪ್ರಶ್ನಿಸುವ ಮತ್ತು ಸಮಾಜಕ್ಕೆ ಅನ್ವಯಿಸುವ ಸಾಮರ್ಥ್ಯವನ್ನು ಬೆಳೆಸುವುದು ಇಂದಿನ ಶಿಕ್ಷಣದ ಧ್ಯೇಯ.

ಈ ಸಂಕ್ರಮಣ ಕಾಲದಲ್ಲಿ ಹೆಚ್ಚು ಮೆಚ್ಚುಗೆಗೆ ಅರ್ಹರಾಗಿರುವವರು ನಮ್ಮ ಪ್ರಾಧ್ಯಾಪಕ ವರ್ಗ. 'ಕಲಿಕೆ ನಿರಂತರ' ಎಂಬ ಸತ್ಯವನ್ನು ಅವರು ತಮ್ಮ ಜೀವನದಲ್ಲೇ ಅನುಸರಿಸಿದ್ದಾರೆ. ಇ-ಮೇಲ್, ವಾಟ್ಸಾಪ್, ಇನ್ಸ್ಟಾಗ್ರಾಮ್, ಸ್ನ್ಯಾಪ್‌ಚಾಟ್, ಸಾಮಾಜಿಕ ಮಾಧ್ಯಮಗಳು, ಡಿಜಿಟಲ್ ಬ್ಯಾಂಕಿಂಗ್, ಡಿಜಿಟಲ್ ಗ್ರಾಹಕವರ್ತನೆ, ಆನ್‌ಲೈನ್ ಮಾರುಕಟ್ಟೆಗಳು, ಕೃತಕ ಬುದ್ಧಿಮತ್ತೆ-ಇವುಗಳಲ್ಲಿ ಯಾವುದೂ ಅವರ ವಿದ್ಯಾರ್ಥಿ ಜೀವನದ ಪಠ್ಯಕ್ರಮದ ಭಾಗವಾಗಿರಲಿಲ್ಲ. ಆದರೂ 'ನಾನು ಓದಿಲ್ಲ, ಆದ್ದರಿಂದ ಬೋಧಿಸುವುದಿಲ್ಲ' ಎಂದು ಹೇಳದೇ, ಬದಲಾದ ಸನ್ನಿವೇಶಕ್ಕೆ ತಕ್ಕಂತೆ ತಮ್ಮನ್ನು ತಾವು ನವೀಕರಿಸಿಕೊಂಡು ಇಂದಿನ ವಿದ್ಯಾರ್ಥಿಗಳಿಗೆ ನಿಖರವಾಗಿ, ಆತ್ಮವಿಶ್ವಾಸದಿಂದ ಬೋಧಿಸುತ್ತಿದ್ದಾರೆ. ದೊಡ್ಡದೊಡ್ಡ ಹುದ್ದೆಗಳಿಗೆ ವಿದ್ಯಾರ್ಥಿಗಳನ್ನು ಸಿದ್ಧಗೊಳಿಸುವ ಜವಾಬ್ದಾರಿಯನ್ನು ಅವರು ಸಮರ್ಥವಾಗಿ ನಿರ್ವಹಿಸುತ್ತಿದ್ದಾರೆ. ಹುದ್ದೆಗಳು ಖಾಲಿ ಇರಬಹುದು. ಆದರೆ ಪಾಠಗಳು ನಿಂತಿಲ್ಲ, ತರಗತಿಗಳು ತೊಂದರೆಯಾಗದಂತೆ ಉನ್ನತ ಶಿಕ್ಷಣದ ಹೊಣೆ ಹೊತ್ತಿರುವ ಪ್ರತಿಯೊಬ್ಬರೂ ತಮ್ಮ ಕರ್ತವ್ಯವನ್ನು ನಿರಂತರವಾಗಿ ನೆರವೇರಿಸಿದ್ದಾರೆ. ಈ ಕ್ರಿಯಾಶೀಲತೆ, ವೃತ್ತಿಪರ ಕಾಳಜಿ ಮತ್ತು ಆತ್ಮಸಮರ್ಪಣೆ ಉನ್ನತ ಶಿಕ್ಷಣವನ್ನು ಮತ್ತೊಂದು ಮಜಲಿಗೆ ಕೊಂಡೊಯ್ಯುವ ಶಕ್ತಿ ಹೊಂದಿದೆ.

ಕೃತಕ ಬುದ್ಧಿಮತ್ತೆಯ ಯುಗದಲ್ಲಿ ಮಾಹಿತಿ ಅಪಾರವಾಗಿದೆ. ಆದರೆ ಮಾಹಿತಿ ಮತ್ತು ಅರ್ಥ ಒಂದೇ ಅಲ್ಲ. Yuval Noah Harari ಸೂಚಿಸುವಂತೆ, ಮಾನವ ಸಮಾಜವು ನಿರಂತರ ಮರುಕಲಿಕೆಗೆ ಸಿದ್ಧವಾಗಬೇಕು. World Economic Forum ವರದಿಗಳ ಪ್ರಕಾರ ಮುಂಬರುವ ವರ್ಷಗಳಲ್ಲಿ ಉದ್ಯೋಗ ಕೌಶಲಗಳಲ್ಲಿ ಮಹತ್ತರ ಬದಲಾವಣೆ ಆಗಲಿದೆ. ಇಂತಹ ಸಂದರ್ಭದಲ್ಲಿ ವಿಶ್ವವಿದ್ಯಾಲಯಗಳ ಪಾತ್ರ ಕಡಿಮೆಯಾಗುವುದಿಲ್ಲ; ಬದಲಿಗೆ ಹೆಚ್ಚಾಗುತ್ತದೆ. ಏಕೆಂದರೆ AI ಮಾಹಿತಿ ನೀಡಬಹುದು, ಆದರೆ ನೈತಿಕ ವಿವೇಕ, ಮೌಲ್ಯಾಧಾರಿತ ನಿರ್ಣಯ ಮತ್ತು ಸಾಮಾಜಿಕ ಹೊಣೆಗಾರಿಕೆಯನ್ನು ರೂಪಿಸುವುದು ಮಾನವೀಯ ಶಿಕ್ಷಣದ ಮೂಲಕವೇ ಸಾಧ್ಯ.

ಉನ್ನತ ಶಿಕ್ಷಣದ ಮತ್ತೊಂದು ಅವಿಭಾಜ್ಯ ಅಂಗ ಸಂಶೋಧನೆ. ಬೋಧನೆ ಮಾತ್ರವಲ್ಲ, ಜ್ಞಾನಸೃಷ್ಟಿಯೂ ವಿಶ್ವವಿದ್ಯಾಲಯಗಳ ಮೂಲ ಕರ್ತವ್ಯ. ಇಂದಿನ ಕಾಲ ಸಂಶೋಧನೆಗೆ ಪರ್ವಕಾಲ ಎಂದು ಹೇಳಬಹುದು. ಡಿಜಿಟಲ್ ವೇದಿಕೆಗಳು, ಮುಕ್ತ ಮಾಹಿತಿಯ ಲಭ್ಯತೆ, ಕೃತಕ ಬುದ್ಧಿಮತ್ತೆಯ ಸಹಕಾರ-ಇವುಗಳ ಮೂಲಕ ನಾವು ನಮ್ಮದೇ ವಿಷಯಗಳನ್ನು ಸೃಷ್ಟಿಸಬಹುದು, ನಮ್ಮದೇ ಭಾಷೆಗಳಲ್ಲಿ ಜಗತ್ತನ್ನು ಮುಟ್ಟಬಹುದು. ಕಂಟೆಂಟ್ ಸೃಷ್ಟಿಕರ್ತರಾಗುವುದರಿಂದ ಹಿಡಿದು ಜಾಗತಿಕ ಸಂಶೋಧನಾ ಜಾಲಗಳಿಗೆ ಸೇರುವವರೆಗೂ ಅನೇಕ ಅವಕಾಶಗಳು ತೆರೆದಿವೆ. AI ಅನ್ನು ಸ್ಪರ್ಧಿಯಾಗಿ ಅಲ್ಲ, ಸಹಕಾರಿಯಾಗಿ ಬಳಸಿಕೊಂಡರೆ ನಮ್ಮ ಶಿಕ್ಷಣ ವ್ಯವಸ್ಥೆ ಮತ್ತೊಂದು ಎತ್ತರ ತಲುಪಬಹುದು.

ಬದಲಾಗುತ್ತಿರುವ ಕಾಲಘಟ್ಟದಲ್ಲಿ ಶಿಕ್ಷಣ ಯಾವಾಗಲೂ ಸಾಮಾಜಿಕ ಬದಲಾವಣೆಯ ಸಾಧನವಾಗಿದೆ. ಸಾಮಾಜಿಕ ನ್ಯಾಯದ ಪರಿಕಲ್ಪನೆ ಶಿಕ್ಷಣದ ಮೂಲಕವೇ ವಿಸ್ತರಿಸಿದೆ. ಹಿಂದುಳಿದ ವರ್ಗಗಳಿಗೆ ಶಿಕ್ಷಣದ ಪ್ರವೇಶ ದೊರೆತಾಗ ಮಾತ್ರ ಸಮಾನತೆ ಸಾಧ್ಯವಾಯಿತು.

ಹೀಗಾಗಿ ಇಂದಿನ ರೂಪಾಂತರವು ಕೇವಲ ತಾಂತ್ರಿಕ ಬದಲಾವಣೆಯಲ್ಲ; ಅದು ಒಳಗೊಳ್ಳುವಿಕೆಯ, ಸಮಾನತೆಯ ಮತ್ತು ನ್ಯಾಯದ ದಿಕ್ಕಿನಲ್ಲಿ ಸಾಗುವ ಅವಕಾಶವೂ ಹೌದು. ವಿಶ್ವವಿದ್ಯಾಲಯಗಳು ಕೌಶಲ ತರಬೇತಿ ಕೇಂದ್ರಗಳಾಗಿ ಕುಗ್ಗಬಾರದು; ಅವು ಸಮಾಜದ ಬೌದ್ಧಿಕ ಮತ್ತು ನೈತಿಕ ಬುನಾದಿಯನ್ನು ಬಲಪಡಿಸುವ ಕೇಂದ್ರಗಳಾಗಿರಬೇಕು.

ಶಿಕ್ಷಣ ಎಂದಿಗೂ ನಿಂತ ನೀರಲ್ಲ, ಅದು ಆಕಾಶದಿಂದ ಭೂಮಿಗೆ ಬೀಳುವ ಮಳೆಯ ಹನಿಯಂತೆ ಹರಿಯುತ್ತಲೇ ಇರುತ್ತದೆ. ಬದಲಾವಣೆ ಅದರ ಸ್ವಭಾವ. ಪ್ರತಿಯೊಬ್ಬ ಶಿಕ್ಷಕರಿಗೂ ತಿಳಿದಿರುವ ಸತ್ಯ ಏನೆಂದರೆ ಕಲಿಕೆ ನಿರಂತರ. ಕಲಿಸುವುದು ನಿರಂತರ. ಮತ್ತು ಶಿಕ್ಷಣವೇ ಸಮಾಜದ ಅನೇಕ ಪ್ರಶ್ನೆಗಳಿಗೆ ದೀರ್ಘಕಾಲಿಕ ಉತ್ತರ. ಆದ್ದರಿಂದ ಇದು ಉನ್ನತ ಶಿಕ್ಷಣದ ಪತನಕಾಲವಲ್ಲ, ಇದು ನವಯುಗಾರಂಭ-ಸಾಮರ್ಥ್ಯ, ಸಂಶೋಧನೆ, ಮಾನವೀಯತೆ ಮತ್ತು ಸಾಮಾಜಿಕ ನ್ಯಾಯದ ದಿಕ್ಕಿನಲ್ಲಿ ಮುನ್ನಡೆಯುವ ಹೊಸ ಅಧ್ಯಾಯ.

ಯುದ್ಧನೌಕೆ ಧ್ವಂಸ: ಟ್ರಂಪ್ ಹತ್ಯೆಗೆ ಕರೆ

ಹೊಸ ದಾಳಿ, ಸೇಡು ತೀರಿಸುವುದಾಗಿ ಇರಾನ್ ಎಚ್ಚರಿಕೆ



• ದುಬೈ: ಪಶ್ಚಿಮ ಏಷ್ಯಾದ ಯುದ್ಧ ತೀವ್ರಗೊಂಡ ಬೆನ್ನಲ್ಲೇ, ಇರಾನ್ ಗುರುವಾರ ಮುಂಜಾನೆ ಇಸ್ರೇಲ್ ಮತ್ತು ಅಮೆರಿಕದ ಮಿಲಿಟರಿ ನೆಲೆಗಳ ಮೇಲೆ ಕ್ಷಿಪಣಿ ಮತ್ತು ಡ್ರೋನ್‌ಗಳಿಂದ ಹೊಸ ದಾಳಿಯನ್ನು ನಡೆಸಿದೆ. ಹಿಂದು ಮಹಾಸಾಗರದಲ್ಲಿ ಇರಾನ್‌ನ ಯುದ್ಧನೌಕೆ ಮುಳುಗಿಸಿದ್ದಕ್ಕಾಗಿ ಅಮೆರಿಕವು ತೀವ್ರವಾಗಿ ಪಶ್ಚಾತ್ತಾಪ ಪಡಲಿದೆ ಎಂದು ಟೆಹ್ರಾನ್ ಎಚ್ಚರಿಸಿದೆ. ಇದೇ ವೇಳೆ ಇರಾನ್‌ನ ಉನ್ನತ ಧರ್ಮಗುರುಗಳು ಟ್ರಂಪ್ ಹತ್ಯೆ ನಡೆಸಬೇಕೆಂದು ಬಹಿರಂಗ ಕರೆ ನೀಡಿರುವುದು ಪರಿಸ್ಥಿತಿಯನ್ನು ಮತ್ತಷ್ಟು ಉದ್ವಿಗ್ನಗೊಳಿಸಿದೆ.

ಪ್ರತಿದಾಳಿ ಮತ್ತು ಮಿಲಿಟರಿ ಸಂಘರ್ಷ

ಅಮೆರಿಕದ ಸೇನಾ ನೆಲೆಗಳ ಮೇಲೆ ದಾಳಿ ನಡೆದಿರುವುದನ್ನು ಇರಾನ್ ಸರ್ಕಾರಿ ದೂರದರ್ಶನ ಖಚಿತಪಡಿಸಿದ್ದು, ಟೆಲ್ ಅವಿವ್ ಮತ್ತು ಜೆರುಸಲೆಮ್‌ಗಳಲ್ಲಿ ಕ್ಷಿಪಣಿ ದಾಳಿಯ ಮುನ್ನೆಚ್ಚರಿಕೆ ಸೈರನ್‌ಗಳು ಮೊಳಗಿವೆ. ಇದಕ್ಕೆ ಪ್ರತಿಕ್ರಿಯೆಯಾಗಿ, ಇಸ್ರೇಲ್ ಪಡೆಗಳು ಟೆಹ್ರಾನ್ ಮತ್ತು ಅಲ್ಲಿನ ಖಂಡಾಂತರ ಕ್ಷಿಪಣಿ ಉಡಾವಣಾ ಕೇಂದ್ರಗಳ ಮೇಲೆ ಬೃಹತ್ ಪ್ರಮಾಣದ ದಾಳಿ ಆರಂಭಿಸಿವೆ. ಕಳೆದ 24 ಗಂಟೆಗಳಲ್ಲಿ ಲೆಬನಾನ್‌ನಲ್ಲಿರುವ ಹಿಜ್ಬುಲ್ಲಾ ಸಂಘಟನೆಯ 80 ಅಡಗುದಾಣಗಳನ್ನು ಇಸ್ರೇಲ್ ಧ್ವಂಸಗೊಳಿಸಿದೆ.

ಶ್ರೀಲಂಕಾ ಜಲಪ್ರದೇಶದತ್ತ ಮತ್ತೊಂದು ಯುದ್ಧನೌಕೆ!

ಅಮೆರಿಕದ ಜಲಾಂತರ್ಗಾಮಿಯು ಇರಾನಿನ ಯುದ್ಧನೌಕೆಯಾದ ಐರಿಸ್ ದೇನಾವನ್ನು ಧ್ವಂಸಗೊಳಿಸಿ 87 ನಾವಿಕರ ಸಾವಿಗೆ ಕಾರಣವಾದ ಬೆನ್ನಲ್ಲೇ, ಇರಾನಿನ ಎರಡನೇ ಯುದ್ಧನೌಕೆಯು ಗುರುವಾರ ಶ್ರೀಲಂಕಾದತ್ತ ಸಾಗುತ್ತಿತ್ತು. ಹಡಗು ಶ್ರೀಲಂಕಾದ ಪ್ರಾದೇಶಿಕ ಜಲಾನಯನ ಪ್ರದೇಶದ ಸ್ವಲ್ಪ ಹೊರಗಿದೆ ಎಂದು ಶ್ರೀಲಂಕಾದ ಸಚಿವ ನಳಿಂಡಾ ಜಯತಿಸ್ಸಾ ದೃಢಪಡಿಸಿದ್ದಾರೆ. ಈ ಹಡಗು 100ಕ್ಕೂ ಹೆಚ್ಚು ಸಿಬ್ಬಂದಿಯನ್ನು ಹೊತ್ತೊಯ್ಯುತ್ತಿದೆ ಎಂದು ವರದಿಯಾಗಿದೆ. ಬುಧವಾರ ಶ್ರೀಲಂಕಾದ ದಕ್ಷಿಣ ಕರಾವಳಿಯಲ್ಲಿ ಮುಳುಗಿದ ಹಡಗಿನಂತೆಯೇ ಹಡಗನ್ನು ಗುರಿಯಾಗಿಸಬಹುದೆಂಬ ಆತಂಕವಿದೆ ಎಂದು ಮೂಲಗಳು ತಿಳಿಸಿವೆ.

1000ಕ್ಕೂ ಹೆಚ್ಚು ಸಾವು, ಭವಿಷ್ಯದ ಆತಂಕ

ಯುದ್ಧಪೀಡಿತ ಇರಾನ್‌ನಲ್ಲಿ 1,000ಕ್ಕೂ ಹೆಚ್ಚು ಜನರು ಮತ್ತು ಇಸ್ರೇಲ್ ಹಾಗೂ ಲೆಬನಾನ್‌ನಲ್ಲಿ ನೂರಾರು ಮಂದಿ ಪ್ರಾಣ ಕಳೆದುಕೊಂಡಿದ್ದಾರೆ. ಇರಾನ್‌ನ ಸರ್ವೋಚ್ಚ ನಾಯಕ ಆಯತೊಲ್ಲಾ ಅಲಿ ಖಮೇನಿ ಹತ್ಯೆಯ ನಂತರ, ಇರಾನ್‌ನಲ್ಲಿ ಆಡಳಿತ ಬದಲಾವಣೆಯೇ ಯುದ್ಧದ ಗುರಿಯೇ ಎಂಬ ಪ್ರಶ್ನೆಗಳು ಎದ್ದಿವೆ. ಸದ್ಯಕ್ಕೆ ಈ ಸಂಘರ್ಷ ಕೊನೆಗೊಳ್ಳುವ ಯಾವುದೇ ಲಕ್ಷಣಗಳು ಕಾಣುತ್ತಿಲ್ಲ.



ಇಸ್ರೇಲಿಗೆ ವಾರಕ್ಕೆ 3 ಶತಕೋಟಿ ಡಾಲರ್ ಖರ್ಚು!

ಇರಾನ್‌ನೊಂದಿಗೆ ನಡೆಯುತ್ತಿರುವ ಯುದ್ಧವು ಆರ್ಥಿಕ ಚಟುವಟಿಕೆಗಳ ಮೇಲಿನ ಪ್ರಸ್ತುತ ನಿರ್ಬಂಧಗಳಲ್ಲಿ ಇಸ್ರೇಲ್‌ಗೆ ವಾರಕ್ಕೆ ಅಂದಾಜು ಎನ್‌ಐಎಸ್ ಅಂದಾಜು 3 ಶತಕೋಟಿ ಡಾಲರ್ ವೆಚ್ಚವಾಗಬಹುದು ಎಂದು ಇಸ್ರೇಲಿ ಹಣಕಾಸು ಸಚಿವಾಲಯ ಎಚ್ಚರಿಸಿದೆ. ಹೋಮ್ ಫ್ರಂಟ್ ಕಮಾಂಡ್ ಮುಖ್ಯಸ್ಥ ಮೇಜರ್ ಜನರಲ್ ಶಾಯ್ ಕ್ಲಾಪರ್ ಅವರಿಗೆ ಕಳುಹಿಸಿದ ಪತ್ರದಲ್ಲಿ, ಹಣಕಾಸು ಸಚಿವಾಲಯದ ಮಹಾನಿರ್ದೇಶಕ ಇಲಾನ್ ರೋಮ್ ಅವರು ಗುರುವಾರದೊಳಗೆ ವ್ಯವಹಾರಗಳು ಮತ್ತು ಕೆಲಸಗಳನ್ನು ಪುನರಾರಂಭಿಸಲು ಅವಕಾಶ ನೀಡಲು ನಿರ್ಬಂಧಗಳನ್ನು ಸರಾಗಗೊಳಿಸುವಂತೆ ಮನವಿ ಮಾಡಿದ್ದಾರೆ. ಭದ್ರತಾ ಪರಿಸ್ಥಿತಿಗೆ ಹೊಂದಿಕೊಳ್ಳುವ ರಕ್ಷಣಾ ನೀತಿಯನ್ನು ಕಾಪಾಡಿಕೊಳ್ಳುವ ಅಗತ್ಯತೆಯ ಬಗ್ಗೆ ಯಾವುದೇ ವಿವಾದವಿಲ್ಲ, ಆದರೆ ಅದೇ ಸಮಯದಲ್ಲಿ, ಆರ್ಥಿಕತೆಯನ್ನು ವಿಶಾಲ ಪ್ರಮಾಣದಲ್ಲಿ ಸ್ಥಗಿತಗೊಳಿಸುವುದು ಭಾರೀ ಆರ್ಥಿಕ ವೆಚ್ಚವನ್ನು ಉಂಟುಮಾಡುತ್ತದೆ ಎಂದು ರೋಮ್ ಎಚ್ಚರಿಸಿದ್ದಾರೆ.

ಕಡಿಮೆ ವೆಚ್ಚದ ಶಾಹೆದ್ ಡ್ರೋನ್ ದುಬಾರಿ ಕ್ಷಿಪಣಿಗಳಿಗೆ ಸವಾಲು

ಇರಾನ್‌ನ ಶಾಹೆದ್ ಸರಣಿಯ ಕಾಮಿಕಾಜೆ ಡ್ರೋನ್‌ಗಳು ಲಕ್ಷಾಂತರ ಡಾಲರ್ ಮೌಲ್ಯದ ವಾಯು ರಕ್ಷಣಾ ವ್ಯವಸ್ಥೆಗಳ ಕಣ್ತಪ್ಪಿಸುವ ಮೂಲಕ ಪಶ್ಚಿಮ ಏಷ್ಯಾದ ಯುದ್ಧತಂತ್ರವನ್ನೇ ಬದಲಿಸುತ್ತಿವೆ. ಕೇವಲ 20,000 ಅಮೆರಿಕ ಡಾಲರ್ (ಸುಮಾರು 17 ಲಕ್ಷ ರೂ.) ವೆಚ್ಚದ ಈ ಡ್ರೋನ್‌ಗಳನ್ನು ಎದುರಿಸಲು ಅಮೆರಿಕದ ಪೇಟ್ರಿಯಾಟ್ ವ್ಯವಸ್ಥೆಯ 4 ಮಿಲಿಯನ್ ಯುಎಸ್‌ಡಿ ಮೌಲ್ಯದ ಕ್ಷಿಪಣಿಗಳನ್ನು ಬಳಸಲಾಗುತ್ತಿದೆ. ಇದು ಆರ್ಥಿಕ ಹೊರೆಯಾಗಿ ಪರಿಣಮಿಸಿದೆ.

ಡ್ರೋನ್ ಯುದ್ಧದ ತಲೆನೋವು

ಈ ಕಡಿಮೆ ವೆಚ್ಚದ ಬೆದರಿಕೆಗೆ ಪ್ರತಿಯಾಗಿ, ವಾಷಿಂಗ್ಟನ್ ಕೂಡ ಈಗ ಸ್ವಾಯತ್ತ ಯುದ್ಧ ವ್ಯವಸ್ಥೆಗಳತ್ತ ಮುಖ ಮಾಡಿದೆ. ಶಾಹೆದ್ ಡ್ರೋನ್‌ಗಳ ಮಾದರಿಯಲ್ಲೇ ಕಡಿಮೆ ವೆಚ್ಚದ ಡ್ರೋನ್‌ಗಳನ್ನು ಅಮೆರಿಕ ಅಭಿವೃದ್ಧಿಪಡಿಸುತ್ತಿದೆ. ಇದು ಭವಿಷ್ಯದ ಯುದ್ಧಗಳು ಕೇವಲ ಮಾನವರ ನಡುವೆ ನಡೆಯದೆ, ಬಳಕೆದಾರರು ನಿಯಂತ್ರಿಸುವ ಯುಎವಿಗಳ ಮೂಲಕ ನಡೆಯಲಿವೆ, ಎಂಬುದರ ಸಂಕೇತವಾಗಿದೆ.



ತಾಂತ್ರಿಕ ಸಾಮರ್ಥ್ಯ ಮತ್ತು ಪತ್ತೆ ಹಚ್ಚುವಿಕೆ

ಈ ಡ್ರೋನ್‌ಗಳು ಸುಮಾರು 60 ಕೆಜಿ ಸ್ಫೋಟಕಗಳನ್ನು ಹೊತ್ತು 2,000 ಕಿಲೋಮೀಟರ್‌ಗಿಂತಲೂ ಹೆಚ್ಚು ದೂರ ಕ್ರಮಿಸಬಲ್ಲವು. ಇವುಗಳ ಸಣ್ಣ ಗಾತ್ರದ ಕಾರಣ ರೇಡಾರ್‌ಗಳಿಗೆ ಇವುಗಳನ್ನು ಪತ್ತೆ ಹಚ್ಚುವುದು ಕಷ್ಟ, ಆದರೆ ಇವುಗಳ ಪಿಸ್ಟನ್ ಇಂಜಿನ್‌ಗಳು ಮಾಡುವ ವಿಶಿಷ್ಟ 'ಬಝಿಂಗ್' ಶಬ್ದ ಇವುಗಳ ಇರುವಿಕೆಯನ್ನು ತಿಳಿಸುತ್ತದೆ. ಯುಎಇ ಮತ್ತು ಇತರ ಮಿತ್ರರಾಷ್ಟ್ರಗಳು ಶೇ.90 ಕ್ಕಿಂತ ಹೆಚ್ಚು ಡ್ರೋನ್‌ಗಳನ್ನು ಹೊಡೆದುರುಳಿಸುವಲ್ಲಿ ಯಶಸ್ವಿಯಾಗಿದ್ದರೂ, ವೆಚ್ಚದ ನಡುವಿನ ಭಾರಿ ವ್ಯತ್ಯಾಸ ಪಾಶ್ಚಿಮಾತ್ಯ ಪಡೆಗಳಿಗೆ ತಲೆನೋವಾಗಿ ಪರಿಣಮಿಸಿದೆ.



ಶಾಹೆದ್ ವಿನ್ಯಾಸ ಮತ್ತು ಯುದ್ಧತಂತ್ರ

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಸಾರ್ವಜನಿಕ ಸಂಗ್ರಹಣೆಯಲ್ಲಿ, ಪಾರದರ್ಶಕತೆ ಅಧಿನಿಯಮ 1999 ರ ಪ್ರಕಾರ ಪಾರದರ್ಶಕತೆ ಆಕ್ಟ್ 2000 ನಿಯಮದಂತೆ Standard Bid Document KW ರ ನಿಯಮಗಳನ್ವಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ನೊಂದಾಯಿಸಿದ ಅರ್ಹ ಗುತ್ತಿಗೆದಾರರಿಂದ http://kppp.karnataka.gov.in ಪೋರ್ಟ್‌ಲ್, ಮುಖಾಂತರ ಈ ಕೆಳಗೆ ನಮೂದಿಸಿದ ಅನುಬಂಧದಲ್ಲಿಯ 2025-26 ನೇ ಸಾಲಿನ MVS O & M Non SDP ಯೋಜನೆಯಲ್ಲಿ ಮಂಜೂರಾದ ಕಾಮಗಾರಿಗೆ ಟೆಂಡರ್ ಆಹ್ವಾನಿಸಿದೆ. ಅರ್ಹ ಗುತ್ತಿಗೆದಾರರು ಇ-ಪ್ರೋಕ್ಯೂರಮೆಂಟ್ ಪೋರ್ಟ್‌ಲ್ http://kppp.karnataka.gov.in ಮುಖಾಂತರ ಭಾಗವಹಿಸಬಹುದು.

ಸಾಮಾನ್ಯ ಸೂಚನೆಗಳು: 1) ಗುತ್ತಿಗೆದಾರರು ಟೆಂಡರ್ ಬಿಡ್ ಡಾಕ್ಯೂಮೆಂಟ್‌ಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಬೇಕು. 2) ಪೂರ್ವಾರ್ಹತೆಗೆ ಬ ಎಲ್ಲಾ ಪ್ರಮಾಣ ಪತ್ರ ಹಾಗೂ ದಾಖಲೆಗಳನ್ನು ಸ್ಕ್ಯಾನ್ ಮಾಡಿ, ಆನ್‌ಲೈನ್‌ನಲ್ಲಿ ಟೆಂಡರ್ ಭರ್ತಿ ಸಮಯದಲ್ಲಿ ಲಗತ್ತಿಸಬೇಕು. 3) ನಿಗದಿತ ಇ.ಎಮ್.ಡಿ ಹಣವನ್ನು ಆನ್‌ಲೈನ್ ಮೂಲಕ ನಿಗದಿಪಡಿಸಿದಂತೆ ಸಂದಾಯ ಮಾಡಬೇಕು. 4) ಡಬಲ್ ಕವರ್ ಟೆಂಡರ್ ಆಹ್ವಾನಿಸಿದೆ.

ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದವರ ಕಛೇರಿ ಕೆಲಸದ ವೇಳೆಯಲ್ಲಿ ಅಥವಾ http://kppp.karnataka.gov.in ದ್ವಾರ ಮಾಹಿತಿ ಪಡೆಯಬಹುದು. ಟೆಂಡರ್ ಹಾಗೂ ಮಾಹಿತಿಯನ್ನು ಸದರಿ ವೆಬ್‌ಸೈಟಿನಲ್ಲಿ ದಿನಾಂಕ: **05/03/2026** ರಿಂದ Download ಮಾಡಿಕೊಳ್ಳಬಹುದಾಗಿದೆ.

ಟೆಂಡರ್ ಪ್ರೋಸೆಸಿಂಗ್ ಶುಲ್ಕ: kppp.karnataka.gov.in ನಲ್ಲಿರುವಂತೆ ಟೆಂಡರ್ ಡೌನ್‌ಲೋಡ್ ಮಾಡಿಕೊಳ್ಳಲು ನಿಗದಿಪಡಿಸಿದ ದಿನಾಂಕ ಹಾಗೂ ಸಮಯ: **05/03/2026** ಸಮಯ 10:00 ಗಂಟೆಯಿಂದ **16/03/2026** ಸಮಯ 16:00 ಗಂಟೆವರೆಗೆ ಟೆಂಡರ್‌ಗಳನ್ನು ಸ್ವೀಕರಿಸುವ ದಿನಾಂಕ ಹಾಗೂ ಸಮಯ: **05/03/2026** ಸಮಯ 16:00 ಗಂಟೆಯಿಂದ **16/03/2026** ಸಮಯ 16:00 ಗಂಟೆವರೆಗೆ ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಹಾಗೂ ಸಮಯ: **17/03/2026** ರಂದು 16:30 ಗಂಟೆಗೆ ಕಛೇರಿ ಸಮಯದಲ್ಲಿ ಅಥವಾ ರಜಾ ಇದ್ದ ಪಕ್ಷದಲ್ಲಿ ಮರು ದಿನ. ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಹಾಗೂ ಸಮಯ: **20/03/2026** ರಂದು 11:00 ಗಂಟೆಗೆ ಕಛೇರಿ ಸಮಯದಲ್ಲಿ ಅಥವಾ ರಜಾಇದ್ದ ಪಕ್ಷದಲ್ಲಿ ಮರುದಿನ

ಟಿಪ್ಪಣಿ: ಟೆಂಡರ್‌ನಲ್ಲಿ ಭಾಗವಹಿಸಿದ ಗುತ್ತಿಗೆದಾರರು ಪ್ರಮಾಣ ಪತ್ರಗಳ ಮೂಲ ದಾಖಲೆಗಳನ್ನು ಬಿಡ್ ತೆರೆದ 8 ದಿವಸದೊಳಗಾಗಿ ವಿಭಾಗ ಕಛೇರಿಗೆ ಪರಿಶೀಲನೆಗಾಗಿ ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ಅಂತಹ ಗುತ್ತಿಗೆದಾರರ ಉಮೇದುವಾರಿಕೆಯನ್ನು ಪರಿಗಣಿಸಲಾಗುವುದಿಲ್ಲ.

ಸಹಿ/-ಕಾರ್ಯಪಾಲಕ ಅಭಿಯಂತರರು, ಗ್ರಾ.ಕು.ನೀ & ನೈರ್ಮಲ್ಯ ವಿಭಾಗ, ಕೊಪ್ಪಳ

ಡಿಐಪಿಆರ್/ಕೊಪ್ಪಳ/730/ಕೆಎಸ್ಎಂಸಿಎ/2025-26

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ ಕಾರವಾರ

ಸಂ: ಕಾ.ನಿ.ಇಂ./ಲೋ.ಇ.ವಿ.ಕಾ/ಪಿ.ಬಿ-1/ಟೆಂಡರ-35/2025-26/5604 ದಿನಾಂಕ: 04-03-2026

ಗುತ್ತಿಗೆ ಆಹ್ವಾನ ಪ್ರಕಟಣೆ (ಇ-ಪ್ರಕ್ಯೂರಮೆಂಟ್)

ಅರ್ಹ ಗುತ್ತಿಗೆದಾರರಿಂದ ಈ ಕೆಳಗಿನ ಕೋಷ್ಟಕದಲ್ಲಿ ವಿವರಿಸಿರುವ ಕಾಮಗಾರಿಗಳಿಗಾಗಿ ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಕಾರವಾರ ಇವರಿಂದ ಗುತ್ತಿಗೆ ಆಹ್ವಾನಿಸಲಾಗಿದೆ. ಗುತ್ತಿಗೆದಾರರು ಕೋಷ್ಟಕದಲ್ಲಿ ಕೊಟ್ಟಿರುವ ಕಾಮಗಾರಿಯ ಗುತ್ತಿಗೆಯನ್ನು ಇ-ಪ್ರೊಕ್ಯೂರಮೆಂಟ್ ಮುಖಾಂತರ ಮಾತ್ರ ಸಲ್ಲಿಸುವದು. ಗುತ್ತಿಗೆಯನ್ನು ವಹಿಸಲು ಅರ್ಹರಾಗಬೇಕಾದಲ್ಲಿ ಗುತ್ತಿಗೆದಾರರು (ಕೆಡಬ್ಲ್ಯೂ-3 & 4) ರಲ್ಲಿ ನಿಗದಿಪಡಿಸಿರುವ ಷರತ್ತುಗಳನ್ನು ಗಮನಿಸುವದು

(1) ಗುತ್ತಿಗೆಗೆ ಸಂಬಂಧಿಸಿದ ವಿಚಾರಣೆಗೆ ಕೊನೆಯ ದಿ: 11-03-2026 16.30 ಗಂಟೆವರೆಗೆ (2) ಟೆಂಡರನ್ನು ಸ್ವೀಕರಿಸುವ ಕೊನೆಯ ದಿ: 12-03-2026 16.30 ಗಂಟೆವರೆಗೆ (3) ಟೆಂಡರನ ತಾಂತ್ರಿಕ ಬಿಡ್ ತೆರೆಯುವ ದಿ: 13-03-2026 17.00 ಗಂಟೆವರೆಗೆ (4) ಟೆಂಡರನ ಆರ್ಥಿಕ ಬಿಡ್ ತೆರೆಯುವ ದಿ: 16-03-2026 17.00 ಗಂಟೆವರೆಗೆ

ಕಾಮಗಾರಿಯ ಹೆಸರು: ಲೆಕ್ಕ ಶೀರ್ಷಿಕೆ: 4059-80-051-0-60-132 CMIDP During 2025-26 ವರ್ಕ ಇನಡೆಂಟ್ (1) PWD/2025-26/RD/WORK_INDENT 33742 (2) PWD/2025-26/RD/WORK_INDENT32931

ಲೆಕ್ಕ ಶೀರ್ಷಿಕೆ : Mitigation- 8443-Deposite Contribution During 2025-26 ವರ್ಕ ಇನಡೆಂಟ್ (1) PWD/2025-26/FP/WORK_INDENT34090 (2) PWD/2025-26/RD/WORK_INDENT32837 (3) PWD/2025-26/RD/WORK_INDENT32836

(ಕೆಡಬ್ಲ್ಯೂ- 3 & 4) ರಲ್ಲಿನ ನಿಭಂದನೆಗಳನ್ನು ಮುಂದಿನ ದಿನಗಳಲ್ಲಿ e-proc ನಲ್ಲಿ ಸೂಚಿಸಲಾದ ನಿಭಂದನೆಗಳನ್ನು, ಇಲಾಖಾ ವೆಬ್‌ಸೈಟ್‌ನಲ್ಲಿ ಅಂದರೆ "https://kppp.karnataka.gov.in" ನೋಡಬಹುದು. ಹೆಚ್ಚಿನ ಮಾಹಿತಿಗಾಗಿ help desk Bangalore (Phone No. 918025501216 & 918025501227) ಇವರನ್ನು ಸಂಪರ್ಕಿಸಬಹುದು.

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ವಿಭಾಗ, ಕಾರವಾರ

DIPR/KWR/KSMC/V/176/25 26 dt. 05.03.2026

ಕರ್ನಾಟಕ ಸರ್ಕಾರ

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಲೋ.ಇ ವಿಭಾಗ, ಶಿವಮೊಗ್ಗ

ಟೆಂಡರ್ ಪ್ರಕಟಣೆ ಸಂಖ್ಯೆ ಕಾಪಾಅ/ಶಿವಿಶಿ/ಜೆಇ-4/ಐಎಫ್‌ಟಿ-58/2025-26
ದಿನಾಂಕ: 05-03-2026

ಅಲ್ಪಾವಧಿ ಟೆಂಡರ್ ಪ್ರಕಟಣೆ (ದ್ವಿ ಲಕೋಟೆ ಪದ್ಧತಿ)

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ಅರ್ಹ ನೊಂದಾಯಿತ 3ನೇ ದರ್ಜೆ ಮೇಲ್ಪಟ್ಟ ಗುತ್ತಿಗೆದಾರರಿಂದ ಇ- ಪ್ರಕ್ಯೂರಮೆಂಟ್ ಪೋರ್ಟಲ್ ಆವೃತ್ತಿ-2.0 kppp.karnataka.gov.in ಮೂಲಕ ಈ ಕೆಳಕಂಡ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿದೆ.

ಟೆಂಡರ್ ದಾಖಲಾತಿಗಳನ್ನು ಡೌನ್‌ಲೋಡ್ ಮಾಡಲು ಮತ್ತು ಸಲ್ಲಿಸಲು ದಿನಾಂಕ:06-03-2026 ರಿಂದ 13-03-2026

ಎಲ್ಲಾ ಗುತ್ತಿಗೆದಾರರಿಗೆ ಭಾಗವಹಿಸಬಹುದಾದ ಕಾಮಗಾರಿಗಳು
4059-80-051-0-29-422 ಪರಿಶಿಷ್ಟ ಜಾತಿ ಉಪ ಯೋಜನೆಯಡಿ

1. ಸಾಗರ ತಾಲ್ಲೂಕು 1 ಕಾಮಗಾರಿ (ಇ.ನಂ:33753)
2. ಸಾಗರ ತಾಲ್ಲೂಕು 1 ಕಾಮಗಾರಿ (ಇ.ನಂ:33815)

ಕ್ರಸಂ: 01ರ ಕಾಮಗಾರಿ ಪೂರ್ಣಗೊಳಿಸಲು ಕಾಲಾವಧಿ(ಮಳೆಗಾಲ ಸೇರಿ) : 45 ದಿನಗಳು ಕ್ರಸಂ: 02ರ ಕಾಮಗಾರಿ ಪೂರ್ಣಗೊಳಿಸಲು ಕಾಲಾವಧಿ(ಮಳೆಗಾಲ ಸೇರಿ): 02 ತಿಂಗಳುಗಳು

ಪ್ರಕಟಿತ ಟೆಂಡರ್‌ನಲ್ಲಿ ಯಾವುದೇ ತಿದ್ದುಪಡಿ ಇದ್ದಲ್ಲಿ ಇ-ಪ್ರಕ್ಯೂರಮೆಂಟ್ ಪೋರ್ಟಲ್ ಆವೃತ್ತಿ-2.0 kppp.karnataka.gov.in ನಲ್ಲಿಯೇ ಪ್ರಕಟಿಸಲಾಗುವುದು. ಹೆಚ್ಚಿನ ವಿವರಗಳಿಗೆ ಸದರಿ ಕಛೇರಿಯಿಂದ (ದೂರವಾಣಿ 08182-274942) ಹಾಗೂ ಸಹಾಯಕ ದೂರವಾಣಿ ಸಂಖ್ಯೆ: 080-25501216/ 080-25501227 ರಿಂದ ಮಾಹಿತಿ ಪಡೆಯಬಹುದು.

ಸಹಿ/- ಕಾ.ಇಂ, ಲೋಕೋಪಯೋಗಿ ಇಲಾಖೆ, ವಿಭಾಗ, ಶಿವಮೊಗ್ಗ

ವಾ.ಸಾ.ಸಂ.ಇ/ಕೆಎಸ್ಎಂಸಿಎ/ಶಿ/25-26/36/03/1950

ಸಹಾಯಕ ಕೃಷಿ ನಿರ್ದೇಶಕರಕಾರ್ಯಲಯ, ಪರತಂತ್ರಜೀವಿ ಪ್ರಯೋಗಾಲಯ ವಡ್ಡರಹಟ್ಟಿ ಗಂಗಾವತಿ-583235

KSDA

ಸಂ: ಸಕೃನಿ/ಮ.ಆ.ಕೇ/ಇ. ಟೆ-2/ಪ್ರ/2025-26/127 ದಿನಾಂಕ:-03.03.2026

ಟೆಂಡರ್ ಪ್ರಕಟಣೆ

ಮಣ್ಣು ಆರೋಗ್ಯ ಕೇಂದ್ರ, ಗಂಗಾವತಿಗೆ ಅವಶ್ಯವಿರುವ Auto Sampler ICP OES ಉಪಕರಣವನ್ನು ಸರಬರಾಜು ಮಾಡುವ ಸಲುವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣಗಳಲ್ಲಿ ಪಾರದರ್ಶಕ ಅಧಿನಿಯಮ (ಕೆ.ಟಿ.ಪಿ.ಪಿ) 1999 ನಿಯಮಗಳು 2000 ರ ಪ್ರಕಾರ e-Procurementನಲ್ಲಿ ಟೆಂಡರ್ ಕರೆಯಲಾಗಿದೆ. ಆಸಕ್ತಿಯುಳ್ಳ ಟೆಂಡರ್‌ದಾರರು https://kppp.karnataka.gov.in ವೆಬ್‌ಸೈಟ್‌ನ್ನು ಸಂಪರ್ಕಿಸಲು ಕೋರಲಾಗಿದೆ.

(1) ಟೆಂಡರ್ ಪ್ರಕಟಣೆ ದಿನಾಂಕ : **03-03-2026** (2) ಟೆಂಡರ್ ಅಂದಾಜು ಮೊತ್ತ : **ರೂ. 11,00,000/-** (3)ಇ.ಎಮ್.ಡಿ ಮೊತ್ತ : **ರೂ. 22,000/-** (4) ಟೆಂಡರ್ ಫಾರಂ ಅಪ್ಲೋಡ್ ಮಾಡಲು ಪ್ರಾರಂಭಿಸುವ **ದಿನಾಂಕ : 03-03-2026** (5) ಟೆಂಡರ್ ಫಾರಂ ಅಪ್ಲೋಡ್ ಮಾಡಲು ಕೊನೆಯ **ದಿನಾಂಕ : 11-03-2026. ಸಂಜೆ 05.00 ಗಂಟೆಗೆ** (6) ತಾಂತ್ರಿಕ ಲಕೋಟೆ ತೆರೆಯುವ ಸ್ಥಳ, ವೇಳೆ ಮತ್ತು ದಿನಾಂಕ : ಸಹಾಯಕ ಕೃಷಿ ನಿರ್ದೇಶಕರು, ಪರತಂತ್ರಜೀವಿ ಪ್ರಯೋಗಾಲಯ, ಗಂಗಾವತಿ **ದಿನಾಂಕ: 12-03-2026. ಸಂಜೆ: 05:01:01** (7) ಹಣಕಾಸಿನ ಲಕೋಟೆ ತೆರೆಯುವ ಸ್ಥಳ, ವೇಳೆ ಮತ್ತು ದಿನಾಂಕ : ಸಹಾಯಕ ಕೃಷಿ ನಿರ್ದೇಶಕರು, ಪರತಂತ್ರಜೀವಿ ಪ್ರಯೋಗಾಲಯ, ಗಂಗಾವತಿ **ದಿನಾಂಕ 13-03-2026. ಮಧ್ಯಾಹ್ನ : 12:30:00**

ಸಹಿ/- ಸಹಾಯಕ ಕೃಷಿ ನಿರ್ದೇಶಕರು ಪರತಂತ್ರಜೀವಿ ಪ್ರಯೋಗಾಲಯ, ಗಂಗಾವತಿ

ವಾ.ಸಾ.ಇ/ಕೊಪ್ಪಳ/727/ದೇಶಪಾಂಡೆಪಬ್ಲಿಸಿಟಿ/2025-26

ಕರ್ನಾಟಕ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯಪಾಲಕ ಇಂಜಿನೀಯರವರ ಕಛೇರಿ, ಕರ್ನಾಟಕ ನೀರಾವರಿ ನಿಗಮ ನಿಯಮಿತ, ನಂ.4, ಬಿ.ಆರ್.ಎಲ್.ಬಿ.ಸಿ ವಿಭಾಗ, ಭದ್ರಾವತಿ.

ಸಂ: ಕಾ.ಇಂ/ಕನೀನಿನಿ/ಬಿಡಿಯನ್-4/ತಾ.ಸಂ/ಪಿ.ಬಿ 1/4701 ಭದ್ರಾ/2ನೇ ಕರೆ ಟೆಂಡರ್ ಪ್ರಕಟಣೆ ಸಂಖ್ಯೆ : 15/2025-26 ದಿನಾಂಕ : 03.03.2026
Ref. No: EE/KNNL/BDN-4/TA/PB-1/4701 Bhadra/Tender Notification No: 15/2025-26: Dtd: 18.12.2025

ಅಲ್ಪಾವಧಿ ಟೆಂಡರ್ ಪ್ರಕಟಣೆ-2ನೇ ಕರೆ (ಕೆ.ಪಿ.ಪಿ.ಪೋರ್ಟಲ್‌ನಲ್ಲಿ ಮೂಲಕ ಮಾತ್ರ)

ಕೆ.ಟಿ.ಪಿ.ಪಿ ವೇದಿಕೆಯಡಿಯಲ್ಲಿ 4701 ಭದ್ರಾ ಲೆಕ್ಕ ಶೀರ್ಷಿಕೆಯಡಿಯಲ್ಲಿ 02 ಸಂಖ್ಯೆ ಕಾಮಗಾರಿಗಳಿಗೆ ವ್ಯವಸ್ಥಾಪಕ ನಿರ್ದೇಶಕರು, ಕನೀನಿನಿ., ಬೆಂಗಳೂರು ಇವರ ಪರವಾಗಿ ನೊಂದಾಯಿಸಲ್ಪಟ್ಟಿರುವ ಗುತ್ತಿಗೆದಾರರಿಂದ ಟೆಂಡರ್‌ನ್ನು ಕಾರ್ಯಪಾಲಕ ಇಂಜಿನಿಯರ್, ಕನೀನಿನಿ, ನಂ.4 ಬಿ.ಆರ್.ಎಲ್.ಬಿ.ಸಿ ವಿಭಾಗ, ಭದ್ರಾವತಿ ಇವರಿಂದ ಆಹ್ವಾನಿಸಲಾಗಿದೆ.

1) ಟೆಂಡರ್ ಫಾರಂಗಳನ್ನು ಕೋರಿ ಹಾಗೂ ಅರ್ಜಿಯನ್ನು ಸಲ್ಲಿಸುವ ಕೊನೆಯ ದಿನಾಂಕಗಳು : **04.03.2026** ರಿಂದ **16.03.2026** ರವರೆಗೆ ಸಂಜೆ **17.30** ಗಂಟೆಗೆ. 2) ಪ್ರೀ ಬಿಡ್ ಮೀಟಿಂಗ್ : **11.03.2026** ರಂದು ಬೆಳಿಗ್ಗೆ **11.00** ಗಂಟೆಗೆ, ಕಾರ್ಯಪಾಲಕ ಇಂಜಿನಿಯರ್, ಕನೀನಿನಿ, ನಂ.4, ಬಿಆರ್‌ಎಲ್‌ಬಿಸಿ ವಿಭಾಗ, ಭದ್ರಾವತಿ. 3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **17.03.2026** ರಂದು **17.30** ಗಂಟೆಗೆ. 4) ಆರ್ಥಿಕ ಬಿಡ್ ತೆರೆಯುವ ದಿನಾಂಕ : **After obtaining approval of technical bid from competent authority** 5) ಕಾಲಾವಧಿ : **08** ತಿಂಗಳು (ಮಳೆಗಾಲ ಸಹಿತ). 6) ಟೆಂಡರ್‌ಗಿಟ್ಟ ಮೊತ್ತ : ರೂ. **169.48** ಲಕ್ಷದಿಂದ ರೂ.**186.30** ಲಕ್ಷಗಳವರೆಗೆ. 7) ಇಎಂಡಿ ಮೊತ್ತ : ರೂ. **2,55,000/-** ದಿಂದ ರೂ. **2,80,000/-**.

ಸೂಚನೆಗಳು ಹಾಗೂ ಹೆಚ್ಚಿನ ವಿವರಗಳಿಗಾಗಿ ಈ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ. ಫೋನ್ : **8660573513.**

ಸಹಿ/-
ಕಾರ್ಯಪಾಲಕ ಇಂಜಿನೀಯರರು, ಕನೀನಿನಿ, ನಂ.4, ಬಿಆರ್‌ಎಲ್‌ಬಿಸಿ ವಿಭಾಗ, ಭದ್ರಾವತಿ.

ವಾ.ಸಾ.ಸಂ.ಇ/ಶಿ/ನಂ.10-03/ಥೋಂಕಾರ್/2025-26

ಕ್ರಿಮಿನಲ್ ಮಿಸಲೆನಿಯಸ್ ನಂ . 935/2025
ಮಾನ್ಯ ಪ್ರಧಾನ ದಿವಾಣಿ ನ್ಯಾಯಾಧೀಶರು ವ, ಜೆ.ಎಂ.ಎಫ್.ಸಿ ಹುನಗುಂದ ಇವರ ನ್ಯಾಯಾಲಯದಲ್ಲಿ

ಅರ್ಜಿದಾರರು : 1) ಮಹಾಲಿಂಗಯ್ಯ ಸಂಗಯ್ಯ ಹಿರೇಮಠ ಸಾ: ಯಡಹಳ್ಳಿ ತಾ: ಹುನಗುಂದ
2) ಸಂಗನಬಸಯ್ಯ ಶಿವಸಂಗಯ್ಯ ಹಿರೇಮಠ : ಬದಾಮಿ ತಾ: ಬದಾಮಿ
3) ವಿರುಪಾಕ್ಷಯ್ಯ ಶಿವಸಂಗಯ್ಯ ಹಿರೇಮಠ ಸಾ: ನಾಗೂರ ತಾ: ಹುನಗುಂದ

ವಿರುದ್ಧ

ಎದರುದಾರ :1) ತಹಶೀಲ್ದಾರ, ಮತ್ತು ಜನನ ಮರಣ ನೋಂದಣಾಧಿಕಾರಿಗಳು ಹುನಗುಂದ

ದಿವಾಣಿ ಪ್ರಕ್ರಿಯಾ ಸಂಹಿತೆ ಆದೇಶ 5 ನಿಯಮ 20 ರಡಿಯಲ್ಲಿ ಪತ್ರಿಕಾ ಪ್ರಕಟಣೆ

ಇದರಲ್ಲಿ 1ನೇ ಅರ್ಜಿದಾರನ ತಾಯಿ ಮತ್ತು 2, 3ನೇ ಅರ್ಜಿದಾರರ ಅಜ್ಜಿಯಾದ ಬಸಮ್ಮ ಗಂ: ಸಂಗಯ್ಯ ಹಿರೇಮಠ ಇವರು ದಿನಾಂಕ: 22-02-1989 ರಂದು ಯಡಹಳ್ಳಿ ಗ್ರಾಮದಲ್ಲಿ ಮೃತವಾಗಿದ್ದು, ಅರ್ಜಿದಾರರು ಮಾತ್ರ ಮೃತರ ವಾರಸುದಾರರಿದ್ದು, ಮೃತರ ಉತ್ತರ ಜೀವಿತ ಪ್ರಮಾಣ ಪತ್ರ ಪಡೆದುಕೊಳ್ಳಲು ಮರಣ ಪ್ರಮಾಣ ಪತ್ರ ದಾಖಲಿಸಿಕೊಳ್ಳುವ ಸಲುವಾಗಿ ಮಾನ್ಯ ಪ್ರಧಾನ ದಿವಾಣಿ ನ್ಯಾಯಾಲಯ ವ. ಜೆ. ಎಮ್. ಎಫ್. ಸಿ. ಹುನಗುಂದ ಇವರಲ್ಲಿ ಕ್ರಿ. ಮಿ. ನಂ. 935/2025 ಅಂತಾ ಅರ್ಜಿಯನ್ನು ಸಲ್ಲಿಸಿದ್ದು, ಸದರ ಅರ್ಜಿಯು ದಿನಾಂಕ: 06/04/2026 ರಂದು ವಿಚಾರಣೆಗೆ ಇರುತ್ತದೆ. ಮೃತ ಬಸಮ್ಮ ಇವರಿಗೆ ಅರ್ಜಿದಾರರನ್ನು ಹೊರತುಪಡಿಸಿ ಬೇರೆ ಯಾರೇ ವಾರಸುದಾರರಿದ್ದಲ್ಲಿ ಅಥವಾ ಹಿತಾಸಕ್ತಿ ಉಳ್ಳವರಿದ್ದಲ್ಲಿ ಅಂತವರು ನೀವಾಗಲಿ ಅಥವಾ ನಿಮ್ಮ ಪರ ವಕೀಲರಾಗಲಿ ಸದರ ವಿಚಾರಣೆ ದಿನಾಂಕದಂದು ಬೆಳಿಗ್ಗೆ 10:30 ಘಂಟೆಗೆ ಮಾನ್ಯ ಪ್ರಧಾನ ದಿವಾಣಿ ನ್ಯಾಯಾಲಯ ವ. ಜೆ.ಎಮ್. ಎಫ್.ಸಿ. ಹುನಗುಂದ ಇವರಲ್ಲಿ ಹಾಜರಾಗಿ ತಮ್ಮ ತಕರಾರುಗಳನ್ನು ಸಲ್ಲಿಸಬಹುದು. ತಪ್ಪಿದಲ್ಲಿ ಮಾನ್ಯ ನ್ಯಾಯಾಲಯ ಮುಂದಿನ ಆದೇಶ ಮಾಡುವುದು. ನ್ಯಾಯಾಲಯದ ಆದೇಶದ ಮೇರೆಗೆ ಇಂದು ದಿನಾಂಕ: 28/02/2026 ರಂದು ನನ್ನ ಸಹಿ ಹಾಗೂ ನ್ಯಾಯಾಲಯದ ಮೊಹರಿನೊಂದಿಗೆ ಕೊಡಲ್ಪಟ್ಟಿದೆ.

ಸ್ಥಳ: ಹುನಗುಂದ
ದಿನಾಂಕ :25/02/2026

ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/- ಶಿರಸ್ತೆದಾರರು
ಪ್ರಧಾನ ದಿವಾಣಿ ನ್ಯಾಯಾಲಯ ಹುನಗುಂದ
ಸಹಿ/- (ಶ್ರೀ ಎಮ್. ಎಸ್. ಬಿಜಕಲ್ಲ) ವಕೀಲರು

ಕ್ರಿ.ಮಿ. ನಂ. 33/2026

ಮಾನ್ಯ 2ನೇ ಜೆ.ಎಮ್.ಎಫ್.ಸಿ. ಹುಬ್ಬಳ್ಳಿ ಇವರ ನ್ಯಾಯಾಲಯದಲ್ಲಿ

ಅರ್ಜಿದಾರಳು : ಶ್ರೀಮತಿ ಸಂಗೀತಾ ಕೋಂ ಮಂಜುನಾಥ ದಿಂಡಿ

ವಿರುದ್ಧ

ಎದುರುಗಾರರು : 1) ಮಾನ್ಯ ಆಯುಕ್ತರು, ಜನನ ವ ಮರಣ ನೋಂದಣಿ ಅಧಿಕಾರಿಗಳು ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ, ಮುಖ್ಯ ಕಚೇರಿ, ಹುಬ್ಬಳ್ಳಿ ಮತ್ತು ಇನ್ನೊಬ್ಬರು.

ನೋಟಿಸು

ಮೇಲ್ಕಂಡ ಪ್ರಕರಣವನ್ನು, ಅರ್ಜಿದಾರಳು ಮೃತ ತನ್ನ ಗಂಡನಾದ **ಮಂಜುನಾಥ ತಂದೆ ಸಂಗಪ್ಪ ದಿಂಡಿ** ಇವರು ದಿನಾಂಕ: **03-11-2024** ರಂದು ಹುಬ್ಬಳ್ಳಿ ಶಹರ ಕೇಶ್ವಾಪೂರದ ರೇಲ್ವೆ ಸ್ಟೇಶನ್ ವಿವೇಕಾನಂದ ಮೂರ್ತಿಯ ಹಿಂಭಾಗದಲ್ಲಿರುವ ರೇಲ್ವೆ ಗಾರ್ಡನದಲ್ಲಿ ಫೋತಿಯಾಗಿದ್ದು ಅಂತಾ, ಸದರ ಮರಣ ಪ್ರಮಾಣ ಪತ್ರವನ್ನು ಪಡೆಯಲು ಈ ಅರ್ಜಿಯನ್ನು ದಾಖಲಿಸಿರುತ್ತಾರೆ.

ಸದರ ಮರಣ ದಾಖಲಾತಿ ಆದೇಶ ಪಡೆದುಕೊಳ್ಳುವ ಕುರಿತು ಯಾರದಾದರೂ ಯಾವುದೇ ರೀತಿಯ ಹಕ್ಕು ಹಿತ ಸಂಬಂಧ ತಂಟೆ ತಕರಾರು ವಗೈರೆ ಇದ್ದಲ್ಲಿ ಅವರ ಹಾಜರಾತಿಗಾಗಿ ತಾ: **15-04-2026** ರಂದು ಮುಂಜಾನೆ **11 :00** ಗಂಟೆಗೆ ಮುದ್ದತ್ತು ನೇಮಿಸಿದ್ದು ಆ ದಿವಸ ಸದರಿಯವರು ತಾವಾಗಲಿ, ತಮ್ಮ ವಕೀಲರ ಮುಖಾಂತರ ಹಾಜರಾಗತಕ್ಕದ್ದು ತಪ್ಪಿದಲ್ಲಿ ಪ್ರಕರಣವನ್ನು ನಿರ್ಣಯಿಸಲಾಗುವದು.

ನನ್ನ ಸಹಿಯೊಡನೆ ಮತ್ತು ನ್ಯಾಯಾಲಯದ ಮೊಹರಿನೊಡನೆ ದಿ:04-03-2026 ರಂದು ಕೊಡಲಾಗಿದೆ.

ಕೋರ್ಟಿನ ಆಜ್ಞೆಯ ಮೇರೆಗೆ
ಹುಬ್ಬಳ್ಳಿ (ಕೋರ್ಟ ಮೊಹರು) ಸಹಿ/-ಶಿರಸ್ತೇದಾರರು
ದಿ:04-03-2026 ಮಾನ್ಯ 2ನೇ ಜೆ.ಎಮ್.ಎಫ್.ಸಿ ನ್ಯಾಯಾಲಯ, ಹುಬ್ಬಳ್ಳಿ
ಉಮಾ ಹಂಡಿ
ಅರ್ಜಿದಾರಳ ಪರ ವಕೀಲರು, ಹುಬ್ಬಳ್ಳಿ

ಸಾರ್ವಜನಿಕ ನೋಟಿಸು

ಈ ಕೆಳಗೆ ಸಹಿ ಮಾಡಿದ ನಾನು ಸಿ. ಎಚ್. ಗುಡಗೂರ, ವಕೀಲರು, ಬಸವೇಶ್ವರ ನಗರ, 8ನೇ ಕ್ರಾಸ್, 'ಬಿ' ಬ್ಲಾಕ್, ಹಾವೇರಿ – 581110, (ಮೊಬೈಲ್ ನಂ 9986468605) ಕೊಡುವ ಸಾರ್ವಜನಿಕ ಪ್ರಕಟಣೆ ಏನಂದರೆ: ನಮ್ಮ ಪಕ್ಷಗಾರರು ಮತ್ತು ಅವರ ಸಹೋದರರಾದ **ಸಭಾಸ ಮತ್ತು ನಾಗರಾಜ ತಂದೆ ಫಕ್ಕೀರಪ್ಪ ಚನ್ನೂರ** ಇವರು ತಮ್ಮ ಘರಾಣೆದ ಆಸ್ತಿಗಳನ್ನು ಪಾಲು ವಿಭಾಗ ಮಾಡಿಕೊಂಡು, ಸದರಿ ಪಾಲು ವಿಭಾಗ ಪತ್ರವನ್ನು ಸವಣೂರ ಸಬ್ - ರಜಿಸ್ಟಾರ ಕಛೇರಿಯಲ್ಲಿ ದಿನಾಂಕ: 14-02-2022 ರಂದು ದಸ್ತಾವೇಜು ಸಂಖ್ಯೆ SVN-1-04096/2021-22 and CD. No. SVND844 ನೇದ್ದರ ಅಡಿಯಲ್ಲಿ ನೋಂದು ಮಾಡಿಸಿದ್ದರು. ನಮ್ಮ ಪಕ್ಷಗಾರರು ಸದರಿ ಮೂಲ ಪಾಲು ವಿಭಾಗ ಪತ್ರವನ್ನು ಕಳೆದುಕೊಂಡಿರುತ್ತಾರೆ. ಅದನ್ನು ಸಾಕಷ್ಟು ಪ್ರಯತ್ನ ಪಟ್ಟು ಹುಡುಕಾಡಿದರೂ ಸಹ ಸಿಕ್ಕಿರುವುದಿಲ್ಲಾ. ಅಲ್ಲದೆ ಸದರಿ ವಿಷಯ ಕುರಿತು ನಮ್ಮ ಪಕ್ಷಗಾರರು ಈಗಾಗಲೇ ಸವಣೂರ ಪೋಲೀಸು ಠಾಣೆಗೆ ಫಿರ್ಯಾದಿ ಸಹ ನೀಡಿರುತ್ತಾರೆ. ಮೇಲ್ಕಾಣಿಸಿದ ದಸ್ತಾವೇಜು ಸಂಖ್ಯೆ SVN-1- 04096/2021-22 and CD. No.SVND844 dated: 14-02-2022 ನೇದ್ದರ ಅಡಿಯಲ್ಲಿ ನೋಂದು ಆದಂತೆ ಪಾಲು ವಿಭಗ ಪತ್ರವು ಯಾರಿಗಾದರು ಸಿಕ್ಕಲ್ಲಿ ನನಗೆ ಅಥವಾ ಸವಣೂರ ಪೋಲೀಸು ಠಾಣೆಗೆ ದಯಮಾಡಿ ಮುಟ್ಟಿಸಬೇಕಾಗಿ ವಿನಂತಿ ಪ್ರಕಟಣೆ.

ಸ್ಥಳ: ಹಾವೇರಿ
ದಿನಾಂಕ: 04-03-2026

ಸಹಿ/- **C. H. GUDAGUR,**
Advocate, 8th Cross 'B' Block,
Basaveswara Nagar, **HAVERI**
581110, Cell: **9986468605**

ಇಂಗ್ಲೆಂಡ್‌ಗೆ ವೀರೋಚಿತ ಸೋಲು | ಬ್ಯಾಥಲ್ ಪರಾಕ್ರಮಕ್ಕೆ ಒಲಿಯದ ಫೈನಲ್ | ಸೆಮಿಫೈನಲ್‌ನಲ್ಲಿ ಗೆದ್ದ ಸೂರ್ಯ ಪಡೆ

ಬ್ರಿಟಿಷರ ಹೊರಹಾಕಿ ಫೈನಲ್‌ಗೆ ಭಾರತ

ಮುಂಬೈ: ಸಂಜು ಸ್ಯಾಮ್ಸನ್ ಅವರ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಟಿ20 ವಿಶ್ವಕಪ್ ಇತಿಹಾಸದಲ್ಲಿ ಮತ್ತೊಮ್ಮೆ ಸ್ಮರಣೀಯ ಗೆಲುವು ದಾಖಲಿಸಿರುವ ಭಾರತ ತಂಡವು ಸೆಮಿಫೈನಲ್‌ನಲ್ಲೇ ಬ್ರಿಟಿಷರನ್ನು ಪಂದ್ಯಾವಳಿಯಿಂದ ಹೊರಹಾಕಿ ಫೈನಲ್‌ಗೇರಿತು.

ಎಂದಿನಂತೆ ವಾಂಖೆಡೆ ಕ್ರೀಡಾಂಗಣದಲ್ಲಿ ಮತ್ತೊಮ್ಮೆ ವಂದೇ ಮಾತರಂ ಹಾಡು ಮೊಳಗಿತು. ಅಭಿಮಾನಿಗಳ ಸಂಭ್ರಮ, ಕೂಗಾಟ, ಉತ್ಸಾಹ ಮತ್ತು ಜಯಘೋಷ ಮೈದಾನದಲ್ಲಿ ಇಂಗ್ಲೆಂಡ್ ತಂಡವನ್ನು ಎದುರಿಸಿದ ಸೂರ್ಯ ಪಡೆಗೆ ಹುರುಪು ನೀಡಿತು. ಇದೇ ಹುರುಪಿನೊಂದಿಗೆ ಆಡಿದ ಸೂರ್ಯ ಪಡೆ ಬುಧವಾರದಂದು ಭಾರತವನ್ನು ನಿಶ್ಯಬ್ದವಾಗಿಸುತ್ತೇನೆ ಎಂಬ ಹೇಳಿಕೆ ನೀಡಿದ್ದ ತಂಡವನ್ನು ನಿಬ್ಬೆರಗಾಗಿಸಿತು. ದೊಡ್ಡ ಸ್ಕೋರ್ ಬಾರಿಸಿ ರೋಚಕ ಗೆಲುವು ಸಾಧಿಸಿ ಫೈನಲ್‌ಗೇರಿತು. ನ್ಯೂಜಿಲೆಂಡ್ ತಂಡದೊಂದಿಗೆ ಪಂದ್ಯವಾಡುವುದಕ್ಕೆ ಅಣಿಯಾಯಿತು.

ಗುರುವಾರದ ಪಂದ್ಯದಲ್ಲಿ ಬ್ಯಾಟಿಂಗ್ ಆಹ್ವಾನ ಪಡೆದ ಭಾರತ 20 ಓವರ್‌ಗಳಲ್ಲಿ ದಾಖಲೆಯ 253 ರನ್ ಬಾರಿಸಿತು. ಗುರಿ ಬೆನ್ನತ್ತಿದ ಇಂಗ್ಲೆಂಡ್ ತಕ್ಕ ಪ್ರತಿರೋಧ ತೋರಿ 20 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 246 ರನ್ ಗಳಿಸಿ ವೀರೋಚಿತ ಸೋಲು ಕಂಡಿತು.

ಆತಂಕ ಹೆಚ್ಚಿಸಿದ ಬ್ಯಾಥಲ್ ಶತಕ: ದೊಡ್ಡ ಸ್ಕೋರ್, ದೊಡ್ಡ ಪಂದ್ಯ, ದೊಡ್ಡ ಒತ್ತಡದೊಂದಿಗೆ ಬ್ಯಾಟಿಂಗ್‌ಗಿಳಿದ ಇಂಗ್ಲೆಂಡ್ ಆರಂಭಿಕ ಹಂತದಲ್ಲೇ ಸಾಲ್ಟ್ ವಿಕೆಟ್ ಮೂಲಕ ಆಘಾತ ಅನುಭವಿಸಿತು. ಬ್ರೂಕ್ ಆಟವೂ ನಿಲ್ಲಲಿಲ್ಲ. ಮಧ್ಯಮ ಕ್ರಮಾಂಕದಲ್ಲಿ ಬ್ಯಾಥಲ್ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಅಬ್ಬರಿಸಿದರು. ಸಿಕ್ಸರ್‌ಗಳನ್ನು ಬಾರಿಸುತ್ತಾ ಕೋಟ್ಯಾಂತರ ಅಭಿಮಾನಿಗಳಿಗೆ ಒಂದು ಮಟ್ಟದಲ್ಲಿ ಆತಂಕ ನೀಡಿದರು. ಅವರಿಗೆ ವಿಲ್ ಜ್ಯಾಕ್ಸ್ ಸಾಥ್ ಸಿಕ್ಕಿತು. ಈ ಇಬ್ಬರೂ ಬಂದ ಬೌಲರ್‌ಗಳನ್ನೆಲ್ಲಾ ದಂಡಿಸುತ್ತಾ ಬಂದರು. 14ನೇ ಓವರ್‌ವರೆಗೂ ಓವರಿಗೆ ಕನಿಷ್ಠ 13 ರನ್ ಬಾರಿಸುತ್ತಾ ಮಿಂಚಿದರು. 7ರಿಂದ 14ನೇ ಓವರ್‌ವರೆಗೆ ಈ ಜೋಡಿ 100 ರನ್ ಬಾರಿಸಿತು.

ದಿಗ್ಗಜರ ಸಮಾಗಮ

ಮುಂಬೈನ ವಾಂಖೆಡೆ ಕ್ರೀಡಾಂಗಣವು ಸೆಮಿಫೈನಲ್ ಪಂದ್ಯಕ್ಕೆ ಆತಿಥ್ಯ ನೀಡಿದ್ದಲ್ಲದೆ, ದಿಗ್ಗಜರ ಸಮಾಗಮಕ್ಕೂ ಸಾಕ್ಷಿಯಾಯಿತು. ಪಂದ್ಯ ವೀಕ್ಷಣೆಗೆ ಮಾಜಿ ನಾಯಕ ಮಹೇಂದ್ರ ಸಿಂಗ್ ಧೋನಿ, ರೋಹಿತ್ ಶರ್ಮ, ದಿಗ್ಗಜ ಸಚಿನ್ ತೆಂಡೂಲ್ಕರ್, ಐಸಿಸಿ ಅಧ್ಯಕ್ಷ ಜಯ್ ಶಾ, ನಟ ರಣಬೀರ್ ಕಪೂರ್, ನಟಿ ಆಲಿಯಾ ಭಟ್ ಸೇರಿದಂತೆ ವಿವಿಧ ಕ್ಷೇತ್ರದ ಗಣ್ಯರು ದಿಗ್ಗಜರು ಮೈದಾನದಲ್ಲಿದ್ದರು.



ಆಂಗ್ಲರ ದಂಡಿಸಿದ ಬ್ಯಾಟರ್ಸ್

ಮೊದಲನೇ ಎಸೆತದಿಂದಲೂ ಆವೇಗ, ಆಕ್ರಮಣಕಾರಿ ಮನಸ್ಥಿತಿ ತೋರಿಸಿದ ಸಂಜು ಸ್ಯಾಮ್ಸನ್ ಸೆಮಿಫೈನಲ್‌ನಲ್ಲಿ ಬಿಟ್ಟ ಆಟ ಮುಂದುವರಿಸಿದರು. ಎಷ್ಟು ಬದ್ಧತೆಯಿಂದ ದಂಡಿಸಿದರೋ ಅಷ್ಟೇ ಶಿಸ್ತಿನಿಂದ ಉತ್ತಮ ಎಸೆತಗಳಿಗೆ ಗೌರವಿಸಿದ ಅವರು, ಬೌಂಡರಿ ಸಿಕ್ಸರ್‌ಗಳ ಸುರಿಮಳೆಗೆ ಸಿಂಗಲ್‌ಗಳ ಹನಿಗೂಡಿಸಿ 26 ಬಾಲ್‌ಗಳಲ್ಲಿ ಅರ್ಧಶತಕ ಬಾರಿಸಿ ದಂಡಿಸುವ ಕಾರ್ಯಕ್ರಮ ಮುಂದುವರಿಸಿದರು. ಅಭಿಷೇಕ್ ಶರ್ಮ ಅವರು ಬೇಗನೇ ವಿಕೆಟ್ ಒಪ್ಪಿಸಿದ ನಂತರ ಇಶಾನ್ ಕಿಶನ್ ಉತ್ತಮ ಬ್ಯಾಟಿಂಗ್‌ನೊಂದಿಗೆ ಸಂಜು ಅವರೊಂದಿಗೆ ಕೈ ಮಿಲಾಯಿಸಿದರು. ಆಂಗ್ಲರನ್ನು ದಂಡಿಸುವ ಹೊರೆ ತಾವೂ ಹೊತ್ತರು. 39ಕ್ಕೆ ಅವರ ಆಟ ನಿಂತಿತು, ಈ ಇನ್ನಿಂಗ್ಸ್‌ನಲ್ಲಿ 4 ಬೌಂಡರಿ 2 ಸಿಕ್ಸರ್‌ಗಳಿದ್ದವು. ಭಾರತದ ಸ್ಕೋರ್ ನೂರರ ಗಡಿ ದಾಟಿತ್ತು. ವಿಶ್ವಕಪ್ ಉದ್ದಕ್ಕೂ ಪರಿಣಾಮಕಾರಿ ಪ್ರದರ್ಶನ ನೀಡಿದ್ದ ಶಿವಂ ದುಬೆ ಆಶ್ಚರ್ಯವಾಗಿ ನಾಲ್ಕನೇ ಕ್ರಮಾಂಕಕ್ಕೆ ಬಂದರು. ದಂಡಿಸುವ ಲೈಸನ್ಸ್ ಪಡೆದುಕೊಂಡೇ ಬಂದಿದ್ದ ಅವರು ಸೆಟ್ ಆಗುವ ಮುಲಾಜಿಗೆ ಬೀಳಲಿಲ್ಲ. ಸ್ಫೋಟಕ ಸಿಕ್ಸರ್‌ಗಳನ್ನು ಬಾರಿಸತೊಡಗಿದರು. ಸಂಜು 7 ಭರ್ಜರಿ ಸಿಕ್ಸರ್, 8 ಲೀಲಾಜಾಲ ಬೌಂಡರಿಗಳನ್ನು ದಂಡಿಸಿ 89 ರನ್ ರನ್ ಗಳಿಸಿದರು. ಮತ್ತೊಂದು ಅಮುಲ್ಯ, ಅರ್ಧ ಶತಕದಿಂದ ವಂಚಿತರಾದರು. ದುಬೆ ತಮ್ಮ ಸಿಕ್ಸರ್‌ಗಳ ಅಬ್ಬರದಿಂದ ಸ್ಕೋರ್ ಹಿಗ್ಗಿಸಿ 43 ರನ್ ಗಳಿಸಿ ರನೌಟ್‌ಗೆ ಔಟಾದರು. ಕೊನೆಯ ಓವರ್‌ಗಳಲ್ಲಿ ಸಿಕ್ಸರ್‌ಗಳ ಸುರಿಮಳೆಗೈದ ತಿಲಕ್ ವರ್ಮಾ(27) ಮತ್ತು ಹಾರ್ದಿಕ್ ಪಾಂಡ್ಯ (21) ಸ್ಕೋರ್ ಹಿಗ್ಗಿಸಿದರು.

ರೋಚಕ ಅಂತ್ಯ

ಇನ್ನೇನು ಭಾರತೀಯರಿಂದ ಪಂದ್ಯ ಕಸಿದರು ಅನ್ನುಷ್ಟರಲ್ಲಿ ಬೌಲಿಂಗ್‌ಗೆ ಬಂದ ಅರ್ಶದೀಪ್ ಸಿಂಗ್ ವಿಕೆಟ್ ತೆಗೆದರು. ಅಕ್ಷರ್ ಮತ್ತೊಮ್ಮೆ ರೋಮಾಂಚಕ ಕ್ಯಾಚ್ ಮಾಡಿದರು. ಬ್ಯಾಥಲ್ ತಮ್ಮ ಅತ್ಯುತ್ತಮ ಬ್ಯಾಟಿಂಗ್ ಮುಂದುವರಿಸಿದರು. ಆದರೆ ಸ್ಕೋರ್ ಬೋರ್ಡ್‌ನಲ್ಲಿದ್ದ ಅತಿ ದೊಡ್ಡ ಗುರಿ ಮುಟ್ಟುವುದಕ್ಕೆ ಯಾವುದೇ ಏಕಾಂಕಿ ಹೋರಾಟ ಸಾಲದೆಂಬುದು ಅವರಿಗೆ ಮುಂದಿನ ಬ್ಯಾಟರ್‌ಗಳು ಕೈಕೊಟ್ಟ ನಂತರ ಅರಿವಾಯಿತು. ಕೊನೆಯ 24 ಬಾಲ್‌ಗಳಲ್ಲಿ 61 ರನ್‌ಗಳು ಬೇಕಿದ್ದವು. 17ನೇ ಓವರ್‌ನಲ್ಲಿ ಅರ್ಶದೀಪ್ ಸಿಂಗ್ 16 ರನ್ ಮಾತ್ರ ನೀಡಿದರು. 18ನೇ ಓವರ್ ಮಾಡಲು ಬಂದ ಬೂಮ್ರಾ 6 ರನ್ ಮಾತ್ರ ನೀಡಿ ನಿರಾಳ ನೀಡಿದರು. 2 ಓವರ್‌ನಲ್ಲಿ 39ರನ್ ಬೇಕಿತ್ತು. ಬ್ಯಾಥಲ್ ಸಿಕ್ಸರ್‌ನೊಂದಿಗೆ ಶತಕ ಪೂರೈಸಿಕೊಂಡರು. ಪಾಂಡ್ಯ ಕರ್‌ನ್ ವಿಕೆಟ್ ಪಡೆದು 9 ರನ್ ಮಾತ್ರ ನೀಡಿದರು. ಕೊನೆ ಓವರ್‌ನಲ್ಲಿ 30 ರನ್ ಬೇಕಿತ್ತು. ದುಬೆ ಬೌಲಿಂಗ್‌ಗೆ ಬಂದರು. ಬ್ಯಾಥಲ್ ಮೊದಲ ಬಾಲ್‌ನಲ್ಲೇ 105 ರನ್‌ಗಳಿಗೆ ರನ್‌ಔಟ್ ಆದರು.

ಸಂಕ್ಷಿಪ್ತ ಸ್ಕೋರ್

- **ಭಾರತ** 20 ಓವರ್‌ಗಳಲ್ಲಿ 253/7: **ಸಂಜು** 89, **ದುಬೆ** 43, **ಕಿಶನ್** 39; **ಜ್ಯಾಕ್ಸ್** 40/2
- **ಇಂಗ್ಲೆಂಡ್** 20 ಓವರ್‌ಗಳಲ್ಲಿ 246/7: **ಬ್ಯಾಥಲ್** 105, **ಜ್ಯಾಕ್ಸ್** 35; **ಪಾಂಡ್ಯ** 38/2, **ಬೂಮ್ರಾ** 33/1

4ನೇ ಬಾರಿ ಫೈನಲ್‌ಗೆ

ಇದರೊಂದಿಗೆ ಭಾರತ ನಾಲ್ಕನೇ ಬಾರಿಗೆ ಫೈನಲ್‌ಗೇರಿದೆ. ಮೊದಲನೇ ಸೀಸನಿನಲ್ಲಿ ಫೈನಲ್ ಆಡಿದ್ದ ಭಾರತ, 2014ರಲ್ಲಿ ಆಡಿತ್ತು. 2024ರಲ್ಲಿ ಆಡಿದ್ದು, ಇದೀಗ ನಾಲ್ಕನೇ ಬಾರಿ ಫೈನಲ್‌ಗೇರಿದೆ. ಇದರೊಂದಿಗೆ ಅತಿ ಹೆಚ್ಚು ಫೈನಲ್ ಆಡಿದ ತಂಡ ಎಂಬ ದಾಖಲೆ ಮಾಡಿದೆ.



ಸೆಮಿಫೈನಲ್‌ನ ಅತಿ ಹೆಚ್ಚು ರನ್

253 ರನ್ ಗಳಿಸುವ ಮೂಲಕ ಭಾರತ ತಂಡ ಇತಿಹಾಸ ನಿರ್ಮಿಸಿತು. ಸೆಮಿಫೈನಲ್‌ನಲ್ಲಿ ಅತಿ ಹೆಚ್ಚು ರನ್ ಗಳಿಸಿದ ಹಿರಿಮೆಗೆ ಪಾತ್ರವಾಯಿತು. 2016ರಲ್ಲಿ ಭಾರತವೇ 192 ರನ್ ಗಳಿಸಿ ಸೆಮಿಫೈನಲ್‌ನ ಅತಿ ಹೆಚ್ಚು ರನ್ ಗಳಿಸಿದ್ದ ದಾಖಲೆ ಹೊಂದಿತ್ತು. ಆ ದಾಖಲೆ ನವೀಕರಿಸಿಕೊಂಡ ಭಾರತ 253ಕ್ಕೆ ವಿಸ್ತರಿಸಿತು.

ಸೆಮಿಗೆ ವೈಷ್ಣವಿ ಅಡ್ಕರ್ -ಅಂಕಿತಾ ಜೋಡಿ

ರಾಚಪ್ಪಾ ಜಂಬಗಿ

ಕಲಬುರಗಿ: ಉತ್ತಮ ಸರ್ವಿಸ್ ಹಾಗೂ ನಿಖರ ರಿಟರ್ನ್‌ಗಳಿಂದ ಎದುರಾಳಿಯ ಚಲನವಲನಗಳನ್ನು ಅರಿತುಕೊಂಡ ಭಾರತದ 3ನೇ ಶ್ರೇಯಾಂಕಿತ ಮಹಾರಾಷ್ಟ್ರದ ವೈಷ್ಣವಿ ಅಡ್ಕರ್ ಹಾಗೂ ಗುಜರಾತ್ ಮೂಲದ ಅಂಕಿತಾ ರೈನಾ, ತಮ್ಮ ತಮ್ಮ ಪಂದ್ಯಗಳಲ್ಲಿ ಕ್ರಮವಾಗಿ ರಷ್ಯಾ, ಉಜ್ಬೇಕಿಸ್ತಾನ್ ಆಟಗಾರ್ತಿರನ್ನು ಗುರುವಾರ ನಡೆದ ಸಿಂಗಲ್ಸ್ ಪಂದ್ಯದಲ್ಲಿ ಮಣಿಸಿ ಕ್ವಾರ್ಟರ್ ಫೈನಲ್‌ಗೆ ಲಗ್ಗೆಯಿಟ್ಟರು.

ಅದೇ ಪ್ರದರ್ಶನ ಜೊತೆಯಾಗಿ ಮುಂದುವರಿಸುತ್ತಾ ಡಬಲ್ಸ್ ಪಂದ್ಯಗಳಲ್ಲಿ ರಷ್ಯಾದ ಈ ಬರಡಿನಾ ಹಾಗೂ ಎಸ್ ಮಾರ್ಟಿನೋವಾ ವಿರುದ್ಧ ಗೆದ್ದು ಸೆಮಿಫೈನಲ್‌ಗೆ ಎಂಟ್ರಿ ಕೊಟ್ಟರು.

ಬಿಸಿಲು ನಾಡಿನ ಚಂದ್ರಶೇಖರ ಪಾಟೀಲ್ ಕ್ರೀಡಾಂಗಣದ ಲಾನ್ ಟೆನಿಸ್ ಅಂಗಣದಲ್ಲಿ ಗುರುವಾರ ನಡೆದ ಐಟಿಎಫ್ ಡಬ್ಲ್ಯು 35 ಮಹಿಳಾ ಓಪನ್ ಟೆನಿಸ್ ಟೂರ್ನಿಯ 3ನೇ ದಿನದ ಸಿಂಗಲ್ಸ್ ಪಂದ್ಯದಲ್ಲಿ ಭಾರತದ 3ನೇ ಶ್ರೇಯಾಂಕಿತ ವೈಷ್ಣವಿ ಅಡ್ಕರ್ ತೀಕ್ಷ್ಣ ಹೊಡೆತದೊಂದಿಗೆ ಆರಂಭದಿಂದ ಅಂತ್ಯದವರೆಗೂ ಸಮತೋಲಿತ ಪ್ರದರ್ಶನ ನೀಡಿ ರಷ್ಯಾದ ಅನ್ನಾ ಸೇಡಿಶೇವಾ ವಿರುದ್ಧ 6-2,6-0 ಅಂತರದಿಂದ ಗೆದ್ದರು. ಕೋರ್ಟ್ 1ರಲ್ಲಿ ನಡೆದ ಪಂದ್ಯದಲ್ಲಿ ಅಂಕಿತಾ ರೈನಾ, ಉಜ್ಬೇಕಿಸ್ತಾನಿನ ಮಿಲಾನಾ ಮಸ್ಲೆಂಕೋವಾ ವಿರುದ್ಧ ಬಲವಾದ ರ‍್ಯಾಲಿಯೊಂದಿಗೆ ಪಂದ್ಯವನ್ನು ಸಂಪೂರ್ಣವಾಗಿ ತಮ್ಮ ಹಿಡಿತದಲ್ಲಿ ಇಟ್ಟುಕೊಂಡರು. 6-2, 6-1 ಅಂತರದಲ್ಲಿ ಗೆದ್ದರು.



ಸಿಂಗಲ್ಸ್ ಪಂದ್ಯಗಳಲ್ಲಿ ಗೆದ್ದವರು ಕ್ವಾರ್ಟರ್ ಫೈನಲ್‌ಗೆ ಪ್ರವೇಶಿಸಿದರೆ, ಡಬಲ್ಸ್ ಪಂದ್ಯಗಳಲ್ಲಿ ಮಿಂಚಿದವರು ಸೆಮಿ ಫೈನಲ್‌ಗೆ ಲಗ್ಗೆ ಹಾಕಿದರು.

ಇನ್ನೂ ಜೀಲ್ ದೇಸಾಯಿ, ಮಿಚಿಕಾ ವೊಝುಕಿ, ಸೋಫಿಯಾ ಸುಸ್ಲೋವಾ ಸೇರಿದಂತೆ ಪ್ರಮುಖ ಆಟಗಾರ್ತಿಯರು ಕೂಟದಿಂದ ಹೊರ ನಡೆದರು.

ಡಬಲ್ಸ್‌ನಲ್ಲಿ ಕರ್ನಾಟಕಕ್ಕೆ ಸೋಲು

ಡಬಲ್ಸ್ ಪಂದ್ಯದಲ್ಲಿ ಕರ್ನಾಟಕದ ಸ್ನಿಗ್ಧಾ ಕಾಂತ, ಹರ್ಷಿಣಿ ನಾಗರಾಜ್ ಜೋಡಿ ಸೋನಾಲ್ ಪಾಟೀಲ್, ತಮಂಕರ್ ವಿರುದ್ಧ 7-5,6-2 ಅಂತರದಲ್ಲಿ ಸೋಲನುಭವಿಸಿತು. ವೈಷ್ಣವಿ ಅಡ್ಕರ್ ಹಾಗೂ ಅಂಕಿತಾ ರೈನಾ, ಈ ಬರಡಿನಾ ಹಾಗೂ ಮಾರ್ಟಿನೋವಾ ವಿರುದ್ಧ 6-2,6-2 ಅಂತರದಲ್ಲಿ ಗೆದ್ದು ಸೆಮಿಗೇರಿದರು.

ಎದುರಾಳಿಯ ಆಟ ಹೇಗಿದೆ ಮುಂಚೆಯೇ ಗೊತ್ತಿತ್ತು. ಮೊದಲನೇ ಸೆಟ್‌ನಲ್ಲಿ ನಾನು ತಪ್ಪು ಮಾಡಿದೆ. ಎರಡನೇ ಸೆಟ್‌ನಲ್ಲಿ ಎದುರಾಳಿಯ ತಪ್ಪನ್ನು ಸಮರ್ಥವಾಗಿ ಬಳಸಿಕೊಂಡು ಗೆಲುವು ಸಾಧಿಸಿದೆ.

■ **ವೈಷ್ಣವಿ ಅಡ್ಕರ್, ಟೆನಿಸ್ ಆಟಗಾರ್ತಿ**

ಸ್ನೂಕರ್: ಸೀನ್ ಡೇವಿಸ್‌ಗೆ ಕಿರೀಟ



ಮಂಗಳೂರು: ನಗರದ ಕಾಸ್ಮೋಪಾಲಿಟನ್ ಕ್ಲಬ್ ವತಿಯಿಂದ ಆಯೋಜಿಸಲಾದ ಸ್ನೂಕರ್-ಬಿಲಿಯರ್ಡ್ಸ್ ಇನ್ವಿಟೇಶನಲ್ ಟೂರ್ನಮೆಂಟ್‌ನಲ್ಲಿ ಬಿಲಿಯರ್ಡ್ಸ್ ವಿಭಾಗದಲ್ಲಿ ಐ.ಎಚ್. ಮನುದೇವ್ 400-242 ಅಂತರದಿಂದ ಕ್ಷಿತಿಜ್ ಗಾರ್ಗ್ ಅವರನ್ನು ಮಣಿಸಿ ಚಾಂಪಿಯನ್ ಪಟ್ಟ ಅಲಂಕರಿಸಿದರು. ಫೈನಲ್‌ನಲ್ಲಿ ಮನುದೇವ್ 101 ಅಂಕಗಳ ಅತ್ಯುನ್ನತ ಬ್ರೇಕ್ ದಾಖಲಿಸಿದರು. ಕ್ಷಿತಿಜ್ ಗಾರ್ಗ್ ರನ್ನರ್-ಅಪ್‌ಗೆ ತೃಪ್ತಿಪಟ್ಟರು. ಬೆಸ್ಟ್ ಆಫ್ 7 ಸ್ನೂಕರ್ ಫೈನಲ್‌ನಲ್ಲಿ ಸೀನ್ ಡೇವಿಸ್ 4-3 ಅಂತರದಿಂದ ಎಂ. ಯೋಗೇಶ್ ಕುಮಾರ್ ಅವರನ್ನು ಸೋಲಿಸಿ ಕಿರೀಟ ತಮ್ಮದಾಗಿಸಿಕೊಂಡರು. ಆರಂಭದಿಂದ ಅಂತ್ಯವರೆಗೆ ಕುತೂಹಲ ಮೂಡಿಸಿದ ಈ ಹಣಾಹಣಿಯಲ್ಲಿ ಸೀನ್ 62 ಅಂಕಗಳ ಅತ್ಯುನ್ನತ ಬ್ರೇಕ್ ಸಾಧಿಸಿದ್ದು ವಿಶೇಷ. ಅವರಿಂದ 53 ಅಂಕಗಳ ಮತ್ತೊಂದು ಗಮನಾರ್ಹ ಬ್ರೇಕ್ ಕೂಡ ದಾಖಲಾಗಿದೆ. ಇತ್ತ ಯೋಗೇಶ್ ಕುಮಾರ್ 61 ಅಂಕಗಳ ಉತ್ತಮ ಬ್ರೇಕ್ ಹೊಡೆದು ಪೈಪೋಟಿ ನೀಡಿದರು.

ಯುದ್ಧ ಉದ್ವೇಗದ ಪರಿಣಾಮ ಸಿಲುಕಿಕೊಂಡಿದ್ದ ಆಟಗಾರರು

ಹಂತ ಹಂತವಾಗಿ ಸ್ವದೇಶಕ್ಕೆ ಕ್ರಿಕೆಟರ್ಸ್!

ಮುಂಬೈ: ಗಲ್ಫ್ ಪ್ರದೇಶದಲ್ಲಿ ವಿಮಾನ ಹಾರಾಟ ನಿಲ್ಲಿಸಲಾಗಿದ್ದ ಪರಿಣಾಮ ಭಾರತದಲ್ಲೇ ಸಿಲುಕಿದ್ದ ಜಿಂಬಾಬ್ವೆ ಕ್ರಿಕೆಟ್ ತಂಡದ ಆಟಗಾರರು ಈಗ ಹಂತ ಹಂತವಾಗಿ ತಮ್ಮ ದೇಶಕ್ಕೆ ಮರಳಲು ಆರಂಭಿಸಿದ್ದಾರೆ.

» ಜಿಂಬಾಬ್ವೆಯ ಹಲವು ಆಟಗಾರರು ತವರಿಗೆ



ನಡೆಯುತ್ತಿರುವ ಸಂಘರ್ಷ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಅಂತಾರಾಷ್ಟ್ರೀಯ ಕ್ರಿಕೆಟ್ ಮಂಡಳಿ ತಂಡದ ಪ್ರಯಾಣ ವ್ಯವಸ್ಥೆಯನ್ನು ಮರು ರೂಪಿಸಿ ಪರ್ಯಾಯ ಮಾರ್ಗದ ಮೂಲಕ ವಾಪಸ್ಸು ಕಳುಹಿಸುವ ಕ್ರಮ ಕೈಗೊಂಡಿದೆ.

ಜಿಂಬಾಬ್ವೆ ತಂಡ ಈ ಬಾರಿ ವಿಶ್ವಕಪ್ ಟೂರ್ನಿಯಲ್ಲಿ ಗಮನಾರ್ಹ ಪ್ರದರ್ಶನ ನೀಡಿತ್ತು. ಬಲಿಷ್ಠ ಆಸ್ಟ್ರೇಲಿಯಾ ಮತ್ತು ಶ್ರೀಲಂಕಾ ತಂಡಗಳನ್ನು ಸೋಲಿಸಿ ಸೂಪರ್ ಎಂಟು ಹಂತಕ್ಕೇರಿದ ಜಿಂಬಾಬ್ವೆ, ಅಲ್ಲಿಂದ ಮುಂದಿನ ಹಂತಕ್ಕೆ ಸಾಗಲು ಸಾಧ್ಯವಾಗದೆ ಕಳೆದ ವಾರ ಟೂರ್ನಿಯಿಂದ ಹೊರಬಿದ್ದಿತ್ತು.


ಮಾರ್ಚ್ 2ರಂದು ಭಾರತದಿಂದ ಹೊರಡಬೇಕಿದ್ದರೂ, ಅಮೆರಿಕ ಮತ್ತು ಇಸ್ರೇಲ್ ದೇಶಗಳು ಇರಾನ್ ಮೇಲೆ ನಡೆಸಿದ ದಾಳಿಯ ನಂತರ ಗಲ್ಫ್ ಪ್ರದೇಶದ ವಾಯುಪ್ರದೇಶವನ್ನು ಮುಚ್ಚಿದ ಪರಿಣಾಮ ತಂಡ ದಿಲ್ಲಿಯಲ್ಲಿ ಸಿಲುಕಿಕೊಂಡಿತ್ತು. ಈ ಕಾರಣದಿಂದಾಗಿ ನಿಗದಿತ ಪ್ರಯಾಣ ವ್ಯವಸ್ಥೆ ಸಂಪೂರ್ಣವಾಗಿ ವ್ಯತ್ಯಯಗೊಂಡಿತ್ತು.

ಇದೀಗ ಪರ್ಯಾಯ ವ್ಯವಸ್ಥೆಯ ಮೂಲಕ ಆಟಗಾರರನ್ನು ಹಂತ ಹಂತವಾಗಿ ಕಳುಹಿಸುವ ಕಾರ್ಯ ಆರಂಭವಾಗಿದೆ. ಮೊದಲ ತಂಡದ ಆಟಗಾರರು ಬುಧವಾರ ಭಾರತದಿಂದ ಹೊರಟಿದ್ದಾರೆ. ಉಳಿದ ಆಟಗಾರರು ಶುಕ್ರವಾರ ಮಧ್ಯಾಹ್ನ ತಮ್ಮ ದೇಶದತ್ತ ಪ್ರಯಾಣ ಆರಂಭಿಸುವ ನಿರೀಕ್ಷೆಯಿದೆ.

ಸಿಲುಕಿಕೊಂಡ ವಿಂಡೀಸ್: ಮೊದಲು ಜಿಂಬಾಬ್ವೆ ತಂಡ ದುಬೈ ಮೂಲಕ ಪ್ರಯಾಣಿಸಿ ತಮ್ಮ ರಾಜಧಾನಿ ಹರಾರೆ ತಲುಪಬೇಕಾಗಿತ್ತು. ಆದರೆ ಪ್ರಸ್ತುತ ಪರಿಸ್ಥಿತಿಯಿಂದಾಗಿ ಆ ಮಾರ್ಗವನ್ನು ಬದಲಾಯಿಸಲಾಗಿದ್ದು, ಈಗ ಎಥಿಯೋಪಿಯಾ ದೇಶದ ರಾಜಧಾನಿ ಅಡಿಸ್ ಅಬಾಬಾ ಮೂಲಕ ಹರಾರೆ ತಲುಪುವಂತೆ ಹೊಸ ಪ್ರಯಾಣ ವ್ಯವಸ್ಥೆ ಮಾಡಲಾಗಿದೆ ಎಂದು ತಿಳಿದು ಬಂದಿದೆ. ಇದೇ ಪರಿಸ್ಥಿತಿಯಿಂದ ವೆಸ್ಟ್ ಇಂಡೀಸ್ ತಂಡವೂ ಭಾರತದಲ್ಲೇ ಸಿಲುಕಿಕೊಂಡಿದೆ. ಆದರೆ ಅವರ ಪ್ರಯಾಣ ವ್ಯವಸ್ಥೆ ಕುರಿತು ಇನ್ನೂ ಯಾವುದೇ ಅಧಿಕೃತ ಮಾಹಿತಿ ಪ್ರಕಟವಾಗಿಲ್ಲ.

ಪದಬಂಧ

» ರಾಜಾ ಸಂಗಮೇಶ ಹಿರೇಮಠ



5915

ಎಡದಿಂದ ಬಲಕ್ಕೆ

2.ಮುಳ್ಳುಗಳಿರುವ ಮರಳುಗಾಡಿನ ಸಸ್ಯ (5)
5.ಸಂಸಾರ ಸಾಗರ ದಾಟಿಸುವವಳು (5)
6.ಯಮನ ಹಗ್ಗವನ್ನು ಹೀಗೆನ್ನಬಹುದೆ? (2)
7.ಕೆಲಸದ ಸಮಾನಪದ (2)
9.ಗೊಂದಲ-ಕಸಿವಿಸಿಯಿಲ್ಲಿ ತಿರುಗಿದೆ (4)
11.ಲಯದಿಂದ ಕೊನೆಗೊಂಡ ಮಂದಿರ (4)
15.ಆಮೇಲಿನ ವಿಷಯ ಈ ಹಬೆಯದ್ದೇ ಆಗಿದೆ (2)
16.ಹೆದರಿಕೆ-ಅಂಜಿಕೆ (2)
17.ನಾವಾಡುವ ನುಡಿಗಳ ಹುಟ್ಟು-ಬೆಳವಣಿಗೆ ತಿಳಿಸುವ ಶಾಸ್ತ್ರ (5)
19.ಗಾದಿ-ವರ ಒಳಗೊಂಡ ಸುದ್ದಿ ಕೊಡುವವನು (5)

ಮೇಲಿನಿಂದ ಕೆಳಕ್ಕೆ

1.ಪುಟ್ಟಣ್ಣ ಕಣಗಾಲ ನಿರ್ದೇಶನದ ಚಿತ್ರ (5)
2.ನೆಗಡಿ ಕಡೆಯಲ್ಲಿ ದೀರ್ಘವಾಗಿದೆ (2)
3.ಪಾತ್ರೆಯಂತೆ ಒಡ್ಡಿದ ಕೈ-ಬೊಗಸೆ (4)
4.ಇದು ಬೆಳ್ಳಿಯ ಬೆಟ್ಟ (5)
8.ಮೊಳಕೈಯಿಂದ ಹಸ್ತದ ತುದಿಯವರೆಗಿನ ಅಳತೆ (2)
10.ತೋಟದಲ್ಲಿ ಸಂತಸಮಯ ಸಂಚಾರ (5)
12.ಮಾತಿನ ದೇವತೆಯಾದ ಶಾರದೆ (2)
13.ದೆಹಲಿಯ ಪಕ್ಕದಲ್ಲಿ ಹರಿವ ಹೊಳೆ (5)
14.ರಾಯರು ಮಾಡಿದ ಸಂಧಾನ (4)
18.ಓದಿನಿಂದ ಬರುವ ಜ್ಞಾನ (2)

5914 ಉತ್ತರ

ಎಡದಿಂದ ಬಲಕ್ಕೆ:
1.ಸಸಿ 2.ಮನುಜಮತ
4.ಮೂರೆಲೆ 5.ನಾಗರಿಕ
7.ನಗೆನಟ 9.ಜನಧನ
13.ಬಡಾವಣೆ 15.ಕಲಹ
16.ರಂಗನತಿಟ್ಟು 17.ಹಗೆ

ಮೇಲಿನಿಂದ ಕೆಳಕ್ಕೆ:
1.ಸಹಗಮನ
2.ಮಲೆನಾಡು 3.ತಪ್ಪು
4.ಮೂರ್ಖತನ
6.ಕಬಂಧ 8.ಬಡಿಗೆ
10.ನರವ್ಯೂಹ
11.ನಕಲುತೆಗೆ
12.ಅಣೆಕಟ್ಟು 14.ರಂಭೆ

ವಿಶೇಷ ಚೇತನರ ಉನ್ನತಿಗೆ ವಿಶೇಷ ಪ್ರಯತ್ನ

ಸಮಾಜದಲ್ಲಿ ವಿಶೇಷ ಚೇತನ ಮಕ್ಕಳ ಸರ್ವತೋಮುಖ ಅಭಿವೃದ್ಧಿಗೆ ಅನುಸರಿಸಬೇಕಾದ ಅಗತ್ಯ ಕ್ರಮಗಳತ್ತ ಗಮನಹರಿಸುವುದು ಈ ಬರಹದ ಉದ್ದೇಶವಾಗಿದೆ. ಶಾರೀರಿಕ, ಬೌದ್ಧಿಕ, ಕಲಿಕೆ ಅಥವಾ ವರ್ತನಾ ಅಡಚಣೆಗಳಿರುವ ಮಕ್ಕಳು ನಮ್ಮ ಸುತ್ತಲೂ ಜನಿಸಿ ಬೆಳೆದುಕೊಳ್ಳುತ್ತಿದ್ದಾರೆ; ಅವರ ಅಗತ್ಯಗಳನ್ನು ಅರ್ಥಮಾಡಿಕೊಳ್ಳುವ ದೃಷ್ಟಿಕೋನ ಎಲ್ಲರಲ್ಲಿ ಬೆಳೆಯಬೇಕಿದೆ. ಅದಕ್ಕಾಗಿ ನಾವು ನಮ್ಮ ಮನೋಭಾವನೆ ಮತ್ತು ವರ್ತನೆಗಳಲ್ಲಿ ಹಲವಾರು ಬದಲಾವಣೆಗಳನ್ನು ತೋರುವುದು ಅವಶ್ಯ.

ಇನ್‌ಕ್ಲೂಷನ್ (ಒಳಗೊಳ್ಳುವಿಕೆ) ಎಂದರೇನು?

ಶಿಕ್ಷಣದ ಕ್ಷೇತ್ರದಲ್ಲಿ ಒಳಗೊಳ್ಳುವಿಕೆ ಅಂದರೆ ಎಲ್ಲ ಮಕ್ಕಳಿಗೂ, ಅವರ ಸಾಮರ್ಥ್ಯ, ಹಿನ್ನೆಲೆ, ಅಡಚಣೆ ಏನೇ ಇದ್ದರೂ, ಒಂದೇ ಶಾಲೆಯಲ್ಲಿ ಮತ್ತು ಸಾಧ್ಯವಾದಷ್ಟು ಒಂದೇ ತರಗತಿಯಲ್ಲಿ ಕಲಿಯುವ ಅವಕಾಶ ಒದಗಿಸುವುದು. ಅದೆ ಪ್ರತಿ ಮಗುವಿನ/ವಿದ್ಯಾರ್ಥಿಯ ವೈಯಕ್ತಿಕ ಅಗತ್ಯಗಳಿಗೆ ತಕ್ಕಂತೆ ಹೆಚ್ಚುವರಿ ಬೆಂಬಲ, ಅನುಕೂಲತೆಗಳು ಮತ್ತು ಪ್ರಶಕ್ತ ಪಠ್ಯಕ್ರಮಗಳನ್ನು ರೂಪಿಸುವುದು ಇದರ ಮುಖ್ಯ ಅಂಶ.

ಒಂದು ಸಾಮಾನ್ಯ ಶಾಲೆಯ ಅನುಭವ : ಈಗ ಹಲವು ಶಾಲೆಗಳಲ್ಲಿ ಇಂತಹ ಸಮಾವೇಶಿತ ಶಿಕ್ಷಣದ ವ್ಯವಸ್ಥೆಯನ್ನು ಅಳವಡಿಸಲಾಗಿದೆ. ಅಂತಹ ಶಾಲೆಯಗಳಲ್ಲಿ ಸಾಮಾನ್ಯ ಮಕ್ಕಳು, ದಿವ್ಯಾಂಗ ಮಕ್ಕಳು ಮತ್ತು ವಿಶೇಷ ಚೇತನ ಮಕ್ಕಳು ಒಂದೇ ತರಗತಿಯಲ್ಲಿ ಒಟ್ಟಿಗೆ ಕುಳಿತು ಕಲಿಯುವ ಅವಕಾಶ ಹೊಂದಿದ್ದಾರೆ, ಜೊತೆಗೆ ವಿಶೇಷ ಅಗತ್ಯವಿರುವ ಮಕ್ಕಳಿಗಾಗಿ ಪ್ರತ್ಯೇಕ ವಿಶೇಷ ತರಗತಿಯಲ್ಲಿ ಅವರ ಸಾಮರ್ಥ್ಯಕ್ಕೆತಕ್ಕ ಪಾಠಗಳನ್ನು ಕಲಿಸಿಕೊಡುವ ವ್ಯವಸ್ಥೆ ಇರುತ್ತದೆ.

ಈ ವಿಶೇಷ ತರಗತಿಗೆ ತರಬೇತಿ ಪಡೆದ ವಿಶೇಷ ಅಧ್ಯಾಪಕರು ಇರುವುದು ಮತ್ತೊಂದು ವಿಶೇಷ. ಮಕ್ಕಳ ಕಲಿಕಾ ವೇಗ, ಗಮನ ಸಾಮರ್ಥ್ಯ, ಭಾಷಾ ಅಭಿವದ್ಧಿ ಇತ್ಯಾದಿಗಳನ್ನು ಗಮನದಲ್ಲಿಟ್ಟು ಪಠ್ಯಕ್ರಮವನ್ನು ರೂಪಿಸಿ, ಹಂತ ಹಂತವಾಗಿ ಕಲಿಸಿಕೊಡುತ್ತಾರೆ. ಅಕ್ಷರ ಪರಿಚಯ, ಶಬ್ದ ಓದು, ಲಿಖಿತ ಅಭ್ಯಾಸ, ಸಂಜ್ಞೆಗಳ ಮೂಲಕ ಕಲಿಕೆ, ಆಟ ಆಧಾರಿತ ಚಟುವಟಿಕೆಗಳು ಇವುಗಳ ಮೂಲಕ ಮಕ್ಕಳಲ್ಲಿ ಆತ್ಮವಿಶ್ವಾಸ ಬೆಳೆಸುವ ಯತ್ನ ಸಾಗುತ್ತದೆ. ಹೀಗೆ ಅವರಿಗೆ ಅಗತ್ಯವುಳ್ಳ ಸಹಾಯ ಕೂಡ ಆ ಮಕ್ಕಳಿಗೆ ಮಾಡಲಾಗುತ್ತದೆ.

ಸನ್ನಿಯ ಸಣ್ಣ ಗೆಲುವು: ಒಂದು ಸಮಾವೇಶಿತ ಶಾಲೆಯಲ್ಲಿ ಓದುತ್ತಿದ್ದ 4ನೇ ತರಗತಿಯ ಸನ್ನಿಗೆ (ಹೆಸರು ಬದಲಾಯಿಸಲಾಗಿದೆ) ಕಲಿಕೆಯಲ್ಲಿ ತೊಂದರೆ ಇರುವುದನ್ನು ತಜ್ಞರ ಮೌಲ್ಯಮಾಪನದಿಂದ ದೃಢಪಡಿಸಲಾಗಿತ್ತು. ಅವನ ಅವಳಿ ಸಹೋದರನೇ ಅವನ ಸಹಪಾಠಿ; ಸಹೋದರನು ಶೈಕ್ಷಣಿಕವಾಗಿ ತುಂಬ ಮುಂದಿದ್ದು, ಪರೀಕ್ಷೆಗಳಲ್ಲಿ ಹೆಚ್ಚು ಅಂಕ ಗಳಿಸಿ ಎಲ್ಲರ ಮೆಚ್ಚುಗೆ ಪಡೆಯುತ್ತಿದ್ದ.

ಸನ್ನಿ ಸಾಮಾನ್ಯ ತರಗತಿಯಲ್ಲಿ ಕುಳಿತಿದ್ದರೂ ಪಾಠದ ವೇಗ, ಭಾಷೆ ಮತ್ತು ವಿಧಾನ ಅವನಿಗೆ ಅರ್ಥವಾಗದ ಕಾರಣ ಅವನು ಪಠ್ಯ ಚಟುವಟಿಕೆಗಳಲ್ಲಿ ಸರಿಯಾಗಿ ಭಾಗವಹಿಸುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ. ಆದ್ದರಿಂದ ಅವನಿಗಾಗಿ ವಿಶೇಷ ತರಗತಿಯಲ್ಲಿ ಸುಲಭೀಕೃತ ಕಾರ್ಯ ಪತ್ರಿಕೆಗಳು ಮತ್ತು ನಿರಂತರ ಮಾರ್ಗದರ್ಶನದ ಮೂಲಕ ಅಭ್ಯಾಸ ಮಾಡಿಸಲಾಗುತ್ತಿತ್ತು.

ಒಮ್ಮೆ ವಿಶೇಷ ತರಗತಿಯಲ್ಲಿ ನೀಡಲಾದ ಉಕ್ತ ಲೇಖನ ಚಟುವಟಿಕೆಯಲ್ಲಿ ಸನ್ನಿ 10/10 ಅಂಕಗಳನ್ನು ಗಳಿಸಿದಾಗ ಅವನು ಅವನ ಮುಖದಲ್ಲಿ ಮುಗಿಲುಮುಟ್ಟಿದ ಸಂತೋಷದೊಂದಿಗೆ, ಇದನ್ನು ನಾನು ನನ್ನ ಸಹೋದರನಿಗೆ ತೋರಿಸಬೇಕು, ಯಾವಾಗಲೂ ಅವನೇ ಹೆಚ್ಚು ಅಂಕ ಪಡೆದು ಎಲ್ಲರ ಮೆಚ್ಚುಗೆ ಪಡೆಯುತ್ತಾನೆ; ಇಂದು ನನ್ನ ಅಂಕಗಳನ್ನು ನೋಡಿ ಅವನಿಗೂ, ಎಲ್ಲರಿಗೂ ಗೊತ್ತಾಗಬೇಕು ಎಂದು ಕುಣಿದು ಕುಪ್ಪಳಿಸಿದನು. ಈ ಒಂದು ಘಟನೆ, ಸರಿಯಾದ ಬೆಂಬಲ ಮತ್ತು ಪಠ್ಯ ರೂಪಾಂತರ ದೊರಕಿದಾಗ ವಿಶೇಷ ಅಗತ್ಯಗಳಿರುವ ಮಕ್ಕಳು ಎಷ್ಟು ಗೌರವ ಮತ್ತು ಆತ್ಮವಿಶ್ವಾಸವನ್ನು ಅನುಭವಿಸುತ್ತಾರೆ ಎಂಬುದಕ್ಕೆ ಜ್ವಲಂತ ಉದಾಹರಣೆ.

ಮತ್ತೊಂದು ಪಾಠ: ಲಕ್ಷ್ಮಿಯ ಕಥೆ: ಇನ್ನೊಂದು ವಿಶೇಷ ಶಾಲೆಯಲ್ಲಿ ಕಲಿಯುತ್ತಿರುವ 18 ವರ್ಷದ ಲಕ್ಷ್ಮಿಯ ಘಟನೆಯೂ ನಮ್ಮನ್ನು ಆಲೋಚನೆಗೆ ಒಳಪಡಿಸುತ್ತದೆ. ಒಮ್ಮೆ ಶಾಲೆಯಲ್ಲಿ ಹಿರಿಯ ಅಧ್ಯಾಪಿಕೆಯ ಸೂಚನೆಗಳನ್ನು ಆಕೆ ಗಮನಿಸದೆ, ಅವರ ಮಾತಿನ ವಿರುದ್ಧವಾಗಿ ನಡೆದುಕೊಂಡಳು; ಇದರಿಂದ ಅಧ್ಯಾಪಿಕೆಗೆ ಎಲ್ಲರ ಮುಂದೆ ಸ್ವಲ್ಪ ಅವಮಾನವಾಯಿತು. ಲಕ್ಷ್ಮಿಯನ್ನು ಕರೆದು ಗದರಿಸಿದರು.

ಲಕ್ಷ್ಮಿಗೆ ಆಗುತ್ತಿರುವುದೇನು ಎನ್ನುವುದು ಅಷ್ಟು ಸ್ಪಷ್ಟವಾಗಿರಲಿಲ್ಲ; ಆಕೆ ಮೌನವಾಗಿ ನಿಂತುಕೊಂಡಳು. ಸಂಜೆ ಮನೆಗೆ ಕರೆದುಕೊಂಡು ಹೋಗಲು ಆಕೆಯ ತಾಯಿ ಬಂದಿದ್ದರು. ಆಗ ಅವರಿಗೆ ಅಧ್ಯಾಪಕಿ ಈ ಘಟನೆ ಬಗೆಗೆ ತಿಳಿಸಿದಾಗ, ತಾಯಿ ಶಾಂತವಾಗಿ ಲಕ್ಷ್ಮಿಗೆ ಇತ್ತೀಚೆಗೆ ಅಪಸ್ಮಾರ (ಎಪಿಲೆಪ್ಸಿ) ತೊಂದರೆ ಹೆಚ್ಚಾಗಿದೆ; ಅವಳ ಪ್ರತಿಕ್ರಿಯಾ ಸಮಯದಲ್ಲಿ ವ್ಯತ್ಯಾಸ ಕಾಣಿಸುತ್ತಿದೆ. ಅವಳ ಹೆಸರನ್ನು ದೂರದಿಂದ ಕರೆಯುವುದರಿಂದ ಅವಳಿಗೆ ತತ್ ಕ್ಷಣ ಅದರ ಗ್ರಹಿಕೆಯಾಗುವುದಿಲ್ಲ; ಅವಳ ಕಣ್ಣುಗಳಲ್ಲಿ ಕಣ್ಣಿಟ್ಟು ನಿಧಾನವಾಗಿ ಮಾತನಾಡಿದರೆ ಮಾತ್ರ ಅವಳಿಗೆ ಅರ್ಥವಾಗುತ್ತದೆ ಎಂದು ವಿವರಿಸಿದರು.

ಇದನ್ನು ಕೇಳಿದ ಎಲ್ಲರೂ ನಿಬ್ಬೆರಗಾದರು. ಮಕ್ಕಳ ವರ್ತನೆಯ ಹಿಂದೆ ಇರುವ ವೈದ್ಯಕೀಯ ಅಥವಾ ಮಾನಸಿಕ ಕಾರಣಗಳನ್ನು ತಿಳಿಯದೆ ತೀರ್ಪು ನೀಡುವ ನಮ್ಮ ಪ್ರವೃತ್ತಿಯನ್ನು ನಾವು ನಮ್ಮೊಳಗೆ ವಿಮರ್ಶಿಸಿಕೊಳ್ಳಬೇಕಾಗಿದೆ ಅಲ್ಲವೆ?

ಮನೋಭಾವ ಬದಲಾವಣೆ ಇಂದಿನ ಅಗತ್ಯ: ಸಮಾವೇಶಿತ ಶಿಕ್ಷಣ ಯಶಸ್ವಿಯಾಗಬೇಕಾದರೆ ಕೇವಲ ನೀತಿ ಮತ್ತು ಯೋಜನೆ ಸಾಕಾಗುವುದಿಲ್ಲ; ಸಮಾಜದ ಪ್ರತಿಯೊಬ್ಬ ಸದಸ್ಯನ ಮನೋಭಾವ ಬದಲಾಗಬೇಕು. ವಿಶೇಷ ಚೇತನ ಮಕ್ಕಳು ಛಿಶಿಸ್ತುಛಿ ಪಾಲನೆಯಲ್ಲಿ ತಪ್ಪಿದರೆ ಅದನ್ನು ಕೇವಲ ಅವಿಧೇಯತೆ ಎಂದು ನೋಡದೇ, ಅದರ ವೈದ್ಯಕೀಯ ಮಾನಸಿಕ ಹಿನ್ನೆಲೆಯನ್ನು ಅರಿಯುವ ಪ್ರಯತ್ನ ಮಾಡಬೇಕು.

ಶಿಕ್ಷಕರು, ಪೋಷಕರು ಮತ್ತು ಸಹಪಾಠಿಗಳು ಸಂವೇದನಾಶೀಲ ಸಂವಾದ, ಸಹಾನುಭೂತಿ ಮತ್ತು ಗೌರವಯುತ ಸಂವಹನವನ್ನು ಅಭ್ಯಾಸಮಾಡಬೇಕು. ಶಾಲಾವ್ಯವಸ್ಥೆ ಪಠ್ಯಕ್ರಮ, ಮೌಲ್ಯಮಾಪನ ಮತ್ತು ವಾತಾವರಣವನ್ನು ಎಲ್ಲರಿಗೂ ಲಭ್ಯವಾಗುವಂತೆ ಹೊಂದಿಸಿಕೊಳ್ಳಬೇಕು. ಹೀಗೆ ಸಮಾವೇಶಿತ ಶಿಕ್ಷಣದ ತತ್ವಗಳನ್ನು ಬದುಕಿನಲ್ಲೇ ಅನುಭವಿಸಿದಾಗ, ವಿಶೇಷ ಚೇತನ ಮಕ್ಕಳೂ ತಮ್ಮ ಸಾಮರ್ಥ್ಯವನ್ನು ತೋರಿಸಲು ಅವಕಾಶ ಪಡೆಯುತ್ತಾರೆ ಮತ್ತು ನಾನೂ ಈ ಸಮಾಜದ ಅವಿಭಾಜ್ಯ ಅಂಗ ಎಂಬ ಭಾವನೆ ಅವರೊಳಗೆ ಗಟ್ಟಿಯಾಗಿ ನೆಲೆಸುತ್ತದೆ.

ಕೊನೆಯಲ್ಲಿ ದಿವ್ಯಾಂಗ ಸಾಧಕರೊಬ್ಬರು ಹೇಳಿದ ಮಾತುಗಳತ್ತ ಗಮನ ಹರಿಸೋಣ. ನಿಮ್ಮೆಲ್ಲರಂತೆ ನಮಗೂ ಹವಾಮಾನ, ರಾಜಕೀಯ, ಕ್ರಿಕೆಟ್ ಇತ್ಯಾದಿಗಳ ಬಗ್ಗೆ ಆಸಕ್ತಿ ಇದೆ. ನಮ್ಮ ಜೊತೆಯಲ್ಲಿ ನೀವು ಸಹಜವಾಗಿ ಇದೇ ವಿಷಯಗಳ ಬಗ್ಗೆ ಮಾತನಾಡಿದರೆ ನಾವೂ ಖುಷಿಪಡುತ್ತೇವೆ. ನಮ್ಮ ಸಾಧನೆಯನ್ನು ಕೊಂಡಾಡುವ ಉತ್ಸಾಹದಲ್ಲಿ, ನಿಮ್ಮ ಸಾಧನೆ, ನಿಮ್ಮ ಧೈರ್ಯ ಲೋಕಕ್ಕೆ ಮಾದರಿ' ಎಂದು ನಮ್ಮನ್ನು ಪ್ರತ್ಯೇಕಿಸಿ ಬೇರೆ ಮಾಡಿದಂತೆ ಹೊಗಳಿ ನಮ್ಮನ್ನು ನೋಯಿಸಬೇಡಿ. ಈ ಮಾತು ಎಷ್ಟು ಮಾರ್ಮಿಕವಾದ ಸತ್ಯವನ್ನು ಒಳಗೊಂಡಿದೆ! ಎಂದು ಎಲ್ಲರೂ ಯೋಚಿಸಬೇಕಲ್ಲವೆ?

ಶ್ರೀಮತಿ ಶುಭಾ ಭಟ್
ಆಪ್ತ ಸಲಹಾ ಕೇಂದ್ರ,
ಉಚಿತ ಸಹಾಯವಾಣಿ: 63620 55380

ಕಿರುಸುದ್ದಿ

ಮಹೇಶ ಕಲಘಟಗಿ ನೇಮಕ



ಲಕ್ಷ್ಮೇಶ್ವರ: ಕರವೇ ಪ್ರವೀಣ ಶೆಟ್ಟಿಬಣದ ಜಿಲ್ಲಾ ಪ್ರಧಾನ ಕಾರ್ಯದರ್ಶಿಯಾಗಿ ಮಹೇಶ ಕಲಘಟಗಿ ನೇಮಕವಾಗಿದ್ದು ರಾಜ್ಯಾಧ್ಯಕ್ಷ ಪ್ರವೀಣ ಶೆಟ್ಟಿ ಅವರು ಆಯ್ಕೆ ಮಾಡಿ ಆದೇಶ ಪತ್ರವನ್ನು ಕೊಟ್ಟು ನಾಡ-ಪ್ರೇಮ ತಮ್ಮ ನಡೆ-ನುಡಿ, ಉತ್ತಮ ಚಾರಿತ್ರದ ಗುಣಗಳನ್ನು ಗುರುತಿಸಿ ತಮ್ಮ ಪ್ರಾಮಾಣಿಕ ಕನ್ನಡ ಪರ ಕಾಳಜಿಯನ್ನು ಪ್ರಾಮಾಣಿಕ ನಾಡಾಭಿಮಾನವನ್ನು ಎತ್ತಿ ಹಿಡಿಯುವುದರೊಂದಿಗೆ ರೈತರ, ಕಾರ್ಮಿಕರ, ಮಹಿಳೆಯರ, ವಿದ್ಯಾರ್ಥಿಗಳ ಹಾಗೂ ಸಮಗ್ರ ನಾಡಿನ ಸಮಸ್ಯೆಗಳಿಗೆ ಸ್ಪಂದಿಸುತ್ತಾ ನಾಡಿನ ಸರ್ವತೋಮುಖ ಅಭಿವೃದ್ಧಿಗೆ ಹಾಗೂ ಕರ್ನಾಟಕ ರಕ್ಷಣಾ ವೇದಿಕೆಯ ತತ್ವಸಿದ್ಧಾಂತಗಳಿಗೆ ಬದ್ಧರಾಗಿ ಕಾರ್ಯವನ್ನು ಮಾಡಬೇಕು ಎಂದು ಹೇಳಿದ್ದಾರೆ.

ಮೂರ್ತಿ ಅನಾವರಣ ನಾಳೆ

ಮುಂಡರಗಿ: ತಾಲೂಕು ಡಂಬಳ ಗ್ರಾಮ ಪಂಚಾಯತಿ ಆವರಣದಲ್ಲಿ ಸಂವಿಧಾನ ಶಿಲ್ಪಿ ಡಾ. ಬಿ. ಆರ್. ಅಂಬೇಡ್ಕರ್ ಅವರ 6.8 ಅಡಿ ಎತ್ತರದ ಮೂರ್ತಿ ಅನಾವರಣ ಕಾರ್ಯಕ್ರಮ ಮಾ.7ರ ಬೆಳಗ್ಗೆ 10 ಗಂಟೆಗೆ ಡಂಬಳ ಗ್ರಾಮ ಪಂಚಾಯತ್ ಆವರಣದಲ್ಲಿ ಜರುಗಲಿದೆ.

ಸಾನಿಧ್ಯ ಡಂಬಳ-ಗದಗ ತೋಂಟದಾರ್ಯಮಠದ ಡಾ. ತೋಂಟದ ಸಿದ್ಧರಾಮ ಸ್ವಾಮೀಜಿ ವಹಿಸುವರು. ಮುಂಡರಗಿಯ ತೋಂಟದಾರ್ಯ ಶಾಖಾಮಠ ನಿಜಗುಣಾನಂದ ಸ್ವಾಮೀಜಿ ಸಮ್ಮುಖ ವಹಿಸುವರು. ಉದ್ಘಾಟನೆಯನ್ನು ಶಾಸಕ ಜಿ.ಎಸ್. ಪಾಟೀಲ ನೆರವೇರಿಸುವರು. ಕರ್ನಾಟಕ ರಾಜ್ಯ ಸರ್ಕಾರದ ಮುಖ್ಯ ಸಚೇತಕ ಹಾಗೂ ವಿಧಾನ ಪರಿಷತ್ ಸದಸ್ಯ ಸಲೀಂ ಅಹ್ಮದ್ ಜ್ಯೋತಿ ಬೆಳಗಿಸುವವರು. ಅಧ್ಯಕ್ಷತೆಯನ್ನು ಡಂಬಳ, ಗ್ರಾಮ ಪಂಚಾಯತ್ ಮಾಜಿ ಅಧ್ಯಕ್ಷೆ ಶಿವಲೀಲಾ ದೇ. ಬಂಡಿಹಾಳ ವಹಿಸುವರು. ಸಂಸದ ಬಸವರಾಜ ಬೊಮ್ಮಾಯಿ, ಮಾಜಿ ಸಹಕಾರ ಸಚಿವ ಎಸ್. ಎಸ್. ಪಾಟೀಲ, ಮಾಜಿ ಶಾಸಕ ರಾಮಕೃಷ್ಣ ದೊಡ್ಡಮನಿ, ಮಾಜಿ ಸಚಿವ ಕಳಕಪ್ಪ ಬಂಡಿ, ಶಿರಹಟ್ಟಿ ಶಾಸಕ ಡಾ. ಚಂದ್ರು ಲಮಾಣಿ, ಮಾಜಿ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮದ ಅಧ್ಯಕ್ಷ ವೈ. ಎನ್. ಗೌಡರ, ಮಾದಿಗ ಮಹಾಸಭಾ,ಉಪಾಧ್ಯಕ್ಷ ಮೋಹನ ಎಸ್. ಅಲಮೇಲ್ಕರ್ ಮುಂತಾದವರು ಭಾಗವಹಿಸುವರು.

ಪದಾಧಿಕಾರಿಗಳ ಆಯ್ಕೆ



ಲಕ್ಷ್ಮೇಶ್ವರ: ಪಟ್ಟಣದ ಪ್ರವಾಸಿ ಮಂದಿರದಲ್ಲಿ ಜಯ ಕರ್ನಾಟಕ ಸಂಘಟನೆ ಪದಾಧಿಕಾರಿಗಳ ಆಯ್ಕೆ ನಡೆಯಿತು. ರಾಜ್ಯಪ್ರಕಾರ್ಯದರ್ಶಿ ಚಂದ್ರಕಾಂತ ಚವ್ಹಾಣ್, ಹಿರಿಯ ಉಪಾಧ್ಯಕ್ಷ ಈಶಪ್ಪ ನಾಯ್ಕರ, ಜಿಲ್ಲಾ ಅಧ್ಯಕ್ಷ ರಫೀಕ್ ತೋರಗಲ್, ಜಿಲ್ಲಾ ಉಪಾಧ್ಯಕ್ಷ ಭಾಷಾಸಾಬ ಮಲ್ಲಸಮುದ್ರ, ಜಿಲ್ಲಾ ನಗರ ಘಟಕ ಅಧ್ಯಕ್ಷ ನಾಗರಾಜ ಕ್ಷತ್ರಿಯ ಅವರ ಸಮ್ಮುಖದಲ್ಲಿ ಆಯ್ಕೆ ಪ್ರಕ್ರಿಯೆ ನಡೆಯಿತು. ಲಕ್ಷ್ಮೇಶ್ವರ ತಾಲೂಕು ಅಧ್ಯಕ್ಷರಾಗಿ ಇಸ್ಮಾಯಿಲ್ ಆಡೂರ, ಲಕ್ಷ್ಮೇಶ್ವರ ಹಾಗೂ ಶಿರಹಟ್ಟಿ ತಾಲೂಕು ಸಂಚಾಲಕರಾಗಿ ರಮೇಶ ಹುಗನಕಟ್ಟಿ, ಗೌರವಾಧ್ಯಕ್ಷರಾಗಿ ಇಸಾಕಭಾಷಾ ಹರಪನಹಳ್ಳಿ, ಉಪಾಧ್ಯಕ್ಷ ಬಸವರಾಜ ಮೆಲ್ಲೂರಿ, ಮೈನು ಮೊಮಿನ್, ಪ್ರಧಾನ ಕಾರ್ಯದರ್ಶಿ ಹಾಲಪ್ಪ ಬಂಡಾರಿ, ಸಂ ಕಾರ್ಯದರ್ಶಿ ವೀರಭದ್ರಯ್ಯ ಮಠಪತಿ, ತಾಲೂಕು ಸಂಚಾಲಕರಾಗಿ ರಾಜು ಕೆರೆಕೊಪ್ಪದ, ದುದ್ದುಸಾಬ್ ರತನಖಾನ್, ಎಸ್.ಸಿ. ಘಟಕ ಅಧ್ಯಕ್ಷ ಪುಟ್ಟಪ್ಪ ಹರಿಜನ, ಎಸ್.ಟಿ. ಘಟಕ ಸಚಿನಕುಮಾರ ಮೆಲ್ಲೂರಿ, ನಗರ ಘಟಕ ಉಪಾಧ್ಯಕ್ಷರಾಗಿ ನಜಿರಸಾಬ್ ಬಾಗಲಕೋಟ, ಭರಕತ್ ಆಲಿ ಮುಳಗುಂದ, ಕಾರ್ಯದರ್ಶಿ ನದಿಮ್ ಕುಂದಗೋಳ, ತಾಲೂಕು ಸಹ ಸಂಚಾಲಕ ಬಸವರಾಜ ಮುಖಿ ಆಯ್ಕೆಯಾದರು.

ಗದಗ ಮಾರುಕಟ್ಟೆ ಧಾರಣೆ (ಕ್ವಿಂಟಲ್)

ಗೆಜ್ಜಿ ಶೇಂಗಾ	5093-9225
ಅಜವಾನ	7551-9619
ಅಲಸಂದಿ	5900-6149
ಕಡಲೆ	1109-5455
ಉದ್ದು	2989-5512
ಹವೀಜ	8600-8600
ಹೆಸರು	1429-6591
ಹುರಳಿ	1739-4319
ಜೋಳ	1107-4377
ಗೋವಿನಜೋಳ	1409-1837
ಮಡಕಿ	5169-11005
ಕುಸಬಿ	3589-5089
ಸೂರ್ಯಕಾಂತಿ	6779-6779
ತೊಗರಿ	4000-5938
ಗೋಧಿ	1109-5337
ಔಡಲ	4750-4750



ಗದಗ: ಭಾವಸಾರ ವ್ಹಿಜನ್ ಇಂಡಿಯಾ, ಪಂ.ಪಂಚಾಕ್ಷರ ಗವಾಯಿಗಳವರ ಕಲಾ ಮಹಾವಿದ್ಯಾಲಯದ ಯುಥ್ ರೆಡ್ ಕ್ರಾಸ್ ಹಾಗೂ ಅಂಬಿಕಾ ರಕ್ತನಿಧಿ ಕೇಂದ್ರದ ಸಂಯುಕ್ತ ಆಶ್ರಯದಲ್ಲಿ ನಗರದ ವೀರೇಶ್ವರ ಪುಣ್ಯಾಶ್ರಮದ ಸಭಾಂಗಣದಲ್ಲಿ ರಕ್ತದಾನ ಶಿಬಿರ ಹಾಗೂ ಉಚಿತ ರಕ್ತಗುಂಪು ತಪಾಸಣೆ ಶಿಬಿರವನ್ನು ಏರ್ಪಡಿಸಲಾಗಿತ್ತು.

ಲಕ್ಕುಂಡಿಯಲ್ಲಿ ರೇಣುಕಾಚಾರ್ಯ ಜಯಂತಿ

ಗದಗ: ಜಗತ್ತಿನಲ್ಲಿ ಇರುವ ಇಡೀ ಮಾನವ ಧರ್ಮಕ್ಕೆ ಜಯವಾಗಲಿ, ಧರ್ಮದಿಂದಲೇ ವಿಶ್ವಕ್ಕೆ ಶಾಂತಿ ಎಂದು ಸಾರಿರುವ ರೇಣುಕಾಚಾರ್ಯರು ವೀರಶೈವ ಧರ್ಮವನ್ನು ಸ್ಥಾಪನೆ ಮಾಡಿದರು ಎಂದು ಹರ್ಲಾಪೂರ ಡಾ.ಕೊಟ್ಟೂರೇಶ್ವರ ಸ್ವಾಮೀಜಿ ಹೇಳಿದರು. ತಾಲೂಕಿನ ಲಕ್ಕುಂಡಿ ಗ್ರಾಮದ ರೇಣುಕಾಚಾರ್ಯ ಜೀರ್ಣೋದ್ಧಾರ ಸೇವಾ ಸಮಿತಿಯು ರೇಣುಕಾಚಾರ್ಯ ಮಂದಿರದ ಆವರಣದಲ್ಲಿ ಹಮ್ಮಿಕೊಂಡಿದ್ದ ರೇಣುಕಾಚಾರ್ಯ ಜಯಂತಿ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಮಾತನಾಡಿದರು.

ಅಲ್ಲಪ್ರಭುದೇವರ ಮಠದ ಸಿದ್ಧಲಿಂಗೇಶ್ವರ ಸ್ವಾಮೀಜಿ ರೇಣುಕಾಚಾರ್ಯರ ಕುರಿತು ಮಾತನಾಡಿದರು. ಶಂಕ್ರಯ್ಯ ಹಿರೇಮಠ, ಮಹಾಂತಯ್ಯ ಬದ್ನಿಮಠ ಮಾತನಾಡಿದರು. ದೇವಸ್ಥಾನದ ಜೀರ್ಣೋದ್ಧಾರಕ್ಕೆ ದೇಣಿಗೆ ನೀಡಿದ ಮಹನೀಯರನ್ನು ಸನ್ಮಾನಿಸಲಾಯಿತು. ಸೇವಾ ಸಮಿತಿಯ ಅಧ್ಯಕ್ಷ ರೇವಣಸಿದ್ದಯ್ಯ ನರಗುಂದಮಠ, ರಮೇಶ ಹಳ್ಳಿ, ಕೆ.ಸಿ.ಹಿರೇಮಠ, ತೋಟಯ್ಯ ಕಳ್ಳಿಮಠ, ಬಸಯ್ಯ ಸಾಸ್ವಿಹಳ್ಳಿಮಠ, ಶಂಕ್ರಗೌಡ ಭರಮಗೌಡ್ರ, ಮಂಜುನಾಥ ಹಳ್ಳುರಮಠ, ಶಂಭುಲಿಂಗಯ್ಯ ಕಲ್ಮಠ, ಕೊಟ್ರಯ್ಯ ಮುಷಂಡಮಠ, ಅಂದಾನಯ್ಯ ಪತ್ರಿಮಠ, ಷಡಕ್ಷರಯ್ಯ ಮುಳಕೊಂಪಿಮಠ, ನಿವೃತ್ತ ಉಪತಹಶೀಲ್ದಾರ್ ಶರಣಬಸಯ್ಯ ಕಳ್ಳಿಮಠ, ಕಲ್ಲಯ್ಯ ನಾಗಾವಿಮಠ, ಚನ್ನಯ್ಯ ಪತ್ರಿಮಠ, ಶರಣಯ್ಯ ಪತ್ರಿಮಠ, ಹರಿಹರ ಹಿರೇಮಠ, ಮುತ್ತಪ್ಪ ರಿತ್ತಿ, ಮರಿಸ್ವಾಮಿ ಕಲ್ಮಠ, ಈರಯ್ಯ ಕಲ್ಮಠ, ಬೂದಯ್ಯ ಕುಲಕರ್ಣಿ ಉಪಸ್ಥಿತರಿದ್ದರು. ದೇವಸ್ಥಾನಕ್ಕೆ ಸಹಾಧನ ನೀಡಿದ ಬೆಳಧಡಿ, ಕಳಸಾಪೂರ, ಗಂಗಾವತಿ, ಕಾರಟಗಿ, ಯರಡೋಣಿ ಗ್ರಾಮದ ಭಕ್ತರನ್ನು ಸನ್ಮಾನಿಸಲಾಯಿತು. ಮಂಜುನಾಥ ಗರ್ಜಪ್ಪನವರ, ಬಸನಗೌಡ ಪಾಟೀಲ ಸಂಗೀತ ಸೇವೆ ನೀಡಿದರು. ಪ್ರಕಾಶ ಅರಹುಣಶಿ ನಿರೂಪಿಸಿದರು. ನಿವೃತ್ತ ಶಿಕ್ಷಕ ಅಶೋಕ ಬೂದಿಹಾಳ ವಂದಿಸಿದರು.



ಗದಗ: ತಾಲೂಕಿನ ಲಕ್ಕುಂಡಿ ಗ್ರಾಮದ ರೇಣುಕಾಚಾರ್ಯ ಜೀರ್ಣೋದ್ಧಾರ ಸೇವಾ ಸಮಿತಿಯು ರೇಣುಕಾಚಾರ್ಯ ಮಂದಿರದ ಆವರಣದಲ್ಲಿ ರೇಣುಕಾಚಾರ್ಯ ಜಯಂತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.

ಸಂಚಾರ ಸಿಗ್ನಲ್‌ಗಳಲ್ಲಿ ನೆರಳಿನ ಪರದೆ ಹಾಕಲು ಸಾರ್ವಜನಿಕರ ಒತ್ತಾಯ

ಬಿಸಿಲಿನಲ್ಲೇ ನಿಲ್ಲುವ ಬೈಕ್ ಸವಾರರು

ರುದ್ರಗೌಡ ಪಾಟೀಲ

ದಿಗಂತ ವಿಶೇಷ

ಗದಗ: ನಗರದ ಸಂಚಾರ ಸಿಗ್ನಲ್‌ಗಳಲ್ಲಿ ಬೈಕ್ ಸವಾರರಿಗೆ ಬಿಸಿಲಿನಿಂದ ರಕ್ಷಣೆ ನೀಡಲು ಪೊಲೀಸ್ ಇಲಾಖೆ ಹಾಗೂ ನಗರಸಭೆಯಿಂದ ಅಳವಡಿಸಿದ್ದ ಹಸಿರು ಪರದೆಗಳು ಕಿತ್ತು ಹೋಗಿದ್ದು, ದ್ವಿಚಕ್ರ ವಾಹನ ಸವಾರರಿಗೆ ಕಡು ಬೇಸಿಗೆಯ ಸೂರ್ಯನ ಪ್ರಖರ ಶಾಖ ತಪ್ಪದಾಗಿದೆ. ಕೂಡಲೇ ಪೊಲೀಸ್ ಇಲಾಖೆ ಹಾಗೂ ನಗರಸಭೆ ಸಿಬ್ಬಂದಿ ನೆರಳಿನ ಪರದೆ ಹಾಕಲು ಬೈಕ್ ಸವಾರರು ಒತ್ತಾಯಿಸಿದ್ದಾರೆ.

ಇಲ್ಲಿನ ಮುಳಗುಂದ ನಾಕಾ, ಟಿಪ್ಪು ಸುಲ್ತಾನ ಸರ್ಕಲ್, ಭೂಮ್ಮರಡ್ಡಿ ವೃತ್ತದ ಬಳಿ ಬರುವ ಪ್ರತಿ ರಸ್ತೆಗೆ ಈಗಾಗಲೇ 75 ಅಡಿ ಉದ್ದದ ಹಸಿರು ನೆಟ್ ನಾಲ್ಕು ಭಾಗದಲ್ಲಿ ಅಳವಡಿಸಲಾಗಿದೆ. ಪ್ರತಿ ಜಂಕ್ಷನ್‌ಗೆ 8-10 ಲಕ್ಷ ರೂಪಾಯಿ ಖರ್ಚಾಗಿದೆ. ಹಸಿರು ಪರದೆ ಅಳವಡಿಸುವ ಮೂಲಕ ಪೊಲೀಸ್ ಇಲಾಖೆಯಿಂದ ನೆರಳಿನ ವ್ಯವಸ್ಥೆ ಮಾಡಿತ್ತು. ಇದಕ್ಕೆ ಗದಗ-ಬೆಟಗೇರಿ ಜನರಿಂದ ಪ್ರಶಂಸೆಯ ಮಹಾಪೂರವೇ ಹರಿದು ಬಂದಿತು. ಇದೀಗ ಮುಳಗುಂದ ನಾಕಾ, ಭೂಮ್ಮರಡ್ಡಿ ವೃತ್ತದ ಬಳಿ ಬರುವ ಪರದೆಗಳು ತೆಗೆಯಲಾಗಿದೆ.

ಜತಗೆ ಕಂಬಗಳು ಮುರಿದಿವೆ. ಆದರೆ ಬಿಸಲು ಆರಂಭವಾಗಿ ಸುಮಾರು ದಿನ ಕಳೆದರೂ ಸಹ ಮರಳಿ ಹಾಕುವ ಕೆಲಸವಾಗಿಲ್ಲ, ಹೀಗಾಗಿ ಜನರು ಬಿಸಿಲು ಮುಗಿಯುವವರೆಗೆ ಪರದೆಗಳಿದ್ದರೆ, ಈ ಕೆಲಸ ಮಾಡಿದ್ದಕ್ಕೂ ಸಾರ್ಥಕವಾಗುತ್ತದೆ ಎನ್ನುತ್ತಾರೆ ಬೈಕ್ ಸವಾರರು.



- ಬಿಸಿಲಿನಿಂದ ತಪ್ಪಿಸಿಕೊಳ್ಳಲು ತಾತ್ಕಾಲಿಕ ವ್ಯವಸ್ಥೆ ಮಾಡಲಿ
- ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ಮತ್ತಷ್ಟು ಹೆಚ್ಚುವ ಸಾಧ್ಯತೆ
- ನಗರದ ವಿವಿಧ ಕಡೆ ನೆರಳಿನ ಪರದೆ ಹಾಕಲು ಅಧಿಕಾರಿಗಳಿಗೆ ಸಾರ್ವಜನಿಕರ ಆಗ್ರಹ

> ತಾಪಮಾನ ಹೆಚ್ಚಿದ್ದರಿಂದ ಸಿಗ್ನಲ್‌ಗಳಲ್ಲಿ ನಿಲ್ಲುವ ಬೈಕ್ ಸವಾರರಿಗೆ ತುಂಬಾ ತೊಂದರೆ ಆಗುತ್ತದೆ. ಇದನ್ನು ತಪ್ಪಿಸಲು ಕೂಡಲೇ ಸಿಗ್ನಲ್‌ಗಳಲ್ಲಿ ವಾಹನಗಳು ನಿಲ್ಲುವ ರಸ್ತೆಯಲ್ಲಿ ಹಸಿರು ಪರದೆಗಳನ್ನು ಹಾಕಿ ನೆರಳು ಮಾಡಬೇಕು. ಬೇಸಿಗೆ ಆರಂಭವಾಗುತ್ತಿದೆ ಕೂಡಲೇ ಈ ಬಗ್ಗೆ ಗಮನ ಹರಿಸಬೇಕು.
> ■ ವಿಶ್ವನಾಥ ಖಾನಪ್ಪನವರ, ಬೈಕ್ ಸವಾರ



ನೆರಳಿನ ವ್ಯವಸ್ಥೆ ಮಾಡಲು ಆಗ್ರಹ

ಗದಗ ಜಿಲ್ಲೆಯಲ್ಲಿ ಬಿಸಿಲ ತಾಪ ತಾಳಲಾರದೆ ಜನತೆ ಬೆಳಗ್ಗೆ 10ರಿಂದ ಸಂಜೆ 6ರ ವರೆಗೆ ತನಕ ರಸ್ತೆಗಿಳಿಯುವುದನ್ನೇ ಬಿಡುವಂಥ ಪರಿಸ್ಥಿತಿ ಇದೆ. ಕೆಲಸ ಕಾರ್ಯಗಳಿಗೆ ಅನಿವಾರ್ಯವಾಗಿ ಮನೆಯಿಂದ ಹೊರಬಂದರೆ ಟ್ರಾಫಿಕ್ ಸಿಗ್ನಲ್‌ಗಳಲ್ಲಿ ಉರಿ ಬಿಸಿಲಲ್ಲಿ 90 ಸೆಕೆಂಡ್ ನಿಲ್ಲಲಾಗುತ್ತಿಲ್ಲ. ಅದರಲ್ಲೂ ದ್ವಿಚಕ್ರ ವಾಹನ ಸವಾರರ ತಾಪ ಹೇಳಲಾಗದು. ಅನೇಕ ವಾಹನ ಸವಾರರು ಬಿಸಿಲಿಂದ ರಕ್ಷಣೆ ಪಡೆಯಲು ಸಿಗ್ನಲ್‌ಗಿಂತ ಮುಂಚೆಯೇ ನೆರಳಿರುವ ಜಾಗದಲ್ಲಿ ನಿಂತು ಹೊರಡುತ್ತಾರೆ. ಬಿಸಿಲು ತಾಳಲಾಗದೆ ಅನಿವಾರ್ಯವಾಗಿ ಟ್ರಾಫಿಕ್ ರೂಲ್ಸ್ ಉಲ್ಲಂಘಿಸಿ ಹೋಗುವವರ ಸಂಖ್ಯೆಯೂ ಸಾಕಷ್ಟಿದೆ. ಬಿಸಿಲಿನಿಂದಾಗಿ ಏನೂ ಮಾಡಲಾಗದ ಸ್ಥಿತಿ ಪೊಲೀಸರಿಗೂ ಇದೆ. ಹೀಗಾಗಿ ಬೈಕ್ ಸವಾರರ ಅನಕೂಲಕ್ಕೆ ಟ್ರಾಫಿಕ್ ಸಿಗ್ನಲ್‌ನಲ್ಲಿ ಪೊಲೀಸ್ ಇಲಾಖೆ ನೆರಳಿನ ವ್ಯವಸ್ಥೆ ಮಾಡಲು ಜನರು ಮನವಿ ಮಾಡಿದ್ದಾರೆ.

ಒಂದು ವಾರದಲ್ಲಿ ಹಸಿರು ಪರದೆ ಅಳವಡಿಕೆ

ನಗರದ ವಿವಿಧ ಕಡೆಯಲ್ಲಿರುವ ಹಸಿರು ಪರದೆಗಳನ್ನು ಇನ್ನೂ ಒಂದು ವಾರದಲ್ಲಿ ಹಾಕಲಾಗುತ್ತದೆ. ಕೆಲವು ಕಡೆ ಕಂಬವು ಬಾಗಿತ್ತು. ಹೀಗಾಗಿ ಬಾಗಿರುವ ಕಂಬವನ್ನು ತೆರವು ಮಾಡಿ ಹೊಸ ಕಂಬಗಳನ್ನು ಹಾಕಲಾಗುತ್ತದೆ. ನಗರದಲ್ಲಿ ಬಿಸಲಿನ ಪ್ರಮಾಣ ಏರಿಕೆಯಾಗುತ್ತದೆ. ಹೀಗಾಗಿ ಬೈಕ್ ಸವಾರರಿಗೆ ತೊಂದರೆಯಾಗುತ್ತದೆ. ಶೀಘ್ರ ಹಸಿರು ಪರದೆ ಹಾಕಲಾಗುತ್ತದೆ ಎಂದು ನಗರಸಭೆ ಅಧಿಕಾರಿ ಲಕ್ಷ್ಮಣ ಜೆ. ತಿಳಿಸಿದರು.

ಫಲಿತಾಂಶ ಸುಧಾರಣಾ ಕಾರ್ಯಾಗಾರ

ಗದಗ: ಶಿಕ್ಷಣದ ಗುಣಮಟ್ಟ ಹೆಚ್ಚಳವಾಗಬೇಕಾದರೆ ಶಿಕ್ಷಕರಿಗೆ ಇಲಾಖೆ ಅಥವಾ ಸರ್ಕಾರ ಪಾಠಬೋಧನೆಯನ್ನು ಮಾಡುವುದು ಬಿಟ್ಟರೆ, ಯಾವುದೇ ಅನ್ಯ ಕೆಲಸಗಳನ್ನು ನೀಡಬಾರದು ಎಂದು ವಿಧಾನ ಪರಿಷತ್ತಿನ ಸಭಾಪತಿ ಬಸವರಾಜ ಹೊರಟ್ಟಿ ಹೇಳಿದರು.

ನಗರದ ಡಾ.ಬಿ.ಆರ್. ಅಂಬೇಡ್ಕರ್ ಭವನದಲ್ಲಿ ರಾಜ್ಯ ಮಾಧ್ಯಮಿಕ ಶಾಲಾ ನೌಕರರ ಸಂಘ, ಜಿಲ್ಲಾ ಘಟಕ ಹಾಗೂ ಉಪನಿರ್ದೇಶಕರು ಶಾಲಾ ಶಿಕ್ಷಣ ಇಲಾಖೆ ಸಂಯುಕ್ತ ಆಶ್ರಯದಲ್ಲಿ ಎಸ್‌ಎಸ್‌ಎಲ್‌ಸಿ ಶೇ.100ರಷ್ಟು ಫಲಿತಾಂಶ ಪಡೆದ ಶಾಲಾ ಮುಖ್ಯಸ್ಥರಿಗೆ ಸನ್ಮಾನ, ಎಸ್‌ಎಸ್‌ಎಲ್‌ಸಿ ಫಲಿತಾಂಶ ಸುಧಾರಣಾ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದರು.

ಶಿಕ್ಷಕರು ಸಮಾಜದ ಶಿಲ್ಪಿಗಳು. ತಾವು ಆಧುನಿಕ ಸಮಾಜದ ವ್ಯವಸ್ಥೆಗೆ ತಕ್ಕಂತೆ ಮಕ್ಕಳಲ್ಲಿ ಜ್ಞಾನವನ್ನು ತುಂಬುವ ಕಾರ್ಯ ಮಾಡುವದರೊಂದಿಗೆ ತಂದೆ, ತಾಯಿ ಗುರು ಹಿರಿಯರಿಗೆ ಗೌರವಿಸುವ ಸಂಸ್ಕಾರವಂತ ಗುಣವನ್ನು ಮಕ್ಕಳಲ್ಲಿ ಬೆಳೆಸುತ್ತಿರುವುದು ಉತ್ತಮ ಸಮಾಜ ನಿರ್ಮಾಣಕ್ಕೆ ಸಮಾಜಕ್ಕೆ ಕಾರಣೀಭೂತರಾಗುವಿರಿ ಎಂದರು.

ಯುವ ಕಾಂಗ್ರೆಸ್ ಮುಖಂಡ ಕೃಷ್ಣಗೌಡ ಪಾಟೀಲ ಮಾತನಾಡಿ, ಸ್ಪರ್ಧಾತ್ಮಕ ಯುಗದಲ್ಲಿ ಎಲ್ಲ ಜ್ಞಾನವನ್ನು ಮಕ್ಕಳಿಗೆ ನೀಡಿ ಗುಣಾತ್ಮಕ ಫಲಿತಾಂಶ ಪಡೆಯುವಂತೆ ಪ್ರೇರಣಾದಾಯಕ ಕಲಿಕೆಯನ್ನು ಎಲ್ಲ ಗುರುಬಳಗ ಮಾಡುವುದರಿಂದ ಯಾವುದೇ ಸ್ಪರ್ಧೆಯಲ್ಲಿ ಮಕ್ಕಳು ಉತ್ತಮ ಫಲಿತಾಂಶ ಪಡೆಯಲು ಅರ್ಹರಾಗಿರುತ್ತಾರೆ ಎಂದರು.

ವಿಧಾನ ಪರಿಷತ್ತಿನ ಸದಸ್ಯ ಎಸ್.ವಿ.ಸಂಕನೂರ ಮಾತನಾಡಿದರು. ಸಾನ್ನಿಧ್ಯ ಭೈರನಟ್ಟಿಯ ಶಾಂತಲಿಂಗ ಸ್ವಾಮೀಜಿ ವಹಿಸಿದ್ದರು. ಪ್ರತಿಶತ 100 ಫಲಿತಾಂಶ ಪಡೆದ 76 ಶಾಲಾ ಮುಖ್ಯಶಿಕ್ಷಕರಿಗೆ ಸರ್ಕಾರದಿಂದ ನೀಡಿದ ಪ್ರಶಸ್ತಿ ಫಲಕ ಹಾಗೂ ತಲಾ 25,000 ರೂ.ಗಳ ಚೆಕ್‌ಗಳನ್ನು ನೀಡಿ ಗೌರವಿಸಲಾಯಿತು. ಆಯುಕ್ತ ಡಾ.ಈಶ್ವರ ಉಳ್ಳಾಗಡ್ಡಿ, ಜಿಲ್ಲಾ ಉಪನಿರ್ದೇಶಕ ಆರ್.ಎಸ್.ಬುರಡಿ, ಜಿಲ್ಲಾಧ್ಯಕ್ಷ ಎಂ.ಕೆ.ಲಮಾಣಿ, ಜಿಲ್ಲಾ ಕಾರ್ಯದರ್ಶಿ ಎ.ಎಸ್. ಪಾಟೀಲ, ಆಯುಕ್ತರ ಕಾರ್ಯಾಲಯದ ನಿರ್ದೇಶಕ ಈಶ್ವರ ನಾಯಕ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಜಿ.ಆರ್.ಭಟ್, ಗೌರವಾಧ್ಯಕ್ಷ ಉಮೇಶ ಹಿರೇಮಠ, ರವಿ ದಂಡಿನ, ಡಾ.ಬಿ.ಜಿ.ಜವಳಿ, ಎಸ್.ಎಸ್. ಪಟ್ಟಣಶೆಟ್ಟರ, ಡಾ.ಶರಣು ಗೋಗೇರಿ, ಡಾ.ಬಸವರಾಜ ಬಳ್ಳಾರಿ, ವಿ. ವಿ. ನಡುವಿನಮನಿ, ಎಂ.ಎಚ್. ಕಂಬಳಿ, ಎಚ್.ಎನ್. ನಾಣಶಿನಾಯಕ, ಎ.ಎನ್. ಕಂಬೋಗಿ ಇತರರಿದ್ದರು.



ಬೀದಿ ಬದಿ ವ್ಯಾಪಾರಸ್ಥರು ಆರೋಗ್ಯ ಕಾಪಾಡಿಕೊಳ್ಳಲಿ

ಲಕ್ಷ್ಮೇಶ್ವರ: ಬೀದಿಬದಿ ವ್ಯಾಪಾರಸ್ಥರು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಯೋಜನೆಗಳನ್ನು ಸದುಪಯೋಗ ಪಡೆದುಕೊಳ್ಳಬೇಕು ಎಂದು ಡಿ ನಲ್ಮ್ ಯೋಜನೆಯ ಸಮುದಾಯ ಸಂಘಟನಾ ಅಧಿಕಾರಿ ಹಾಗೂ ಟಿವಿ ಕಾರ್ಯದರ್ಶಿ ಶೋಭಾ ಬೆಳ್ಳಿಕೊಪ್ಪ ಹೇಳಿದರು.

ಅವರು ಪಟ್ಟಣದ ಪುರಸಭೆ ಆವರಣದಲ್ಲಿ ಬೀದಿ ಬದಿ ವ್ಯಾಪಾರಸ್ಥರಿಗೆ ಉಚಿತ ಆರೋಗ್ಯ ಶಿಬಿರ ಹಾಗೂ ಪ್ರಧಾನಮಂತ್ರಿ ಶ್ರಮಯೋಗಿ ಮಾನ್ ಧನ್ (ಪಿ ಎಂ- ಎಸ್ ವೈ ಎಂ) ಯೋಜನೆಯ ಅಸಂಘಟಿತ ಕಾರ್ಮಿಕರ ವಿಶೇಷ ನೋಂದಣಿ ಅಭಿಯಾನವನ್ನು ಉದ್ದೇಶಿಸಿ ಮಾತನಾಡಿ, ಬೀದಿ ಬದಿ ವ್ಯಾಪಾರಸ್ಥರು ಆರೋಗ್ಯದ ಬಗ್ಗೆ ಹೆಚ್ಚಿನ ಗಮನ ಕೊಡಬೇಕು ಎಂದರು.

ಕಾರ್ಮಿಕರ ಇಲಾಖೆಯ ಸಿಬ್ಬಂದಿ ಎಂ.ಎ. ಸಿದ್ದಿ ಮಾತನಾಡಿ, ಬೀದಿ ಬದಿ ವ್ಯಾಪಾರಸ್ಥರು ಕಾರ್ಮಿಕರ ಇಲಾಖೆಯಿಂದ ಪ್ರಧಾನ ಮಂತ್ರಿ ಶ್ರಮಯೋಗಿ ಮಾನ್ ಧನ್, ಯೋಜನೆ ಇದ್ದು 18 ರಿಂದ 40 ವರ್ಷದೊಳಗಿನವರು ಇದರಲ್ಲಿ ನೋಂದಣಿ ಮಾಡಿಸಬೇಕು, ಜನವರಿ 15ರಿಂದ ಮಾರ್ಚ್ 15ರವರೆಗೂ ಈ ನೋಂದಣಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು, ಅಸಂಘಟಿತ ಕಾರ್ಮಿಕರಲ್ಲಿ ಬರುವ ಕಾರ್ಮಿಕರು ಪ್ರತಿಯೊಬ್ಬರೂ ಈ ಯೋಜನೆ ಲಾಭ ಪಡೆದುಕೊಳ್ಳಬೇಕು ಎಂದರು.

ವೈದ್ಯ ಡಾ. ಮಂಜುನಾಥ ಮರೀಗೌಡ್ರ ಮಾತನಾಡಿ, ಬೀದಿ ಬದಿ ವ್ಯಾಪಾರಸ್ಥರು ರಸ್ತೆ ಮೇಲೆ ಉದ್ಯೋಗ ಮಾಡುವುದರಿಂದ ಅತಿಯಾದ ಬಿಸಿಲ ಧೂಳು ಬರುವುದರಿಂದ ಆರೋಗ್ಯ ಹದಗೆಡು ಲಕ್ಷಣ ಇರುವುದರಿಂದ ಆರೋಗ್ಯದ ಕಡೆ ಹೆಚ್ಚಿನ ಗಮನ ಕೊಡಬೇಕು. ಆರೋಗ್ಯ ಸಮಸ್ಯೆ ಇದ್ದರೆ ತಕ್ಷಣ ವೈದ್ಯರನ್ನು ಭೇಟಿ ಮಾಡಬೇಕು ಎಂದರು.

ಆರೋಗ್ಯ ಶಿಬಿರದಲ್ಲಿ 100ಕ್ಕಿಂತ ಹೆಚ್ಚು ಬೀದಿ ಬದಿ ವ್ಯಾಪಾರಸ್ಥರು, ಕಾರ್ಮಿಕರು ಹಾಗೂ ಸಾರ್ವಜನಿಕರು ಆರೋಗ್ಯ ತಪಾಸಣೆ ಮಾಡಿಸಿಕೊಂಡರು. ಅನೇಕ ಕಾರ್ಮಿಕರು ಶ್ರಮ ಯೋಗಿ ಮಾನ್ ಧನ್ ನೋಂದಣಿ ಮಾಡಿಸಿದರು. ಪುರಸಭೆ ವ್ಯವಸ್ಥಾಪಕಿ ಮಂಜುಳಾ ಹೂಗಾರ, ಹಿರಿಯ ಆರೋಗ್ಯ ನಿರೀಕ್ಷಕ ಮಂಜುನಾಥ ಮುದಗಲ್, ನೇತ್ರ ತಜ್ಞ ಡಾ. ಪ್ರಭಾವಿ ಭಟ, ಶುಸ್ರೂಷಾಧಿಕಾರಿ ಬಸವರಾಜ ಕರ್ಕಿಕಟ್ಟಿ, ಎಸ್ ಕೆ ಡಿ ಆರ್ ಡಿ ಪಿ ಸಚಿನ ಹುಗ್ಗಿ, ನೇತ್ರಾ ಹೊಸಮನಿ, ಪೌರಕಾರ್ಮಿಕ ಮುಖಂಡ ಹನುಮಂತಪ್ಪ ನಂದೆಣ್ಣವರ, ಶಿವಲಿಂಗಯ್ಯ ಹೊತಗಿಮಠ, ಸಿಆರ್‌ಪಿ ಲಕ್ಷ್ಮೀ ಒದು, ಇಂದ್ರಾ ಸವಣೂರ, ಮೊಬೈಲಿಟಿ ಸೂಪರ್‌ವೈಜರ್, ಶಿಲ್ಪಾ ಹೊತಗಿಮಠ, ಮದು ಸಾತಪುತೆ, ರೇಣುಕಾ ಬನ್ನಿ, ಮಂಜುಳಾ ಕುಂಬಾರ, ಪ್ರಿಯಾಂಕಾ ವಗ್ಗಣ್ಣವರ ಇದ್ದರು. ಹನುಮಂತಪ್ಪ ನಂದೆಣ್ಣವರ ನಿರೂಪಿಸಿದರು.



ಅಜ್ಞಾನ ಕಳೆಯುವ ಗುರುಗಳು: ಬುರಡಿ

ಮುಂಡರಗಿ: ಗುರುಗಳು ಕೇವಲ ಪಾಠಗಳನ್ನು ಮಾತ್ರ ಕಲಿಸುವವರಲ್ಲ, ಅವರು ನಮ್ಮ ಜೀವನಕ್ಕೆ ದಿಕ್ಕು ತೋರಿಸುವ ದೀಪಗಳಿದ್ದಂತೆ. ಅಜ್ಞಾನವೆಂಬ ಕತ್ತಲೆಯಿಂದ ಜ್ಞಾನವೆಂಬ ಬೆಳಕಿನೆಡೆಗೆ ನಮ್ಮನ್ನು ಕರೆದುಕೊಂಡು ಹೋಗುವ ಮಹಾನ್ ಮಾರ್ಗದರ್ಶಕರು ಎಂದು ಶಾಲಾ ಶಿಕ್ಷಣ ಇಲಾಖೆಯ ಆಡಳಿತ ಉಪನಿರ್ದೇಶಕರಾದ ಆರ್.ಎಸ್. ಬುರಡಿ ಹೇಳಿದರು.

ಅವರು ತಾಲೂಕಿನ ಡೋಣಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಕೆಪಿಎಸ್‌ನಲ್ಲಿ ಏರ್ಪಡಿಸಿದ್ದ ಗುರುವಂದನಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಸಾನ್ನಿಧ್ಯ ವಹಿಸಿದ್ದ ಹಾಲಸೋಮೇಶ್ವರ ಸ್ವಾಮೀಜಿ ಆಶೀರ್ವಚನ ನೀಡಿ, ಒಬ್ಬ ಗುರು ಒಂದು ತರಗತಿಯನ್ನು ಮಾತ್ರವಲ್ಲ, ಸಂಪೂರ್ಣ ಸಮಾಜವನ್ನು ಪ್ರಭಾವಿಸುತ್ತಾರೆ. ಗುರುವಿಲ್ಲದೆ ಗುರಿಯಿಲ್ಲ ಎಂಬ ಮಾತಿನಂತೆ ನಮ್ಮ ಜೀವನದ ಪ್ರತಿ ಹಂತದ ಯಶಸ್ಸಿನ ಹಿಂದೆ ಗುರುಗಳ ಆಶೀರ್ವಾದವಿದೆ ಎಂದರು.



ಶಾಲೆಯ ಹಳೆಯ ವಿದ್ಯಾರ್ಥಿ ಭೀಮಪ್ಪ ವಕ್ಕಿ ಮಾತನಾಡಿದರು. ಶಾಲೆಯ ಹಳೆಯ ವಿದ್ಯಾರ್ಥಿ ರಮೇಶ ದಂಡಿಗದಾಸರ ಅಧ್ಯಕ್ಷತೆ ವಹಿಸಿದ್ದರು. ಸಿದ್ಧಲಿಂಗೇಶ್ವರ ಮಠ ಡೋಣಿ ಇಲ್ಲಿಂದ ಶಾಲೆಯವರೆಗೆ ಶಿಕ್ಷಕರ ಭವ್ಯ ಮೆರವಣಿಗೆ ಮಾಡಲಾಯಿತು. ಹಳೆಯ ವಿದ್ಯಾರ್ಥಿಗಳಾದ ಮಲ್ಲಪ್ಪ ಹರ್ತಿ, ಇಮಮಸಾಬ್ ಸುಂಕದ, ಸೋಮು ಓಲಿ, ಗುರಪ್ಪ ಜಂಗಳಿ, ರಾಮಣ್ಣ ಮೇಗಲಮನಿ, ನಿಂಗನಗೌಡ ಮಲ್ಲನಗೌಡ, ಕೃಷ್ಣ ಸೋಮಪ್ಪ ರಾಯಪ್ಪ, ಮಲ್ಲಪ್ಪ ಕೊರವರ ಇತರರಿದ್ದರು.

ಶರಣಬಸವೇಶ್ವರ ಜಾತ್ರೆ ಪ್ರಾರಂಭ

ನರಗುಂದ: ಪಟ್ಟಣದ ದಂಡಾಪೂರದಲ್ಲಿನ ಕಲಬುರ್ಗಿ ಶರಣಬಸವೇಶ್ವರರ ದೇವಸ್ಥಾನದ ನೂತನ ರಥೋತ್ಸವದ ಲೋಕಾರ್ಪಣೆ ಹಾಗೂ ಜಾತ್ರಾ ಮಹೋತ್ಸವ ಗುರುವಾರ ಕರ್ತೃ ಗದ್ದುಗೆಗೆ ಮಹಾರುದ್ರಾಭಿಷೇಕ, ಷಟಸ್ಥಲ ಧ್ವಜಾರೋಹಣ ಹಾಗೂ ಗೋಪುರದಲ್ಲಿ ಕಳಸಾರೋಹಣ ಮಾಡುವುದರೊಂದಿಗೆ ಚಾಲನೆ ನೀಡಲಾಯಿತು. ಗುರುವಾರದಿಂದ ಮೂರು ದಿನಗಳ ಕಾಲ ಪ್ರವಚನ ಜರುಗಲಿದೆ. ಮಾ. 8ರ ಸಂಜೆ 5 ಗಂಟೆಗೆ ಮಹಾರಥೋತ್ಸವ ಜರುಗಲಿದೆ ಎಂದು ಪತ್ರಿವನಮಠದ ಗುರುಸಿದ್ದವೀರ ಶಿವಾಚಾರ್ಯ ಸ್ವಾಮೀಜಿ ತಿಳಿಸಿದ್ದಾರೆ. ಉಮೇಶ ಯಳ್ಳೂರ, ವೀರಬಸಪ್ಪ ಹೂಗಾರ, ಎಸ್.ಎಸ್. ಪಾಟೀಲ, ಬಸವರಾಜ ನೆಗಳೂರ, ರುದ್ರಪ್ಪ ಗುಗ್ಗರಿ, ಈರಣ್ಣ ಕಲಾದಗಿ, ಡಿ. ಆರ್. ಗದ್ದನಕೇರಿ, ಶರಣಪ್ಪ ನವಲಗುಂದ, ಸಂಗಣ್ಣ ಕಳಸಾ, ಮಲ್ಲಿಕಾರ್ಜುನ ಪತ್ರಿ, ಬಸವರಾಜ ಘಾಟಗೆ, ಸಿದ್ದಪ್ಪ ಆಯಟ್ಟಿ, ಶೇಖಪ್ಪ ಹಕಾರಿ, ಚನಬಸಪ್ಪ ಆಯಟ್ಟಿ, ಮಹೇಶ ಹಾರೋಗೇರಿಮಠ, ಶಂಭು ಹಂಚಿನಾಳ, ಈರಣ್ಣ ನವಲಗುಂದ, ಸಚಿನ್ ದೇಶಪಾಂಡೆ, ಸಿದ್ದಪ್ಪ ಆಯಟ್ಟಿ, ಶಿವಾನಂದ ಪೂಜಾರ, ರಾಮು ಕೋರಿ ಸೇರಿದಂತೆ ಅನೇಕರಿದ್ದರು.



ಮಕ್ಕಳಿಗೆ ಶಿಸ್ತು, ಸಂಸ್ಕಾರ ಕಲಿಸಿ: ನಾಯ್ಕ

ಶಿರಹಟ್ಟಿ: ಮಕ್ಕಳಿಗೆ ಒಳ್ಳೆಯ ಶಿಸ್ತು ಬದ್ಧ ನೈತಿಕ ಮೌಲ್ಯವುಳ್ಳ ಸಂಸ್ಕಾರ ಹಿತವಾದ ಶಿಕ್ಷಣವನ್ನು ನೀಡಬೇಕು ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ನಾಣಕಿ ನಾಯ್ಕ ಹೇಳಿದರು.

ತಾಲೂಕಿನ ಬೆಳ್ಳಟ್ಟಿ ಗ್ರಾಮದ ವಿವೇಕಾನಂದ ವಿದ್ಯಾಲಯದಲ್ಲಿ ನಡೆದ ವಿವೇಕೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಸಂಸ್ಥೆಯ ಅಧ್ಯಕ್ಷ ಶಿವಪ್ರಕಾಶ ಮಹಾಜನಶೆಟ್ಟರ ಮಾತನಾಡಿ, ಮಕ್ಕಳಿಗಾಗಿ ಆಸ್ತಿ ಮಾಡದೇ ಮಕ್ಕಳನ್ನೇ ಆಸ್ತಿಯನ್ನಾಗಿ ಮಾಡಬೇಕು ಎಂದರು.

ಜಿಲ್ಲಾ ಕಸಾಪ ಅಧ್ಯಕ್ಷ ಕೆ. ಬಳಿಗೇರ, ಚಂದ್ರಕಾಂತ ನೂರಶೆಟ್ಟರ, ಕಸಾಪ ಅಧ್ಯಕ್ಷ ನವೀನ ಅಳವಂಡಿ, ಎನ್.ಎನ್. ಗೋಕಾವಿ, ಎಸ್.ವಿ. ಹುಬ್ಬಳ್ಳಿ, ಶಂಕರ ಮರಾಠೆ, ಮಹೇಶ್ ತಗ್ಗಿನಮನಿ, ಸಿದ್ದರಾಮಪ್ಪ ಮರಬದ, ರಫೀಕ ಬಡಿಗೇರ, ಶ್ರೀನಿವಾಸ ಅಳವಂಡಿ, ರಮೇಶ ಮರೆಡ್ಡಿ, ವೀರೇಶ ಪಸಾರದ, ಮಂಜುನಾಥ ಸೋಣಗೋಜ ಇತರರಿದ್ದರು.



ರೈತರು ಆಗಾಗ ತಮ್ಮ ಆಸ್ತಿಯ ದಾಖಲಾತಿ ಕಡ್ಡಾಯ ಪರಿಶೀಲಿಸಲಿ

ರೋಣ: ತಾಲೂಕಿನಲ್ಲಿ ವಿಂಡ್ ಕಂಪನಿಗಳ ಹಾವಳಿ ಮಿತಿಮಿರಿದ್ದು, ಗ್ರಾಮದಲ್ಲಿಯೇ ಏಜೆಂಟರುಗಳ ಮೂಲಕ ರೈತರ ಜಮೀನುಗಳಲ್ಲಿ ವಿಂಡ್ ಕಂಪನಿಗಳು ಲಗ್ಗೆ ಇಟ್ಟಿದ್ದು ರೈತರು ಲೀಜ್ ಮೇಲೆ ನೀಡಿರುವ ತಮ್ಮ ಜಮೀನುಗಳ ದಾಖಲಾತಿಗಳನ್ನು ಆಗಾಗ ಪರಿಶೀಲಸಬೇಕು ಎಂದು ರೈತ ಸಂಘದ ಮಹಿಳಾ ಮುಖಂಡರಾದ ಕಾವ್ಯಾ ಸೋಮನಕಟ್ಟಿ ಹೇಳಿದರು.

ಅವರು ಗುರುವಾರ ಪಟ್ಟಣದ ಪಿಡಬ್ಲುಡಿ ಪ್ರವಾಸಿ ಮಂದಿರದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿ, ತಾಲೂಕಿನಲ್ಲಿ ವಿಂಡ್ ಕಂಪನಿಗಳು ಲೀಜ್ ಮೂಲಕ ಜಮೀನಿಗಳಲ್ಲಿ ತಮ್ಮ ಕೆಲಸಗಳನ್ನು ನಿರ್ವಹಿಸುತ್ತಿದ್ದಾರೆ. ಆದರೆ ರೈತರ ಅರಿವಿಗೆ ಬಾರದಂತೆ ಹಾಪ್ ನೋಂದಣಿ ಮಾಡಿಕೊಳ್ಳುತ್ತಿದ್ದಾರೆ ಎಂಬ ಆರೋಪಗಳು ರೈತರಿಂದ ಕೇಳಿ ಬರುತ್ತಿವೆ. ಹೀಗಾಗಿ ರೈತ ಸಮುದಾಯ ತಮ್ಮ ಜಮೀನುಗಳ ದಾಖಲಾತಿಗಳನ್ನು ಪರಿಶೀಲಸಬೇಕು ಮತ್ತು ಎಚ್ಚರಿಕೆ ವಹಿಸಬೇಕು ಎಂದರು.



ರೈತ ಮುಖಂಡ ಶಿವಲಿಂಗಪ್ಪ ಬೊಪಳಾಪೂರ ಮಾತನಾಡಿ, ಕೇಂದ್ರ ಸರ್ಕಾರ ಅಮೇರಿಕಾದ ಜೊತೆಗೆ ರೈತರ ಒಪ್ಪಂದ ನೀತಿಗಳಿಗೆ ಸಹಿ ಮಾಡಿರುವುದು ಅತ್ಯಂತ ಖಂಡನೀಯವಾಗಿದ್ದು, ಈ ಒಪ್ಪಂದವು ರೈತರ ಹಕ್ಕನ್ನು ಕಸಿಯಲಿದೆ ಅಲ್ಲದೆ ವಿದೇಶಿಗರು ತಿಳಿಸಿಸುವ ಬೆಳೆಯನ್ನು ಬೆಳೆಯಬೇಕಾದ ಅನಿವಾರ್ಯತೆಯಲ್ಲಿ ದೇಶದ ರೈತರು ಸಿಕ್ಕಿಕೊಳ್ಳುತ್ತಾರೆ. ಹೀಗಾಗಿ ಈ ಒಪ್ಪಂದ ಭಾರತ ದೇಶದ ರೈತರಿಗೆ ಮಾರಕವಾಗಿದ್ದು, ಈ ಕೂಡಲೇ ಪ್ರಧಾನಿ ನರೇಂದ್ರ ಮೋದಿ ಅವರು ಒಪ್ಪಂದವನ್ನು ಕೈಬಿಡಬೇಕು ಎಂದು ಆಗ್ರಹಿಸಿದರು.

ಮುಖಂಡ ಮೇಘರಾಜ ಭಾವಿ ಮಾತನಾಡಿ, ಈ ಬಾರಿಯ ಬಜೆಟ್‌ನಲ್ಲಿ ಉತ್ತರ ಕರ್ನಾಟಕಕ್ಕೆ ಹೆಚ್ಚಿನ ಆದ್ಯತೆಯನ್ನು ಒದಗಿಸಬೇಕು. ಕಳಸಾ ಬಂಡೂರಿ ಹಾಗೂ ಕೃಷ್ಣಾ ನದಿಗಳ ಜೋಡನೆ ಮಾಡುವ ಜೊತೆಗೆ ಈ ಭಾಗಗಳಿಗೆ ನೀರಾವರಿ ಸೌಲಭ್ಯಗಳನ್ನು ಒದಗಿಸಬೇಕು ಎಂದರು.

ಮಾದೇಗೌಡ ಭಾವಿ, ಸಂಗಣ್ಣ ದಂಡಿನ, ಬಸವರಾಜ ಹೊಸಮನಿ, ಬಸನಗೌಡ ಪಾಟೀಲ, ಯಲ್ಲಪ್ಪ ಹಡಗಲಿ, ವಿರೇಶ ಕಲಹಾಳ, ಇಮಾಮಸಾಬ ಚೋಪದಾರ, ಶೇಖಸಾಬ ನದಾಪ ಸೇರಿದಂತೆ ರೈತ ಮುಖಂಡರುಗಳು ಉಪಸ್ಥಿತರಿದ್ದರು.

ಶಿಕ್ಷಕರಿಗೆ ವಿನಾಯಿತಿ ನೀಡಲು ಮನವಿ

ಲಕ್ಷ್ಮೇಶ್ವರ: ಭಾರತ ಜನಗಣತಿ 2026 ಮನೆ ಪಟ್ಟಿ ಕಾರ್ಯಕ್ಕೆ ವಿಶೇಷ ಪ್ರಕರಣ ಹೊಂದಿರುವ ಶಿಕ್ಷಕರಿಗೆ ವಿನಾಯಿತಿ ನೀಡಬೇಕು ಎಂದು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಬಿ.ಎಸ್. ಹರ್ಲಾಪುರ ಹೇಳಿದರು.

ಅವರು ಪಟ್ಟಣದ ತಹಶೀಲ್ದಾರ್ ಕಚೇರಿಯಲ್ಲಿ ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ತಾಲೂಕು ಘಟಕ ಲಕ್ಷ್ಮೇಶ್ವರ ಹಾಗೂ ಕರ್ನಾಟಕ ರಾಜ್ಯ ಸರ್ಕಾರಿ ನೌಕರ ಸಂಘ ತಾಲೂಕು ಘಟಕ ವತಿಯಿಂದ ತಹಶೀಲ್ದಾರ್ ಧನಂಜಯ ಎಂ. ಅವರಿಗೆ ಮನವಿ ಸಲ್ಲಿಸಿ ಮಾತನಾಡಿ, ತಾಲೂಕಿನಲ್ಲಿ 50 ವರ್ಷ ಮೇಲ್ಪಟ್ಟ ಶಿಕ್ಷಕಿಯರಿಗೆ ಹಾಗೂ 55 ವರ್ಷ ಮೇಲ್ಪಟ್ಟ ಪುರುಷ ಶಿಕ್ಷಕರಿಗೆ ಮತ್ತು ಗರ್ಭಿಣಿಯರಿಗೆ, ಒಂದು ವರ್ಷ ಮಗು ಇರುವ ಶಿಕ್ಷಕಿಯರಿಗೆ ಹಾಗೂ ಕಾಯಿಲೆಯಿಂದ ಬಳಲುವ ಶಿಕ್ಷಕರಿಗೆ ಬಿಎಲ್‌ಒ ಕೆಲಸ ಮಾಡುತ್ತಿರುವ ಶಿಕ್ಷಕರಿಗೆ ಹಾಗೂ ಈಗಾಗಲೇ ವರ್ಗಾವಣೆ ಹೊಂದಿ, ಬೇರೆ ತಾಲೂಕಿಗೆ ಹೋದ ಶಿಕ್ಷಕರಿಗೆ ಹಾಗೂ ಮುಖ್ಯ ಶಿಕ್ಷಕರಿಗೆ ಜನಗಣತಿ ಹಾಗೂ ಮನೆ ಪಟ್ಟಿ ಕಾರ್ಯದಿಂದ ವಿನಾಯಿತಿ ನೀಡಬೇಕು ಎಂದರು

ಕಾರ್ಯದರ್ಶಿ ಚಂದ್ರಕಾಂತ್ ನೇಕಾರ, ಬಸವರಾಜ ಎತ್ತಿನಹಳ್ಳಿ, ನೌಕರರ ಸಂಘದ ಅಧ್ಯಕ್ಷ ಗುರುರಾಜ ಹವಳದ, ಎಂ.ಎಂ. ನದಾಫ, ಎಂ.ಡಿ. ವಾರದ, ಎಂ.ಎಸ್. ಹಿರೇಮಠ, ಜಿ.ಎನ್. ಶೀರನಹಳ್ಳಿ, ಎಸ್.ಎನ್. ತಾಯಮ್ಮನವರ, ಎಸ್.ಎನ್. ಕ್ಷತ್ರಿಯ, ಎ.ಎಂ. ಗುತ್ತಲ, ಡಿ.ಎನ್. ದೊಡ್ಡಮನಿ, ಅಶೋಕ ಸರವಿ ಉಪಸ್ಥಿತರಿದ್ದರು.



ವಿವಿಧ ಬೇಡಿಕೆಗಳಿಗೆ ಆಗ್ರಹಿಸಿ ಬೆಂಗಳೂರು ಚಲೋ ಇಂದು

ಗದಗ: ರೈತರ ವಿವಿಧ ಬೇಡಿಕೆಗಳಿಗೆ ಆಗ್ರಹಿಸಿ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ವತಿಯಿಂದ ಮಾ.6 ರಂದು ಬೆಂಗಳೂರು ಚಲೋ ಹಮ್ಮಿಕೊಳ್ಳಲಾಗಿದೆ ಎಂದು ರೈತ ಸಂಘ ಹಾಗೂ ಹಸಿರು ಸೇನೆಯ ಜಿಲ್ಲಾಧ್ಯಕ್ಷ ನಟರಾಜ ಸವಡಿ ಹೇಳಿದರು.

ಗುರುವಾರ ನಗರದ ಪತ್ರಿಕಾಭವನದಲ್ಲಿ ಜರುಗಿದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯ ಸರ್ಕಾರ ಮೂರು ಕೃಷಿ ಕಾಯ್ದೆಗಳನ್ನು ಹಿಂಪಡೆಯಬೇಕು. ರೈತರ ಸಂಪೂರ್ಣ ಸಾಲ ಮನ್ನಾ ಮಾಡುವುದು, ರೈತರ ಪಂಪ್‌ಸೆಟ್‌ಗಳಿಗೆ ಉಚಿತ ವಿದ್ಯುತ್ ಪರಿಕರಗಳನ್ನು ಮೊದಲಿನಂತೆ ವಿತರಿಸಬೇಕು. ಆಲಮಟ್ಟಿ ಆಣೆಕಟ್ಟು ಜಲಾಶಯವನ್ನು 519 ರಿಂದ 524.256 ಮೀಟರ್‌ನಷ್ಟು ಎತ್ತರಿಸುವುದು, ರೈತರ ಬೆಳೆಗೆ ಸರ್ಕಾರ ಕಾನೂನಾತ್ಮಕ ಬೆಲೆ ನಿಗದಿ ಪಡಿಸುವುದು, ಜಲ ಜೀವನ ಮಿಷನ್ ಅಡಿಯಲ್ಲಿ ಪ್ರತಿ ಹಳ್ಳಿಗೂ ನೀರಿನ ಸಮರ್ಪಕ ಪೂರೈಕೆ ಮಾಡಬೇಕು ಎಂದರು. ಮಾಲಿನ್ಯ ಕಾರಕ ಕಾರ್ಖಾನೆಗಳ ಸ್ಥಾಪನೆ ಹಾಗೂ ವಿಸ್ತರಣೆಯನ್ನು ಸ್ಥಗಿತಗೊಳಿಸುವುದು ಮತ್ತು ಪರಿಸರ ಸ್ನೇಹಿ ಉದ್ದಿಮೆಗಳ ಸ್ಥಾಪನೆಗೆ ಒತ್ತು ಕೊಡುವುದು, ಉದ್ದಿಮೆ ಜನ್ಯ ಮಾಲಿನ್ಯ ನಿರ್ವಹಣೆಯನ್ನು ಪರಿಸರವಾದಿಗಳಿಗೆ ವಹಿಸುವುದು ಸೇರಿದಂತೆ ರೈತರ ವಿವಿಧ ಬೇಡಿಕೆಗಳನ್ನು ಈಡೇರಿಸಲು ಆಗ್ರಹಿಸಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದರು.



ರೈತ ಮಹಿಳೆ ರೇಖಾ ಜಡಿ ಮಾತನಾಡಿ, ರೈತರ ಹೊಲಗಳಿಗೆ ನದಿ ನೀರನ್ನು ಸಕಾಲಕ್ಕೆ ಸಮರ್ಪಕವಾಗಿ ಪೂರೈಸುವುದು, ಕಾರ್ಖಾನೆಗಳ ಸುತ್ತಮುತ್ತಲೂ ವಾಯು ಗುಣಮಟ್ಟ ಮಾಪಕಗಳನ್ನು ಅಳವಡಿಸುವುದು, ಕಡಿಮೆ ಮೀಸಲಾತಿ ಸೌಲಭ್ಯ ಪಡೆದ ಕುಟುಂಬಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು. ಮಾಲಿನ್ಯ ನಿಯಂತ್ರಣ ಮಂಡಳಿಯ ಆಡಳಿತಾತ್ಮಕ ಮಾಲಿನ್ಯ ನಿಯಂತ್ರಣಕ್ಕೆ ಕ್ರಮ ವಹಿಸುವುದು, ರೈತರಿಗೆ ಸಾಕಾಗುವಷ್ಟು ಬೀಜಗೊಬ್ಬರಗಳನ್ನು ಸಕಾಲದಲ್ಲಿ ಪೂರೈಸುವುದು, ರಾಜ್ಯಮಟ್ಟದ ಕೇಂದ್ರೀಕೃತ ಹಣಕಾಸು ಬಿಲ್ ವಿಲೇವಾರಿ ವ್ಯವಸ್ಥೆ ಜಾರಿಗೆ ತರುಬೇಕು ಎಂದರು. ಪತ್ರಿಕಾಗೋಷ್ಠಿಯಲ್ಲಿ ವಿಶ್ವನಾಥಯ್ಯ ಹಿರೇಮಠ, ಮಲ್ಲಿಕಾರ್ಜುನ ಹಿರೇಮಠ, ಬಸವರಾಜ ಆಗಸಿಬಾಗಿಲು, ಯಲ್ಲಪ್ಪ ಜಡಿ, ಸಿದ್ದಪ್ಪ ಕಳಗಂಡಿ ಇದ್ದರು.

ಕಿರುಸುದ್ದಿ

ಗೂಡ್ ವಾಹನ ಮರಕ್ಕೆ ಡಿಕ್ಕಿ: ಇಬ್ಬರ ಸಾವು

ಗದಗ: ಗೂಡ್ಸ್ ವಾಹನ ಮರಕ್ಕೆ ಡಿಕ್ಕಿ ಹೊಡೆದು ಇಬ್ಬರು ಸ್ಥಳದಲ್ಲೇ ಮೃತಪಟ್ಟಿದ್ದು, ಎಂಟು ಜನರು ಗಂಭೀರವಾಗಿ ಗಾಯಗೊಂಡ ಘಟನೆ ಗುರುವಾರ ಬೆಳಗಿನ ಜಾವ ತಾಲೂಕಿನ ಹರ್ತಿ ಗ್ರಾಮದ ಬಳಿ ನಡೆದಿದೆ.

ತಾಲೂಕಿನ ಹಿರೇಕೊಪ್ಪ ಗ್ರಾಮದ ಮುತ್ತಪ್ಪ ಸುಟಗೇರಿ (35), ನಿಂಗಪ್ಪ ಯಳವತ್ತಿ (36) ಮೃತ ದುರ್ದೈವಿಗಳು. 8 ಜನರು ಗಂಭೀರ ಗಾಯಗೊಂಡಿದ್ದು, ಚಿಕಿತ್ಸೆಗೆ ಜಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿದೆ.

ಮೃತ ಹಾಗೂ ಗಾಯಾಳುಗಳು ಗದಗ ತಾಲೂಕಿನ ಹಿರೇಕೊಪ್ಪ ಗ್ರಾಮಸ್ಥರಾಗಿದ್ದು, ಒಟ್ಟು ಹತ್ತು ಜನರು ಗೋಜನೂರು ಕಾಮಣ್ಣ ಮೆರವಣಿಗೆ ನೋಡಲು ಹೋಗಿದ್ದರು. ಗೋಜನೂರಿನಿಂದ ಹಿರೇಕೊಪ್ಪಕ್ಕೆ ಮರಳಿ ಬರುವ ವೇಳೆ ಚಾಲಕನ ನಿಯಂತ್ರಣ ತಪ್ಪಿ ವಾಹನ ಮರಕ್ಕೆ ಡಿಕ್ಕಿ ಹೊಡೆದಿದೆ. ಚಾಲಕನ ಅಜಾಗರೂಕತೆಯೇ ದುರ್ಘಟನೆ ನಡೆದಿದೆ ಎನ್ನಲಾಗಿದೆ.

ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ಗದಗ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

5.56 ಲಕ್ಷ ರೂ.ವಂಚನೆ

ಹುಬ್ಬಳ್ಳಿ: ನಗರದ ವ್ಯಕ್ತಿಯೊಬ್ಬರಿಂದ ಯಾವುದೇ ಬ್ಯಾಂಕ್ ಮಾಹಿತಿ ಹಾಗೂ ಒಟಿಪಿ ಪಡೆಯದೆ ಅಪರಿಚಿತರು 5.56 ಲಕ್ಷ ರೂ. ವಂಚಿಸಿದ ಪ್ರಕರಣ ಸೈಬರ್ ಕ್ರೈಂ ಪೊಲೀಸ್ ಠಾಣೆಯಲ್ಲಿ ದಾಖಲಾಗಿದೆ. ನಗರದ ನರೇಂದ್ರ ಎಂಬುವರಿಗೆ ವಂಚಿಸಲಾಗಿದೆ. ಸಿಮ್ ಅಪಗ್ರೇಡ್ ಹೆಸರಿನಲ್ಲಿ ಒಂದು ಮೆಸೇಜ್ ಬಂದಿದ್ದು ಬಿಟ್ಟರೆ ಯಾವುದೇ ಒಟಿಪಿ, ಪಿನ್ ಕೊಟ್ಟಿಲ್ಲ. ಆದರೂ ಕೂಡ ನನ್ನ ಬ್ಯಾಂಕ್ ಖಾತೆಗಳಿಂದ ಹಣ ವರ್ಗಾಯಿಸಿಕೊಂಡು ಮೋಸ ಮಾಡಲಾಗಿದೆ ಎಂದು ದೂರಿನಲ್ಲಿ ತಿಳಿಸಿದ್ದಾರೆ.

1.27 ಲಕ್ಷ ರೂ. ವಂಚನೆ: ಪುಸ್ತಕ ಖರೀದಿಸಲು ಮುಂದಾದ ವ್ಯಕ್ತಿಯೊಬ್ಬರಿಗೆ ಅಪರಿಚಿತರು ಆನ್‌ಲೈನ್‌ನಲ್ಲಿ 1.26 ಲಕ್ಷ ರೂ. ವಂಚಿಸಿದ್ದಾರೆ. ನಗರದ ರೋಹನ ಕುಮಾರ ಎಂಬುವರಿಗೆ ವಂಚಿಸಿದ್ದಾನೆ. ರೋಹನಕುಮಾರ ಓಎಲ್‌ಎಕ್ಸ್ ಆ್ಯಪ್ ಅಪಲೋಡ್ ಮಾಡಿಕೊಂಡು ಪುಸ್ತಕ ಖರೀದಿ ಮಾಡಲು ಮುಂದಾಗಿದ್ದಾರೆ. ಆಗ ಶ್ರೀಕಾಂತ ರಾಣ ಎಂಬ ಅಪರಿಚಿತ ವ್ಯಕ್ತಿ ಆತನಿಗೆ ನಂಬಿಸಿ ವಿವಿಧ ಬ್ಯಾಂಕ್ ಖಾತೆಯಿಂದ ಹಂತ ಹಂತವಾಗಿ ಹಣ ವರ್ಗಾಯಿಸಿಕೊಂಡು ವಂಚಿಸಿದ್ದಾರೆ. ಗೋಕುಲ ರಸ್ತೆ ಪೊಲೀಸ್ ಠಾಣೆಯಲ್ಲಿ ದಾಖಲಾಗಿದೆ.

2 ಲಕ್ಷದ ವಸ್ತುಗಳ ಕಳವು ಇಲ್ಲಿಯ ಗೋಕುಲ ರಸ್ತೆ ಜಯಪ್ರಕಾಶ ನಗರದ 2 ನೇ ಕ್ರಾಸ್‌ನಲ್ಲಿ ವಸತಿ ಸಮುಚ್ಚ ಕಟ್ಟಡ ನಿರ್ಮಾಣದ ಸ್ಥಳದಲ್ಲಿದ್ದ 2 ಲಕ್ಷ ರೂ. ಮೌಲ್ಯದ ಶಕ್ತಿ ಕಂಪನಿಯ ಎಲೆಕ್ಟ್ರಿಕಲ್ ವಾಯರಗಳನ್ನು ಯಾರೋ ಕಳವು ಮಾಡಿದ ಘಟನೆ ನಡೆದಿದೆ. ಗೌತಮಿ ರಾಯಚೂರ ಎಂಬುವರಿಗೆ ಸೇರಿದ ವಸ್ತುಗಳು ಕಳವಾಗಿವೆ. ಈ ಕುರಿತು ಗೋಕುಲ ರಸ್ತೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅಂತರ್ಜಾತಿ ವಿವಾಹಕ್ಕೆ ಪೋಷಕರ ಅಡ್ಡಿ

ಹಾವೇರಿ: ಅಂತರ್ಜಾತಿ ವಿವಾಹವಾಗಲು ಉಪ ನೋಂದಣಾಧಿಕಾರಿ ಕಚೇರಿಗೆ ತೆರಳುತ್ತಿದ್ದ ಯುವತಿಯರನ್ನು ಪೋಷಕರು ತಡೆದು ಸಿನಿಮಿಯ ರೀತಿಯಲ್ಲಿ ಕರೆದೊಯ್ದ ಘಟನೆ ಹಾನಗಲ್ ತಾಲೂಕು ತಿಳವಳ್ಳಿಯಲ್ಲಿ ನಡೆದಿದೆ.

ತಿಳವಳ್ಳಿ ಗ್ರಾಮದ ಯುವಕ ಮಣಿಕಂಠಸ್ವಾಮಿ ಹಾಗೂ ಕೆಲವೂರಕೊಪ್ಪದ ಯುವತಿ ಸೃಷ್ಟಿ ಕಾಲೇಜ್ ದಿನಗಳಿಂದ ಪರಸ್ಪರ ಪ್ರೀತಿಸುತ್ತಿದ್ದರು. ಎರಡು ದಿನಗಳ ಹಿಂದಷ್ಟೇ ದೇವಸ್ಥಾನದಲ್ಲಿ ಶಾಸ್ತ್ರೋಕ್ತವಾಗಿ ಮದುವೆ ಆಗಿದ್ದರು. ಬುಧವಾರ ರಿಜಿಸ್ಟ್ರಾರ್ ಮ್ಯಾರೇಜ್ ಆಗಲು ಹಾನಗಲ್‌ನ ಉಪ ನೋಂದಣಾಧಿಕಾರಿ ಕಚೇರಿಗೆ ಹೊರಟಿದ್ದರು. ಆಗ ಯುವತಿಯ ಪೋಷಕರು ಪ್ರೇಮಿಗಳಿದ್ದ ಕಾರು ಬೆನ್ನಟ್ಟಿ ತಡೆದು ತಿಳವಳ್ಳಿಯಲ್ಲಿ ಯುವಕ ಮಣಿಕಂಠಸ್ವಾಮಿಗೆ ಥಳಿಸಿದ್ದಾರೆ. ಯುವತಿ ತಮ್ಮೊಂದಿಗೆ ಬರಲು ನಿರಾಕರಿಸಿದರೂ ಬಲವಂತವಾಗಿ ಪೋಷಕರು ಎಳೆದೊಯ್ದಿದ್ದಾರೆ. ಪ್ರೇಯಸಿಯನ್ನು ವಾಪಸ್ ತನ್ನೊಂದಿಗೆ ಕಳುಹಿಸುವಂತೆ ಮಣಿಕಂಠಸ್ವಾಮಿ ಒತ್ತಾಯಿಸಿದ್ದಾರೆ. ಆಡೂರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಪ್ರಕರಣ ನಡೆದಿದೆ.

ಗುಮ್ಮಟ ನಗರಿಯಲ್ಲಿ ವಾಹನ ದಟ್ಟಣೆ | ಸವಾರರ ಪರದಾಟ

ಮಾಸ್ಟರ್ ಪ್ಲ್ಯಾನ್ ನನೆಗುದಿಗೆ

ಪರಶುರಾಮ ಶಿವಶರಣ

ದಿಗಂತ ವಿಶೇಷ

ವಿಜಯಪುರ: ಐತಿಹಾಸಿಕ ಸ್ಮಾರಕಗಳ ಖ್ಯಾತಿಯ ಗುಮ್ಮಟ ನಗರಿಯಲ್ಲಿ ಮಾಸ್ಟರ್ ಪ್ಲ್ಯಾನ್ ನನೆಗುದಿಗೆ ಬಿದಿದ್ದು, ಹಳೇ ಓಬೇರಾಯ ಕಾಲದ ಇಕ್ಕಟ್ಟಾದ ರಸ್ತೆಗಳಲ್ಲಿ ವಾಹನ ಸಂಚಾರಿಗಳು ಸಂಚರಿಸಲು ಹೆಣಗುವಂತಾಗಿದೆ.

ಜಿಲ್ಲಾಡಳಿತ ಹಾಗೂ ಸರ್ಕಾರ ನಗರದಲ್ಲಿ ದಶಕದ ಹಿಂದೆ ಮಾಸ್ಟರ್ ಪ್ಲ್ಯಾನ್ ಜಾರಿಗೊಳಿಸಿ, ಕೆಲ ರಸ್ತೆಗಳನ್ನು ಅಗಲೀಕರಣ ಮಾಡಿ, ಇನ್ನುಳಿದ ರಸ್ತೆಗಳ ಗೋಜಿಗೂ ಹೋಗದೆ ಕೈಚೆಲ್ಲಿ ಕುಳಿತ್ತಿದ್ದು, ಮಾಸ್ಟರ್ ಪ್ಲ್ಯಾನ್ ಮರೀಚಿಕೆಯಾಗುವಂತಾಗಿದೆ.

ವಿಶ್ವವಿಖ್ಯಾತಿ ಗೋಳಗುಮ್ಮಟ ಸೇರಿದಂತೆ 80ಕ್ಕೂ ಹೆಚ್ಚು ಸ್ಮಾರಕಗಳನ್ನು ಒಳಗೊಂಡ ನಗರದ ರಸ್ತೆ ಸಂಚಾರ ಕಂಡು ದೇಶ-ವಿದೇಶಿಗರು ಬೆಚ್ಚಿ ಬೀಳುವಂತಾಗಿದೆ. ಇಕ್ಕಟ್ಟಾದ ರಸ್ತೆಯಲ್ಲಿ ಸಂಚರಿಸುವ ಬಸ್, ಕಾರ್, ಆಟೋ, ಬೈಕ್‌ಗಳ ಸಾಗರವೇ ರಸ್ತೆಗೆ ಇಳಿದಂತಾಗುತ್ತದೆ. ಈ ರಸ್ತೆಯಲ್ಲಿ ಬಸ್ ನಿಂತರೆ ಪಕ್ಕದಲ್ಲಿ ಮತ್ತೊಂದು ವಾಹನ ತೆರಳಲು ಜಾಗವಿರುವುದಿಲ್ಲ, ಇದರಿಂದ ಪಾದಾಚಾರಿಗಳು ಪರದಾಡುವಂತಾಗಿದೆ.

ನಗರದ ಸಂಚಾರ ದಟ್ಟನೆ ನಿಯಂತ್ರಿಸಲು ಜಿಲ್ಲಾ ಪೊಲೀಸ್ ಇಲಾಖೆ ಅವಿರತ ಶ್ರಮಿಸುತ್ತಿದ್ದರೂ, ಇಕ್ಕಟ್ಟಾದ ರಸ್ತೆ, ಹೆಚ್ಚಾದ ವಾಹನ ಹಾಗೂ ಜನ ಸಂಖ್ಯೆಗಳಿಂದ ಇಲ್ಲಿನ ಪ್ರತಿ ರಸ್ತೆಗಳು ವಾಹನಗಳ ಜೇನುಗೂಡಿನಂತೆ ಗಿಜಿಗುಡುತ್ತವೆ.

ಅರೆಬರೆಯಾದ ಮಾಸ್ಟರ್ ಪ್ಲ್ಯಾನ್: ನಗರದ ರಸ್ತೆ ಅಗಲೀಕರಣಕ್ಕೆ ದಶಕದ ಹಿಂದೆ ಮೂರು ಹಂತಗಳಲ್ಲಿ ಮಾಸ್ಟರ್ ಪ್ಲ್ಯಾನ್ ಹಮ್ಮಿಕೊಳ್ಳಲಾಗಿತ್ತು. ಇದರಲ್ಲಿ ಮೊದಲ ಹಂತದ ಮಾಸ್ಟರ್ ಪ್ಲ್ಯಾನ್ ಅಡಿ 16 ಪ್ರಮುಖ ರಸ್ತೆಗಳ ಅಗಲೀಕರಣಕ್ಕೆ ಯೋಜನೆ ಸಿದ್ಧಪಡಿಸಲಾಗಿತ್ತು. ಆದರೆ ಈ ಪೈಕಿ ಎರಡೂವರೆ ರಸ್ತೆಗಳನ್ನು ಮಾತ್ರ ಅಗಲೀಕರಣ ಮಾಡಲಾಗಿದೆ.

ಇಲ್ಲಿನ ಡಾ.ಬಿ.ಆರ್.ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಣದ ತಿರುವಿನಿಂದ ಪೊಲೀಸ್ ವಸತಿ ಗೃಹದ ವರೆಗೆ ಮಾತ್ರ ರಸ್ತೆ ಅಗಲೀಕರಣ ಮಾಡಿದ್ದು, ಈ ರಸ್ತೆಯ ಮಾಸ್ಟರ್ ಪ್ಲ್ಯಾನ್ ಗೋಳಗುಮ್ಮಟ ಎದುರಿನ ರಸ್ತೆಯಿಂದ ಗೋದಾವರಿ ಹೋಟೆಲ್ ವರೆಗೆ ನಡೆಯಬೇಕಿತ್ತು. ಈ ರಸ್ತೆ ಕೂಡ ಪೂರ್ಣಗೊಳಿಸದೇ ಮೊದಲ ಹಂತದಲ್ಲಿಯೇ ಮಾಸ್ಟರ್ ಪ್ಲ್ಯಾನ್ ಮುಗ್ಗರಿಸಿರುವುದು ದುರಂತ.

ಇನ್ನು ಸರಾಫ್ ಬಜಾರ್, ಸಿದ್ಧೇಶ್ವರ ದೇವಸ್ಥಾನ ರಸ್ತೆ, ಗಣಪತಿ ಚೌಕ್, ಶಹಾಪೇಟಿ, ಸ್ಟೇಶನ್ ಬ್ಯಾಕ್ ರೋಡ್, ಜಾಮೀಯಾ ಮಸೀದಿ ರಸ್ತೆ, ಆಶ್ರಮ ರಸ್ತೆ, ಜಿಲ್ಲಾಧಿಕಾರಿ ಕಚೇರಿ ಹಿಂಭಾಗದ ಕಣಕಿ ಬಜಾರ್, ಬಾಗಲಕೋಟೆ ರಸ್ತೆ, ಹುತಾತ್ಮರ ಚೌಕ್ ರಸ್ತೆ, ಮರಾಠಿ ವಿದ್ಯಾಲಯ ರಸ್ತೆ ಸೇರಿದಂತೆ ಹತ್ತಾರು ರಸ್ತೆಗಳು ಮಾಸ್ಟರ್ ಪ್ಲ್ಯಾನ್ ಅಡಿ ಅಗಲೀಕರಣಕ್ಕೆ ಸಿದ್ಧತೆ ಮಾಡಲಾಗಿತ್ತು. ಆದರೆ ಈ ಯೋಜನೆ ಪೂರ್ಣಗೊಂಡಿಲ್ಲ.

ನಗರಕ್ಕೆ ಬೇಕು ಮೆಟ್ರೋ: ನಗದಲ್ಲಿ ಈಗಾಗಲೇ ಜನಸಂಖ್ಯೆ ಹಾಗೂ ವಾಹನಗಳ ಸಂಖ್ಯೆ ಮಿತಿಮೀರಿದ್ದು, ಮುಂಬರುವ 50 ಹಾಗೂ 100 ವರ್ಷಗಳಿಗೆ ಹೊಂದುಕೊಳ್ಳುವಂತೆ ಇಲ್ಲಿನ ರಸ್ತೆಗಳು ಅಗಲೀಕರಣಗೊಳ್ಳಬೇಕಿದೆ. ಅಲ್ಲದೆ ಐತಿಹಾಸಿಕ ಗುಮ್ಮಟನಗರಿಗೆಮೆಟ್ರೋಬೇಕಿದ್ದು,ಇಂತಹದೊಂದು ನೀಲಿನಕ್ಷೆ ಈಗಿನಿಂದಲೇ ಸಿದ್ಧಗೊಳ್ಳಲಿ.

ನಗರದ ರಸ್ತೆಯಲ್ಲಿ ಬಿದ್ದಿರುವ ಗುಂಡಿ ಮುಚ್ಚದ ಜನಪ್ರತಿನಿಧಿಗಳು ನಗರದಲ್ಲಿ ಮೆಟ್ರೋ ರೈಲು ಓಡಿಸಬಲ್ಲರೆ? ಎನ್ನುವ ಅನುಮಾನ ಹಲವರನ್ನು ಕಾಡಲೂಬಹುದು. ಆದರೆ, ದೂರದೃಷ್ಟಿಯಿಂದ ನೋಡಿದರೆ ಮೆಟ್ರೋ ಮಹತ್ವ ಅರಿವಾಗುತ್ತದೆ.

ಮೊದಲ ಹಂತದಲ್ಲಿ ಮೆಟ್ರೋ ರೈಲು ಇಲ್ಲಿನ ರೇಲ್ವೆ ಸ್ಟೇಶನ್‌ನಿಂದ ಡಾ.ಬಿ.ಆರ್. ಅಂಬೇಡ್ಕರ್ ವೃತ್ತ, ಬಸವೇಶ್ವರ, ಗಾಂಧಿ ವೃತ್ತದ ಮಾರ್ಗವಾಗಿ ಅಕ್ಕಮಹಾದೇವಿ ಮಹಿಳಾ ವಿವಿ ವರೆಗೆ, ಇನ್ನು ಎರಡನೇ ಹಂತವಾಗಿ ಇಲ್ಲಿನ ಗಣೇಶ ನಗರದಿಂದ ಜಲನಗರ, ಗಾಂಧಿ ವೃತ್ತ, ಸಿದ್ಧೇಶ್ವರ ದೇವಸ್ಥಾನ ಮಾರ್ಗವಾಗಿ ಜ್ಞಾನಯೋಗಾಶ್ರಮದ ವರೆಗೆ ಮೆಟ್ರೋರೈಲು ಓಡಿದರೆ ಉತ್ತಮ. ಇದರಿಂದ ವಾಹನ ದಟ್ಟಣೆ ಕಡಿಮೆಯಾಗುವುದಲ್ಲದೇ ಪ್ರವಾಸಿಗರಿಗೂ ಆಕರ್ಷಣೀಯವಾಗುತ್ತದೆ. ಈ ಬಗ್ಗೆ ಜಿಲ್ಲೆಯ ಜನಪ್ರತಿನಿಧಿಗಳು ಪ್ರಸಕ್ತ ಬಜೆಟ್ ಅಧಿವೇಶನದಲ್ಲಿ ಧ್ವನಿ ಎತ್ತಿ, ಗುಮ್ಮಟ ನಗರಿ ಅಭಿವೃದ್ಧಿಗೆ ಮುನ್ನುಡಿ ಬರೆಯಬೇಕು ಎಂದು ಜನರು ಆಗ್ರಹಿಸುತ್ತಾರೆ.



> ವಿಜಯಪುರ ನಗರದಲ್ಲಿ ನನೆಗುದಿಗೆ ಬಿದ್ದಿರುವ ಮಾಸ್ಟರ್ ಪ್ಲ್ಯಾನ್ ಅತಿ ಶೀಘ್ರದಲ್ಲಿ ಜಾರಿಗೊಳಿಸಿ, ಸುಗಮ ಸಂಚಾರಕ್ಕೆ ಅವಕಾಶ ಕಲ್ಪಿಸುವ ನಿಟ್ಟಿನಲ್ಲಿ ಸ್ಥಳೀಯ ನೇತಾರರು ಮುಂದಾಗಬೇಕು. ಮಾಸ್ಟರ್ ಪ್ಲ್ಯಾನ್‌ನಿಂದ ಬಾಧಿತಗೊಳ್ಳುವ ಖಾಸಗಿ ಆಸ್ತಿಗಳ ಮಾಲೀಕರಿಗೆ ಸೂಕ್ತ ಪರಿಹಾರ ನೀಡಬೇಕು.
>
> ■ ಡಾ. ಬಾಬುರಾಜೇಂದ್ರ ನಾಯಿಕ
> ಖ್ಯಾತ ವೈದ್ಯರು, ಸಮಾಜ ಸೇವಕರು, ವಿಜಯಪುರ

ಉಪರಾಷ್ಟ್ರಪತಿ ಸ್ವಾಗತಿಸಿದ ಜಾರಕಿಹೊಳಿ



ಬೆಳಗಾವಿ: ಜಿಲ್ಲೆಯ ಚಿಕ್ಕೋಡಿ ತಾಲೂಕಿನ ಸುಕ್ಷೇತ್ರ ಯಡೂರಿನ ಶ್ರೀ ವೀರಭದ್ರೇಶ್ವರ ದೇವಸ್ಥಾನದ ರಾಜಗೋಪುರ ಹಾಗೂ ವಿವಿಧ ಕಾಮಗಾರಿಗಳಿಗೆ ಉದ್ಘಾಟನೆ ಹಾಗೂ ಕಳಸಾರೋಹಣ, ಮಹಾಕುಂಭಾಭಿಷೇಕ ಕಾರ್ಯಕ್ರಮದಲ್ಲಿ ಭಾಗವಹಿಸಲು ಆಗಮಿಸಿದ ಭಾರತದ ಗೌರವಾನ್ವಿತ ಉಪರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್ ಹಾಗೂ ರಾಜ್ಯಪಾಲ ಥಾವರಚಂದ್ ಗೆಹ್ಲೋಟ್ ಅವರನ್ನು ಬೆಳಗಾವಿ ಸಾಂಬ್ರಾ ವಿಮಾನ ನಿಲ್ದಾಣದಲ್ಲಿ ಸಚಿವ ಸತೀಶ ಜಾರಕಿಹೊಳಿ ಹೂಗುಚ್ಛ ನೀಡುವುದರ ಮೂಲಕ ಬರಮಾಡಿಕೊಂಡರು.

ಈ ಸಂದರ್ಭದಲ್ಲಿ ರಾಜ್ಯಪಾಲರಾದ ಥಾವರಚಂದ್ ಗೆಹ್ಲೋಟ್, ರಾಜ್ಯಸಭಾ ಸದಸ್ಯ ಈರಣ್ಣ ಕಡಾಡಿ, ಮೇಯರ್ ಮಂಗೇಶ್ ಪವಾರ್, ಪ್ರಾದೇಶಿಕ ಆಯುಕ್ತೆ ಜಾನಕಿ ಕೆ.ಎಂ., ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ಸೇರಿದಂತೆ ಇತರರು ಇದ್ದರು.

ವಿಶ್ವ ಶಾಂತಿಗಾಗಿ ಭಾರತ ಮಧ್ಯ ಪ್ರವೇಶಿಸಲಿ: ಶ್ರೀಗಳು

ಬೆಳಗಾವಿ: ಇರಾನ್, ಇಸ್ರೇಲ್ ಹಾಗೂ ಅಮೆರಿಕಾ ನಡುವೆ ನಡೆಯುತ್ತಿರುವ ಯುದ್ಧದ ಪರಿಸ್ಥಿತಿಯನ್ನು ತಡೆಯಲು ಭಾರತ ಮಧ್ಯಪ್ರವೇಶ ಮಾಡಬೇಕು ಎಂದು ಶ್ರೀಶೈಲ ಜಗದ್ಗುರು ಚನ್ನಸಿದ್ಧರಾಮ ಪಂಡಿತರಾಧ್ಯ ಶಿವಾಚಾರ್ಯ ಸ್ವಾಮೀಜಿಗಳು ಮನವಿ ಮಾಡಿದ್ದಾರೆ.

ಇರಾನ್ -ಇಸ್ರೇಲ್ ಯುದ್ಧ

ಗುರುವಾರ ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲೂಕಿನ ಮಾಜರೇಯ ಯಡೂರು ಶ್ರೀ ವೀರಭದ್ರೇಶ್ವರ ದೇವಸ್ಥಾನದ ರಾಜಗೋಪೂರ ಹಾಗೂ ವಿವಿಧ ಅಭಿವೃದ್ಧಿ ಕಾಮಗಾರಿಗಳು ಉದ್ಘಾಟನೆಯ ಧಾರ್ಮಿಕ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಅವರಿಗೆ ಈ ಕುರಿತು ಸಲಹೆ ನೀಡಿದರು. ಇರಾಕ್, ಇರಾನ್, ಇಸ್ರೇಲ್ ಹಾಗೂ ಕೊಲ್ಲಿ ರಾಷ್ಟ್ರಗಳ ಭಾಗದಲ್ಲಿ ಯುದ್ಧದ ವಾತಾವರಣ ನಿರ್ಮಾಣವಾಗಿರುವುದು ವಿಷಾದನೀಯ. ಇಂತಹ ಯುದ್ಧಗಳು ನಡೆಯಬಾರದು. ಯುದ್ಧವನ್ನು ನಿಲ್ಲಿಸಲು ಭಾರತ ಸರ್ಕಾರ ಮಧ್ಯಪ್ರವೇಶ ಮಾಡಬೇಕು ಯುದ್ಧವನ್ನು ಶಾಂತಗೊಳಿಸಬೇಕೆಂದು ಎಂದು ಸ್ವಾಮೀಜಿಗಳು ಸಲಹೆ ಕೊಟ್ಟರು.ಭಾರತವು ಪ್ರಾಚೀನ ಕಾಲದಿಂದಲೂ ವಿಶ್ವ ಶಾಂತಿಯ ಸಂದೇಶ ಸಾರಿಕೊಂಡು ಬಂದಿದೆ. ಹೀಗಾಗಿ ಯುದ್ಧ ನಿಲ್ಲಿಸುವ ಪ್ರಯತ್ನ ಭಾರತ ಮಾಡಬೇಕು. ಇದರಿಂದ ಭಾರತದ ಗೌರವವೂ ವಿಶ್ವದ ಮಟ್ಟದಲ್ಲಿ ಹೆಚ್ಚಾಗಲಿದೆ ಎಂದು ಅವರು ಹೇಳಿದರು.ಇದೇ ವೇಳೆ ದೇಶದಲ್ಲಿ ಏಕರೂಪ ಕಾನೂನು ಜಾರಿಗೆ ತರಬೇಕಿದ್ದು, ಅದನ್ನು ಶೀಘ್ರ ಜಾರಿಗೆ ತರಲು ಉಪರಾಷ್ಟ್ರಪತಿಗಳು ಕ್ರಮವಹಿಸಬೇಕು ಎಂದು ಸ್ವಾಮೀಜಿಗಳು ಮನವಿ ಮಾಡಿದರು.

ಲೋಕಾ ದಾಳಿ: 4.60 ಕೋಟಿ ಅಕ್ರಮ ಆಸ್ತಿ ಪತ್ತೆ

ವಿಜಯಪುರ: ಆದಾಯಕ್ಕಿಂತ ಹೆಚ್ಚು ಆಸ್ತಿ ಗಳಿಸಿದ ಆರೋಪದ ಹಿನ್ನೆಲೆ ಇಂಡಿಯ ಕೆಬಿಜೆಎನ್‌ಎಲ್ ಕಿರಿಯ ಎಂಜಿನಿಯರ್ ಪ್ರಕಾಶ ಈರಪ್ಪ ಗೋಡಬೋಳೆ ಅವರ ವಿವಿಧೆಡೆ ಆಸ್ತಿಗಳ ಮೇಲೆ ಲೋಕಯುಕ್ತ ಪೊಲೀಸರು ದಾಳಿ ನಡೆಸಿದ್ದು, ಅಂದಾಜು 4.60 ಕೋಟಿ ರೂಗೂ ಹೆಚ್ಚಿನ ಅಕ್ರಮ ಆಸ್ತಿ ಪತ್ತೆಯಾಗಿದೆ.

ಆರೋಪಿ ನೌಕರ ಪ್ರಕಾಶ ಗೋಡಬೋಳೆಗೆ ಸಂಬಂಧಿಸಿದ ಬೆಂಗಳೂರು ನಗರದ ಮಹಾದೇವಪುರ ವಿದ್ಯಾ ಹೆರಿಟೇಜ್ ಅಪಾರ್ಟಮೆಂಟ್‌ನಲ್ಲಿರುವ ಮನೆ, ಬೀದರ್ ಜಿಲ್ಲೆಯ ಬಾಲ್ಕಿ ತಾಲೂಕಿನವರವಟ್ಟಿಬಿ.ಗ್ರಾಮದಮನೆ,ಆರೋಪಿಗೆಸಂಬಂಧಿಸಿದ ಶಾಲೆಮತ್ತುಕರ್ತವ್ಯನಿರ್ವಹಿಸುತ್ತಿರುವಕಚೇರಿಶೋಧನೆಕಾರ್ಯ ನಡೆಸಿದ್ದು, ಶೋಧನೆ ವೇಳೆ ಬೆಂಗಳೂರು ನಗರದ ಮನೆಯಲ್ಲಿ 4 ಐಶಾರಾಮಿ ವಾಹನಗಳು, 21,97,500 ರೂ. ಬೆಳ್ಳಿ ಬಂಗಾರದ ಆಭರಣಗಳು ಮತ್ತು ಇತರೆ ಆಸ್ತಿಗಳಿಗೆ ಸಂಬಂಧಿಸಿದ ದಾಖಲಾತಿಗಳು ದೊರೆತಿದ್ದು, ಅಂದಾಜು 4.60 ಕೋಟಿಗೂ ಹೆಚ್ಚಿನ ಅಕ್ರಮ ಆಸ್ತಿ ಗಳಿಸಿರುವುದು ಪತ್ತೆಯಾಗಿದೆ. ಈ ಕಾರ್ಯಾಚರಣೆ ಲೋಕಾಯುಕ್ತ ಎಸ್ಪಿ ಟಿ. ಮಲ್ಲೇಶ ಮಾರ್ಗದರ್ಶನದಲ್ಲಿ ಡಿಎಸ್‌ಪಿ ಮಲ್ಲಿಕಾರ್ಜುನ ತುಳಸಿಗೇರಿ, ಪೊಲೀಸ್ ಇನ್ಸಪೆಕ್ಟರ್ ಆನಂದ ಟಕ್ಕನ್ನವರ್, ಆನಂದ ಡೋಣಿ. ನಿಂಗಪ್ಪ ಪೂಜೇರಿ, ಬಾಬಾಸಾಹೇಬ ಪಾಟೀಲ, ಮಲ್ಲಿಕಾರ್ಜುನ ಬಿರಾದಾರ ಹಾಗೂ ವಿಜಯಪುರ ಹಾಗೂ ಬಾಗಲಕೋಟೆ, ಬೀದರ್ ಪೊಲೀಸ್ ಠಾಣೆಯ ಸಿಬ್ಬಂದಿಗಳ ತಂಡ ಶೋಧನೆ ಕಾರ್ಯ ನಡೆಸಿದ್ದಾರೆ.

ಕೆಆರ್‌ಡಿಸಿಎಲ್ ಚೀಫ್ ಎಂಜಿನಿಯರ್ ಮನೆ ಮೇಲೆ ಲೋಕಾ ದಾಳಿ

ಹುಬ್ಬಳ್ಳಿ: ಕೆಆರ್‌ಡಿಸಿಎಲ್ ಚೀಫ್ ಎಂಜಿನಿಯರ್ ವಸಂತ ವಾಲಪ್ಪ ನಾಯಕ್ ಎಂಬುವರ ಇಲ್ಲಿಯ ಅಕ್ಷಯ ಕಾಲೋನಿಯಲ್ಲಿರುವ ಮನೆಯ ಮೇಲೆ ಲೋಕಾಯುಕ್ತ ಅಧಿಕಾರಿಗಳು ಗುರುವಾರ ಬೆಳಗ್ಗೆ 6.45ಕ್ಕೆ ದಾಳಿ ನಡೆಸಿ, ಹಲವು ದಾಖಲೆಗಳ ಪರಿಶೀಲಿಸಿದ್ದಾರೆ.

ಬೆಳಗಾವಿ ಹಾಗೂ ಧಾರವಾಡ ಲೋಕಾಯುಕ್ತ ಜಂಟಿ ಕಾರ್ಯಾಚರಣೆ ಮಾಡಿದೆ. ಬೆಳಗಾವಿ ಲೋಕಾಯುಕ್ತ ಡಿಎಸ್‌ಪಿ ಭರತ ರೆಡ್ಡಿರವರ ನೇತೃತ್ವದಲ್ಲಿ ಪರಿಶೀಲನೆ ನಡೆದಿದೆ.

ಬೆಂಗಳೂರು ನಗರ ಲೋಕಾಯುಕ್ತ ಠಾಣೆಯಲ್ಲಿ ದಾಖಲಾಗಿದ್ದ ದೂರಿನ ಆಧಾರದಲ್ಲಿ ಕೆಆರ್‌ಡಿಸಿಎಲ್ ಚೀಫ್ ಎಂಜಿನಿಯರ್ ವಸಂತ ವಾಲಪ್ಪ ನಾಯಕ್ ಅವರ ಮನೆ ಮೇಲೆ ಲೋಕಾಯುಕ್ತ ಅಧಿಕಾರಿಗಳು ದಾಳಿ ನಡೆಸಿದ್ದಾರೆ. ಲೋಕಾಯುಕ್ತ ಎಸ್‌ಪಿ ಸಿದ್ಧಲಿಂಗಪ್ಪ ಅವರು ಸಹ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ್ದಾರೆ.

ಬಾಗಲಕೋಟೆಯಲ್ಲೂ ದಾಳಿ

ಬಾಗಲಕೋಟೆ: ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮದ ಚೀಫ್ ಎಂಜಿನಿಯರ್ ವಸಂತ ವಾಲಪ್ಪ ನಾಯಕ ಅವರ ಬೆಂಗಳೂರು ಹಾಗೂ ಬಾಗಲಕೋಟೆಯಲ್ಲಿರುವ ಮನೆಯ ಮೇಲೆ ಲೋಕಾಯುಕ್ತ ಅಧಿಕಾರಿಗಳು ದಾಳಿ ನಡೆಸಿ ದಾಖಲೆ ಪರಿಶೀಲಿಸಿದರು.

ವಸಂತ ಸಹೋದರ ಭೀಮಸಿಂಗ್ ನಾಯಕ್ ಅವರ ಬಾಗಲಕೋಟೆ ಮನೆ ಮೇಲೆ ದಾಳಿ ನಡೆದಿದೆ. ಭೀಮಸಿಂಗ್ ನಾಯಕ ಬಾಗಲಕೋಟೆ ಡಿಎಆರ್‌ನಲ್ಲಿ ಎಎಸ್‌ಐ ಆಗಿದ್ದಾರೆ. ಬಾಗಲಕೋಟೆಯ ಪೋಸ್ಟಲ್ ಕಾಲೋನಿಯಲ್ಲಿರುವ ಭೀಮಸಿಂಗ್ ಮನೆ ಮೇಲೆ ದಾಳಿ ನಡೆದಿದೆ. ಹಾಗೆಯೇ ವಸಂತ ನಾಯಕ ಅವರ ಮೂಲ ಗ್ರಾಮ ಬಾಗಲಕೋಟೆ ತಾಲೂಕಿನ ಬಸವನಗರ ತಾಂಡಾದಲ್ಲಿರುವ ಮನೆ ಮೇಲೂ ಅಧಿಕಾರಿಗಳು ದಾಳಿ ನಡೆಸಿದ್ದಾರೆ. ಬಾಗಲಕೋಟೆ ಲೋಕಾಯುಕ್ತ ಎಸ್.ಪಿ.ಮಾನಿಂಗ್ ನಂದಗಾವಿ ಮಾರ್ಗದರ್ಶನದಲ್ಲಿ ಲೋಕಾಯುಕ್ತ ಡಿವೈಎಸ್‌ಪಿ ಸುರೇಶ್ ರೆಡ್ಡಿ ನೇತೃತ್ವದಲ್ಲಿ ದಾಳಿ ನಡೆಯಿತು.

ಬಿಸಿಎಂ ಅಧಿಕಾರಿ ಮನೆಯಲ್ಲಿ ಮಕ್ಕಳ ಹಾಸಿಗೆ, ಬೆಡ್‌ಶೀಟ್!

ಗದಗ: ಆದಾಯಕ್ಕಿಂತ ಹೆಚ್ಚು ಆಸ್ತಿಗಳಿಕೆ ಆರೋಪದ ಮೇಲೆ ಶಿರಹಟ್ಟಿ ತಾಲೂಕು ಬಿಸಿಎಂ ಅಧಿಕಾರಿ ಎಂ.ಕೆ.ಸುರಕೋಡಗೆ ಸಂಬಂಧಿಸಿದ 6 ಕಡೆಗಳಲ್ಲಿ ಗುರುವಾರ ಬೆಳಗ್ಗೆ ದಾಳಿ ನಡೆಸಿದ ಲೋಕಾಯುಕ್ತ ಪೊಲೀಸರು, ಶೇ.227 ಅಧಿಕ ಆಸ್ತಿ ಹೊಂದಿರುವುದನ್ನು ಪತ್ತೆ ಮಾಡಿದ್ದಾರೆ.

ಲೋಕಾಯುಕ್ತ ಪೊಲೀಸರ ಶೋಧನೆ ವೇಳೆ ಅಧಿಕಾರಿಯ ಮನೆಯಲ್ಲಿ ಬಿಸಿಎಂ ಇಲಾಖೆಯಿಂದ ವಿದ್ಯಾರ್ಥಿಗಳಿಗೆ ಸರಬರಾಜು ಮಾಡಲಾಗಿದ್ದ ಹಾಸಿಗೆ–ಬೆಡ್‌ಶೀಟ್‌ಗಳು, ಹಾಸ್ಟೆಲ್‌ನಲ್ಲಿ ಅಡುಗೆ ಮಾಡಲು ಬಳಸುವ ದೊಡ್ಡ ದೊಡ್ಡ ಪಾತ್ರೆಗಳು, ನೋಟ್‌ಪುಸ್ತಕಗಳು ಸಿಕ್ಕಿದ್ದು, ಅಧಿಕಾರಿಗಳನ್ನು ದಂಗುಬಡಿಸಿದೆ. ಇವುಗಳ ಜತೆಗೆ, 13 ಲಕ್ಷ ಮೌಲ್ಯದ ಆರು ನಿವೇಶನಗಳು, 45 ಲಕ್ಷ ಮೌಲ್ಯದ ಮನೆ, 80.77 ಲಕ್ಷ ಮೌಲ್ಯದ 29 ಎಕರೆ ಜಮೀನು ಸೇರಿದಂತೆ ಒಟ್ಟು 1.38 ಕೋಟಿ ಮೌಲ್ಯದ ಸ್ಥಿರಾಸ್ತಿಗೆ ಸಂಬಂಧಿಸಿದ ಕಾಗದ ಪತ್ರಗಳು ಸಿಕ್ಕಿವೆ. 89 ಸಾವಿರ ನಗದು, 23.21 ಲಕ್ಷ ಮೌಲ್ಯದ 152 ಗ್ರಾಂ ಚಿನ್ನಾಭರಣ, 2.05 ಲಕ್ಷ ಮೌಲ್ಯದ ಬೆಳ್ಳಿ, 31.40 ಲಕ್ಷ ಮೌಲ್ಯದ ವಾಹನಗಳು ಸೇರಿದಂತೆ ಒಟ್ಟು 1.82 ಕೋಟಿ ಆಸ್ತಿ ಪತ್ತೆ ಮಾಡಿದ್ದಾರೆ. ದಾಖಲಾತಿಗಳ ಪರಿಶೀಲನೆ ಮುಂದುವರಿದಿದೆ.

ಬಸ್–ಕಾರ್ ನಡುವೆ ಭೀಕರ ಅಪಘಾತ

ಕುಂದಾಪುರದ ಮುಕೇಶ್ ಶೆಟ್ಟಿ ಸಾವು



ಯಲ್ಲಾಪುರ: ತಾಲೂಕಿನ ಬೇಡ್ತಿ ಸಮೀಪದ ಮಳಲಗಾವ್ ಕ್ರಾಸ್ ಬಳಿ ಗುರುವಾರ ಕೆಎಸ್‌ಆರ್‌ಟಿಸಿ ಬಸ್ ಹಾಗೂ ಕಾರಿನ ನಡುವೆ ಭೀಕರ ಅಪಘಾತ ಸಂಭವಿಸಿದೆ. ಅಪಘಾತದ ರಭಸಕ್ಕೆ ಕಾರು ನುಜ್ಜು ಗುಜ್ಜಾಗಿದೆ. ಮಾರಣಾಂತಿಕವಾಗಿ ಗಾಯಗೊಂಡಿದ್ದ ಕಾರು ಚಾಲಕನನ್ನು ಆಸ್ಪತ್ರೆ ಸಾಗಿಸುವ ಮಾರ್ಗ ಮಧ್ಯೆ ಮೃತಪಟ್ಟಿದ್ದಾನೆ.

ಸಿದ್ದಾಪುರದಿಂದ ಬೆಳಗಾವಿಗೆ ಮದುವೆ ಸಮಾರಂಭಕ್ಕೆ ಒಪ್ಪಂದದ ಮೇರೆಗೆ ತೆರಳುತ್ತಿದ್ದ ಕೆಎಸ್‌ಆರ್‌ಟಿಸಿ ಬಸ್ ಹಾಗೂ ಎದುರಿನಿಂದ ಬರುತ್ತಿದ್ದ ಕಾರಿನ ನಡುವೆ ಮಳಲಗಾವ್ ಬಳಿ ಮುಖಾಮುಖಿ ಡಿಕ್ಕಿಯಾದ ರಭಸಕ್ಕೆ ಕಾರಿನ ಮುಂಭಾಗ ಸಂಪೂರ್ಣ ನಜ್ಜುಗುಜ್ಜಾಗಿದ್ದು, ಚಾಲಕ ಸಿಲುಕಿಕೊಂಡು ತೀವ್ರ ಗಾಯಗೊಂಡಿದ್ದ.

ಮಂಗಳೂರಿನಲ್ಲಿ ನೆಲೆಸಿದ್ದ ಕುಂದಾಪುರ ನಿವಾಸಿ ಮುಕೇಶ್ ಶೆಟ್ಟಿ ಮೃತಪಟ್ಟ ದುರ್ದೈವಿಯಾಗಿದ್ದಾರೆ. ಮಂಗಳೂರಿನಲ್ಲಿ ಮ್ಯಾಕ್ಸ್ ಇನ್ನೋಟೆಸ್ ಹಾಗೂ ಇನ್ನಿತರ ಸಂಸ್ಥೆಯನ್ನು ನಡೆಸುತ್ತಿದ್ದ ಮುಕೇಶ್ ಶೆಟ್ಟಿ ಶಿರಸಿ ಕಡೆಗೆ ಕೆಲಸದ ನಿಮಿತ್ತ ಪ್ರಯಾಣಿಸುತ್ತಿದ್ದರು.

ಬಸ್ಸಿನಲ್ಲಿದ್ದ ಕೆಲವು ಪ್ರಯಾಣಿಕರಿಗೂ ಸಣ್ಣಪುಟ್ಟ ಗಾಯಗಳಾಗಿವೆ. ಅಪಘಾತದ ಸುದ್ದಿ ತಿಳಿಯುತ್ತಿದ್ದಂತೆಯೇ ಶಿರಸಿ ವಿಭಾಗೀಯ ನಿಯಂತ್ರಣಾಧಿಕಾರಿಗಳು, ಮದುವೆಗೆ ಹೊರಟಿದ್ದ ಪ್ರಯಾಣಿ ಕರಿಗೆ ತೊಂದರೆಯಾಗದಂತೆ ತಕ್ಷಣವೇ ಬದಲಿ ಬಸ್ ವ್ಯವಸ್ಥೆ ಕಲ್ಪಿಸಿ ಮಾನವೀಯತೆ ಮೆರೆದಿದ್ದಾರೆ.

ಅಪಘಾತ ನಡೆದ ಸ್ಥಳದಲ್ಲಿ ಕೆಲಕಾಲ ಸಂಚಾರ ವ್ಯತ್ಯಯ ಉಂಟಾಗಿತ್ತು. ಮದುವೆ ಸಂಭ್ರಮದಲ್ಲಿದ್ದ ಪ್ರಯಾಣಿಕರು ಈ ಹಠಾತ್ ಘಟನೆಯಿಂದ ಆತಂಕಗೊಂಡಿದ್ದರು. ಅದೃಷ್ಟವಶಾತ್ ಬಸ್ಸಿನಲ್ಲಿದ್ದವರು ಅಪಾಯದಿಂದ ಪಾರಾಗಿದ್ದಾರೆ. ಸ್ಥಳೀಯರು ಹಾಗೂ ಪೊಲೀಸರು ಗಾಯಾಳುಗಳನ್ನು ರಕ್ಷಿಸುವಲ್ಲಿ ನೆರವಾಗಿದ್ದಾರೆ. ಈ ಕುರಿತು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ತಾಲೂಕಾಸ್ಪತ್ರೆಯಲ್ಲಿ ಶವದ ಮರಣೋತ್ತರ ಪರೀಕ್ಷೆ ನಡೆಸಿ ಕುಂದಾಪುರದಿಂದ ಆಗಮಿಸಿದ್ದ ಅವರ ಸಂಬಂಧಿಕರಿಗೆ ಶವವನ್ನು ಹಸ್ತಾಂತರಿಸಿದರು.

ಐಟಿಎಫ್ ಟೆನಿಸ್ ಟೂರ್ನಿ ಫಲಿತಾಂಶ

ಭಾರತೀಯರಿಗೆ ಖುಷಿ ನೀಡಿದ ವೈಷ್ಣವಿ,ಅಂಕಿತಾ

ಕಲಬುರಗಿ: ನಗರದ ಚಂದ್ರಶೇಖರ ಪಾಟೀಲ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಐಟಿಎಫ್ ಡಬ್ಲ್ಯೂ 35 ಮಹಿಳಾ ಓಪನ್ ಟೆನಿಸ್ ಟೂರ್ನಿಯ ದಿನದಿಂದ ದಿನಕ್ಕೆ ಕಾವೇರುತ್ತಿದ್ದು, ದಿನದ ಆಟದಲ್ಲಿ ಭಾರತೀಯ ಅನುಭವಿ ಆಟಗಾರ್ತಿಯರಾದ ವೈಷ್ಣವಿ ಅಡ್ಕರ್, ಅಂಕಿತಾ ರೈನಾ ಅವರ ಅದ್ಭುತ ಪ್ರದರ್ಶನ ಟೆನಿಸ್ ಪ್ರೀಯರಿಗೆ ಖುಷಿ ನೀಡಿದೆ.

ಗುರುವಾರ ನಡೆದ ಸಿಂಗಲ್ಸ್ ಪಂದ್ಯದಲ್ಲಿ ವೈಷ್ಣವಿ ಅಡ್ಕರ್ (ಭಾರತ) ಅವರು ಅನ್ನಾ ಸಿಯೆಡಿಶೆವಾ ಅವರನ್ನು 6–2, 6–0ರಿಂದ ಸೋಲಿಸಿದರು. 8–ಅಂಕಿತಾ ರೈನಾ (ಭಾರತ) ಅವರು ಮಿಲಾನಾ ಮಸ್ಲೆನ್ನೋವಾ ಅವರನ್ನು 6–2, 6–1ರಿಂದ ಸೋಲಿಸಿದರು. ಅದೇ ರೀತಿ ಎಲಿನಾ ನೆಪ್ಲಿಯ ಅವರು 5–ಝೀಲ್ ದೇಸಾಯಿ (ಭಾರತ) ಅವರನ್ನು 7–6(3), 6–3ರಿಂದ ಸೋಲಿಸಿದರು.

1–ಜಾಸ್ಮೈನ್ ಗಿಂಬ್ರೆರೆ (ನೆದರ್‌ಲ್ಯಾಂಡ್ಸ್) ಅವರು ಈವಾ ಮೇರಿ ಡೆಸ್ಟಿಗ್ನ್ (ಸಿಂಗಾಪುರ) ಅವರನ್ನು 7–5, 7–5ರಿಂದ ಸೋಲಿಸಿದರು.

2–ಅಂಚಿಸಾ ಚಾಂತಾ (ಥೈಲ್ಯಾಂಡ್) ಅವರು ಪೋಲಿನಾ ಕುಹರೆಂಕೊ ಅವರನ್ನು 6–3, 6–3ರಿಂದ ಸೋಲಿಸಿದರು. ಅದರಂತೆ 6–ತಾಸಾಪೊರ್ನ್ ನಾಕ್ಲೊ (ಥೈಲ್ಯಾಂಡ್) ಅವರು ಸೋಫಿಯಾ ಮಾರ್ಟಿಯಾನೋವಾ ಅವರನ್ನು 6–3, 6–0ರಿಂದ ಸೋಲಿಸಿದರು. ಮಾಯಾನ್ ಲಾರನ್ (ಇಸ್ರೇಲ್) ಅವರು 7–ಮಿಚಿಕಾ ಒಝುಕಿ (ಜಪಾನ್) ಅವರನ್ನು 6–3, 6–1ರಿಂದ ಸೋಲಿಸಿದರು.ಇವ್ಗೆನಿಯಾ ಬುರ್ಡಿನಾ ಅವರು ಸೋಫಿಯಾ ಸುಸ್ಲೋವಾ ಅವರನ್ನು 7–6(1), 6–2ರಿಂದ ಮಣಿಸಿದರು.

ಡಬಲ್ಸ್ ಫಲಿತಾಂಶ ಸೋನಲ್ ಪಾಟೀಲ್/ಬೇಲಾ ತಂಹಾಂಕರ (ಭಾರತ) ಅವರು ಸ್ನಿಗ್ಧಾ ಕಾಂತಾ/ಹರ್ಷಿಣಿ ಎನ್ ನಾಗರಾಜ್ (ಭಾರತ) ಅವರನ್ನು 7–5, 6–2ರಿಂದ ಸೋಲಿಸಿದರು.

ಶ್ರಾವ್ಯ ಶಿವಾನಿ ಚಿಲಕಲಪೂಡಿ (ಭಾರತ)/ಮಿಚಿಕಾ ಒಝುಕಿ (ಜಪಾನ್) ಅವರು 3–ಝೀಲ್ ದೇಸಾಯಿ (ಭಾರತ) /ಎಲಿನಾ ನೆಪ್ಲಿಯ ಅವರನ್ನು 7–5, 2–6, ?10–6ರಿಂದ ಸೋಲಿಸಿದರು. 2–ವೈಷ್ಣವಿ ಆಡ್ಕರ್ (ಭಾರತ)/ಅಂಕಿತಾ ರೈನಾ (ಭಾರತ) ಅವರು ಇವ್ಗೆನಿಯಾ ಬುರ್ಡಿನಾ/ಸೋಫಿಯಾ ಮಾರ್ಟಿಯಾನೋವಾ ಅವರನ್ನು 6–2, 6–2ರಿಂದ ಸೋಲಿಸಿದರು.

ಕರ್ನಾಟಕದ ಸೊಹಾ ಸಾದಿಕ್ ಹಾಗೂ ಅಕಾಂಕ್ಷಾ ದಿಲೀಪ್ ನಿಟ್ಟೂರೆ ಮೊದಲ ಸೀಡ್ ಆಗಿದ್ದ ಶ್ರೀವಲ್ಲಿ ಭಮಿಡಿಪಾಟಿ ಮತ್ತು ಜಾಸ್ಮಿನ್ ಗಿಂಬ್ರೇರೆ ವಿರುದ್ಧ 2–6, 7–5 –12–10–ಅಂತರದಲ್ಲಿ ಗೆದ್ದು ಡಬಲ್ಸ್ ಸೆಮಿಫೈನಲ್‌ಗೆ ಮುನ್ನಡೆದಿದ್ದಾರೆ.



ಇಂದು ಗೆದ್ದ ಜೋಡಿ ಫೈನಲ್‌ಗೆ

ಕಲಬುರಗಿ: ಡಬಲ್ಸ್ ಸೆಮಿಫೈನಲ್ ಪಂದ್ಯಗಳು ಇಂದು ನಡೆಯಲಿದ್ದು, ಸೋನಲ್ ಪಾಟಿಲ್(ಭಾರತ)/ಬೆಲಾ ತಾಮ್ಹಂಕರ್ (ಭಾರತ) ವಿರುದ್ಧ ವೈಷ್ಣವಿ ಅಡ್ಕರ್ (ಭಾರತ) 2/ಅಂಕಿತಾ ರೈನಾ (ಭಾರತ) ಫೈನಲ್ ಗದ್ದುಗೆಗಾಗಿ ಸೆಣಸಾಟ ನಡೆಸಲಿದ್ದಾರೆ. ಅದೇ ಮಧ್ಯಾಹ್ನದ ವಿಶ್ರಾಂತಿ ನಂತರ ಅಕಾಂಕ್ಷಾ ದಿಲೀಪ್ ನಿಟ್ಟೂರೆ (ಭಾರತ)/ಸೊಹಾ ಸಾದಿಕ್ (ಭಾರತ) ವಿರುದ್ಧ ಶ್ರಾವ್ಯ ಶಿವಾನಿ ಚಿಲಕಲಪೂಡಿ (ಭಾರತ)/ಮಿಚಿಕಾ ಒಜಿಕಿ (ಜಪಾನ್) ನಡುವೆ ನಡೆಯಲಿದೆ. ಕಳೆದ ಐದು ದಿನಗಳಿಂದ ಕಲಬುರಗಿ ನಗರದ ಚಂಪಾ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಐಟಿಎಫ್ ಟೆನಿಸ್ ಕಲರವ ಬಿಸಿಲಿಗಿಂತಲೂ ಅಧಿಕ ಕಾವು ಪಡೆದುಕೊಂಡಿದೆ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M/s Elegant Offset Printers, Pvt.Ltd, Plot no 33/1& 15/1(eastern part) MT Sagar Industrial Estate, Hubballi -580030, Published at Joshi Chambers, 2nd Floor, Near R.M.Joshi Petrol pump, Lamington Road, Hubballi-580020, Ph: 0836-2350942, Editor: P.S.Prakash, Group Editor: Vinayak S. Bhat

ಕಿರುಸುದ್ದಿ

ದಲಿತರ ಮೀಸಲು ನಿಧಿಗೆ ಕನ್ನ: ಆರೋಪ



ಯಲ್ಲಾಪುರ: ರಾಜ್ಯ ಕಾಂಗ್ರೆಸ್ ಸರ್ಕಾರ ಸತತ 3 ವರ್ಷಗಳ ಕಾಲ ಗ್ಯಾರಂಟಿ ಯೋಜನೆಗಳ ಅನುಷ್ಠಾನಕ್ಕಾಗಿ ಎಸ್‌ಸಿಎಸ್ಪಿ ಮತ್ತು ಟಿಎಸ್‌ಪಿ ಅನುದಾನ 39 ಸಾವಿರ ಕೋಟಿ ರೂ ಹಣ ದುರುಪಯೋಗ ಮಾಡಿಕೊಂಡಿದೆ. ಇದೀಗ ಮತ್ತೊಂದು ಬಜೆಟ್ ಮಂಡನೆ ಹೆಸರಿನಲ್ಲಿ ಸಿದ್ದರಾಮಯ್ಯನವರು ಮತ್ತೆ 15 ಸಾವಿರ ಕೋಟಿ ರೂ. ಗಳನ್ನು ಮುಳುಗಿಸಲು ಸಜ್ಜಾಗಿದ್ದಾರೆ. ಸಿದ್ದರಾಮಯ್ಯ ಒಳಗೊಳಗೆ '7ಸಿ ಮೂಲಕ ದಲಿತರ ಮೀಸಲು ನಿಧಿಗೆ ಕನ್ನ ಹಾಕುತ್ತಿದ್ದಾರೆ ಎಂದು ವಿಧಾನ ಪರಿಷತ ಸದಸ್ಯ ಶಾಂತಾರಾಮ ಸಿದ್ದಿ ಆರೋಪಿಸಿದರು. ಗುರುವಾರ ಬಿಜೆಪಿ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಗ್ಯಾರಂಟಿ ಯೋಜನೆ ಇಲಾಖೆಗಳ ಉಪಯೋಜನೆಯೇ ಅಲ್ಲ, ಪಕ್ಷದ ಚುನಾವಣಾ ಪ್ರಣಾಳಿಕೆ ಜಾರಿಗೆ ತರುವ ಸರ್ಕಾರದ ಮುಖ್ಯ ಯೋಜನೆ. ಹೀಗಾಗಿ ದಲಿತರ ಮೀಸಲು ನಿಧಿಯನ್ನು ಗ್ಯಾರಂಟಿ ಯೋಜನೆಗೆ ಬಳಸಿದ್ದು ಪರಮಅನ್ಯಾಯ. ಈ ಸಲ ಬಜೆಟಿಗೆ ಮೊದಲೇ ಎಸ್‌ಸಿಎಸ್ಪಿ ಮತ್ತು ಟಿ ಎಸ್‌ಪಿ ಹಣಕ್ಕೆ ಕೈ ಹಾಕುವುದಿಲ್ಲ ಎಂದು ಮೊದಲೇ ಘೋಷಿಸಬೇಕು. ಸಂವಿಧಾನ ರಕ್ಷಣೆ ಅಭಿಯಾನಕ್ಕೆ ಖಜಾನೆಯಿಂದ ಹಣ ಕೊಡಬೇಕು ಎಂದರು. ದುರ್ಬಳಕೆಯಾಗಿರುವ 39ಸಾವಿರ ಕೋಟಿಗಳನ್ನು ದಲಿತರಿಗೆ ವಾಪಸ್ ಕೊಡಬೇಕು. ಎಲ್ಲಾ ಎಸ್ಸಿ, ಎಸ್ಟಿ ನಿಗಮಗಳಿಗೆ ತಲಾ ಒಂದು ಸಾವಿರ ಕೋಟಿ ರೂ ಕನಿಷ್ಠ ಅನುದಾನ ಘೋಷಿಸಿ. ದುರ್ಬಳಕೆಗೆ ದಾರಿ ಮಾಡಿ ಕೊಡುತ್ತಿರುವ 7ಸಿ ಕಾಯ್ದೆಯನ್ನು ರದ್ದುಮಾಡಿ ನಮ್ಮ ಬೇಡಿಕೆ ಈಡೇರಿಸಿ ಎಂದು ಆಗ್ರಹಿಸಿದರು. ಪಪಂ ಮಾಜಿ ಉಪಾಧ್ಯಕ್ಷೆ ಶ್ಯಾಮಿಲಿ ಪಾಠಣಕರ, ಮಂಡಲಾಧ್ಯಕ್ಷ ಪ್ರಸಾದ ಹೆಗಡೆ, ಕಾಯದರ್ಶಿ ನಟರಾಜ ಗೌಡ, ಪ್ರಮುಖರಾದ ರವಿಸಿದ್ದಿ ಇದ್ದರು.

ಇಂದು ಪ್ರತಿಭಟನೆ

ಸಿದ್ದಾಪುರ: ತಾಲೂಕಿನ ದೊಡ್ಮನೆ ಗ್ರಾಪಂ ಪಿಡಿಒ ಆಗಿದ್ದ ಉಮೇಶ ಗೌಡ ಅವರನ್ನು ವರ್ಗಾವಣೆ ಮಾಡಬಾರದು. ಅವರು ಕಳೆದ ಎರಡು ವರ್ಷಗಳಿಂದ ಪಂಚಾಯತದಲ್ಲಿ ಉತ್ತಮವಾಗಿ ಅಭಿವೃದ್ಧಿ ಕೆಲಸಗಳನ್ನು ಮಾಡಿಸಿದ್ದಾರೆ. ಇನ್ನೂ 2-3 ವರ್ಷಗಳ ಕಾಲ ಅವರನ್ನೇ ಇಲ್ಲಿಯ ಪಿಡಿಒ ಆಗಿ ಪುನ: ನಿಯುಕ್ತಿ ಮಾಡಬೇಕು ಎಂದು ಆಗ್ರಹಿಸಿ ಮಾ.6 ರಂದು ಪ್ರತಿಭಟನೆ ಮಾಡಲಿದ್ದೇವೆ ಎಂದು ಊರ ನಾಗರಿಕರ ಪರವಾಗಿ ಗಣೇಶ ಪರಮೇಶ್ವರ ಭಟ್ಟ ಕಲ್ಕೈ ತಿಳಿಸಿದ್ದಾರೆ.

ಗಾಣಿಕೊಪ್ಪದಲ್ಲಿ ಇಂದಿನಿಂದ ಕ್ರಿಕೆಟ್ ಪಂದ್ಯಾವಳಿ

ಸಿದ್ದಾಪುರ : ಸ್ಥಳೀಯ ಕ್ರೀಡಾ ಪ್ರತಿಭೆಗಳನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ಶ್ರೀ ಸಿದ್ಧಿವಿನಾಯಕ ಗೆಳೆಯರ ಬಳಗ ಕವಲಕೊಪ್ಪ-ಗಾಣಿಕೊಪ್ಪ ಆಶ್ರಯದಲ್ಲಿ ''ಕೆ.ಪಿ.ಎಲ್.ಪ್ರೀಮಿಯರ್ ಲೀಗ್ ಸೀಸನ್-02'' ಟೆನ್ನಿಸ್ ಬಾಲ್ ಕ್ರಿಕೆಟ್ ಪಂದ್ಯಾವಳಿಯನ್ನು ಹಮ್ಮಿಕೊಳ್ಳಲಾಗಿದೆ. ಈ ಕ್ರೀಡಾ ಹಬ್ಬವು ಮಾ.6 ರಿಂದ ಮಾ.8ರವರೆಗೆ ಮೂರು ದಿನ ನಡೆಯಲಿದೆ. ಪಂದ್ಯಾವಳಿಯ ವಿಜೇತ ತಂಡಕ್ಕೆ ಪ್ರಥಮ ಬಹುಮಾನವಾಗಿ 25000 ರೂ. ಹಾಗೂ ದ್ವಿತೀಯ ಬಹುಮಾನವಾಗಿ 15000 ರೂ. ನಗದು ಮತ್ತು ಆಕರ್ಷಕ ಟ್ರೋಫಿಗಳನ್ನು ನೀಡಲಾಗುವುದು ಎಂದು ಸಂಘಟಕರು ತಿಳಿಸಿದ್ದಾರೆ. ಕಾರ್ಯಕ್ರಮದ ಉದ್ಘಾಟನೆಯನ್ನು ಊರಿನ ಹಿರಿಯ ಮಂಜುನಾಥ ಎಂ. ಗೌಡ ಗಾಣಿಕೊಪ್ಪ ನೆರವೇರಿಸಲಿದ್ದಾರೆ. ಸಮಾರೋಪ ಸಮಾರಂಭದ ಅಧ್ಯಕ್ಷತೆಯನ್ನು ಜಿಲ್ಲಾ ಪಂಚಾಯತಿ ಮಾಜಿ ಸದಸ್ಯ ಹಾಗೂ ಊರಿನ ಮುಖಂಡ ಎನ್.ವಿ.ಹೆಗಡೆ ಮುತ್ತಿಗೆ ವಹಿಸಲಿದ್ದಾರೆ. ಕ್ರೀಡಾಕೂಟದ ಯಶಸ್ವಿಗಾಗಿ ಶ್ರೀ ಸಿದ್ಧಿವಿನಾಯಕ ಗೆಳೆಯರ ಬಳಗದ ಸದಸ್ಯರು ಶ್ರಮಿಸುತ್ತಿದ್ದು, ಸುತ್ತಮುತ್ತಲಿನ ಗ್ರಾಮಗಳ ಕ್ರೀಡಾಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಕ್ರೀಡಾಪಟುಗಳನ್ನು ಪ್ರೋತ್ಸಾಹಿಸಬೇಕೆಂದು ಸಂಘಟನಾ ಸಮಿತಿಯು ಪ್ರಕಟಣೆಯಲ್ಲಿ ವಿನಂತಿಸಿದೆ.

ಯಲ್ಲಾಪುರ	ಕನಿಷ್ಠ	ಗರಿಷ್ಠ
ಅಪಿ	58001	59275
ರಾಶಿ	49419	58699
ಬೆಟ್ಟೆ	37510	52399
ಕೆಂಪುಗೋಟ್ಟ	24900	38819
ಬಿಳಿಗೋಟ್ಟ	18899	38799
ಚಾಲಿ ಹೊಸದು	39009	47599
ಚಾಲಿ	43019	50555
ಕೋಕಾ	15000	33299
ಕಾಳುಮೆಣಸು	58695	67709



ಹೊನ್ನಾವರ: ಇತ್ತೀಚೆಗೆ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಕರ್ನಾಟಕ ಜಾನಪದ ಅಕಾಡೆಮಿಯ 2025ನೇ ಸಾಲಿನ ಗೌರವ ಪ್ರಶಸ್ತಿಯನ್ನು ಜನಪದ ಹಾಡುಗಾರ್ತಿ ಗೌರಿ ನಾಗಪ್ಪ ನಾಯ್ಕರಗೆ ಸಚಿವ ಶಿವರಾಜ್ ತಂಗಡಿ ಪ್ರಧಾನ ಮಾಡಿದರು. ಜಾನಪದ ಅಕಾಡೆಮಿ ಅಧ್ಯಕ್ಷ ಡಾ.ಗೊಲ್ಲಹಳ್ಳಿ ಶಿವಪ್ರಸಾದ್, ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷ ಡಾ. ಆರ್. ಸುನಂದಮ್ಮ, ಹಿರಿಯ ಕಲಾವಿದ ಕದಲಗೆರೆ ಶಿವಣ್ಣಗೌಡ, ಜನಪದ ಚಿಂತಕ ಎಂ. ಶಿವರಾಜು, ಅಕಾಡೆಮಿ ಸದಸ್ಯ ಡಾ.ಸೈಯದ್ ಜಮೀರುಲ್ಲಾ ಷರೀಫ್ ಇದ್ದರು.

ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿಗೆ ಅಭಿನಂದನೆ

ಹಳಿಯಾಳ: ರಾಜ್ಯ ಸರ್ಕಾರದ ನಿರ್ಲಕ್ಷ್ಯ ಧೋರಣೆಯಿಂದಾಗಿ ರೈತರಪಾಲಿಗೆ ಮರೀಚಿಕೆಯಾಗಿದ್ದ 2024-25ರ ಹಂಗಾಮಿನ ಹವಾಮಾನ ಆಧಾರಿತ ಬೆಳೆ ವಿಮೆಯನ್ನು ಅತ್ಯಂತ ಶ್ರಮವಹಿಸಿ



ಕೊಡಿಸುವಲ್ಲಿ ಯಶಸ್ವಿಯಾದ ಉತ್ತರ ಕನ್ನಡ ಲೋಕಸಭಾ ಕ್ಷೇತ್ರದ ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಅವರಿಗೆ ಹಳಿಯಾಳ ಮತ್ತು ದಾಂಡೇಲಿ ಭಾಗದ ಮಾವು ಬೆಳೆಗಾರರು ಆತ್ಮೀಯವಾಗಿ ಅಭಿನಂದಿಸುತ್ತಿದ್ದೇವೆ ಎಂದು ಬಿಜೆಪಿ ರಾಜ್ಯ ಕಾರ್ಯಕಾರಿಣಿ ಸದಸ್ಯ ಸುನೀಲ್ ಹೆಗಡೆ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದರು. ಸಿಎಂ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರದ ವಿಳಂಬ ನೀತಿಯಿಂದಾಗಿ ಸಂಕಷ್ಟಕ್ಕೀಡಾಗಿದ್ದ ರೈತರಿಗೆ ನ್ಯಾಯ ಕೊಡಿಸಲು ಸಂಸದರು ವಿಮಾ ಕಂಪನಿಗಳ ಮೇಲೆ ನಿರಂತರ ಒತ್ತಡ ಹೇರಿ ಈ ಪರಿಹಾರ ಮೊತ್ತ ಬಿಡುಗಡೆ ಮಾಡಿಸುವಲ್ಲಿ ಯಶಸ್ವಿಯಾಗಿದ್ದು, ಅವರ ಈ ಸತತ ಪ್ರಯತ್ನದ ಫಲವಾಗಿ ಹಳಿಯಾಳ ಮತ್ತು ದಾಂಡೇಲಿ ಭಾಗದ ಒಟ್ಟು 237.26 ಹೆಕ್ಟೇರ್ ಪ್ರದೇಶದಲ್ಲಿ ಮಾವು ಬೆಳೆದಿದ್ದ 357 ರೈತರ ಖಾತೆಗಳಿಗೆ ಒಟ್ಟು 1 ಕೋಟಿ 22 ಲಕ್ಷ ರೂಪಾಯಿಗಳ ವಿಮಾ ಮೊತ್ತವು ವಿಮಾ ಕಂಪನಿಯಿಂದ ನೇರವಾಗಿ ಜಮೆಯಾಗುತ್ತಿದೆ. ರಾಜ್ಯ ಸರ್ಕಾರದ ಉದಾಸೀನತೆಯಿಂದಾಗಿ ತಮ್ಮ ಹಕ್ಕಿನ ವಿಮೆ ಕೈತಪ್ಪಿ ಹೋಗುವ ಭೀತಿಯಲ್ಲಿದ್ದ ಕೃಷಿಕರಿಗೆ ಸಂಸದರ ಈ ಕಾಳಜಿ ಮತ್ತು ಹೋರಾಟವು ದೊಡ್ಡ ಆಸರೆಯಾಗಿದೆ. ರೈತರ ಹಿತರಕ್ಷಣೆಗಾಗಿ ಶ್ರಮಿಸಿದ ಸಂಸದರಿಗೆ ಈ ಭಾಗದ ಸಮಸ್ತ ಮಾವು ಬೆಳೆಗಾರರು ಈ ಮೂಲಕ ಕೃತಜ್ಞತೆಗಳನ್ನು ಸಲ್ಲಿಸಿದರು.



ಸಿದ್ದಾಪುರ: ತಾಲೂಕಿನ ಸರಕುಳಿ ಗ್ರಾಮದಲ್ಲಿ ನೂತನವಾಗಿ ನಿರ್ಮಿಸಲಾದ ಬಸ್ ತಂಗುದಾಣವನ್ನು ಬುಧವಾರ ಉದ್ಘಾಟಿಸಲಾಯಿತು. ಶಿರಸಿ-ಸಿದ್ದಾಪುರ ಕ್ಷೇತ್ರದ ಶಾಸಕ ಭೀಮಣ್ಣ ನಾಯ್ಕ, ಸ್ಥಳೀಯ ಮುಖಂಡರು, ಜನಪ್ರತಿನಿಧಿಗಳು, ಗ್ರಾಮದ ಪ್ರಮುಖರು, ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆ । ಧಿಕಾರಿಗಳಿಗೆ ಶಾಸಕ ಸತೀಶ ಸೈಲ್ ಸೂಚನೆ

ಶಾಲಾ ಕಟ್ಟಡ ನಿರ್ಮಾಣಕ್ಕೆ ಯೋಜನೆ ರೂಪಿಸಿ

ಅಂಕೋಲಾ: ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಕಾರ್ಮಿಕ ಸಚಿವ ಸಂತೋಷ ಲಾಡ್ ಅವರು ಕಾರ್ಮಿಕರ ಹಿತದೃಷ್ಟಿಯಿಂದ ಹಲವಾರು ಕಾರ್ಯಕ್ರಮಗಳನ್ನು ರೂಪಿಸುತ್ತಿದ್ದು ಕಟ್ಟಡ ಕಾರ್ಮಿಕರ ಮಕ್ಕಳ ಶೈಕ್ಷಣಿಕ ಉದ್ದೇಶಗಳಿಗೆ ಕಾರ್ಮಿಕ ಇಲಾಖೆಯಿಂದ ಅಂಕೋಲಾ ತಾಲೂಕಿಗೆ 25 ಕೋಟಿ ಅನುದಾನದಲ್ಲಿ ವಸತಿ ಶಾಲೆ ಮಂಜೂರು ಮಾಡಲಾಗಿದೆ ಎಂದು ಕಾರವಾರ ಅಂಕೋಲಾ ಶಾಸಕ ಸತೀಶ ಸೈಲ್ ಹೇಳಿದರು.



ತಾಲೂಕು ಪಂಚಾಯತ್ ಸಭಾಭವನದಲ್ಲಿ ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿ, ಕಟ್ಟಡ ಕಾರ್ಮಿಕರ ಮಕ್ಕಳಿಗೆ ವಸತಿ ಶಾಲೆಯ ಅಗತ್ಯತೆ ಇದ್ದು ಅವರ ಶೈಕ್ಷಣಿಕ ಪ್ರಗತಿಗೆ ಅನುಕೂಲ ಆಗಲಿದೆ ಶಾಲೆಯ ಉದ್ದೇಶಗಳಿಗೆ ಅಗತ್ಯ ಇರುವ ಏಳುವರೆ ಎಕರೆ ಜಮೀನಿನ ಅಗತ್ಯತೆ ಇದ್ದು ಲಭ್ಯವಿರುವ ಖಾಲಿ ಸರ್ಕಾರಿ ಜಮೀನನ್ನು ಗುರುತಿಸಿ ಶೀಘ್ರದಲ್ಲಿ ಶಾಲೆಯ ಕಟ್ಟಡ ನಿರ್ಮಾಣಕ್ಕೆ ಯೋಜನೆಯನ್ನು ರೂಪಿಸುವಂತೆ ಅವರು ಕಾರ್ಮಿಕ ನಿರೀಕ್ಷಕರಿಗೆ ಸೂಚಿಸಿದರು.

ಅಪಘಾತದಲ್ಲಿ ಮೃತಪಟ್ಟ ಕಾರ್ಮಿಕನೋರ್ವನ ಕುಟುಂಬಕ್ಕೆ ಸರ್ಕಾರದ ಐದು ಲಕ್ಷ ರೂಪಾಯಿಯ ಪರಿಹಾರದ ಆದೇಶ ಪತ್ರ ವಿತರಿಸಿದ ಶಾಸಕರು, ಸಮಾಜ ಕಲ್ಯಾಣ ಇಲಾಖೆಯಿಂದ ಸಹ ತಾಲೂಕಿನಲ್ಲಿ ಮತ್ತೊಂದು ವಸತಿ ಶಾಲೆ ಮಂಜೂರಾತಿ ಆಗಲಿದ್ದು ಆ ಕುರಿತು ಪರಿಶೀಲಿಸಿ ವರದಿ ಸಲ್ಲಿಸುವಂತೆ ತಿಳಿಸಿದರು.

ಬೆಳಸೆಯಲ್ಲಿರುವ ವಸತಿ ಶಾಲೆಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾಗಿದ್ದು ಮಕ್ಕಳಿಗೆ ನೀರಿನ ಸಮಸ್ಯೆ ಉಂಟಾಗದಂತೆ ನೀರಿನ ಪೂರೈಕೆಗೆ ಕ್ರಮ ಕೈಗೊಳ್ಳಬೇಕು ಎಂದು ಗ್ರಾಮೀಣ ಕುಡಿಯುವ ನೀರು ಸರಬರಾಜು ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದ ಶಾಸಕರು ತಗ್ಗು ಪ್ರದೇಶದಿಂದ ನೀರು ಪೂರೈಕೆಗೆ ವ್ಯವಸ್ಥೆ ಮಾಡುವಂತೆ ತಿಳಿಸಿದರು. ಎಸ್.ಎಸ್.ಎಲ್.ಸಿ ಪರೀಕ್ಷೆ ಹತ್ತಿರ ಬರುತ್ತಿದ್ದು ಗ್ರಾಮೀಣ ಪ್ರದೇಶದ ಮಕ್ಕಳಿಗೆ ಪರೀಕ್ಷಾ ಕೇಂದ್ರಗಳಿಗೆ ತಲುಪಲು ಯಾವುದೇ ರೀತಿಯ ಸಮಸ್ಯೆ ಆಗಬಾರದು. ಈ ಕುರಿತಂತೆ ಪ್ರತಿಯೊಂದು ಗ್ರಾಮ ಪಂಚಾಯತಿಗಳ ಅಭಿವೃದ್ಧಿ ಅಧಿಕಾರಿಗಳು, ಶಿಕ್ಷಣ ಇಲಾಖೆಯವರು ಮತ್ತು ಸಾರಿಗೆ ಸಂಸ್ಥೆಯ ಅಧಿಕಾರಿಗಳು ಸಭೆ ನಡೆಸಿ ನಿರ್ಣಯ ತೆಗೆದುಕೊಳ್ಳಬೇಕು ಎಂದರು.

ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ಅವರ ಪಾಲಕರ ಒಪ್ಪಿಗೆ ಪಡೆದು ವಸತಿನಿಲಯಗಳಲ್ಲಿ ಉಳಿಯಲು ಅವಕಾಶ ಕಲ್ಪಿಸಲಾಗುವುದು ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಮಂಗಳಲಕ್ಷ್ಮೀ ಪಾಟೀಲ ತಿಳಿಸಿದರು. ತಾಲೂಕು ಆಸ್ಪತ್ರೆಯಲ್ಲಿ ಪ್ರಸೂತಿ ತಜ್ಞರು, ಅರವಳಿಕೆ ತಜ್ಞರು, ಕಣ್ಣಿನ ತಜ್ಞರು, ಮೂಳೆ ತಜ್ಞರು,ಮಕ್ಕಳ ತಜ್ಞರ ಕೊರತೆ ಇದೆ. ಆಸ್ಪತ್ರೆಯಲ್ಲಿ ಇತ್ತೀಚಿನ ವರ್ಷಗಳಲ್ಲಿ ಎಷ್ಟು ಔಷಧಿ ಬಂದಿದೆ ಯಾವ ಔಷಧಿಯ ಕೊರತೆ ಇದೆ ಎನ್ನುವ ಕುರಿತಂತೆ ಶಾಸಕರು ಮಾಹಿತಿ ಪಡೆದರು.

ಡೋಂಗ್ರಿ, ಗ್ರಾಪಂ ವ್ಯಾಪ್ತಿಯ ವಾಲ್ಮೀಕಿ ಸಿದ್ಧಿ ಭವನದ ಸಮಸ್ಯೆ ಇತ್ಯರ್ಥಪಡಿಸಿ ಗ್ರಾಪಂ ಹಸ್ತಾಂತರ ಮಾಡುವ ಕೆಲಸ ನಡೆಯಬೇಕು. ಶೀಘ್ರದಲ್ಲಿ ಲೋಕಾರ್ಪಣೆ ನಡೆಯಲಿದ್ದು ಯಾವುದೇ ರೀತಿಯ ಲೋಪದೋಷಗಳು ಇರಬಾರದು ಎಂದು ಅಧಿಕಾರಿಗಳಿಗೆ ತಿಳಿಸಿದರು.

ಸಮಾಜ ಕಲ್ಯಾಣ ಇಲಾಖೆಯ ವಸತಿ ನಿಲಯದಲ್ಲಿ ಎರಡು ತಿಂಗಳುಗಳ ಕಾಲ ಆಹಾರದ ಕೊರತೆ ಕಾರಣ ಕೇಳಿ ನೋಟಿಸ್ ಜಾರಿ ಮಾಡುವಂತೆ ತಹಸೀಲ್ದಾರರಿಗೆ ಸೂಚಿಸಿದರು. ತಹಶೀಲ್ದಾರ ನಿಶ್ಚಲ ನರೋನ್ಹಾ, ತಾ.ಪಂ ಕಾರ್ಯ ನಿರ್ವಹಣಾಧಿಕಾರಿ ರಾಮು ಗುನಗಿ, ಗ್ಯಾರಂಟಿ ಯೋಜನೆಯ ತಾಲೂಕು ಅಧ್ಯಕ್ಷ ಪಾಂಡುರಂಗ ಗೌಡ, ಜಿಲ್ಲಾ ಉಪಾಧ್ಯಕ್ಷ ಪುರುಷೋತ್ತಮ ನಾಯ್ಕ ವಿವಿಧ ಇಲಾಖೆಯ ಅಧಿಕಾರಿಗಳು, ಕೆ.ಡಿ.ಪಿ ನಾಮ ನಿರ್ದೇಶಿತ ಸದಸ್ಯರು ಉಪಸ್ಥಿತರಿದ್ದರು.

ಬಿಜೆಪಿ ಪದಾಧಿಕಾರಿಗಳಿಂದ ಸ್ಪಷ್ಟನೆ ಜಿಲ್ಲೆ ವಿಭಜನೆಯ ನಿರ್ಣಯ ಆಗಿಲ್ಲ

ಅಂಕೋಲಾ : ರಾಜ್ಯ ಬಿಜೆಪಿ ಘಟಕವು ಉತ್ತರ ಕನ್ನಡ ಜಿಲ್ಲೆಯನ್ನು ವಿಭಜಿಸುವ ಬಗ್ಗೆ ನಿಲುವು ತಳೆದಿದೆ ಎನ್ನುವುದು ಸುಳ್ಳು, ಇಂತಹ ಯಾವುದೇ ನಿರ್ಣಯ ಆಗಿಲ್ಲ ಎಂದು ಬಿಜೆಪಿ ಜಿಲ್ಲಾ ಕಾರ್ಯದರ್ಶಿ ನಿತ್ಯಾನಂದ ಗಾಂವಕರ್ ಸ್ಪಷ್ಟನೆ ನೀಡಿದ್ದಾರೆ.

ಗುರುವಾರ ಪಕ್ಷದ ಕಚೇರಿಯಲ್ಲಿ ಕರೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಬಗ್ಗೆ ಯಾವುದೇ ಗೊಂದಲ ಪಕ್ಷದಲ್ಲಿ ಇಲ್ಲ, ಜನರೂ ಗೊಂದಲಕ್ಕೆ ಒಳಗಾಗುವುದು ಬೇಡ ಎಂದಿದ್ದಾರೆ. ಬಿಜೆಪಿಯಲ್ಲಿ ಸಂಘಟನಾತ್ಮಕ ದೃಷ್ಟಿಯಿಂದ ಕಾಲಕಾಲಕ್ಕೆ ವಿವಿಧ ನಿರ್ಧಾರ ತೆಗೆದುಕೊಳ್ಳಲಾಗುತ್ತದೆ. ಪಕ್ಷವನ್ನು ತಳಸ್ಪರ್ಷಿಯಾಗಿ ಬಲ ಪಡಿಸುವುದು ಇದರ ಹಿಂದಿನ ಉದ್ದೇಶ. ಇದೇ ಕಾರಣಕ್ಕಾಗಿ ಉತ್ತರ ಕನ್ನಡ ಜಿಲ್ಲೆಯನ್ನು ಪಕ್ಷದ ಸಂಘಟನೆಯ ದೃಷ್ಟಿಯಿಂದ ಕಾರವಾರ- ಶಿರಸಿ ಜಿಲ್ಲೆಗಳಾಗಿ ಮಾಡುವ ಬಗ್ಗೆ ರಾಜ್ಯ ಸಮಿತಿಯಲ್ಲಿ ಪ್ರಸ್ತಾಪ ಆಗಿತ್ತು. ಇದರಿಂದ ಪಕ್ಷವನ್ನು ಇನ್ನಷ್ಟು ಪ್ರಬಲಗೊಳಿಸಬಹುದು ಎನ್ನುವುದು ಉದ್ದೇಶ. ಆದರೆ ನಾವು ಇದಕ್ಕೆ ವಿರೋಧ ವ್ಯಕ್ತಮಾಡಿದ್ದೇವೆ. ರಾಜ್ಯಾಧ್ಯಕ್ಷರಿಂದ ಹಿಡಿದು ಬಿಜೆಪಿಯ ಪ್ರಮುಖ ಪದಾಧಿಕಾರಿಗಳಿಗೆ ಪತ್ರ ಬರೆದು ವಾಸ್ತವಿಕತೆ ಅರುಹಿದ ನಂತರ ಈ ಪ್ರಸ್ತಾಪ ಕೈ ಬಿಡಲಾಗಿದೆ ಎಂದು ಅವರು ಮಾಹಿತಿ ನೀಡಿದರು.

ಸಂಘಟನಾತ್ಮಕ ದೃಷ್ಟಿಯಿಂದ ಎರಡು ಜಿಲ್ಲೆ ಮಾಡಿದರೆ, ಅಖಂಡ ಉತ್ತರ ಕನ್ನಡ ಜಿಲ್ಲೆಯ ಕಾರ್ಯಕರ್ತರ ಮಧ್ಯೆ ಬಾಂಧವ್ಯ ಮರೆಯಾಗುತ್ತದೆ. ಭಾವನಾತ್ಮಕವಾಗಿ ದೂರವಾಗುತ್ತೇವೆ. ನಮಗೆ ಜಿಲ್ಲಾಧಿಕಾರಿ, ಸಂಸದರು, ವಿ.ಪ ಸದಸ್ಯರು ಎಲ್ಲ ಒಬ್ಬರೇ ಇರುವುದರಿಂದ ಈ ಪ್ರಸ್ತಾವನೆ ಸರಿಯಲ್ಲ ಎಂದಾಗ ಪಕ್ಷ ಒಪ್ಪಿದೆ. ಆದರೆ ಕೆಲವರು ಸಂಘಟನಾತ್ಮಕವಾಗಿ ಎರಡು ಜಿಲ್ಲೆಯಪ್ರಸ್ತಾಪ ಆಗಿರುವುದನ್ನು ಎರಡುಕಂದಾಯ ಜಿಲ್ಲೆಗಳಿಗೆ ಒಲವು ಎಂಬರ್ಥದಲ್ಲಿ ಬಿಂಬಿಸುತ್ತಿದ್ದಾರೆ. ಇದು ಸಂಪೂರ್ಣ ಸುಳ್ಳು ಎಂದು ನಿತ್ಯಾನಂದ ಗಾಂವಕರ್ ಹೇಳಿದರು.

ಬಿಜೆಪಿ ತಾಲೂಕು ಅಧ್ಯಕ್ಷ ಸಂಜಯ ನಾಯ್ಕ ಮಾತನಾಡಿ, ಪಕ್ಷವನ್ನು ಬೂತ್ ಮಟ್ಟದಲ್ಲಿ ಬಲಪಡಿಸಲು ವಿವಿಧ ಸಂಘಟನಾತ್ಮಕ ನಿರ್ಣಯಗಳನ್ನು ಪಕ್ಷ ತೆಗೆದುಕೊಳ್ಳುತ್ತದೆ. ಸಂಘಟನಾತ್ಮಕವಾಗಿಯೂ ಎರಡು ಜಿಲ್ಲೆಯ ಪ್ರಸ್ತಾಪ ಈಗ ಪಕ್ಷದ ಮುಂದಿಲ್ಲ ಎಂದರು. ಜಿಲ್ಲಾ ಉಪಾಧ್ಯಕ್ಷ ಆರತಿ ಗೌಡ, ಜಿಲ್ಲಾ ರೈತ ಮೋರ್ಚಾ ಪ್ರ. ಕಾರ್ಯದರ್ಶಿ ವಿ.ಎಸ್. ಭಟ್ಟ ಕಲ್ಲೇಶ್ವರ, ಬಿಜೆಪಿ ಪ್ರ. ಕಾರ್ಯದರ್ಶಿ ಚಂದ್ರಕಾಂತ ನಾಯ್ಕ, ಒಬಿಸಿ ಘಟಕದ ಕಾರ್ಯದರ್ಶಿ ಗಣಪತಿ ನಾಯ್ಕ ಹನುಮಟ್ಟ, ಮಂಡಳ ಉಪಾಧ್ಯಕ್ಷ ಬಿಂದೇಶ ನಾಯಕ, ಮಂಡಳ ಕಾರ್ಯದರ್ಶಿ ನಾಗೇಶ ಕಿಣಿ, ಯುವಮೋರ್ಚಾ ಅಧ್ಯಕ್ಷ ನಿಲೇಶ ನಾಯ್ಕ ಇದ್ದರು.



ಜಿಲ್ಲೆಯ ಅಭಿವೃದ್ಧಿಗೆ ಹೆಚ್ಚಿನ ಅನುದಾನದ ನಿರೀಕ್ಷೆ: ದೇಶಪಾಂಡೆ

ಜೊಯಿಡಾ: ಮುಖ್ಯ ಮಂತ್ರಿಗಳು 17ನೇ ಬಜೆಟ್‌ಮಂಡನೆ ಮಾಡಿ ಇತಿಹಾಸ ನಿರ್ಮಿಸಲಿದ್ದಾರೆ. ಉತ್ತರ ಕನ್ನಡ ಜಿಲ್ಲೆಯ ಅನೇಕ ಅಭಿವೃದ್ಧಿ ಕೆಲಸಗಳನ್ನು ಸೇರ್ಪಡೆ ಮಾಡಲು ಈಗಾಗಲೇ ಮುಖ್ಯಮಂತ್ರಿ ಜೊತೆ ಚರ್ಚೆ ಮಾಡಿದ್ದೇವೆ. ಎಷ್ಟು ಸೇರ್ಪಡೆ ಆಗುತ್ತದೆ ಎನ್ನುವುದು ನಾಳೆ ಗೊತ್ತಾಗಲಿದೆ ಎಂದು ಶಾಸಕ ಹಾಗೂ ಆಡಳಿತ ಸುಧಾರಣಾ ಆಯೋಗ ಅಧ್ಯಕ್ಷ ಆರ್. ವಿ. ದೇಶಪಾಂಡೆ ಹೇಳಿದರು.



ಜೊಯಿಡಾ ಪದವಿ ಕಾಲೇಜು ಸಭಾಂಗಣ ಮತ್ತು ಕೊಠಡಿಯ 1 ಕೋಟಿ ಕಾಮಗಾರಿ ಉದ್ಘಾಟಿಸಿ ಮಾತನಾಡಿ, ಜೊಯಿಡಾ ತಾಲೂಕ ಪ್ರವಾಸೋದ್ಯಮ ಆಕರ್ಷಣೆಯ ಕೇಂದ್ರವಾಗಿದೆ. ಇದಕ್ಕೆ ಬಜೆಟ್‌ನಲ್ಲಿ ವಿಶೇಷ ಹಣ ನೀಡಲು ಸಲಹೆ ನೀಡಿದ್ದೇನೆ. ಉತ್ತರ ಕನ್ನಡ ಜಿಲ್ಲೆಗೆ ಉದ್ಯೋಗ ಸೇರಿದಂತೆ ಅಭಿವೃದ್ಧಿಗೆ ಹೆಚ್ಚಿನ ಹಣ ಬರುವ ನಿರೀಕ್ಷೆ ಇದೆ. ಜೊಯಿಡಾದಲ್ಲಿ 257 ಹೊಂ ಸ್ಟೇಗಳು ಇದ್ದು ಇದು ಸ್ಥಳೀಯರ ಉದ್ಯೋಗ ಸೃಷ್ಟಿಗೆ ಕಾರಣವಾಗಿದೆ ಎಂದರು.

ಜೊಯಿಡಾದಲ್ಲಿ ಶಿಕ್ಷಣ, ಮೂಲಭೂತ ಸೌಕರ್ಯಗಳಿಗೆ ಮೊದಲ ಆದ್ಯತೆ ನೀಡಲಾಗಿದೆ. ಪಾಲಕರು ತಮ್ಮ ಮಕ್ಕಳನ್ನು ದೂರದ ಪಟ್ಟಣಕ್ಕೆ ಶಿಕ್ಷಣಕ್ಕೆ ಕಳುಹಿಸದೇ ಈ ಕಾಲೇಜಿನಲ್ಲಿ ಕಲಿಸಬೇಕು. ಮುಂದೆ ಬಿಬಿಎ, ಎಮ್‌ಬಿಎ ತರಗತಿಗಳು ಪ್ರಾರಂಭವಾಗಲಿದೆ. ಶಿಕ್ಷಣಕ್ಕೆ ಮೊದಲ ಆದ್ಯತೆ ನೀಡಬೇಕು. ಹತ್ತಿರದಲ್ಲಿ ಬಡವರ ಮಕ್ಕಳ ಶಿಕ್ಷಣಕ್ಕೆ ಈ ಕಾಲೇಜು ಹೆಚ್ಚು ಉಪಯುಕ್ತವಾಗಿದೆ. ಗುಣಾತ್ಮಕ ಪ್ರೊಫೆಸರ್ ಇದ್ದಾರೆ. ಇದರ ಲಾಭ ತಾಲೂಕಿನ ಜನರಿಗೆ ಸಿಗಬೇಕು ಎಂದರು.

ಇಲ್ಲಿನ ಬುಡಕಟ್ಟು ಕುಣಬಿ, ಗೌಳಿ, ಹಾಲಕ್ಕಿ, ಮರಾಠಾ ಜನರು ಈ ನಿಸರ್ಗ ರಕ್ಷಣೆಗೆ ಕಾರಣರಾಗಿದ್ದಾರೆ. ಪರಿಸರದ ಜೊತೆಗೆ ಅವರ ಅಭಿವೃದ್ಧಿಯೂ ಅಷ್ಟು ಮುಖ್ಯವಾಗಿದೆ ಎಂದರು. ಕೃಷಿ ಇಲಾಖೆಯಿಂದ 7 ಪವರ್ ಟಿಲ್ಲರ್, 5 ಕೃಷಿ ಸಿಂಚನ, 250 ಎರೆಹುಳು ತೊಟ್ಟಿ ನಿರ್ಮಿಸಿದ ರೈತರಿಗೆ ಸರ್ಟಿಫಿಕೇಟ್ ಸೇರಿದಂತೆ ಹೊಲಿಗೆ ಯಂತ್ರ, ವಿತರಿಸಲಾಯಿತು. ಸಹಾಯಕ ಕೃಷಿ ನಿರ್ದೇಶಕ ಟಿ. ಸುಂದರ ಕಾರ್ಯಕ್ರಮ ನಿರ್ವಹಿಸಿದರು.

ತಹಶೀಲ್ದಾರ ಮಂಜುನಾಥ ಮುನ್ನಳ್ಳಿ, ಇಒ ಭಾರತಿ ಎಂ, ಕೆಪಿಸಿಸಿ ಸದಸ್ಯ ಸದಾನಂದ ದಬಗಾರ, ಗಜೇಂದ್ರ ಗಾಂದ್ಲೆ, ವಿನಯ್ ದೇಸಾಯಿ, ರವಿ ರೆಡಕರ, ಪ್ರಸನ್ನ ಗಾವಡಾ, ಸುಭಾಷ ವೇಳಿಪ, ಮಂಜುನಾಥ ಮುಕಾಶಿ, ಅಂಜಲಿ ರಾಣೆ ಪ್ರಾಸ್ತಾವಿಕ ಮಾತನಾಡಿದರು. ರತ್ನಮ್ಮ ಸ್ವಾಗತಿಸದರು.

ಮಾ. 14ರ ಲೋಕ ಅದಾಲತ್ ಯಶಸ್ವಿಗೊಳಿಸಲು ಕರೆ

ಭಟ್ಕಳ : ಮಾ.14 ರಂದು ಬೃಹತ್ ಲೋಕ ಅದಾಲತ್ ಕಾರ್ಯಕ್ರಮ ಏರ್ಪಡಿಸಲಾಗಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಪ್ರಕರಣ ಇತ್ಯರ್ಥ ಪಡಿಸಲು ಸ್ಥಳೀಯ ವಕೀಲರ ಸಹಕಾರ ಅಗತ್ಯವಾಗಿದೆ. ಲೋಕ ಅದಾಲತ್‌ನ್ನು ಕಕ್ಷಿದಾರರು ಸದುಪಯೋಗಪಡಿಸಿಕೊಳ್ಳಬೇಕೆಂದು ಕಾರವಾರದ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ದಿವ್ಯಶ್ರೀ ಸಿ.ಎಂ. ಹೇಳಿದರು.

ಭಟ್ಕಳದ ನ್ಯಾಯಾಲಯಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಲೋಕ ಅದಾಲತ್‌ನಲ್ಲಿ ಇತ್ಯರ್ಥ ಪಡಿಸಬಹುದಾದ ಪ್ರಕರಣಗಳಲ್ಲಿ ಎಲ್ಲವನ್ನೂ ಕೂಡಾ ಇತ್ಯರ್ಥ ಪಡಿಸಲಾಗುವುದು. ಕೋರ್ಟಿಗೆ ಒಂದು ಪ್ರಕರಣ ದಾಖಲಿಸಿದರೆ ಅನೇಕ ವರ್ಷಗಳೇ ಕಳೆಯುತ್ತವೆ ಎನ್ನುವವರಿಗೆ ಲೋಕ ಅದಾಲತ್ ಒಂದು ಉತ್ತಮ ಅವಕಾಶ ಎಂದೂ ಹೇಳಿದ ಅವರು ಇದೇ ಬರುವ ಮಾರ್ಚ 14 ರಂದು ನಡೆಯಲಿರುವ ಲೋಕ ಅದಾಲತ್‌ನಲ್ಲಿ ಕೂಡಾ ಅತೀ ಹೆಚ್ಚು ಪ್ರಕರಣಗಳನ್ನ ಇತ್ಯರ್ಥ ಪಡಿಸುವ ಮೂಲಕ ಯಶಸ್ವಿಗೊಳಿಸುವಂತೆ ಕೋರಿದರು. ಹಿರಿಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಧೀಶ ಹಾಗೂ ತಾಲೂಕಾ ಕಾನೂನ ಸೇವೆಗಳ ಸಮಿತಿಯ



ಅಧ್ಯಕ್ಷ ಕಾಂತ ಕುರಣಿ ಮಾತನಾಡಿ, ಮಾ.14ರಂದು ನಡೆಯುವ ಲೋಕ ಅದಾಲತ್ ನಲ್ಲಿ ಅತಿ ಹೆಚ್ಚು ಪ್ರಕರಣ ಇತ್ಯರ್ಥವಾಗಲು ಎಲ್ಲರ ಸಹಕಾರ ಬೇಕು ಎಂದರು.

ವಕೀಲರ ಸಂಘದ ಅಧ್ಯಕ್ಷ ಈಶ್ವರ ನಾಯ್ಕ ಮಾತನಾಡಿದರು. ಪ್ರಥಮ ದರ್ಜೆಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಧೀಶೆ ಹಾಗೂ ತಾಲೂಕು ಕಾನೂನು ಸೇವೆಗಳ ಸಮಿತಿಯ ಸದಸ್ಯ ಕಾರ್ಯದರ್ಶಿ ದೀಪಾ ಅರಳಗುಂಡಿ, ಹೆಚ್ಚುವರಿ ಸಿವಿಲ್ ಹಾಗೂ ಜೆ.ಎಂ.ಎಫ್.ಸಿ.ನ್ಯಾಯಾಧೀಶೆ ಧನವತಿ, ವಕೀಲರ ಸಂಘದ ಕಾರ್ಯದರ್ಶಿ ನಾಗೇಶ ಗದ್ದೆಮನೆ ಉಪಸ್ಥಿತರಿದ್ದರು. ವಕೀಲರ ಸಂಘದ ಉಪಾಧ್ಯಕ್ಷ ಆರ್.ಜಿ. ನಾಯ್ಕ ನಿರೂಪಿಸಿದರು.

ಹಿಂದೂ ಸಮ್ಮೇಳನ ಸಮಿತಿಯಿಂದ ಧನಸಹಾಯ

ಹೊನ್ನಾವರ: ತಾಲೂಕಿನ ಕವಲಕ್ಕಿಯಲ್ಲಿ ಹಡಿನಬಾಳ ಮಂಡಲದ ಹಿಂದು ಸಮ್ಮೇಳನದಲ್ಲಿ ಉಳಿಕೆಯಾದ 50 ಸಾವಿರ ರೂ.ಗಳನ್ನು ಬ್ಲಡ್ ಕ್ಯಾನ್ಸರ್ ನಿಂದ ಬಳಲುತ್ತಿರುವ ಎರಡು ವರ್ಷದ ಬಾಲಕಿಯ ಚಿಕಿತ್ಸೆಗೆ ನೀಡುವ ಮೂಲಕ ಹಡಿನಬಾಳ ಮಂಡಲ ಮಾನವೀಯತೆ ಮೆರೆದು ಅರ್ಥಪೂರ್ಣವಾಗಿ ಸಮ್ಮೇಳನ ನಡೆಸಿದೆ.

ಫೆ. 21 ರಂದು ಶ್ರೀಮನ್ನೆಲೆಮಾವಿನ ಮಠದ ಶ್ರೀ ಮಾಧವಾನಂದ ಭಾರತಿ ಮಹಾಸ್ವಾಮಿಗಳು ಸಾನಿಧ್ಯ ವಹಿಸಿದ್ದ ಕವಲಕ್ಕಿಯಲ್ಲಿ ಹಡಿನಬಾಳ ಮಂಡಲದ ಹಿಂದೂ ಸಮ್ಮೇಳನವು ಅಚ್ಚುಕಟ್ಟಾಗಿ ಆಯೋಜಿಸಲಾಗಿತ್ತು. ಈ ಸಮ್ಮೇಳನದ ಖರ್ಚು ವೆಚ್ಚಗಳಿಗೆಂದು ಹಡಿನಬಾಳ ಮಂಡಲದ ವ್ಯಾಪ್ತಿಯಲ್ಲಿ ಸಂಗ್ರಹಿಸಿದ ಹಣದಲ್ಲಿ 50 ಸಾವಿರ ರೂಪಾಯಿ



ಉಳಿದಿತ್ತು. ಹಡಿನಬಾಳ ಹಾಡಗೇರಿಯ ರಿಕ್ಷಾ ಚಾಲಕ ವೃತ್ತಿ ನಡೆಸುತ್ತಿರುವ ಬಾಬು ನಾರಾಯಣ ನಾಯ್ಕ ಅವರ ಎರಡು ವರ್ಷದ ಮಗು ಛಾಯಾ ಇವಳು ಕಳೆದ ಕೆಲವು ತಿಂಗಳಿಂದ ಬ್ಲಡ್ ಕ್ಯಾನ್ಸರ್ ನಿಂದ ಬಳಲುತ್ತಿದ್ದು,ಮಣಿಪಾಲ ಆಸ್ಪತ್ರೆಯಲ್ಲಿ ಚಿಕಿತ್ಸೆ ಮುಂದುವರೆದಿದೆ. ಇವಳ ಚಿಕಿತ್ಸೆಗಾಗಿ ಹಡಿನಬಾಳ ಮಂಡಲದ ಸಮಸ್ತ ಹಿಂದುಗಳ ಪರವಾಗಿ 50 ಸಾವಿರ ರೂ.ಗಳನ್ನು ನೀಡಲಾಯಿತು. ಮಗುವಿನ ಸಂಪೂರ್ಣ ಚಿಕಿತ್ಸಾ ವೆಚ್ಚ 30 ಲಕ್ಷ ರೂ. ಮೀರಬಹುದು ಎಂದು ವೈದ್ಯರು ಹೇಳಿದ್ದು, ಈಗಾಗಲೇ ಆರ್ಥಿಕ, ಮಾನಸಿಕವಾಗಿ ಆಘಾತ ಅನುಭವಿಸಿರುವ ಪಾಲಕರೊಟ್ಟಿಗೆ ಕೈಲಾದ ಸಹಾಯ ಮಾಡುವ ಮೂಲಕ ಸಮಾಜ ನಿಲ್ಲಬೇಕು ಎಂದು ಸಮಿತಿಯವರು ಮನವಿ ಮಾಡಿಕೊಂಡಿದ್ದಾರೆ. ಮಗುವಿನ ಚಿಕಿತ್ಸೆಗೆ ಆರ್ಥಿಕ ಸಹಾಯ ಮಾಡುವವರು ಬಾಬು ನಾಯ್ಕ 6361434523 ಸಂಪರ್ಕಿಸಬಹುದು ಎಂದು ತಿಳಿಸಿದ್ದಾರೆ. ಯೂನಿಯನ್ ಬ್ಯಾಂಕ್ ಖಾತೆ ಸಂ. 520101199358571, ಹೆಸರು Babu Narayana Naik , ಐಎಫ್ ಎಸ್‌ಸಿ ಖಿಆಐಘೆ0903469 ಕೋಡ್ ಇಲ್ಲಿಗೆ ಹಣ ಸಂದಾಯ ಮಾಡಬಹುದು ಎಂದು ಕೋರಿದ್ದಾರೆ.

ಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿಯೇ ನನ್ನ ಧ್ಯೇಯ: ದೇಶಪಾಂಡೆ

ದಾಂಡೇಲಿ : ಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿಯೇ ನನ್ನ ಧ್ಯೇಯವಾಗಿದ್ದು, ಈ ನಿಟ್ಟಿನಲ್ಲಿ ಕ್ಷೇತ್ರಕ್ಕೆ ಸಾಕಷ್ಟು ಅನುದಾನಗಳನ್ನು ತಂದಿದ್ದೇನೆ, ಮುಂದೆಯು ತರುತ್ತೇನೆ. ಮೂಲಸೌಕರ್ಯಗಳನ್ನು ಬಲಪಡಿಸಿದಾಗ ಕ್ಷೇತ್ರದ ಅಭಿವೃದ್ಧಿ ಸುಲಭ ಸಾಧ್ಯ. ಕ್ಷೇತ್ರದಲ್ಲಿ ಮೂಲಸೌಕರ್ಯ ನಿರ್ಮಾಣಕ್ಕೆ ವಿಶೇಷ ಮುತುವರ್ಜಿಯನ್ನು ವಹಿಸಿ ಕಾರ್ಯನಿರ್ವಹಿಸಲಾಗುತ್ತಿದೆ ಎಂದು ಶಾಸಕರು ಹಾಗೂ ರಾಜ್ಯ ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷ ಆರ್. ವಿ.ದೇಶಪಾಂಡೆ ಹೇಳಿದರು.



ಗುರುವಾರ ದಾಂಡೇಲಿ ನಗರಸಭೆಯ ಆವರಣದಲ್ಲಿ ಆಯೋಜಿಸಲಾಗಿದ್ದ ನಗರೋತ್ಥಾನ - 04ರ ಯೋಜನೆಯಡಿ 663.87 ಲಕ್ಷ ರೂ.ಗಳ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಿಲಾನ್ಯಾಸವನ್ನು ನೆರವೇರಿಸಿ ಹಾಗೂ ವಿವಿಧ ಯೋಜನೆಗಳ ಅರ್ಹ ಫಲಾನುಭವಿಗಳಿಗೆ ವಿವಿಧ ಸೌಲಭ್ಯಗಳನ್ನು ವಿತರಿಸಿ ಮಾತನಾಡಿ, ನಗರೋತ್ಥಾನ- 04ರ ಯೋಜನೆಯಡಿ ದಾಂಡೇಲಿ ನಗರದ ರಸ್ತೆಗಳ ಅಭಿವೃದ್ಧಿ, ಚರಂಡಿ, ನಾಲಾ, ಸಿ.ಡಿ ನಿರ್ಮಾಣ, ಮಿನಿ ಹೈ ಮಾಸ್ಟ್ ವಿದ್ಯುತ್ ಬೀದಿ ದೀಪಗಳು, ನಗರದ ಎಲ್ಲ ರಸ್ತೆಗಳಿಗೆ ನಾಮಫಲಕ ಅಳವಡಿಸುವಿಕೆ, ಜೆ ಎನ್.ರಸ್ತೆಯಲ್ಲಿ ದ್ವಿ- ಭಾಜಕ ಹಾಗೂ ರಸ್ತೆ ನವೀಕರಣ, ವಿವಿಧ ಮುಖ್ಯ ರಸ್ತೆಗಳಲ್ಲಿ ಪಾರ್ಕಿಂಗ್ ವ್ಯವಸ್ಥೆ ಹಾಗೂ ಶೌಚಾಲಯ ನಿರ್ಮಾಣ ಸೇರಿದಂತೆ ಕಾಮಗಾರಿ ನಡೆಯಲಿದೆ. ಮುಖ್ಯಮಂತ್ರಿ ಮೂಲಸೌಕರ್ಯ ಅಭಿವೃದ್ಧಿ ಯೋಜನೆಯಡಿ ದಾಂಡೇಲಿ ನಗರದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳ ಅನುಷ್ಠಾನಕ್ಕಾಗಿ 11,48,10,000 ರೂ.ಗಳ ಅನುದಾನವನ್ನು ಕ್ಯಾಬಿನೆಟ್ ಮೂಲಕ ಮಂಜೂರು ಮಾಡಿಸಿ, ಇದೀಗ ಆ ಕಾಮಗಾರಿಗೂ ಟೆಂಡರ್ ಕರೆಯಲಾಗಿದೆ ಎಂದರು.

ವೆಸ್ಟ್ ಕೋಸ್ಟ್ ಕಾಗದ ಕಾರ್ಖಾನೆಯ ಕಾರ್ಯನಿರ್ವಾಹಕ ನಿರ್ದೇಶಕ ರಾಜೇಂದ್ರ ಜೈನ್ ಮಾತನಾಡಿದರು. ಕಾರ್ಯಕ್ರಮದಲ್ಲಿ ಜಿ+2 ಯೋಜನೆಯಡಿ ಅರ್ಹ 6 ಫಲಾನುಭವಿಗಳಿಗೆ ಆದೇಶ ಪತ್ರವನ್ನು ನೀಡಲಾಯಿತು. ಅಮೃತ ನಗರೋತ್ಥಾನ ಯೋಜನೆಯಡಿ ಪೌರಕಾರ್ಮಿಕರಿಗೆ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ವಿಕಲಚೇತನರು ಸೇರಿದಂತೆ ಒಟ್ಟು 13 ಫಲಾನುಭವಿಗಳಿಗೆ ಸೋಲಾರ್ ದೀಪ ವಿತರಿಸಲಾಯಿತು. ದೇವರಾಜು ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಿಂದ ಅರ್ಹ 8 ಮಹಿಳಾ ಫಲಾನುಭವಿಗಳಿಗೆ ಹೊಲಿಗೆ ಯಂತ್ರವನ್ನು ವಿತರಿಸಲಾಯಿತು.

ವೇದಿಕೆಯಲ್ಲಿ ಪಂಚ ಗ್ಯಾರಂಟಿ ತಾಲೂಕು ಅನುಷ್ಠಾನ ಸಮಿತಿಯ ಅಧ್ಯಕ್ಷ ರಿಯಾಜ್ ಬಾಬು ಸೈಯದ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮೋಹನ ಹಲವಾಯಿ, ತಹಶೀಲ್ದಾರ್ ಶೈಲೇಶ ಪರಮಾನಂದ, ತಾ.ಪಂಕಾರ್ಯನಿರ್ವಹಣಾಧಿಕಾರಿ ಟಿ.ಸಿ.ಹಾದಿಮನಿ, ಕಾರ್ಮಿಕ ಅಧಿಕಾರಿ ವೀಣಾ ಮಾಸ್ತಿ ಉಪಸ್ಥಿತರಿದ್ದರು. ನಗರಸಭೆಯ ಪೌರಾಯುಕ್ತ ವಿವೇಕ್ ಬನ್ನೆ ಪ್ರಾಸ್ತಾವಿಕವಾಗಿ ಮಾತನಾಡಿದರು. ಕೊನೆಯಲ್ಲಿ ನಗರಸಭೆಯ ವ್ಯವಸ್ಥಾಪಕ ಪರಶುರಾಮ ಶಿಂದೆ ವಂದಿಸಿದರು.

ಶಿಕ್ಷಕನಿಗೆ, ಮಾನಸಿಕ, ದೈಹಿಕ ಆರೋಗ್ಯ ಅಗತ್ಯ

ಅಂಕೋಲಾ: ಶಿಕ್ಷಕ ಮಾನಸಿಕ, ದೈಹಿಕವಾಗಿ ಸದೃಢನಾದಾಗ ಮಾತ್ರ ಉತ್ತಮವಾಗಿ ಬೋಧಿಸಬಲ್ಲ ಅದರ ಜೊತೆ ಉತ್ತಮ ಸಂವಹನ ಕೌಶಲದ ಜೊತೆ ವೃತ್ತಿಯನ್ನು ಸಂಪೂರ್ಣ ಪ್ರೀತಿ ಆದ್ಯತೆಯಿಂದ ಆಯ್ದುಕೊಳ್ಳಬೇಕು ಆದರ ಜೊತೆ ದುಡಿಯುವ ಹಣವನ್ನು ಸೂಕ್ತವಾಗಿ ಆಯ್ದುಕೊಂಡು



ಅರ್ಹಯೋಜನೆಯೊಂದಿಗೆ ಬಳಸುವ ಕಲೆಯನ್ನು ಕಲಿಯಬೇಕು ಎಂದು ಸ್ಮಾರ್ಟ್ ಇನ್ವೆಸ್ಟರ್ ಜಾಗೃತಿ ಕಾರ್ಯಕ್ರಮದ ತರಬೇತುದಾರ ಪ್ರಶಾಂತ ಮೊಟಗಿ ಹೇಳಿದರು.

ಅವರು ಸ್ಥಳೀಯ ಕೆಎಲ್‌ಇ ಸಂಸ್ಥೆಯ ಶೇಷಗಿರಿ ಪಿಕಳೆ ಶಿಕ್ಷಣ ಮಹಾವಿದ್ಯಾಲಯದ ಆರ್ಥಿಕ ಸುಸ್ಥಿತಿ ಹಾಗೂ ಆನ್‌ಲೈನ್ ವಂಚನೆ ಕುರಿತು ಆಯೋಜಿಸಲಾದ ತರಬೇತಿ ಕಾರ್ಯಕ್ರಮದಲ್ಲಿ ಮಾತನಾಡಿ, ಆರ್ಥಿಕಕಾಗಿ ಸದೃಢರಾಗಿ ಆರೋಗ್ಯಪೂರ್ಣ ಬಳಕೆಯ ಕಲೆ ಕಲಿಯಬೇಕು. ಹಣವನ್ನು ಸುಸ್ಥಿರ ಬಳಕೆಯ ಮೇಲೆ ಗಮನಹರಿಸಬೇಕು ಎಂದರು.

ಕಾರ್ಯಕ್ರಮದಲ್ಲಿ ಅಧ್ಯಕ್ಷತೆವಹಿಸಿ ಉಪನ್ಯಾಸಕಿ ಪೂರ್ವಿ ಹಲ್ಗೇಕರ್ ಮಾತನಾಡಿ, ಡುತ್ತಾ ಕೇವಲ ಹಣ ಗಳಿಸಿದರೆ ಸಾಲದು ಅದನ್ನು ಬಳಸುವ ಕಲೆ ಗೊತ್ತಿರಬೇಕು ಎಂದರು. ಕಾರ್ಯಕ್ರಮದಲ್ಲಿ ರಕ್ಷಿತಾ ಸಂಗಡಿಗರು ಪ್ರಾರ್ಥಿಸಿದರು. ಪ್ರತೀಕ್ಷಾ ನಾಯ್ಕ ಸ್ವಾಗತಿಸಿದರು. ಅಮೃತಾ ನಾಯ್ಕ ವಂದಿಸಿದರು. ಶ್ರೀನಿಧಿ ಗಾಂವ್ಕರ್ ನಿರೂಪಿಸಿದರು.

ಬೀಚ್ ವಾಲಿಬಾಲ್ ಆಟಗಾರರ ಆಯ್ಕೆ ಪ್ರಕ್ರಿಯೆ

ಕುಮಟಾ: ತಾಲೂಕಿನ ಕಾಗಾಲ ಕಡಲ ತೀರದಲ್ಲಿ ಕರ್ನಾಟಕ ರಾಜ್ಯ ವಾಲಿಬಾಲ್ ಅಸೋಸಿಯೇಶನ್ ಯಿಂದ ಬೀಚ್ ವಾಲಿಬಾಲ್ ಆಟಗಾರರ ಆಯ್ಕೆ ಪ್ರಕ್ರಿಯೆ ನಡೆಯಿತು. ಕಾಗಾಲದ ಅಲ್ಮನಾರ್ ಮತ್ತು ಅಲ್ನಾ ಸ್ಪೋರ್ಟ್ಸ್ ಕ್ಲಬ್ ಹಾಗೂ ಫ್ರೆಂಡ್ಸ್ ಸ್ಪೋರ್ಟ್ಸ್ ಕ್ಲಬ್ ಹೆಗಡೆ ಸಹಯೋಗದಲ್ಲಿ ಈ ಆಯ್ಕೆ ಶಿಬಿರ ಹಮ್ಮಿಕೊಳ್ಳಲಾಗಿತ್ತು.

ಈ ವೇಳೆ ಕರ್ನಾಟಕ ವಾಲಿಬಾಲ್ ಅಸೋಸಿಯೇಶನ್ ಕಾರ್ಯದರ್ಶಿ ಅಂಥೋನಿ ಜೊಸೆಫ್ ಮಾತನಾಡಿ, ನೈಸರ್ಗಿಕ ಸಮುದ್ರ ತೀರದ ಮರಳಿನಲ್ಲಿ ಬೀಚ್ ವಾಲಿಬಾಲ್ ಆಯ್ಕೆ ಪ್ರಕ್ರಿಯೆ ನಡೆಸಬೇಕೆಂಬ ಉದ್ದೇಶದಿಂದ ಇಲ್ಲಿನ ಸಹಕಾರದೊಂದಿಗೆ ಈ ಶಿಬಿರ ಹಮ್ಮಿಕೊಳ್ಳಲಾಗಿದೆ. ಈ ಭಾಗದ ಪ್ರಸಿದ್ಧ ಹಿರಿಯ ಆಟಗಾರರಾದ ಗೌರೀಶ ಶೆಟ್ಟಿ, ನಾಗರಾಜ ಹೆಗಡೆ ಸಲಹೆ, ಸಹಕಾರದಿಂದ ಇದು ಸಾಧ್ಯವಾಗಿದೆ ಎಂದರು. ಮಾ.9 ರಂದು ಪಾಂಡಿಚೇರಿಯಲ್ಲಿ ನಡೆಯಲಿರುವ ರಾಷ್ಟ್ರೀಯ ಬಾಲಕ-ಬಾಲಕಿಯರ ಬೀಚ್ ವಾಲಿಬಾಲ್ ಸ್ಪರ್ಧೆಗೆ ಇಲ್ಲಿ ಆಯ್ಕೆಯಾದ ನಾಲ್ಕು ಬಾಲಕರು ಹಾಗೂ ನಾಲ್ಕು ಬಾಲಕಿಯರು ಕರ್ನಾಟಕ ರಾಜ್ಯವನ್ನು ಪ್ರತಿನಿಧಿಸಲಿದ್ದಾರೆ ಎಂದರು. ಅರ್ಬನ್ ಬ್ಯಾಂಕ್ ಅಧ್ಯಕ್ಷ ರಾಮನಾಥ ಶಾನಭಾಗ (ಧೀರೂ), ಹಿರಿಯ ಆಟಗಾರ ವಿನೋದ ಪ್ರಭು, ಸ್ಥಳೀಯ ಅಲ್ಮನಾರ್ ಸ್ಪೋರ್ಟ್ಸ್ ಸಂಘದ ಅಧ್ಯಕ್ಷ ಅಯೂಬ್ ಮಾತನಾಡಿದರು.



ಕಾರ್ಯಕ್ರಮದಲ್ಲಿ ಅಂಜುಮಾನ್ ಯುವಕ ಸಂಘದ ಅಧ್ಯಕ್ಷ ಹನೀಫ್ ಉಪ್ಪಾರಕರ್, ರಾಷ್ಟ್ರೀಯ ವಾಲಿಬಾಲ್ ಆಟಗಾರ ನಾಗರಾಜ ಹೆಗಡೆ, ಸಂದೀಪ್ (ಬೆಂಗಳೂರು) ವೇದಿಕೆಯಲ್ಲಿದ್ದರು. ನಿವೃತ್ತ ಸೈನಿಕ ಹಾಗೂ ವಾಲಿಬಾಲ್ ಆಟಗಾರ ಪ್ರಕಾಶ್ ಮಡಿವಾಳ ಬಾಲಕರ ತಂಡದ ಕೋಚ್ ಆಗಿದ್ದು, ಸತೀಶ್ ಹೆಗಡೆಕರ್ ಹಾಗೂ ಪ್ರಕಾಶ್ ಮಡಿವಾಳ, ಹಿರಿಯ ಆಟಗಾರ ಗೌರೀಶ್ ಶೆಟ್ಟಿ ಆಯ್ಕೆ ಪ್ರಕ್ರಿಯೆಯಲ್ಲಿ ಸಹಕರಿಸಿದರು.

ಕರ್ನಾಟಕ ವಾಲಿಬಾಲ್ ಅಸೋಸಿಯೇಶನ್ ಅಧ್ಯಕ್ಷ ಹರ್ಷ, ಕಾರ್ಯದರ್ಶಿ ಅಂಥೋನಿ ಜೊಸೆಫ್ ಉಪಸ್ಥಿತರಿದ್ದರು. ಫ್ರೆಂಡ್ಸ್ ಸ್ಪೋರ್ಟ್ಸ್ ಕ್ಲಬ್ ಹೆಗಡೆಯ ಅನಿಲ್ ನಾಯ್ಕ, ಗುಂಡು ಮಡಿವಾಳ, ರಾಜೇಶ್ ಹೆಗಡೆ, ರಾಘು ಶೆಟ್ಟಿ, ಮೋಹನ್ ಶಾನಭಾಗ, ಅಮರನಾಥ ಭಟ್ಟ, ಪ್ರಶಾಂತ ಶೆಟ್ಟಿ, ಪವನ್ ಉಪಸ್ಥಿತರಿದ್ದರು. ಉದ್ಯಮಿ ಮುಕುಂದ ನಾಯ್ಕ ಊಟದ ವ್ಯವಸ್ಥೆ ಮಾಡಿದ್ದರು.

ಕಿರುಸುದ್ದಿ

ಮಾ.23ರಂದು ಸಾಮೂಹಿಕ ವಿವಾಹ

ಗುತ್ತಲ: ಸಮೀಪದ ನೆಗಳೂರ ಗ್ರಾಮದ ಶ್ರೀಗುರುಶಾಂತೇಶ್ವರ ಸಂಸ್ಥಾನ ಹಿರೇಮಠದ ಜಾತ್ರಾ ಮಹೋತ್ಸವದ ಅಂಗವಾಗಿ ಮಾ.23 ರಂದು ಮದ್ಯಾಹ್ನ 12.30ಕ್ಕೆ ಸಾಮೂಹಿಕ ವಿವಾಹ ಹಾಗೂ ಧರ್ಮಸಭೆ ಜರುಗುವುದು.ಶ್ರೀಮಠದ ವತಿಯಿಂದ ವಧು–ವರರಿಗೆ ಬಟ್ಟೆ,ತಾಳಿ, ಕಾಲುಂಗರ, ಸೂರಗಿಕಾಯಿ, ದಂಡಿ–ಬಾಸಿಂಗ, ಹೂವಿನ ಮಾಲೆ ನೀಡಲಾಗುವದು. ಸಾಮೂಹಿಕ ವಿವಾಹದಲ್ಲಿ ವಿವಾಹವಾಗಲು ಇಚ್ಚಿಸುವವರು ಮಾ.20 ರೊಳಗಾಗಿ ಸೂಕ್ತ ದಾಖಲಾತಿಗಳೊಂದಿಗೆ ಶ್ರೀಮಠದಲ್ಲಿ ಹೆಸರು ನೋಂದಾಯಿಸಿಕೊಳ್ಳಬೇಕು, ಬಾಲ್ಯ ವಿವಾಹ ಹಾಗೂ ಎರಡನೇ ಮದುವೆಗೆ ಅವಕಾಶವಿರುವುದಿಲ್ಲ, ಹೆಚ್ಚಿನ ಮಾಹಿತಿಗಾಗಿ ಮೊ: 9741117174 ಸಂಪರ್ಕಿಸಿಬಹುದೆಂದು ಶ್ರೀಮಠದ ಜಾತ್ರಾ ಮಹೋತ್ಸವ ಸೇವಾ ಸಮಿತಿಯ ಅಧ್ಯಕ್ಷ ರೇವಣೆಪ್ಪ ಕಿವುಡಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಧ್ಯಕ್ಷರಾಗಿ ಕುಮಾರ ಆಯ್ಕೆ

ರಾಣೇಬೆನ್ನೂರ: ಕರ್ನಾಟಕ ರಾಜ್ಯ ನೋಟರಿ ಸಂಘದ ಸಲಹಾ ಸಮಿತಿಯ ಸದಸ್ಯ ಎಂ. ಸಿ. ನಡುವಿನಮಠ, ಸಂಘದ ಉಪಾಧ್ಯಕ್ಷ ಆರ್. ವ್ಹಿ. ಬೆಳಕೇರಿಮಠ ಹಾಗೂ ಕಾರ್ಯಕಾರಿ ಮಂಡಳಿಯ ಸದಸ್ಯ ಜಿ. ಕೆ. ಕಮ್ಮಾರ ಹಾಗೂ ಜಿಲ್ಲೆಯ



ರಾಣೇಬೆನ್ನೂರ, ಹಾವೇರಿ, ಶಿಗ್ಗಾಂವ, ಸವಣೂರ, ಹಾನಗಲ್ಲ, ಬ್ಯಾಡಗಿ, ಹಿರೇಕೆರೂರು, ರಟ್ಟೀಹಳ್ಳಿ, ತಾಲೂಕುಗಳ ಎಲ್ಲಾ ನೋಟರಿಗಳು ಸಭೆ ಸೇರಿ 2026–2027ನೇ ಸಾಲಿಗಾಗಿ ನೂತನವಾಗಿ ಹಾವೇರಿ ಜಿಲ್ಲಾ ನೋಟರಿ ಅಧ್ಯಕ್ಷರನ್ನಾಗಿ ಸ್ಥಳೀಯ ಕುಮಾರ ಡಿ. ಮಡಿವಾಳರ ಇವರನ್ನು ಅವಿರೋಧವಾಗಿ ಆಯ್ಕೆ ಮಾಡಲಾಯಿತು. ಹಾವೇರಿಯ ಕೆ. ಸಿ. ರಜಪೂತ ಜಿಲ್ಲಾ ಕಾರ್ಯದರ್ಶಿಯಾಗಿ, ಹಾವೇರಿಯ ಎನ್. ಎಸ್. ಪಾಟೀಲ ಜಿಲ್ಲಾ ಸಂಚಾಲಕರಾಗಿ, ಸವಣೂರಿನ ಎಸ್. ಎಸ್. ಕೆರಿಯವರ, ಶಿಗ್ಗಾಂವಿಯ ಬಿ. ಎಮ್. ಸುಂಕದ, ಬ್ಯಾಡಗಿಯ ಕೆ. ಡಿ. ಪಾಟೀಲ, ಹಿರೇಕೆರೂರಿನ ದುರ್ಗೇಶ ತಿರಕಣ್ಣನವರ, ರಾಣೆಬೆನ್ನೂರಿನ ಪಿ. ಎಸ್. ಪಾಟೀಲ, ಹಾನಗಲ್ಲಿನ ಎಮ್. ಹೆಚ್. ತೊಗರಳ್ಳಿ, ಹಾವೇರಿಯ ಎಂ. ಸಿ. ಮರಡಿ ಇವರನ್ನು ಸದಸ್ಯರಾಗಿ ಆಯ್ಕೆ ಮಾಡಲಾಯಿತು ಎಂದು ಜಿಲ್ಲಾ ನೋಟರಿ ಸಂಘವು ಪ್ರಕಟಣೆಯಲ್ಲಿ ತಿಳಿಸಿದೆ.

ಇತಿಹಾಸ ಪರೀಕ್ಷೆ: 343 ವಿದ್ಯಾರ್ಥಿಗಳು ಗೈರು

ಹಾವೇರಿ: ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯ ಐದನೇ ದಿನವಾದ ಗುರುವಾರ ಜಿಲ್ಲೆಯ 25 ಪರೀಕ್ಷಾ ಕೇಂದ್ರಗಳಲ್ಲಿ ಇತಿಹಾಸ ವಿಷಯದ ಪರೀಕ್ಷೆ ಬಹುತೇಕ ಶಾಂತಿಯುತವಾಗಿ ನಡೆಯಿತು. ಇತಿಹಾಸ ವಿಷಯದ ಪರೀಕ್ಷೆಗೆ ಒಟ್ಟು 7,145 ವಿದ್ಯಾರ್ಥಿಗಳು ನೊಂದಾಯಿಸಿಕೊಂಡಿದ್ದು, ಈ ಪೈಕಿ 6,802 ವಿದ್ಯಾರ್ಥಿಗಳು ಹಾಜರಾಗಿದ್ದರು. 343 ವಿದ್ಯಾರ್ಥಿಗಳು ಗೈರು ಹಾಜರಾಗಿದ್ದರು. ಒಟ್ಟಾರೆ ಇತಿಹಾಸ ಪರೀಕ್ಷೆಗೆ ಶೇ.95.2ರಷ್ಟು ವಿದ್ಯಾರ್ಥಿಗಳು ಹಾಜರಾಗಿದ್ದರು ಎಂದು ಪದವಿ ಪೂರ್ವ ಶಿಕ್ಷಣ ಇಲಾಖೆ ಉಪ ನಿರ್ದೇಶಕರ ಕಚೇರಿ ಅಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹೋಳಿ ಹಬ್ಬ: ವಿವಿಧೆಡೆ ಮದ್ಯ ಮಾರಾಟ ನಿಷೇಧ

ಹಾವೇರಿ: ಹೋಳಿ ಹಬ್ಬದ ರಂಗಪಂಚಮಿ ಅಂಗವಾಗಿ ಜಿಲ್ಲೆಯಲ್ಲಿ ಶಾಂತಿ ಪಾಲನೆ ಹಾಗೂ ಕಾನೂನು ಸುವ್ಯವಸ್ಥೆ ಕಾಪಾಡುವ ಸಲುವಾಗಿ ಮಾ.6 ರಿಂದ ಮಾ.15ರವರೆಗೆ ವಿವಿಧ ಸ್ಥಳಗಳಲ್ಲಿ ಮದ್ಯಮಾರಾಟ ನಿಷೇಧಿಸಿ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿ ಡಾ.ವಿಜಯಮಹಾಂತೇಶ ದಾನಮ್ಮನವರ ಅವರು ಆದೇಶ ಹೊರಡಿಸಿದ್ದಾರೆ.

ಮಾ.6ರ ಬೆಳಿಗ್ಗೆ 6 ರಿಂದ ಮಾ.8ರ ಬೆಳಿಗ್ಗೆ 6ರವರೆಗೆ ಶಿಗ್ಗಾಂವ ಪಟ್ಟಣದಲ್ಲಿ, ಮಾ.7ರ ಬೆಳಿಗ್ಗೆ 6 ರಿಂದ ಮಾ.8ರ ಬೆಳಿಗ್ಗೆ 6ರವರೆಗೆ ಹಿರೇಕೆರೂರು, ತಾವರಗಿ, ಬೆಟಕೇರೂರಗಳಲ್ಲಿ, ಮಾ.7ರ ಬೆಳಿಗ್ಗೆ 6 ರಿಂದ ಮಾ.9ರ ಬೆಳಿಗ್ಗೆ 6ರವರೆಗೆ ಬಮ್ಮನಹಳ್ಳಿ ಹಾಗೂಬೆಳಗಾಲಪೇಟೆ, ಮಾ.8ರ ಬೆಳಿಗ್ಗೆ 6 ರಿಂದ ಮಾ.9ರ ಬೆಳಿಗ್ಗೆ 6ರವರೆಗೆ ಗೆಜ್ಜಿಹಳ್ಳಿ ನಾಲ್ಕರ್ ಕ್ರಾಸ್, ಬೆಟಕೇರೂರ, ಬಮ್ಮನಹಳ್ಳಿ ಹಾಗೂ ಬೆಳಗಾಲಪೇಟ, ಮಾ.8ರ ಬೆಳಿಗ್ಗೆ 6 ರಿಂದ ಮಾ.10ರ ಬೆಳಿಗ್ಗೆ 6ರವರೆಗೆ ಶಿಗ್ಗಾಂವ ಪಟ್ಟಣ, ಮಾ.10ರ ಬೆಳಿಗ್ಗೆ 6 ರಿಂದ ಮಾ.12ರ ಬೆಳಿಗ್ಗೆ 6ರವರೆಗೆ ಅಕ್ಕಿಆಲೂರು, ಮಾ.12ರ ಬೆಳಿಗ್ಗೆ 6 ರಿಂದ ಮಾ.13ರ ಬೆಳಿಗ್ಗೆ 6ರವರೆಗೆ ಹಿರೇಕೆರೂರು, ತಾವರಗಿ, ಮಾ.13ರ ಬೆಳಿಗ್ಗೆ 6 ರಿಂದ ಮಾ.15ರ ಬೆಳಿಗ್ಗೆ 6ರವರೆಗೆ ಅಕ್ಕಿ ಆಲೂರು, ದೇಸಾಯಿಕಲ್ಲಾಪೂರ, ಮಾ.14ರ ಬೆಳಿಗ್ಗೆ 6 ರಿಂದ ಮಾ.15ರ ಬೆಳಿಗ್ಗೆ 6ರವರೆಗೆ ಗೆಜ್ಜಿಹಳ್ಳಿ ನಾಲ್ಕರ್ ಕ್ರಾಸ್‌ನಲ್ಲಿ ಮದ್ಯ ಮಾರಾಟ ನಿಷೇಽಸಲಾಗಿದೆ. ಈ ದಿನಗಳನ್ನು ಶುಷ್ಕ ದಿವಸ (ಡ್ರೈ ಡೇ) ಎಂದು ಘೋಷಿಸಲಾಗಿದೆ.



ಹಾವೇರಿ: ನಗರದ ಶ್ರೀ ಜಗದ್ಗುರು ರೇಣುಕ ಮಂದಿರ (ನಡುವಿನಮಠ)ದಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತಿ ನಡೆಯಿತು. ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಎಂ.ಎಂ. ಹಿರೇಮಠ, ಹರಸೂರ ಬಣ್ಣದಮಠ ಅಭಿನವರುದ್ರ ಚೆನ್ನಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿ, ನಿವೃತ್ತ ಪ್ರಾಚಾರ್ಯ ಪಿ.ಸಿ. ಹೀರೆಮಠ, ತಾಲೂಕು ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಎಂ.ಎಂ. ಮೈದೂರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ವೀರಯ್ಯಸ್ವಾಮಿ ಹಿರೇಮಠ, ಪ್ರಸನ್ನ ಹಿರೇಮಠ, ರೇಣುಕಾ ಪುತ್ರನ್ನ, ಮುಖಂಡ ಎಂ.ಎಸ್. ಕೋರಿಶೆಟ್ಟರ್ ಇತರರು ಇದ್ದರು.

ಅಂಧರ ಬಾಳಿಗೆ ಬೆಳಕಾದ ಪುಟ್ಟರಾಜ ಗವಾಯಿ

ಬ್ಯಾಡಗಿ: ಅಂದರ ಬಾಳಿಗೆ ಬೆಳಕು ನೀಡಿದ ಡಾ.ಪುಟ್ಟರಾಜ ಗವಾಯಿಗಳು ದೇವಮಾನವರಾಗಿ ಬದುಕಿದ್ದರು. ಅವರ ವಿಚಾರಗಳು ವಿಚಾರಧಾರೆಗಳು ಇಂದಿಗೂ ಜನುಮದಲ್ಲಿ ಬೆಳೆಯಬೇಕೆಂದು ನಿವೃತ್ತ ಪ್ರಾಚಾರ್ಯ ಎಸ್.ಎನ್. ಯಮನಕ್ಕನವರ್ ಹೇಳಿದರು.

ಪಟ್ಟಣದ ಗಾನಯೋಗಿ ಕಲಾತಂಡದಿಂದ ಡಾ. ಪುಟ್ಟರಾಜ ಗವಾಯಿಗಳ 112ನೇ ಜಯಂತಿ ಜಯಂತಿಯಲ್ಲಿ ಮಾತನಾಡಿ, ಅಂಧರ ಬಾಳಿಗೆ ಬೆಳಕಾಗಿದ್ದ ಪಂಡಿತ ಪುಟ್ಟರಾಜರು ಸಂಗೀತ ಕ್ಷೇತ್ರದಲ್ಲಿ ಅಪಾರ ಜ್ಞಾನವನ್ನು ಹೊಂದಿದ್ದರು ಅವರು ಗುರು ಪಂಚಾಕ್ಷರ ಗವಾಯಿಗಳ ಮಾರ್ಗದರ್ಶನದಂತೆ ಗದಗಿನಲ್ಲಿ ಸಾವಿರಾರು ವಿದ್ಯಾರ್ಥಿಗಳಿಗೆ ಸಂಗೀತ ಸೇವೆ ನೀಡಿದ ಸಂತರು. ಅಂತವರ ಸ್ಮರಣೆ ಸದಾ ಮಾಡಬೇಕು ಅಂತವರ ಸ್ಮರಣೆ ಸದಾ ಮಾಡಬೇಕು ಪುಣ್ಯ ಸ್ಮರಣೆಯಂದು ಅವರನ್ನು ಸ್ಮರಿಸುವ ಪ್ರತಿಯೊಬ್ಬರಿಗೂ ಅವರ ಆಶೀರ್ವಾದ ಸಿಗುತ್ತದೆ ಎಂದರು. ಈ ಭಾವಚಿತ್ರ ಇರುವ ಜಾಗದಲ್ಲಿ ಮುಂಬರುವ ದಿನಗಳಲ್ಲಿ ಡಾ. ಪುಟ್ಟರಾಜ್ ಗವಾಯಿಗಳ ಭವ್ಯ ಮೂರ್ತಿಯು ಮಾಡಬೇಕು ಇಲ್ಲಿರುವ ತಾಲೂಕ ಆಡಳಿತ ಮರಸಭೆ ಇಂತಹ ಮಹಾನ್ ಮರುಷರ ಭವ್ಯಮೂರ್ತಿಯನ್ನು ನಿರ್ಮಿಸಲು ಮುಂದಾಗಬೇಕು ಎಂದರು.

ಮಾಜಿ ಸೈನಿಕ ಮಲ್ಲೇಶಪ್ಪ ಚಿಕ್ಕಣ್ಣನವರು, ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಬಿ.ಎಂ. ಜಗಾಪುರ ಮಾತನಾಡಿದರು. ಈ ವೇಳೆ ಗಾನ ಯೋಗಿ ಕಲಾತಂಡದ ಅಧ್ಯಕ್ಷ ವೀರಭದ್ರಗೌಡ ಹೊಮ್ಮರಡಿ.,ಉಪಾಧ್ಯಕ್ಷ ಮಾಲ್ತೆ ದೇವಗಿರಿ ಅಕ್ಷರ ದಾಸೋಹ ಅಧಿಕಾರಿ ವಸಂತ ಬೀರಣ್ಣನವರ್, ಸಿದ್ದಲಿಂಗಪ್ಪ ಪಟ್ಟಣಶೆಟ್ಟಿ, ರಾಜು ಹೊಸಳ್ಳಿ, ಸುಧೀರ್ ಹವಳದ, ಉದಯ್ ವೆರ್ಣೇಕರ್ ಇದ್ದರು.



ಬ್ಯಾಡಗಿ: ಪಟ್ಟಣದ ಗಾನಯೋಗಿ ಕಲಾತಂಡದಿಂದ ಡಾ. ಪುಟ್ಟರಾಜ ಗವಾಯಿಗಳ 112ನೇ ಜಯಂತಿ ಜಯಂತಿ ಕಾರ್ಯಕ್ರಮ ನಡೆಯಿತು. ನಿವೃತ್ತ ಪ್ರಾಚಾರ್ಯ ಎಸ್.ಎನ್. ಯಮನಕ್ಕನವರ್, ಮಾಜಿ ಸೈನಿಕ ಮಲ್ಲೇಶಪ್ಪ ಚಿಕ್ಕಣ್ಣನವರು, ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಬಿ.ಎಂ. ಜಗಾಪುರ, ಈ ವೇಳೆ ಗಾನ ಯೋಗಿ ಕಲಾತಂಡದ ಅಧ್ಯಕ್ಷ ವೀರಭದ್ರಗೌಡ ಹೊಮ್ಮರಡಿ.,ಉಪಾಧ್ಯಕ್ಷ ಮಾಲ್ತೆ ದೇವಗಿರಿ ಅಕ್ಷರ ದಾಸೋಹ ಅಧಿಕಾರಿ ವಸಂತ ಬೀರಣ್ಣನವರ್, ಸಿದ್ದಲಿಂಗಪ್ಪ ಪಟ್ಟಣಶೆಟ್ಟಿ, ರಾಜು ಹೊಸಳ್ಳಿ, ಸುಧೀರ್ ಹವಳದ, ಉದಯ್ ವೆರ್ಣೇಕರ್ ಇದ್ದರು.

ನೌಕರರ ಮೇಲೆ ದೌರ್ಜನ್ಯ, ಕೆಲಸಕ್ಕೆ ಅಡ್ಡಿ ಖಂಡಿಸಿ ಪ್ರತಿಭಟನೆ

ಸೂಕ್ತ ಕಾನೂನು ಕ್ರಮಕ್ಕೆ ಆಗ್ರಹ

ಹಾವೇರಿ: ಕರ್ತವ್ಯನಿರತ ಸರ್ಕಾರಿ ಅಧಿಕಾರಿ ಹಾಗೂ ನೌಕರರಿಗೆ ಅವಾಚ್ಯ ಶಬ್ದಗಳಿಂದ ನಿಂದಿಸಿ ಸರ್ಕಾರಿ ಕೆಲಸಕ್ಕೆ ಅಡ್ಡಿಪಡಿಸುವವರ ವಿರುದ್ಧ ಸೂಕ್ತ ಕಾನೂನು ಕ್ರಮಕೈಗೊಳ್ಳಬೇಕು. ಅಂತಹ ಬೇನಾಮಿ ಮುಖಂಡರನ್ನು ಕರ್ನಾಟಕ ಪೊಲೀಸ್ ಕಾಯಿದೆಯಡಿ ಗಡಿಪಾರು ಮಾಡುವಂತೆ ಆಗ್ರಹಿಸಿ ರಾಜ್ಯ ಸರ್ಕಾರಿ ನೌಕರರ ಸಂಘ ಜಿಲ್ಲಾ ಘಟಕದ ಪದಾಧಿಕಾರಿಗಳು ಗುರುವಾರ ಜಿಲ್ಲಾಡಳಿತ ಭವನದ ಎದುರು ಪ್ರತಿಭಟನೆ ನಡೆಸಿದರು.

ಪ್ರತಿಭಟನೆಯಲ್ಲಿ ಜಿಲ್ಲಾ ಮಟ್ಟದ ಅಧಿಕಾರಿಗಳು, ವಿವಿಧ ತಾಲೂಕುಗಳ ಸರ್ಕಾರಿ ನೌಕರರ ಸಂಘದ ಅಧ್ಯಕ್ಷರು, ಪದಾಧಿಕಾರಿಗಳು ವೃಂದ ಸಂಘಗಳ ನೌಕರರು ಪಾಲ್ಗೊಂಡು ವಿವಿಧ 30ಕ್ಕೂ ಹೆಚ್ಚು ಇಲಾಖೆಗಳ ಅಧಿಕಾರಿಗಳ ಮೇಲೆ ಹಲ್ಲೆ ಮಾಡುವ, ದೌರ್ಜನ್ಯ ಎಸಗುವ, ಅವಾಚ್ಯ ಶಬ್ದಗಳಿಂದ ನಿಂದಿಸುವವರ ವಿರುದ್ಧ ಸರ್ಕಾರ ಹಾಗೂ ಪೊಲೀಸ್ ಇಲಾಖೆ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕೆಂದು ಒಕ್ಕೊರಲಿನ ಅಭಿಪ್ರಾಯವನ್ನು ಸಾಮೂಹಿಕವಾಗಿ ಘೋಷಣೆ ಕೂಗಿ ತಮ್ಮ ಅಳಲು ತೋಡಿಕೊಂಡರು.

ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಮಲ್ಲೇಶ ಕರಿಗಾರ ಮಾತನಾಡಿ, ಮಾ. 2ರಂದು ಹಾವೇರಿ ಲೋಕೋಪಯೋಗಿ ಕಚೇರಿಯಲ್ಲಿ ಕಾರ್ಯನಿರತ ಅಧಿಕಾರಿ ಹಾಗೂ ನೌಕರರಿಗೆ ಎಂ.ಎನ್. ನಾಯಕ ಹಾಗೂ ಇತರರು ಏಕಾಏಕಿ ಕಚೇರಿಗೆ ನುಗ್ಗಿ ದಾಂಧಲೆ ಮಾಡಿದ್ದಾರೆ. ಅವಾಚ್ಯ ಶಬ್ದಗಳಿಂದ ನಿಂದಿಸಿ ಸರ್ಕಾರಿ ಕೆಲಸಕ್ಕೆ ಅಡ್ಡಿಪಡಿಸಿದ್ದಾರೆ. ಜಿಲ್ಲೆಯಲ್ಲಿ ಇದೇ ರೀತಿಯ ವಿವಿಧ ಬೇನಾಮಿ ಸಂಘಟನೆ ಹೆಸರಿನಲ್ಲಿ ಹಾಗೂ ಮಾಹಿತಿ ಹಕ್ಕು ಕಾರ್ಯಕರ್ತರ ಸೋಗಿನಲ್ಲಿ ಕೆಲವೊಂದು ಜನರು ವಿವಿಧ ಇಲಾಖೆಗಳಿಗೆ ಹೋಗಿ ತೊಂದರೆ ನೀಡುತ್ತಿರುವುದು ಅತ್ಯಂತ ಖಂಡನೀಯ ಎಂದರು.

ಸರ್ಕಾರಿ ನೌಕರರ ಕೆಲಸಕ್ಕೆ ಅಡ್ಡಿಪಡಿಸುವುದರ ನೌಕರರು ಸಂಘದ ಗಮನಕ್ಕೆ ತಂದಿದ್ದಾರೆ. ಇಂತಹ ಸನ್ನಿವೇಶಗಳಲ್ಲಿ ಕೆಲಸ ಮಾಡುವ ನೌಕರರಿಗೆ ಯಾವುದೇ ರಕ್ಷಣೆಯೇ ಇಲ್ಲದಂತಾಗಿದೆ. ನೌಕರರ ಕಾರ್ಯಕ್ಕೆ ಅಡ್ಡಿಪಡಿಸುವವರ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿ ನೌಕರರಿಗೆ ಸೂಕ್ತ ರಕ್ಷಣೆ ನೀಡಬೇಕು. ಜತೆಗೆ ಮಾಹಿತಿ ಹಕ್ಕು ನೆಪದಲ್ಲಿ ಹಣದ ಬೇಡಿಕೆ ಇಡುವ ಕೆಟ್ಟ ಸಂಪ್ರದಾಯ ಕಂಡುಬರುತ್ತಿದ್ದು, ಅಂತಹವರ ವಿರುದ್ಧವೂ ಕ್ರಮಕೈಗೊಳ್ಳಬೇಕೆಂದು ಒತ್ತಾಯಿಸಿದರು.

ಈ ವೇಳೆ ಸ್ಥಳಕ್ಕಾಗಮಿಸಿದ ಜಿಲ್ಲಾಧಿಕಾರಿಗಳು ಮನವಿ ಸ್ವೀಕರಿಸಿದರು. ಈ ವೇಳೆ ಜಿಪಂ ಸಿಇಒ ರುಚಿ ಬಿಂದಲ್, ಡಿಎಚ್ಒ ಡಾ. ಜಯಾನಂದ ಇದ್ದರು. ಪ್ರತಿಭಟನೆಯಲ್ಲಿ ಸಂಘದ ಕಾರ್ಯದರ್ಶಿ ಜಿ.ಎಸ್. ಪಾಟೀಲ, ಖಜಾಂಚಿ ದಾವಲಸಾಬ ಕಮಗಾಲ, ರಾಜ್ಯ ಸಮಿತಿ ಸದಸ್ಯ ಮುನೀಶ್ವರ ಚೂರಿ, ಗುರುನಾಥ ಗಾವಣೀಕರ, ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ ಬಿ.ಪಿ. ಶಿಡೇನೂರ ಸೇರಿದಂತೆ ಎಲ್ಲಾ ತಾಲೂಕುಗಳ ಅಧ್ಯಕ್ಷರು, ವೃಂದ ಸಂಘಗಳ ಪದಾಕಾರಿಗಳು ಪಾಲ್ಗೊಂಡಿದ್ದರು.



> ಸಾರ್ವಜನಿಕ ಸೇವೆಯಲ್ಲಿರುವ ಸರ್ಕಾರಿ ನೌಕರರ ಹಿತರಕ್ಷಣೆಗೆ ಸಂಘವು ಉತ್ತಮ ಕೆಲಸ ಮಾಡುತ್ತಿದೆ. ಎಲ್ಲಾ ಇಲಾಖೆಗಳ ಅಧಿಕಾರಿ, ನೌಕರರು ಒಗ್ಗಟ್ಟಾಗಿರುವುದು ಸಂತಸ ತಂದಿದೆ. ಲೋಕೋಪಯೋಗಿ ಇಲಾಖೆಯಲ್ಲಾದ ಘಟನೆ ಹಾಗೂ ಇತ್ತೀಚೆಗೆ ಹಾನಗಲ್‌ನಲ್ಲಿ ನಡೆದ ಘಟನೆ ನಿಜಕ್ಕೂ ಕ್ಷಮಿಸಲಾರದ ಕೃತ್ಯ. ಈ ಬಗ್ಗೆ ಅಗತ್ಯಕ್ರಮ ಕೈಗೊಂಡು, ಸರ್ಕಾರಕ್ಕೆ ವರದಿ ಸಲ್ಲಿಸಲಾಗುತ್ತದೆ.
>
> ■ ಡಾ.ವಿಜಯಮಹಾಂತೇಶ ದಾನಮ್ಮನವರ, ಜಿಲ್ಲಾಧಿಕಾರಿ

> ವಿವಿಧ ಸ್ವಯಂ ಘೋಷಿತ ಸಂಘಟನೆಗಳನ್ನು ಸೃಷ್ಟಿಸಿಕೊಂಡು ಅಧಿಕಾರಿಗಳ ಮೇಲೆ ದೌರ್ಜನ್ಯ ನಡೆಸಿ ತೊಂದರೆ ಕೊಡುವವರಿಗೆ ಜಿಲ್ಲಾಡಳಿತ, ಪೊಲೀಸ್ ಇಲಾಖೆ ತಕ್ಕಪಾಠ ಕಲಿಸಬೇಕು. ಇನ್ನುಮುಂದೆ ಇಂತಹ ಘಟನೆಗಳು ನಡೆದರೆ ಅಂತಹ ಆರೋಪಿಗಳನ್ನು ಬಂಧಿಸಿ, ಜಾಮೀನು ಮಂಜೂರು ಮಾಡದೇ ಗಡಿಪಾರು ಮಾಡಬೇಕು.
>
> ■ ಮಲ್ಲೇಶ ಕರಿಗಾರ, ಅಧ್ಯಕ್ಷರು, ಸರಕಾರಿ ನೌಕರರ ಸಂಘ, ಹಾವೇರಿ.

ಇಯರ್ ಫೋನ್ ಬಳಕೆ ಕಡಿಮೆಗೊಳಿಸಿ

ಬ್ಯಾಡಗಿ: ಕಿವಿ ಸೂಕ್ಷ್ಮ ಅಂಗವೆನಿಸಿದ್ದು ವಿದ್ಯಾರ್ಥಿಗಳು ಫೋನ್ ಬಳಕೆಯನ್ನು ಆದಷ್ಟು ಕಡಿಮೆ ಮಾಡುವುದು ಒಳಿತು. ತಿರಾ ಆಗತ್ಯ ಎನಿಸಿದ್ದಲ್ಲಿ ಬಳಸಿದರು ಸೌಂಡ್ ವ್ಯಾಲ್ಯೂ ಕಡಿಮೆ ಇಟ್ಟು ಬಳಸಿ ಎಂದು ತಾಲೂಕು ಆರೋಗ್ಯಾಧಿಕಾರಿ ಡಾ. ಕಾಂತೇಶ್ ಭಜಂತ್ರಿ ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಪಟ್ಟಣದ ಶ್ರೀ ರೇವಣಸಿದ್ದೇಶ್ವರ ಐಟಿಐ ಕಾಲೇಜಿನಲ್ಲಿ ಜಿಲ್ಲಾಡಳಿತ ಜಿಲ್ಲಾ ಪಂಚಾಯತಿ ಹಾವೇರಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ತಾಲೂಕು ಆರೋಗ್ಯ ಅಧಿಕಾರಿಗಳು ಸಾರ್ವಜನಿಕ ಆಸ್ಪತ್ರೆ ಬ್ಯಾಡಗಿ ಸಹಯೋಗದಲ್ಲಿ ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ ರಾಷ್ಟ್ರೀಯ ಶ್ರವಣದೋಷ ನಿಯಂತ್ರಣ ಮತ್ತು ನಿವಾರಣ ಕಾರ್ಯಕ್ರಮದ ವಿಶ್ವ ಶ್ರವಣ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಹುಟ್ಟಿದ ಮಕ್ಕಳಿಂದ ಹಿಡಿದು ವಯಸ್ಸಾದವರ ಕೂಡ ಇಯರ್ ಫೋನ್ ಬಳಸುತ್ತಿರುವುದು ವಿಷಾದನೀಯ. ಇಯರ್ ಫೋನ್ ಬಳಕೆಯಿಂದ ಶ್ರವಣ ದೋಷಗಳು ಉಂಟಾಗುತ್ತವೆ. ಯಾವುದೇ ಶ್ರವಣ ದೋಷಗಳನ್ನುಎಲ್ಲವನ್ನು ನಿರ್ಲಕ್ಷಿಸದೆ ತಜ್ಞವೈದ್ಯರನ್ನು ಕಂಡು ಶ್ರವಣ ದೋಷಗಳಿಗೆ ಪರಿಹಾರ ಕೊಂಡುಕೊಳ್ಳಿ ಎಂದು ಸಲಹೆ ನೀಡಿದರು.

ಸಾರ್ವಜನಿಕ ಆಸ್ಪತ್ರೆಯ ಕಿವಿ ಮೂಗು ಶ್ರವಣ ತಜ್ಞೆ ಡಾ. ಸುನೀಲ ಮಾತನಾಡಿ, ಹುಟ್ಟಿದ ಎಲ್ಲಾ ಮಕ್ಕಳಿಗೂ ಶ್ರವಣ ಪರೀಕ್ಷೆ ಮಾಡಬೇಕು. ಶ್ರವಣ ಬಗ್ಗೆ ಹೆಚ್ಚಿನ ಕಾಳಜಿ ವಹಿಸಬೇಕು. ಮಗು ಸರಿಯಾಗಿ ಮಾತನಾಡ ಬೇಕೆಂದರೆ ಮಗುವಿಗೆ ಕೇಳುವಿಕೆ ತುಂಬಾ ಮುಖ್ಯ. ಮಕ್ಕಳು ಕಿವಿಗೆ ಕಡ್ಡಿ ಅಥವಾ ಚೂಪಾದ ವಸ್ತುವನ್ನು ಹಾಕದಂತೆ ಪೋಷಕರು ಕಾಳಜಿ ವಹಿಸಬೇಕು. ಕಿವಿಯಲ್ಲಿ ಸಹಜ ಸ್ವಚ್ಛಗೊಳಿಸುವ ಕಾರ್ಯ ವಿಧಾನವಿರುವುದರಿಂದ ಕಡ್ಡಿಯಿಂದ ಕಿವಿಯನ್ನು ಸ್ವಚ್ಛ ಮಾಡಬಾರದು. ಕಿವಿನೋವು, ಕಿವಿಯಲ್ಲಿ ಕೀವು, ತುರಿಕೆ ಇದ್ದಲ್ಲಿ ತಕ್ಷಣವೇ ಕಿವಿ ಮೂಗು ಗಂಟಲು ವೈದ್ಯರನ್ನು ಸಂಪರ್ಕಿಸಿ, ಸೂಕ್ತ ಚಿಕಿತ್ಸೆ ಪಡೆದುಕೊಳ್ಳಬೇಕು ಎಂದರು.

ಕಾಲೇಜಿನ ಪ್ರಾಂಶುಪಾಲ ಎನ್.ಡಿ. ಛತ್ರದ, ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಮಮತಾ ವಿ., ಆರೋಗ್ಯ ಇಲಾಖೆ ಸುಪರ್ವೈಸರ್ ಪ್ರಶಾಂತ್ ನವಲೆ, ಎಂ.ಎಸ್. ಆಗಡಿ. ಹಾಗೂ ಐಟಿಐ ಕಾಲೇಜಿನ ಸಹ ಶಿಕ್ಷಕರು, ಸಿಬ್ಬಂದಿ, ತಾಲೂಕ ಆರೋಗ್ಯ ಇಲಾಖೆಯ ಕಚೇರಿಯ ಸಿಬ್ಬಂದಿ ಉಪಸ್ಥಿತರಿದ್ದರು.



ಪ್ರತಿ ಕಾರ್ಯದಲ್ಲಿ ಶ್ರದ್ಧೆ, ಜ್ಞಾನ ಅಗತ್ಯ

ಹಾವೇರಿ: ಪ್ರತಿಕಾರ್ಯದಲ್ಲಿ ಪೂರ್ಣಫಲ ಸಿಗಲು ಶ್ರದ್ಧೆ ಮತ್ತು ಜ್ಞಾನ ಅಗತ್ಯ. ಪ್ರತಿ ಕಾರ್ಯದ ಸಫಲತೆಗೆ ಅದರ ಆಳವಾದ ಜ್ಞಾನ ಬೇಕು. ಅದಕ್ಕಾಗಿ ಶ್ರೀ ಕೃಷ್ಣಪರಮಾತ್ಮ ಕೂಡ ಜ್ಞಾನಕ್ಕೆ ಹೆಚ್ಚು ಒತ್ತು ಕೊಟ್ಟಿದ್ದಾನೆ ಎಂದು ಕೊಪ್ಪಳದ ಪಂಡಿತ ಪ್ರಮೋದಾಚಾರ ಪೂಜಾರ ಹೇಳಿದರು.



ತಾಲೂಕಿನ ಹಾವನೂರ ಗ್ರಾಮದ ವಾದಿರಾಜ ಮೃತ್ತಿಕಾ ವೃಂದಾವನ ಮಠದಲ್ಲಿ ವಾದಿರಾಜ ಯತಿವರೇಣ್ಯರ ಆರಾಧನಾ ಮಹೋತ್ಸವದ ಮೊದಲ ದಿನ ಗುರುವಾರ ಪೂರ್ವಾರಾಧನೆಯ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಶ್ರೀ ವಾದಿರಾಜರ ಕೃತಿಗಳ ಚಿಂತನೆ ಕುರಿತು ಉಪನ್ಯಾಸ ನೀಡಿದರು.

ವಾದಿರಾಜರಎಲ್ಲಾಕಾರ್ಯಮಹಿಮೆಗಳು ಅದ್ಭುತವಾಗಿವೆ. ವಾದಿರಾಜರು ಹೆಚ್ಚಿನ ಆಯುಷ್ಯ ಪಡೆದವರು, 100 ವರ್ಷಗಳ ಕಾಲ ಬದುಕುವುದು ಅಪರೂಪ, ಆದರೆ 100 ವರ್ಷಗಳನ್ನು ಅದರಲ್ಲೂ ಹಾಸಿಗೆ ಮೇಲೆ ಕಳೆದರೆ ಅದಕ್ಕೆ ಅರ್ಥವೇನು. ಸದಾಚೇತನ ಪುರುಷರಾಗಿ ವಾದಿರಾಜರು ದೇಶದ ಎಲ್ಲಾ ನಾಲ್ಕು ದಿಕ್ಕನ್ನು ಸಂಚರಿಸಿ ಧರ್ಮ ಪ್ರಚಾರ, ಪ್ರಸರಣ ನಡೆಸಿ ಜ್ಞಾನ ಹಂಚಿದರು. ಕಠಿಣವಾದ, ಸಾಹಿತ್ಯಪೂರ್ಣ 5000 ಶ್ಲೋಕಗಳನ್ನು ರಚಿಸಿ ಕೊಟ್ಟಿದ್ದಾರೆ. ಅವುಗಳು ಇಂದಿಗೂ ನಮಗೆ ದಾರಿದೀಪವಾಗಿವೆ ಎಂದು ಸ್ಮರಿಸಿದರು.

ಇನ್ನೊಂದು ಅಪರೂಪದ ಗ್ರಂಥ ಗುಂಡಕ್ರಿಯಾ ಕೃತಿ. ಎಲ್ಲಾತರಹದ ರಾಗಗಳ ಪರಿಚಯವನ್ನು ಅದರಲ್ಲಿ ನೀಡಿದ್ದಾರೆ. ಕೃಷ್ಣ ಪರಮಾತ್ಮನಜನಪ್ರಿಯರಾಗಗಳನ್ನು ಇದರಲ್ಲಿ ಪರಿಚಯಿಸಿದರು. ಆಗ ಚಾಲನೆಯಲ್ಲಿದ್ದ 21 ಮತಗಳಲ್ಲಿ 22ನೇ ಮತವಾಗಿ ಉದಯಿಸಿದ ಮಧ್ವಮತವನ್ನು ಏಕೆ ಒಪ್ಪಿ ಕೊಳ್ಳಬೇಕು. ಯಾಕೆ ಮಾಧ್ವ ಮತ ಶ್ರೇಷ್ಠ ಎಂಬುದರ ಸಂಶೋಧನೆ ನಡೆಸಿ ಅರ್ಥ ಸಮೇತ ನಮಗೆ ನೀಡಿದ್ದಾರೆ. ಯಾವುದೇ ವಿಷಯ ತಿಳಿಯಲು ಮೊದಲು ವೈರಾಗ್ಯ ಬರಬೇಕು. ತತ್ವಜ್ಞಾನ ತಿಳಿಯಲು ವೈರಾಗ್ಯ ಅಗತ್ಯ ನಮಗೆ ಕನಸೇ ಹೆಚ್ಚು ಅದನ್ನು ನನಸಾಗಿಸಲು ಪ್ರಯತ್ನ ಹೇಗಿರಬೇಕೆಂಬುದನ್ನು ಅವರು ತಿಳಿಸಿ ಕೊಟ್ಟಿದ್ದಾರೆ.

ಮಧ್ಯಾಹ್ನ ರಥೋತ್ಸವ,ಮಹಾನೈವೇದ್ಯ, ಹಸ್ತೋದಕ ತೀರ್ಥಪ್ರಸಾದ ನಡೆದವು. ಸಂಜೆ ಕೊಪ್ಪಳದ ಸಮೀರಾಚಾರ್ಯ ಬಂಡಿಹಾಳ ಹಾಗೂ ಸಂಗಡಿಗರಿಂದ ದಾಸವಾಣಿ ನಡೆಯಿತು. ಈ ವೇಳೆ ಪುರುಷೋತ್ತಮಾಚಾರ್ಯ ಗಲಗಲಿ, ಮತ್ತು ಕುಟುಂಬ ವರ್ಗ, ಕೃಷ್ಣಮೂರ್ತಿ ಗಂಗೂರ, ಅಜಿತ ಗೋಠೆ, ಧೃವರಾಜ ಅಣ್ಣೀಗೇರಿ, ಧೀರೇಂದ್ರ ಕುಲಕರ್ಣಿ, ಆದಿತ್ಯ ಕುಲಕರ್ಣಿ, ರಕ್ಷಕ ಮತ್ತಿತರರು ಇದ್ದರು.

ಕಸ ವಿಂಗಡಣೆ ಕೊರತೆ: ರೋಗ ಹಡುವಿಕೆಯ ಆತಂಕ

ರಟ್ಟೀಹಳ್ಳಿ: ಕಸದ ವಿಲೇವಾರಿ, ಅಸಮರ್ಪಕ ನಿರ್ವಹಣೆ ಮತ್ತು ಹೆಚ್ಚುತ್ತಿರುವ ತ್ಯಾಜ್ಯ ಉತ್ಪಾದನೆಯು ಪರಿಸರ, ಆರೋಗ್ಯ ಮತ್ತು ನಗರ ಸೌಂದರ್ಯದ ಮೇಲೆ ಗಂಭೀರ ಪರಿಣಾಮ ಬೀರುತ್ತಿದೆ. ಪ್ಲಾಸ್ಟಿಕ್ ಮಾಲಿನ್ಯ ರೋಗಗಳ ಹರಡುವಿಕೆ, ಪ್ರಾಣಿಗಳಿಗೆ ಅಪಾಯ, ದುರ್ವಾಸನೆ ಪ್ರಮುಖ ಸಮಸ್ಯೆಗಳಾಗಿವೆ. ಹಸಿ ಮತ್ತು ಒಣ ಕಸದ ವಿಂಗಡಣೆ ಕೊರತೆ, ಅಕ್ರಮ ಡಂಪಿಂಗ್ನಿಂದಾಗಿ ನಗರ, ಗ್ರಾಮೀಣ ಪ್ರದೇಶಗಳಲ್ಲಿ ಪರಿಸರದ ಸಮತೋಲನ ಕೆಡುತ್ತಿದೆ ಎಂದು ಲಯನ್ಸ್ ಪ್ರಾಥಮಿಕ ಮತ್ತು ಪ್ರೌಢಶಾಲೆಯ ಮುಖ್ಯೋಪಾಧ್ಯಾಯ ವಿಜಯ ಬುಳ್ಳಾಪುರ ಹೇಳಿದರು.



ಪಟ್ಟಣದ ಲಯನ್ಸ್ ಶಾಲೆಯಲ್ಲಿ ಜರುಗಿದ ಸ್ವಚ್ಛ ಭಾರತ 2.0.ಕಾರ್ಯಕ್ರಮದ ಅಂಗವಾಗಿ ಮಕ್ಕಳು, ಪಾಲಕರಿಗಾಗಿ ಹಮ್ಮಿಕೊಂಡಿದ್ದ ಕಸ ವಿಲೇವಾರಿ, ಪರಿಹಾರೋಪಾಯಗಳು ಕಾರ್ಯಕ್ರಮದಲ್ಲಿ ಮಾತನಾಡಿ, ಕೊಳೆಯುವ ಕಸದಿಂದಕಾಲರ, ಟೈಫಾಯಿಡ್‌ನಂತಹ ಕಾಯಿಲೆಗಳು ಹೆಚ್ಚಾಗುತ್ತವೆ. ಪ್ಲಾಸ್ಟಿಕ್ ಮತ್ತು ಇತರ ತ್ಯಾಜ್ಯಗಳು ಮಣ್ಣು, ನೀರು, ಗಾಳಿಯನ್ನು ಕಲುಷಿತಗೊಳಿಸುತ್ತವೆ. ಹಸಿ ಮತ್ತು ಒಣ ಕಸ ಬೇರ್ಪಡಿಸದೆ ಎಲ್ಲೆಂದಂರಲ್ಲಿ ಕಸ ಬಿಸಾಡುವುದು ದೊಡ್ಡ ಸಮಸ್ಯೆಯಾಗಿದೆ ಎಂದರು. ರಸ್ತೆ ಬದಿಗಳಲ್ಲಿ ಕಸವನ್ನು ರಾಶಿ ಹಾಕುವುದರಿಂದ ಹಳ್ಳಿ, ಪಟ್ಟಣ, ನಗರದ ಸೌಂದರ್ಯ ಹಾಳಾಗುತ್ತದೆ. ಎಲ್ಲೆಂದರಲ್ಲಿ ಕಸ ಎಸೆಯುವವರಿಗೆ ದಂಡ ವಿಧಿಸುವುದು ಅನಿವಾರ್ಯವಾಗಿದೆ. ಪರಿಸರ ರಕ್ಷಣೆಯಲ್ಲಿ ಎಲ್ಲರ ಪಾತ್ರ ಮುಖ್ಯವಾಗಿದೆ. ಸಾರ್ವನಿಕರಲ್ಲಿ ಸ್ವಚ್ಛತೆ ಮತ್ತು ಕಸದ ಬಗ್ಗೆ ಜಾಗೃತಿ ಮೂಡಿಸುವುದು ಅವಶ್ಯವಾಗಿದೆ. ಮರುಬಳಕೆ ಮತ್ತು ಪುನರ್ಬಳಕೆ ಕ್ರಮಗಳನ್ನು ಅಳವಡಿಸಿಕೊಳ್ಳುವುದು ಕಸದ ಸಮಸ್ಯೆಗೆ ಶಾಶ್ವತ ಪರಿಹಾರವಾಗಿದೆ ಎಂದರು. ವಿ.ಎಸ್,ಆರ್ಕಾಚಾರಿ, ಕೆ.ವೈ.ಬಾಜೀರಾಯರ, ಸಿ.ಎಸ್.ಪೂಜಾರ, ಪಪಂ ಸಮುದಾಯ ಸಂಘಟನಾಧಿಕಾರಿ ಗದಿಗೇಶ ಶಿರಸಿ, ಗಂಗಮ್ಮ ಬೆನ್ನೂರ, ವಿಜಯಲಕ್ಷ್ಮೀಕವಲಿ ಇದ್ದರು.

ಪವಿತ್ರ ಸ್ಥಳಗಳ ಅಭಿವೃದ್ಧಿ, ಪ್ರವಾಸಿ ತಾಣಕ್ಕೆ ಆದ್ಯತೆ: ಪಠಾಣ್

ಶಿಗ್ಗಾವಿ: ಶಿಗ್ಗಾವಿ–ಸವಣೂರ ಮತಕ್ಷೇತ್ರದಲ್ಲಿನ ಎಲ್ಲ ಪವಿತ್ರ ಸ್ಥಳಗಳನ್ನು ಅಭಿವೃದ್ಧಿ ಪಡಿಸಿ ಪ್ರವಾಸಿ ತಾಣಗಳನ್ನಾಗಿಸುವ ಮಹದಾಸೆ ನನ್ನದಾಗಿದೆ ಎಂದು ಶಾಸಕ ಯಾಸೀರ ಅಹ್ಮದಖಾನ ಪಠಾಣ ಹೇಳಿದರು.

ಶಿಗ್ಗಾವಿ ತಾಲೂಕಿನ ಬಂಕಾಪುರ ಮತ್ತು ಮಣ್ಣೂರ ಗ್ರಾಮಗಳ ಸರಹದ್ದಿನಲ್ಲಿರುವ ಆದಿ ಜಗದ್ಗುರು ರೇವಣಸಿದ್ಧೇಶ್ವರ ಜಾತ್ರಾ ಮಹೋತ್ಸವದ ಅಂಗವಾಗಿ ಇತ್ತೀಚೆಗೆ ನಡೆದಧರ್ಮ ಸಭೆಯಲ್ಲಿ ಮಾತನಾಡಿ, ಸಾಮಾನ್ಯವಾಗಿ ನೀರಿನಿಂದ ದೇವಸ್ಥಾನಗಳ ಕಟ್ಟಡ ನಿರ್ಮಾಣ ಮಾಡುವುದನ್ನು ನೋಡಿದ್ದೇವೆ. ಆದರೆ, ಈ ದೇವಸ್ಥಾನದ ಕಟ್ಟಡವನ್ನು ನೀರಿನ ಬದಲಾಗಿಕುರಿ ಹಾಲಿನಿಂದ ನಿರ್ಮಿಸಿದ್ದಾರೆ. ಇದು ಅದ್ಭುತ. ಇಂತಹ ಕಟ್ಟಡ ರಾಜ್ಯ ಮಾತ್ರವಲ್ಲ ದೇಶಕ್ಕೆ ಗೊತ್ತು ಮಾಡುವಂತಹ ಕೆಲಸ ನಾವು ನಿವೆಲ್ಲರೂ ಮಾಡಬೇಕು. ನಾನು ಕನಕದಾಸರ ಆಲೆದಾಡಿದ ಗುಡ್ಡದ ಚನ್ನಾಪುರದಲ್ಲಿ ಸುಮಾರು 17 ಕೋಟಿ ರೂ.ಅನುದಾನದಲ್ಲಿ ಆಧಿಕೇಶವ ಮತ್ತುಚನ್ನಕೇಶವ ದೇವಸ್ಥಾನ ನಿರ್ಮಾಣ ಮಾಡುತ್ತಿದ್ದೇವೆ. ಬಂಕಾಪುರ ದುರ್ಗಾದೇವಿ ದೇವಸ್ಥಾನಕ್ಕೆ 2.60 ಕೋಟಿರೂ. ಅನುದಾನದಲ್ಲಿ ದೊಡ್ಡ ದೇವಸ್ಥಾನ ಕಟ್ಟುತ್ತಿದ್ದೇವೆ. ನನ್ನ ಮುಂದಿನ ಗುರಿ ಈ ಪವಿತ್ರ ಸ್ಥಳವನ್ನು ಅಭಿವೃದ್ಧಿ ಪಡಿಸುವುದಾಗಿದೆ. ಇದಕ್ಕಾಗಿ ಭೂ ಮಾಲೀಕರ ಮನವಲಿಸಿ ಜಾಗಕೊಡಿಸುವ ಪ್ರಯತ್ನ ಮಾಡುತ್ತೇನೆ ಎಂದರು.



ಮಾಜಿ ಜಿ.ಪಂ ಸದಸ್ಯ ರಮೇಶ ದುಗ್ಗತ್ತಿ, ಕೆ.ಸಿ.ಸಿ ಬ್ಯಾಂಕ್ ಮಾಜಿ ಉಪಾಧ್ಯಕ್ಷ ಶೇಖರಗೌಡ ಪಾಟೀಲ ಮಾತನಾಡಿದರು. ವಿಠ್ಠಲ ಬನ್ನೆ, ಶಿಗ್ಗಾವಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಗುಡ್ಡಪ್ಪ ಜಲದಿ, ಗ್ರಾಪಂ ಸದಸ್ಯೆ ಪ್ರೇಮಾ ನಂದೀಶಗೌಡ ಪಾಟೀಲ, ಮಲ್ಲನಗೌಡ್ರ ಪಾಟೀಲ, ಪ್ರಕಾಶಗೌಡ್ರ ಪಾಟೀಲ, ಮಾಳಪ್ಪ ಗಡ್ಡೆ, ಮಂಜಪ್ಪ ಹಿರವೆ, ಅಜೀತ ಹಿರೇಕುರಬರ, ಮಂಜಪ್ಪ ಸೂರಣ್ಣವರ ಉಪಸ್ಥಿತರಿದ್ದರು. ನಂದೀಶಗೌಡ ಪಾಟೀಲ ಕಾರ್ಯಕ್ರಮ ನಿರ್ವಹಿಸಿದರು.

ಮಾ.8ರಂದು ಹಿಂದೂ ಸಮ್ಮೇಳನ: ಮಂಜುನಾಥ ಮಣೇಗಾರ

ರಾಣೇಬೆನ್ನೂರು: ರಾಷ್ಟ್ರೀಯ ಸ್ವಯಂ ಸೇವಾ ಸಂಘದ ಶತಮಾನೋತ್ಸವ ಅಂಗವಾಗಿ ನಗರದ ಹಿಂದೂ ಸಮ್ಮೇಳನ ಸಮಿತಿಯಿಂದ ಮಾ.8ರಂದು ಹಿಂದೂ ಸಮ್ಮೇಳನ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಸಮ್ಮೇಳನ ಸಮಿತಿ ಅಧ್ಯಕ್ಷ ಮಂಜುನಾಥ ಮಣೇಗಾರ ಹೇಳಿದರು.

ನಗರದ ಹಳೇ ಮಾಗೋಡ ರಸ್ತೆಯ ಶ್ರೀ ಅಯ್ಯಪ್ಪ ಸ್ವಾಮಿ ದೇವಸ್ಥಾನದ ಆವರಣದಲ್ಲಿ ಗುರುವಾರ ಸಮ್ಮೇಳನದ ಕರಪತ್ರಗಳನ್ನು ಬಿಡುಗಡೆಗೊಳಿಸಿ ಮಾತನಾಡಿ, ಸಮ್ಮೇಳನದ ಪ್ರಯುಕ್ತ ನಗರದ ಕೆಇಬಿ ಗಣೇಶ ದೇವಸ್ಥಾನದಿಂದ ಮಧ್ಯಾಹ್ನ 4ಕ್ಕೆ ಹೊರಡುವ ಶೋಭಾಯಾತ್ರೆಯು ಪಿ.ಬಿ.ರಸ್ತೆ, ಬಸ್ ನಿಲ್ದಾಣ, ಹಲಗೇರಿ ಕ್ರಾಸ್, ಕುರುಬಗೇರಿ ಕ್ರಾಸ್ ಮುಖಾಂತರ ಸಮ್ಮೇಳನ ಆಯೋಜಿಸಿರುವ ಹವಾಲ್ದಾರ ಹೊಂಡದ ಎದುರಿನ ವಾಲಿಯವರ ಜಾಗಕ್ಕೆ ಬಂದು ಸೇರಲಿದೆ. ನಂತರ ಸಂಜೆ 6ಕ್ಕೆ ಹಿಂದೂ ಸಮ್ಮೇಳನದ ಬಹಿರಂಗ ಸಭೆ ಜರುಗಲಿದ್ದು ಗದಗಶ್ರೀಶಿವಾನಂದ ಬೃಹನ್ಮಠದ ಜಗದ್ಗುರು ಸದಾಶಿವಾನಂದ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಹಿಂದೂ ಜಾಗರಣ ವೇದಿಕೆಯ ಕ್ಷೇತ್ರಿಯ ಸಂಯೋಜಕ ಜಗದೀಶ ಕಾರಂತ ದಿಕ್ಸೂಚಿ ಭಾಷಣ ಮಾಡಲಿದ್ದಾರೆ ಎಂದರು.

ಬೈಕ್ ರ್ಯಾಲಿ: ಕಾರ್ಯಕ್ರಮದ ಅಂಗವಾಗಿ ಮಾ.7ರಂದು ಬೆಳಗ್ಗೆ 10ಕ್ಕೆ ಇಲ್ಲಿಯ ಮಾರುತಿ ನಗರದ ತುಂಗಾಜಲ ಶ್ರೀ ಚೌಡೇಶ್ವರಿ ದೇವಸ್ಥಾನದ ಬಳಿಯಿಂದ ಬೈಕ್ ರ್ಯಾಲಿ ಹೊರಡಲಿದ್ದು ಮಾರುತಿ ದೇವಸ್ಥಾನ, ಸಿದ್ದೇಶ್ವರ ದೇವಸ್ಥಾನ, ದೊಡ್ಡಕಲ್ಲು, ಕುರುಬಗೇರಿ, ಸೊಪ್ಪಿನ ಪೇಟೆ, ಒಳ ಬೀರಲಿಂಗೇಶ್ವರ ದೇವಸ್ಥಾನ, ಕಂಬಳಿ ಕುಬೇರಪ್ಪ ಮನೆ ರಸ್ತೆ, ಹಳೇ ಅಂತರವಳ್ಳಿ ರಸ್ತೆ, ಗೌರಿಶಂಕರ ದೇವಸ್ಥಾನ, ಹಳೇ ಮಾಗೋಡ ರಸ್ತೆ, ಪ್ಲೇಯರ್ಸ್ ಪಾರ್ಕ್ ಕ್ರಿಕೆಟ್ ಗ್ರೌಂಡ್, ಸಾಯಿಬಾಬಾ ದೇವಸ್ಥಾನ, ಹಳೇ ಪಿ.ಬಿ.ರಸ್ತೆ, ಬಸ್ ನಿಲ್ದಾಣ, ಹಲಗೇರಿ ಕ್ರಾಸ್, ಕುರುಬಗೇರಿ ಕ್ರಾಸ್ ಮಾರ್ಗವಾಗಿ ವಾಲಿಯವರ ಜಾಗಕ್ಕೆ ಬಂದು ಸೇರಲಿದೆ ಎಂದರು.



ಸಮ್ಮೇಳನದ ಸಮಿತಿಯ ಉಪಾಧ್ಯಕ್ಷ ರಾಜು ರೇವಣಕರ್, ಕಾರ್ಯದರ್ಶಿ ಗಿರೀಶ ಮಜ್ಜಗಿ, ಸಹ ಕಾರ್ಯದರ್ಶಿ ಸಂದೀಪ ಕುರಡೇಕರ, ಪ್ರದೀಪ ಮಜ್ಜಗಿ, ಖಜಾಂಚಿ ವಿನಾಯಕ ಜೋಶಿ, ಕೆ.ಶಿವಲಿಂಗಪ್ಪ, ವಂದೇ ಮಾತರಂ ಸೇವಾ ಸಂಸ್ಥೆ ಅಧ್ಯಕ್ಷ ಪ್ರಕಾಶ ಬುರಡಿಕಟ್ಟಿ, ರಾಷ್ಟ್ರೀಯ ಸ್ವಯಂ ಸೇವಕ ಸಂಘದ ನಗರ ಸಂಚಾಲಕ ಯುವರಾಜ ಬ್ಯಾಡಗಿ, ಮಂಜುಳಾ ಹತ್ತಿ, ಗಂಗಮ್ಮ ಹಾವನೂರ, ಭಜರಂಗದಳದ ಸಹ ಸಂಚಾಲಕ ವಿನಯಗೌಡ್ರ ಬಾಳನಗೌಡ್ರ, ಸೇರಿದಂತೆ ಮತ್ತಿತರರು ಇದ್ದರು.

ಪ್ರತಿಯೊಬ್ಬರೂ ಸೌಹಾರ್ದತೆಯಿಂದ ಬದುಕಿ: ಮೆಳ್ಳಾಗಟ್ಟಿ

ಶಿಗ್ಗಾವಿ: ಅಸಹನೆ, ಅಸಹಕಾರ, ಜಾತಿಭೇದ, ಮೂಢ ನಂಬಿಕೆಗಳನ್ನ ತೊಡದು ಹಾಕಲು ಇಂತಹ ಶರಣ ಸಂಸ್ಕೃತಿ ಉತ್ಸವ ಕಾರ್ಯಕ್ರಮಗಳು ಸಹಕಾರಿಯಾಗುತ್ತವೆ ಎಂದು ಗಂಗೀಬಾವಿ ಕೆ.ಎಸ್.ಆರ್.ಪಿ 10ನೇ ಪಡೆಯ ಕಮಾಂಡೆಂಟ್ ಎನ್.ಬಿ. ಮೆಳ್ಳಾಗಟ್ಟಿ ಹೇಳಿದರು.

ಪಟ್ಟಣದ ವಿರಕ್ತಮಠದಲ್ಲಿ ನಡೆಯುತ್ತಿರುವ 33ನೇ ಶರಣ ಸಂಸ್ಕೃತಿ ಉತ್ಸವ ಕಾರ್ಯಕ್ರಮದಲ್ಲಿ ಮಾತನಾಡಿ, ದೇಶದಲ್ಲಿ ಸೌಹಾರ್ದತೆ ನೆಲೆಸಬೇಕಾದರೆ ಎಲ್ಲರೂ ಹೃದಯವಂತರಾಗಿ ಬದುಕಬೇಕು 12ನೇ ಶತಮಾನದಲ್ಲಿ ಅನೇಕ ಮೌಢ್ಯಗಳು ಇದ್ದವು, ಸಮಾಜದಲ್ಲಿರುವ ಅನೇಕ ಅಸಮಾನತೆಗಳನ್ನು ಹೋಗಲಾಡಿಸುವಲ್ಲಿ ಬಸವಣ್ಣನವರಿಂದ ಕಲ್ಯಾಣ ಕ್ರಾಂತಿ ಪ್ರಾರಂಭವಾಯಿತು. ವಿಶ್ವದ ಮೊದಲ ಸಂಸತ್ತು ರಚನೆಯಾಗಿದ್ದು ಕರ್ನಾಟಕದ ಅನುಭವ ಮಂಟಪದಲ್ಲಿ, ನಂತರ ಶರಣ ಸಂಸ್ಕೃತಿ ಬೆಳೆದು ಬಂದಿತು. ಶರಣ ಪರಂಪರೆ ಶ್ರೇಷ್ಠ ಪರಂಪರೆ ಏಕೆಂದರೆ ಸಂಸ್ಕಾರ, ಶಿಕ್ಷಣ, ದಾಸೋಹ, ಸಂಸ್ಕೃತಿ ಪ್ರಮುಖವಾಗಿದೆ ಎಂದರು.



ಸದ್ಗುರು ಸಮರ್ಥ ಡಾ. ಎ ಸಿ ವಾಲಿ ಮಹಾರಾಜರು ಸದಮಲ ಜ್ಞಾನ ಕುರಿತು ಪ್ರವಚನ ನೀಡಿ ಮಾತನಾಡಿ, ಓಂ ನಮ: ಶಿವಾಯ ಎಂಬ ಪದದಲ್ಲಿ ಸದಮಲ ಜ್ಞಾನವಿದೆ ಇದರಿಂದ 18ನೇ ಶತಮಾನದಲ್ಲಿ ಇಡಿ ವಿಶ್ವದಲ್ಲಿ ಕ್ರಾಂತಿಯಾಯಿತು. ಜ್ಞಾನ ಬಹಳಷ್ಟು ಮುಖ್ಯ ಆ ಜ್ಞಾನವಿದ್ದಾಗ ಎಲ್ಲರೂ ತಲೆ ಭಾಗುತ್ತಾರೆ, ಬರಕೋಬೇಕು. ಕಲಕೋಬೇಕು. ನಡಕೋಬೇಕು ನಂತರ ಪಡೋಕಬೇಕು ಎಂದು ಮಾರ್ಮಿಕವಾಗಿ ನುಡಿದರು.

ವಿರಕ್ತಮಠದ ಸಂಗನಬಸವ ಶ್ರೀಗಳು, ಬಸವಲಿಂಗ ದೇವರು ಆರ್ಶೀವದಿಸಿದರು.

ಸಂಗೀತ ಸೇವೆಯನ್ನ ಶಿದ್ದಲಿಂಗಪ್ಪ ನರೇಗಲ್, ತಬಲಾ ಸಾತ್‌ನ ಬಸವರಾಜ ವಂದಲಿ, ತತ್ವಪದ ಸೇವೆಯನ್ನ ಬಸವರಾಜ ಶಿಗ್ಗಾವಿ, ಹೇಮಂತ ಭಜಂತ್ರಿ, ಪಕ್ಕಿರೇಶ ಕೊಂಡಾಯಿ, ಪ್ರೋ ಶರೀಫ ಮಾಕಪ್ಪನವರ ನೇರವೇರಿಸಿದರು.

ಈ ಸಂದರ್ಭದಲ್ಲಿ ಹನುಮರಹಳ್ಳಿ ಗ್ರಾಪಂ ಅಧ್ಯಕ್ಷ ಶೇಖಣ್ಣ ನೀರಲಗಿ, ಹಡಪದ ಸಮಾಜ ತಾಲೂಕ ಅಧ್ಯಕ್ಷ ಮಂಜುನಾಥ ಕ್ಷೌರದ, ಪತ್ರಕರ್ತರಾದ ಸುಧಾಕರ ದೈವಜ್ಞ, ಬಸವರಾಜ ಹಡಪದ ಸೇರಿದಂತೆ ಭಕ್ತ ಸಮೂಹ ಉಪಸ್ಥಿತರಿದ್ದರು. ಶಿಕ್ಷಕ ಮಹಾಂತೇಶ ನಾಯ್ಕೋಡಿ ಕಾರ್ಯಕ್ರಮ ನಿರ್ವಹಿಸಿದರು.

ಕಿರುಸುದ್ದಿ

ಪಿಎಚ್‌ಡಿ ಪ್ರದಾನ



◆**ಬೆಳಗಾವಿ :** ಇಲ್ಲಿನ ರಾಣಿ ಚನ್ನಮ್ಮ ವಿಶ್ವವಿದ್ಯಾಲಯವು ಮಹಾಲಿಂಗೇಶ್ವರ ಹಿರೇಮಠ ಅವರು ಭೌತಶಾಸ್ತ್ರ ವಿಭಾಗಕ್ಕೆ ಸಲ್ಲಿಸಿದ ಸ್ಟಡಿ ಆಫ್ ಝಡ್ ಎನ್ ಓ ಆ್ಯಂಡ್ ಡೋಪ್ಡ್ ಝಡ್ ಎನ್ ಓ ಥಿನ್ ಫಿಲ್ಮ್ ಫಾರ್ ಸೆನ್ಸಾರ್ ಅಪ್ಲಿಕೇಶನ್ಸ್ ಎಂಬ ಮಹಾಪ್ರಬಂಧಕ್ಕೆ ಪಿಎಚ್‌ಡಿ ಪದವಿ ನೀಡಿ ಗೌರವಿಸಲಾಗಿದೆ. ಇವರಿಗೆ ಕುವೆಂಪು ವಿಶ್ವವಿದ್ಯಾಲಯದ ಭೌತಶಾಸ್ತ್ರ ಅಧ್ಯಯನ ವಿಭಾಗದ ಮುಖ್ಯಸ್ಥರಾದ ಪ್ರೊ. ದೇವಿದಾಸ ಜಿ. ಬಿ. ಅವರು ಮಾರ್ಗದರ್ಶನ ಮಾಡಿದರು. ಪಿಎಚ್ಡಿ ಪದವಿ ನೀಡಿ ಗೌರವಿಸಲಾಗಿರುವುದರಿಂದ ಕುವೆಂಪು ವಿಶ್ವವಿದ್ಯಾಲಯದ ಆಡಳಿತ ಮಂಡಳಿ ಹಾಗೂ ವಿದ್ಯಾರ್ಥಿಗಳು ಅಭಿನಂದನೆಯನ್ನು ಸಲ್ಲಿಸಿ ಹಾರೈಸಿದ್ದಾರೆ.

ಚಾಲಕನಿಗೆ ಬೆಳ್ಳಿ ಪದಕ



◆**ಯರಗಟ್ಟಿ:** ಸಮೀಪದ ತಲ್ಲೂರ ಗ್ರಾಮದ ನಿವಾಸಿ ರಮೇಶ ಎಂ. ದಳವಾಯಿ ಅವರಿಗೆ ಬೆಳಗಾವಿಯಲ್ಲಿ ನಡೆದ ವಾಕರಸಾ 28ನೇ ಸಂಸ್ಥಾಪನಾ ದಿನಾಚರಣೆ ವೇಳೆ ಅಪಘಾತ ರಹಿತ ಬಸ್ ಚಾಲನೆ ಮಾಡಿದ ಹಿನ್ನಲೆಯಲ್ಲಿ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರು ಬೆಳ್ಳಿ ಪದಕ ಪ್ರದಾನ ಮಾಡಿ ಅವರಿಗೆ ಗೌರವಿಸಿದರು. 19 ವರ್ಷಗಳಿಂದ ಬೈಲಹೊಂಗಲ ಘಟಕದ ಸಾರಿಗೆ ಸಂಸ್ಥೆಯಲ್ಲಿ ಚಾಲಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಈ ವೇಳೆ ಸಚಿವ ಸತೀಶ ಜಾರಕಿಹೊಳಿ, ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್, ವಾಕರಸಾ ಅಧ್ಯಕ್ಷ ರಾಜು ಕಾಗೆ ಮತ್ತಿತರರಿದ್ದರು.

ಸಂಭ್ರಮದ ಹೋಳಿ ಆಚರಣೆ



◆**ಸುರೇಬಾನ:** ಹುಣ್ಣಿಮೆಯಾಗಿ ಮೂರನೇ ದಿನಕ್ಕೆ ಬಣ್ಣದ ಹಬ್ಬವನ್ನು ಆಚರಿಸುವ ಪದ್ಧತಿ ಇಲ್ಲಿನ ಭಾಗದ ಸುರೇಬಾನ, ಮನಿಹಾಳ, ಶಿವಪೇಠ ಹಾಗೂ ರೇವಡಿಕೊಪ್ಪ ಗ್ರಾಮಗಳಲ್ಲಿ ಗುರುವಾರ ಹೋಳಿ ಹಬ್ಬವನ್ನು ಆಚರಿಸಲಾಯಿತು. ಸುರೇಬಾನ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಯಾವುದೇ ತರಹದ ಘಟನೆಳು ನಡೆಯದಂತೆ ಮುಂಜಾಗ್ರತಾ ಕ್ರಮವಾಗಿ ಒಂದು ಡಿಆರ್ ತುಕಡಿಯನ್ನು ನಿಯೋಜಿಸಲಾತ್ತು. ಒಟ್ಟಾರೆ ಗದ್ದಲ-ಗಲಾಟೆಗಳು ಆಗದೆ ಶಾಂತಯುತವಾಗಿ ಹೋಳಿ ಹಬ್ಬವನ್ನು ಯುವಕರು ಸಂತಸದಿಂದ ಬಣ್ಣವನ್ನು ಹಚ್ಚುವುದರ ಮೂಲಕ ಖುಷಿಯನ್ನು ಹಂಚಿಕೊಂಡರು.

ನಿಧನ ಸುದ್ದಿ

ರವೀಂದ್ರನಾಥ ಪಾಟೀಲ



◆ **ಹಾರೂಗೇರಿ:** ಸಮೀಪದ ಖಿವಟಗೊಪ್ಪ ಗ್ರಾಮದ ರವೀಂದ್ರನಾಥ ರಾವಸಾಬ ಪಾಟೀಲ (56) ನಿಧನರಾಗಿದ್ದಾರೆ. ಮೃತರು ಪತ್ನಿ,ಪುತ್ರಿ ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ಪಾರವ್ವ ಹಿರೇಮಠ



◆ **ಸಂಕೇಶ್ವರ :** ಸ್ಥಳೀಯ ಮಹಾದೇವ ನಗರದ ನಿವಾಸಿಯಾದ ಪಾರವ್ವ ಹಿರೇಮಠ (75) ನಿಧನರಾಗಿದ್ದಾರೆ. ಮೃತರು ಇಬ್ಬರು ಓರ್ವ ಗಂಡು ಮಕ್ಕಳು ಇಬ್ಬರು ಹೆಣ್ಣುಮಕ್ಕಳು, ಸೊಸೆಯಂದಿರು ಹಾಗೂ ಮೊಮ್ಮಕ್ಕಳು ಮತ್ತು ಅಪಾರ ಬಂಧು ಬಳಗ ಅಗಲಿದ್ದಾರೆ.




ಗೋಕಾಕ: ಹೋಳಿ ಹಬ್ಬದ ನಿಮಿತ್ತ ಶೂನ್ಯ ಸಂಪಾದನ ಮಠದ ಲಿಂಗಾಯತ ಮಹಿಳಾ ವೇದಿಕೆಯವರು ಗುರುವಾರದಂದು ನಗರದ ಚನ್ನಬಸವೇಶ್ವರ ವಿದ್ಯಾ ಪೀಠದ ಆವರಣದಲ್ಲಿ ಹಮ್ಮಿಕೊಂಡ ರಂಗೀನ ಬಣ್ಣದೊಕುಳಿ ಕಾರ್ಯಕ್ರಮಕ್ಕೆ ಮುರುಘರಾಜೇಂದ್ರ ಸ್ವಾಮೀಜಿ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ವೇದಿಕೆಯ ಸೇವಂತಾ ಮುಚ್ಚಂಡಿಹಿರೇಮಠ, ರಾಜೇಶ್ವರಿ ಬೆಟ್ಟದಗೌಡರ, ಶೈಲಾ ಬಿದರಿ, ರಾಜೇಶ್ವರಿ ಹಿರೇಮಠ, ಸುಜಾತಾ ಮುಚ್ಚಂಡಿಮಠ, ಕಾವ್ಯಾ ಕೊಣ್ಣೂರ ಇದ್ದರು.

ತೊಲಗಿ ಜಾತ್ರಾ ಮಹೋತ್ಸವದ ಸಭೆ

◆**ಖಾನಾಪುರ:** ತಾಲೂಕಿನ ತೊಲಗಿ ಗ್ರಾಮದಲ್ಲಿ ಮುಂದಿನ ತಿಂಗಳು ನಡೆಯಲಿರುವ ಮೂರು ಮುಖಿದಾಂಬಿಕೆ ದೇವಿಯ ಜಾತ್ರಾ ಮಹೋತ್ಸವದ ಪೂರ್ವಭಾಗಿ ಸಭೆ ಗ್ರಾಮದಲ್ಲಿ ಗುರುವಾರ ಜರುಗಿತು. ಸಭೆಯ ಅಧ್ಯಕ್ಷತೆ ವಹಿಸಿದ್ದ ಶಾಸಕ ವಿಠ್ಠಲ ಹಲಗೇಕರ ಮಾತನಾಡಿ, ತೋಲಗಿ ಗ್ರಾಮದಲ್ಲಿ ಎ.20ರಿಂದ ದೇವಿಯ ಜಾತ್ರಾ ಮಹೋತ್ಸವವನ್ನು ಸಡಗರ-ಸಂಭ್ರಮಗಳಿಂದ ಆಚರಿಸಲು ನಿರ್ಧರಿಸಲಾಗಿದೆ. ಜಾತ್ರೆಗೆ ಅಸಂಖ್ಯಾತ ಭಕ್ತರು ಸೇರುವ ನಿರೀಕ್ಷೆ ಇದೆ. ಹೀಗಾಗಿ ಜಾತ್ರೆಗೂ ಮುನ್ನ ಗ್ರಾಮದಲ್ಲಿ ಉತ್ತಮ ಸಂಪರ್ಕ ರಸ್ತೆ, ಶುದ್ಧ ಕುಡಿಯುವ ನೀರು ಸರಬರಾಜು, ಚರಂಡಿ ಸ್ವಚ್ಛತೆ, ನಿಯಮಿತ ವಿದ್ಯುತ್ ಸಂಪರ್ಕ ಮತ್ತು ಹೆಚ್ಚುವರಿ ಬಸ್ ವ್ಯವಸ್ಥೆ ಕಲ್ಪಿಸುವ ನಿಟ್ಟಿನಲ್ಲಿ ಸಂಬಂಧಪಟ್ಟ ಅಧಿಕಾರಿಗಳ ಜೊತೆ ಚರ್ಚಿಸಲಾಗುವುದು. ಜಾತ್ರೆ ನಿರ್ವಿಘ್ನವಾಗಿ ನೆರವೇರುವಂತೆ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದರು.

ಸಭೆಯಲ್ಲಿ ಉಪಸ್ಥಿತರಿದ್ದ ನಿಕಟಪೂರ್ವ ಗ್ರಾಪಂ ಸದಸ್ಯರು, ಸಿಬ್ಬಂದಿ, ಗ್ರಾಮಲೆಕ್ಕಿಗ, ಗ್ರಾಮದ ಹಿರಿಯರು ಮತ್ತು ಜಾತ್ರಾ ಮಹೋತ್ಸವ ಸಮಿತಿಯವರ ಜೊತೆ ಶಾಸಕರು ಜಾತ್ರಾ ಮಹೋತ್ಸವ ಆಚರಣೆಯ ರೂಪುರೇಷೆಗಳ ಬಗ್ಗೆ ಚರ್ಚಿಸಿದರು. ಬಳಿಕ ಗ್ರಾಮದಲ್ಲಿ ಸಂಚರಿಸಿ ಸಿದ್ಧತೆಗಳನ್ನು ಪರಿಶೀಲಿಸಿದರು. ಈ ಸಂದರ್ಭದಲ್ಲಿ ಗ್ರಾಮಸ್ಥರು ಇದ್ದರು. ಕಡತನ ಬಾಗೇವಾಡಿ ಗ್ರಾಪಂ ಪಿಡಿಒ ವೀರೇಶ ಸಜ್ಜನ ಕಾರ್ಯಕ್ರಮ ನಿರ್ವಹಿಸಿದರು.



ಖಾನಾಪುರ ತಾಲೂಕಿನ ತೋಲಗಿ ಗ್ರಾಮದಲ್ಲಿ ಗುರುವಾರ ಜರುಗಿದ ಜಾತ್ರಾ ಮಹೋತ್ಸವ ಪೂರ್ವಭಾವಿ ಸಭೆಯಲ್ಲಿ ಭಾಗವಹಿಸಿದ್ದ ಶಾಸಕ ವಿಠ್ಠಲ ಹಲಗೇಕರ ಅವರನ್ನು ಗ್ರಾಮಸ್ಥರು ಸತ್ಕರಿಸಿದರು.

ಬಜೆಟ್‌ನಲ್ಲಿ ಚಿಕ್ಕೋಡಿ ಭಾಗದ ಜನರ ಆಶಯ

ನೀರಾವರಿ ಯೋಜನೆಗಳಿಗೆ ಆದ್ಯತೆ ಸಿಗಲಿ

▶**ವಿಮಲಾ ಸಿ ಚಿನಕೇಕರ, ಚಿಕ್ಕೋಡಿ**

ದಿಗಂತ ವಿಶೇಷ

◆**ಚಿಕ್ಕೋಡಿ:** ತಾಲೂಕಿನಲ್ಲಿ ಕರಗಾಂವ, ಹನುಮಾನ, ಮಹಾಲಕ್ಷ್ಮೀ ಸೇರಿದಂತೆ ಮೂರು ಮಹತ್ವದ ಏತ ನೀರಾವರಿ ಯೋಜನೆಗಳು ಪೂರ್ಣಗೊಂಡಲ್ಲಿ ಇಲ್ಲಿನ ಸಹಸ್ರಾರು ಹೆಕ್ಟೇರ್ ಜಮೀನು ಹಸಿರಾಗಿ, ರೈತರ ಬದುಕು ಹಸನಾಗುತ್ತದೆ. ಈ ಎಲ್ಲಾ ನೀರಾವರಿ ಯೋಜನೆಗಳಿಗೆ ಬರುವ ಬಜೆಟ್ ನಲ್ಲಿ ಮುಖ್ಯಮಂತ್ರಿ ಸಿದ್ಧರಾಮಯ್ಯ ಆದ್ಯತೆ ನೀಡಬೇಕೆಂಬ ಆಶಯ ಈ ಭಾಗದ ಜನರದ್ದಾಗಿದೆ.

567 ಕೋಟಿ ಮೊತ್ತದ ಮಹಾಲಕ್ಷ್ಮೀ ಏತ ನೀರಾವರಿಯೋಜನೆಯಮೊದಲಹಂತದ ಕಾಮಗಾರಿ ಮುಕ್ತಾಯ ಹಂತದಲ್ಲಿದೆ. ಜೂನ್ ಅಂತ್ಯದಲ್ಲಿ ಮೊದಲ ಹಂತದ ಕಾಮಗಾರಿ ಪೂರ್ಣಗೊಳ್ಳುವ ನಿರೀಕ್ಷೆ ಇದೆ. 18 ಗ್ರಾಮಗಳ 8 ಸಾವಿರ ಎಕರೆಗೂ ಹೆಚ್ಚು ಜಮೀನು ನೀರಾವರಿಗೊಳಪಡುವ ತಾಲೂಕಿನ ಬೃಹತ್ ಯೋಜನೆ ಇದಾಗಿದೆ. 2ನೇ ಹಂತದ ಕಾಮಗಾರಿಗೆ 179.30 ಕೋಟಿ ಅನುದಾನ ಅವಶ್ಯಕತೆ ಇದೆ. ಈ ಮೊತ್ತವನ್ನು ಬರುವ ಬಜೆಟ್ ನಲ್ಲಿ ಮೀಸಲಿರಿಸಿ ಯೋಜನೆನ್ನು ಬಹುಬೇಗನೆ ಪೂರ್ಣಗೊಳಿಸಿ ರೈತರಿಗೆ ಅನುಕೂಲ ಮಾಡಿಕೊಡಬೇಕಿದೆ. 500 ಕೋಟಿಗೂ ಹೆಚ್ಚು ಮೊತ್ತದ ಕರಗಾಂವ ಏತ ನೀರಾವರಿ ಯೋಜನೆಯಿಂದ ಮಡ್ಡಿ ಭಾಗದ 14ಕ್ಕೂ ಹೆಚ್ಚು ಗ್ರಾಮಗಳ ಜಮೀನು ನೀರಾವರಿಗೊಳಪಡಿಲಿದೆ. ಕರಗಾಂವ ಏತನೀರಾವರಿ ಯೋಜನೆಯ ಮೊದಲ ಹಂತದ ಕಾಮಗಾರಿಗೆ 100 ಕೋಟಿ ಅನುದಾನ ಬಿಡುಗಡೆಯಾಗಿದ್ದು, ಯೋಜನೆಯು ಪ್ರಗತಿಯಲ್ಲಿದೆ.

ಇನ್ನು ಹನುಮಾನ ಏತ ನೀರಾವರಿ ಯೋಜನೆ ಪೂರ್ಣಗೊಳ್ಳಲು 445 ಕೋಟಿ ವೆಚ್ಚ ಅಂದಾಜಿಸಲಾಗಿದ್ದು, ಆಡಳಿತಾತ್ಮಕವಾಗಿ ಅನುಮೋದನೆ ದೊರೆಯಬೇಕಿದೆ. ಹೀಗಾಗಿ ಈ ಮೂರು ಯೋಜನೆಗಳಿಗೆ ಸರ್ಕಾರ ಹೆಚ್ಚಿನ ಆದ್ಯತೆಯನ್ನು ನೀಡಿ ತಾಲ್ಲೂಕಿನ 50 ಸಾವಿರ ಎಕರೆಗೂ ಹೆಚ್ಚು ಜಮೀನು ನೀರಾವರಿಯಾಗಿ ರೈತರ ಬಾಳು ಬಂಗಾರವಾಗಲಿದೆ.



15 ತಾಲೂಕುಗಳನ್ನು ಒಳಗೊಂಡ ಅಖಂಡ ಬೆಳಗಾವಿಯನ್ನು ವಿಭಜಿಸಿ ಚಿಕ್ಕೋಡಿಯನ್ನು ಜಿಲ್ಲೆಯನ್ನಾಗಿ ಘೋಷಣೆ ಮಾಡಿದ್ದಲ್ಲಿ ಅಥಣಿ, ರಾಯಬಾಗ, ಕಾಗವಾಡ, ನಿಪ್ಪಾಣಿ, ಚಿಕ್ಕೋಡಿ ಸೇರಿದಂತೆ ವಿವಿಧ ತಾಲೂಕಿನ ಜನರಿಗೆ ಜಿಲ್ಲಾ ಕೇಂದ್ರ ಅತೀ ಸಮೀಪವಾಗುತ್ತದೆ. ಇದರಿಂದ ಈ ಭಾಗ ಅಭಿವೃದ್ಧಿ ಹೊಂದಲು ಸಾಧ್ಯವಾಗುತ್ತದೆ.

ಇತ್ತೀಚಿನ ದಿನಗಳಲ್ಲಿ ಕ್ಯಾನ್ಸರ್ ರೋಗಿಗಳ ಸಂಖ್ಯೆ ಹೆಚ್ಚುತ್ತಿದ್ದು, ತಾಲ್ಲೂಕಿನ 2629 ರೋಗಿಗಳನ್ನು ಒಳಗೊಂಡಂತೆ ವಿಭಾಗ ವ್ಯಾಪ್ತಿಯಲ್ಲಿ ಒಟ್ಟು 8295 ಕ್ಯಾನ್ಸರ್ ರೋಗಿಗಳು ಇದ್ದಾರೆ. ಚಿಕಿತ್ಸೆಗಾಗಿ ಮಹಾರಾಷ್ಟ್ರದ ದೊಡ್ಡ ದೊಡ್ಡ ನಗರಗಳಿಗೆ ಅಲೆದಾಡುವಂತಾಗಿದೆ. ಪಟ್ಟಣದಲ್ಲಿ ಕ್ಯಾನ್ಸರ್ ಆಸ್ಪತ್ರೆ ತೆರೆಯಬೇಕೆಂಬ ಬೇಡಿಕೆ ಇದೆ.

ಚಿಕ್ಕೋಡಿ ಉಪ ವಿಭಾಗ ವ್ಯಾಪ್ತಿಯಲ್ಲಿ 80 ಕೋಟಿ ಗೂ ಹೆಚ್ಚು ವೆಚ್ಚ ಮಾಡಿ ಕೃಷ್ಣಾ ದೂಧಗಂಗಾ ನದಿಯ ಏಳು ಸೇತುವೆಗಳ ನಿರ್ಮಾಣ ಕಾಮಗಾರಿ ಪ್ರಾರಂಭಗೊಂಡು ಹಲವು ವರ್ಷಗಳೇ ಕಳೆದಿವೆ. ಆದರೆ ಇದುವರೆಗೂ ಯಾವೊಂದು ಸೇತುವೆ ಪೂರ್ಣಗೊಂಡು ಜನರಿಗೆ ಅನುಕೂಲವಾಗಿಲ್ಲ. ಬರುವ ಬಜೆಟ್ ನಲ್ಲಿ ಅನುದಾನ ಮೀಸಲಿರಿಸಿ ಬೃಹತ್ ಸೇತುವೆಗಳ ಕಾಮಗಾರಿ ಪೂರ್ಣಗೊಳಿಸಿದ್ದಲ್ಲಿ ನದಿ ತೀರದ ಜನರು ಮಳೆಗಾಲದಲ್ಲಿ ಪ್ರವಾಹ ಭೀತಿಯಿಂದ ಮುಕ್ತವಾಗಿ ಸಂಚಾರ ಮಾಡಲು ಅನುಕೂಲವಾಗುತ್ತದೆ.

> **ಚಿಕ್ಕೋಡಿ ಉಪ ವಿಭಾಗ ವ್ಯಾಪ್ತಿಯಲ್ಲಿ ಕ್ಯಾನ್ಸರ್ ರೋಗಿಗಳ ಸಂಖ್ಯೆ ಹೆಚ್ಚುತ್ತಿದ್ದು, ಕ್ಯಾನ್ಸರ್ ಆಸ್ಪತ್ರೆಯೊಂದನ್ನು ತೆರೆಯಬೇಕು**
> ■ **ಪ್ರಕಾಶ ಹುಕ್ಕೇರಿ, ಕರ್ನಾಟಕ ಸರ್ಕಾರದ ದೆಹಲಿ ವಿಶೇಷ ಪ್ರತಿನಿಧಿ**

> **ಆಯವ್ಯಯದಲ್ಲಿ ಚಿಕ್ಕೋಡಿ ಜಿಲ್ಲೆ ಘೋಷಣೆಗೆ ಸರ್ಕಾರ ಮೊದಲ ಆದ್ಯತೆ ನೀಡಬೇಕು. 4 ದಶಕಗಳ ಕನಸನ್ನು ನನಸಾಗುವ ನಿರೀಕ್ಷೆ ಇದೆ.**
> ■ **ಪ್ರೊ.ಎಸ್ ವೈ ಹಂಜಿ, ಅಧ್ಯಕ್ಷ, ಚಿಕ್ಕೋಡಿ ಜಿಲ್ಲಾ ಹೋರಾಟ ಸಮಿತಿ**

ನೀರಿನ ಸಮಸ್ಯೆಯಾಗದಂತೆ ಯೋಜನೆ ತ್ವರಿತವಾಗಿ ಪೂರ್ಣಗೊಳಿಸಿ: ಐಹೊಳೆ

◆**ಕಬ್ಬೂರ :** ಬೇಸಿಗೆಯಲ್ಲಿ ಜನರಿಗೆ ಕುಡಿಯುವ ನೀರಿನ ತೊಂದರೆ ಉಂಟಾಗದಂತೆ ಎಲ್ಲಾ ಕುಡಿಯುವ ನೀರಿನ ಯೋಜನೆಗಳನ್ನು ತ್ವರಿತವಾಗಿ ಪೂರ್ಣಗೊಳಿಸಿ ಸಾರ್ವಜನಿಕರಿಗೆ ಸಮರ್ಪಕವಾಗಿ ನೀರು ಪೂರೈಕೆ ಮಾಡಬೇಕು ಎಂದು ರಾಯಬಾಗ ಕ್ಷೇತ್ರದ ಶಾಸಕ ದುರ್ಯೋಧನ ಐಹೊಳೆ ಹೇಳಿದರು.

ತಾಲೂಕಿನ ನಾಗರಮುನ್ನೊಳ್ಳಿ ಬಹುಗ್ರಾಮ ಕುಡಿಯುವ ನೀರಿನ ಯೋಜನೆಯ ಪುನಶ್ಚೇತನ ಕಾಮಗಾರಿಗೆ ರೂ. 4.10 ಕೋಟಿ ವೆಚ್ಚದಲ್ಲಿ ಚಾಲನೆ ನೀಡಿ ಅವರು ಮಾತನಾಡಿದರು. ಓವರ್ ಹೆಡ್ ಟ್ಯಾಂಕ್ ಸೇರಿದಂತೆ ಎಲ್ಲಾ ಕಾಮಗಾರಿಗಳನ್ನು ಶೀಘ್ರ ಪೂರ್ಣಗೊಳಿಸಿ ಜನರಿಗೆ ನೀರಿನ ಸಮಸ್ಯೆ ಆಗದಂತೆ ನೋಡಿಕೊಳ್ಳಬೇಕು ಎಂದು ಸೂಚಿಸಿದರು.

ಇದೇ ಸಂದರ್ಭದಲ್ಲಿ ಸಾರ್ವಜನಿಕರ ಮನವಿಯನ್ನು ಪರಿಗಣಿಸಿ ದೊಡ್ಡ ಗ್ರಾಮವಾಗಿರುವ ನಾಗರಮುನ್ನೊಳ್ಳಿಯಲ್ಲಿ ಶೀಘ್ರದಲ್ಲೇ ಆಸ್ಪತ್ರೆ ನಿರ್ಮಿಸುವ ಯೋಜನೆಯೂ ಕೈಗೆತ್ತಿಕೊಳ್ಳಲಾಗುವುದು ಎಂದು ಹೇಳಿದರು. ರಾಯಬಾಗ ಕ್ಷೇತ್ರದಲ್ಲಿ ಮೂಲಭೂತ ಸೌಲಭ್ಯಗಳ ಕೊರತೆ ಆಗದಂತೆ ಅಭಿವೃದ್ಧಿ ಕಾರ್ಯಗಳನ್ನು ನಿರಂತರವಾಗಿ ಕೈಗೊಳ್ಳಲಾಗಿದೆ ಎಂದರು.

ಮುಖಂಡ ಸಿದ್ದಪ್ಪ ಮರ್ಯಾಯಿ ಮಾತನಾಡಿ, ಬಹುಗ್ರಾಮ ಕುಡಿಯುವ ನೀರು ಸರಬರಾಜು ಪುನಶ್ಚೇತನ ಕಾರ್ಯಕ್ರಮಕ್ಕೆ ರೂ. 4.10 ಕೋಟಿ ಮಂಜೂರಾಗಿದೆ. ಶಾಸಕರು ಪಕ್ಷಾತೀತವಾಗಿ ಅಭಿವೃದ್ಧಿ ಕಾರ್ಯಗಳನ್ನು ಮಾಡುತ್ತಿದ್ದಾರೆ. ಕನಿಷ್ಠ 2.50 ಲಕ್ಷ ಲೀಟರ್ ಸಾಮರ್ಥ್ಯದ ಟ್ಯಾಂಕ್ ನಿರ್ಮಿಸಬೇಕು. ಆದರೆ ಈಗ 1 ಲಕ್ಷ ಲೀಟರ್ ಸಾಮರ್ಥ್ಯದ ಟ್ಯಾಂಕ್‌ಗೆ ಮಂಜೂರಾತಿ ದೊರೆತಿದೆ ಎಂದು ಹೇಳಿದರು. ಈ ಸಂದರ್ಭದಲ್ಲಿ ಸದಾಶಿವ ಘೋರ್ಪಡೆ, ಸುರೇಶ ಬೆಲ್ಲದ, ಡಾ. ಅರುಣ ಮರ್ಯಾಯಿ, ರಮೇಶ ಕಾಳನ್ನವರ, ಎಂ.ಬಿ. ಆಲೂರೆ, ನಿಜಾಮ ಪೆಂಡಾರೆ, ಎಂ.ಬಿ. ಈಟಿ, ಸಿದ್ದು ಈಟಿ, ಶಿವಪ್ಪ ಕೋಟ್ಯಾಪಗೋಳ, ಗುತ್ತಿಗೆದಾರ ಸತೀಶ ಪಾಟೀಲ, ಬಿ.ಆರ್. ಜಂಬಗಿ (ಎಇಇ), ಮಹಾಂತೇಶ ಹಿಂಗ್ಲಜ (ಶಾಖಾಧಿಕಾರಿ), ಸಿ.ಬಿ. ಅರಭಾವಿ, ದೇವರಾಜ ಪಾಶ್ಚಾಪೂರೆ, ಮಹಾಂತೇಶ ಯಶವಮನತ, ಸಂಭಾ ಚೌವ್ಹಾಣ, ಪ್ರಕಾಶ ಪಾಟೀಲ ಸೇರಿದಂತೆ ಹಲವರು ಉಪಸ್ಥಿತರಿದ್ದರು.



ಸಂಗೀತ ಕ್ಷೇತ್ರಕ್ಕೆ ಗವಾಯಿಗಳ ಕೊಡುಗೆ ಅಪಾರ

◆**ಗೋಕಾಕ:** ಪಂಡಿತ ಪುಟ್ಟರಾಜ ಗವಾಯಿಗಳು ಸಂಗೀತ ಕ್ಷೇತ್ರಕ್ಕೆ ನೀಡಿದ ಕೊಡುಗೆ ಅಪಾರ ಎಂದು ಸಾಹಿತಿ ಹಾಗೂ ಕಲಾವಿದ ಈಶ್ವರಚಂದ್ರ ಬೆಟಗೇರಿ ಹೇಳಿದರು.

ಅವರು, ಬುಧವಾರದಂದು ನಗರದ ಬಸವ ಮಂದಿರದಲ್ಲಿ ಅಖಿಲ ಕರ್ನಾಟಕ ಗಾನಯೋಗಿ ಸಂಗೀತ ಪರಿಷತ ತಾಲೂಕಾ ಘಟಕದವರು ಪಂಡಿತ ಪುಟ್ಟರಾಜ ಗವಾಯಿಗಳ ಜಯಂತಿ ಉತ್ಸವ ನಿಮಿತ್ತ ಹಮ್ಮಿಕೊಂಡ ಸಂಗೀತ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಸಂಗೀತಕ್ಕೆ ಅದ್ಭುತವಾದ ಶಕ್ತಿ ಇದೆ. ಭಗವಂತನನ್ನು ಒಲಿಸಿಕೊಳ್ಳುವ ಸರಳ ಮಾರ್ಗವಾಗಿದೆ. ಸಂಗೀತದ ಮೂಲಕ ಭಗವಂತನ ನಾಮಸ್ಮರಣೆ ಮಾಡುತ್ತ ಪುಟ್ಟರಾಜ ಗವಾಯಿಗಳು ಧರ್ಮ ಜಾಗೃತಿ ಮೂಡಿಸಿದ್ದರು. ಅಂಧರಿಗೆ ಒಳಬೆಳಕನ್ನು ನೀಡಿ ಅವರನ್ನು ಸಂಗೀತ ವಿದ್ವಾಂಶರನ್ನಾಗಿ ಮಾಡಿ ಸಂಗೀತ ಕ್ಷೇತ್ರವನ್ನು ಶ್ರೀಮಂತಗೊಳಿಸಿದ್ದಾರೆ ಎಂದರು.



ವೇದಿಕೆಯ ಮೇಲೆ ನಿವೃತ್ತ ಸೈನಿಕ ರಾಜೇಂದ್ರ ಬಾಗಿ, ಸೋಮಶೇಖರ ಮಗದುಮ, ವಿದ್ಯಾ ಮಗದುಮ, ಅನಸೂಯಾ ಧುಳಾಯಿ, ಶಶಿಕಲಾ ಶಿಂಧೆ ಇದ್ದರು. ಕಲಾವಿದರಿಂದ ಸಂಗೀತ ಕಾರ್ಯಕ್ರಮ ಜರುಗಿತು.

ಇಂದಿನಿಂದ ಶ್ರೀ ಸುಗಂಧ ದೇವಿಯ ಜಾತ್ರಾಮಹೋತ್ಸವ

◆**ರಾಯಬಾಗ:** ತಾಲೂಕಿನ ಬಾವನಸೌಂದತ್ತಿ ಗ್ರಾಮದ ಗ್ರಾಮದೇವತೆ ಶ್ರೀ ಸುಗಂಧ ದೇವಿಯ ಜಾತ್ರಾಮಹೋತ್ಸವ ಮಾ.6ರಿಂದ 12 ರವರೆಗೆ ನಡೆಯಲಿದೆ.



ಮಾ.6ರಿಂದ ಪ್ರತಿನಿತ್ಯ ದೇವಿಗೆ ಅಭಿಷೇಕ ನಡೆಯಲಿದ್ದು, ಮಾ.8 ರಂದು ರಂಗಪಂಚಮಿದಿನದಂದು ಮಹಾನೈವೇದ್ಯ ನಡೆಯಲಿದೆ. ಬೆಳಿಗ್ಗೆ 9 ಗಂಟೆಯಿಂದ ದೇವಿಯ ಪಲ್ಲಕ್ಕಿ ಮೆರವಣಿಗೆ ಮತ್ತು ಕುಂಭಮೇಳ ಜರುಗಲಿದೆ.

ಜಾತ್ರಾಮಹೋತ್ಸವ ನಿಮಿತ್ತ ವಿವಿಧ ಓಟದ ಸ್ಪರ್ಧೆಗಳನ್ನು ಆಯೋಜಿಸಲಾಗಿದ್ದು, ಮಾ. 9 ರಂದು ಬೆಳಿಗ್ಗೆ 9 ಗಂಟೆಗೆ ಸಾಮಾನ್ಯ ನವತಾರ್ ಕುದುರೆ ಮತ್ತು ಬಂಡಿ ಓಟ ಹಾಗೂ ಮಾ.10ರಂದು ಬೆಳಿಗ್ಗೆ 9 ಗಂಟೆಗೆ ಕುದುರೆ ಮತ್ತು ಬಂಡಿ ಓಟ ನಡೆಯಲಿದೆ.

ಮಧ್ಯಾಹ್ನ 2.30ಕ್ಕೆ ಕುಸ್ತಿ ಪಂದ್ಯ ನಡೆಯಲಿದೆ. ಮಾ.12ರಂದು ಬೆಳಿಗ್ಗೆ 9 ಗಂಟೆಗೆ ಎತ್ತಿನ ಗಾಡಿ ಓಟ ನಡೆಯಲಿದ್ದು, ವಿಜೇತರಿಗೆ ಬಹುಮಾನ ನೀಡಿ ಗೌರವಿಸಲಾಗುತ್ತದೆ. ಈ ಕಾರ್ಯಕ್ರಮದ ಸದುಪಯೋಗ ಪಡೆದುಕೊಳ್ಳಲು ಜಾತ್ರಾ ಸಮಿತಿ ಮತ್ತು ಗ್ರಾಮಸ್ಥರು ಮನವಿ ಮಾಡಿದ್ದಾರೆ.

ಕಲಿಕಾ ಸಾಮಗ್ರಿ ವಿತರಿಸಿದ ಚಿದಾನಂದ ಸವದಿ

◆**ಅಡಹಳ್ಳಿ :** ವಿದ್ಯಾರ್ಥಿಗಳ ಶೈಕ್ಷಣಿಕ ಹಂತದಲ್ಲಿ ಹತ್ತನೇ ತರಗತಿ ಪ್ರಮುಖ ಹಂತವಾಗಿದ್ದು, ವಿದ್ಯಾರ್ಥಿಗಳು ಆಸಕ್ತಿಯಿಂದ ಕಲಿತು ಉತ್ತಮ ಅಂಕ ಗಳಿಸಬೇಕೆಂದು ಯುವ ಮುಖಂಡ ಚಿದಾನಂದ ಸವದಿ ಹೇಳಿದರು.

ಅವರು ಗ್ರಾಮದ ಸರಕಾರಿ ಪ್ರೌಢ ಶಾಲೆಯಲ್ಲಿ ಎಸ್‌ಎಸ್ ಎಲ್‌ಸಿ ವಿದ್ಯಾರ್ಥಿಗಳಿಗೆ ರೈಟಿಂಗ್ ಪ್ಯಾಡ್ ವಿತರಿಸಿ ಮಾತನಾಡಿ, ಅಥಣಿ ಮತಕ್ಷೇತ್ರದ ಶೇ.90ಕ್ಕಿಂತ ಹೆಚ್ಚು ಅಂಕ ಪಡೆಯುವ ಹತ್ತನೇ ತರಗತಿಯ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಗುವುದು, ಅಥಣಿ ಹಾಗೂ ಕಾಗವಾಡ ಮತಕ್ಷೇತ್ರದ 10 ಸಾವಿರ ವಿದ್ಯಾರ್ಥಿಗಳಿಗೆ ಪರಿಕ್ಷೇಗೆ ಅವಶ್ಯವಿರುವ ರೈಟಿಂಗ್ ಪ್ಯಾಡ್ ವಿತರಣೆ ಮಾಡಲಾಗುತ್ತಿದೆ ಎಂದು ಹೇಳಿದರು.ಎಸ್‌ಡಿಎಮ್‌ಸಿ ಮಾಜಿ ಅಧ್ಯಕ್ಷ ಅರುಣ ಕೋಹಳ್ಳಿ ಮಾತನಾಡಿ, ವಿದ್ಯಾರ್ಥಿಗಳ ಪರಿಕ್ಷೇಗೆ ಅವಶ್ಯವಿರುವ ರೈಟಿಂಗ ಪ್ಯಾಡ್ ವಿರಿಸುತ್ತಿರುವ ಲಕ್ಷ್ಮಣ ಸವದಿ ಫೌಂಡೇಶನ್ ಇವರ ಕಾರ್ಯ ಶ್ಲಾಘನೀಯವಾಗಿದೆ ಎಂದು ಹೇಳಿದರು.



ಈ ವೇಳೆ ಎಸ್‌ಡಿಎಮ್‌ಸಿ ಅಧ್ಯಕ್ಷ ಸುಭಾಸ ಸಿಂಗಿ, ಈರಗೌಡ ಪಾಟೀಲ, ಪರಸಪ್ಪ ಅಥಣಿ, ಸೂರ್ಯಕಾಂತ ಡಂಬಳಕರ, ಮಹಾದೇವ ಸೂರ್ಯವಂಶಿ, ಅಣ್ಣಪ್ಪ ಹಾಲಳ್ಳಿ, ಸಿಆರ್‌ಪಿ ಎಸ್ ಕೆ ಖೋತ, ಮುರಳಿ ಬಜಂತ್ರಿ, ಭೀಮು ಸೂರ್ಯವಂಶಿ, ಮುಖ್ಯಶಿಕ್ಷಕ ಎಸ್ .ಐ. ಹಂಪಣ್ಣವರ, ತಾತ್ಯಾಸಾಬ ಮಾದರ ಸೇರಿದಂತೆ ಅನೇಕರು ಇದ್ದರು.

ಮದ್ಯದ ಅಂಗಡಿ ಸ್ಥಳಾಂತರಕ್ಕೆ ಸೂಚನೆ

◆**ಯರಗಟ್ಟಿ:** ಮಹಿಳೆಯರ ಹೋರಾಟಕ್ಕೆ ಮಣಿದು ತಲ್ಲೂರು ಗ್ರಾಮದ ವೈನ್ ಶಾಪ್ ಸ್ಥಳಾಂತರಕ್ಕೆ ಅಬಕಾರಿ ಇಲಾಖೆ ಮುಂದಾಗಿದೆ.

ಸಮೀಪದ ತಲ್ಲೂರ ಗ್ರಾಮದಲ್ಲಿ ನಡೆದ ನಿರಂತರ ಹೋರಾಟದ ಸ್ಥಳಕ್ಕೆ ಅಬಕಾರಿ ಸಿಪಿಐ ಡಿ ಡಿ ಶಿಂಧೋಗಿ ಭೇಟಿ ನೀಡಿ ಪರಿಶೀಲನೆ ನಡೆಸಿ ಮಾಹಿತಿ ಪಡೆದರು.

ಮನೆಯಲ್ಲಿ ಪಾತ್ರೆ ಮತ್ತು ಅಕ್ಕಿ, ಜೋಳ ಮಾರಾಟಮಾಡಿ ಕುಡಿತಕ್ಕೆ ದಾಸರಾಗಿರುದು ಹಾಗೂ ಅನೇಕರು ಸಾವನ್ನಪ್ಪಿರುವ ಘಟನೆಗಳು ನಡೆದಿವೆ ಎಂದು ಮಹಿಳೆಯರು ತಮ್ಮ ಅಳಲು ತೋಡಿಕೊಂಡು.

ವೀರೇಶ ವೈನ್ಸ ಮಾಲಕರಿಗೆ ಹಾಗೂ ಸಿಬ್ಬಂದಿಗೆ ಅಬಕಾರಿ ಸಿಪಿಐ ಡಿ.ಡಿ. ಶಿಂಧೋಗಿ 15 ದಿನಗಳಲ್ಲಿ ನಿಮ್ಮ ವೈನ್ ಶಾಪ್ ಬೇರೆಡೆ ಸ್ಥಾಳಾತಂರ ಮಾಡಲು ಸೂಚಿಸಿದರು. ಈ ವೇಳೆ ಗ್ರಾಮದ ಹಿರಿಯರಾದ ವಿಕ್ರಮ ದೇಸಾಯಿ ಮಾತನಾಡಿದರು.ಈ ವೇಳೆ ಅಬಕಾರಿ ಪಿಎಸ್‌ಐ ಮಹಾದೇವ ಕಟಗೇನ್ನವರ, ಎಸ್. ಎಸ್. ಕಾರಜೋಳ, ಡಬ್ಲ್ಯೂ. ಎಚ್. ಯಾದವಾಡ, ಪೊಲೀಸ್ ಸಿಬ್ಬಂದಿ ಎಸ್. ಎಸ್. ಹುಂಬಿ, ಬಿ. ಡಿ. ಕುದರಿ, ಸಂಜೀವಿನಿ ಒಕ್ಕೂಟದ ಸದಸ್ಯರು ಹುಸೇನಬಿ ಕುದರಿ, ಲಕ್ಷ್ಮಿ ಪಾಟೀಲ, ಯಶೋದಾ ಕಾಶಪ್ಪನವರ, ಪವಿತ್ರಾ ಈಟಿ, ಕಸ್ತೂರಿ ಹೊಸೂರ, ರೇಣುಕಾ ದೊಡವಾಡ, ಮಾಬುಬಿ ಭಾಗವನ ಸುನಂದಾ ಉಪ್ಪಾರ, ಶಿವಪ್ಪ ಕಡಬಿ, ವಿಠ್ಠಲ ಮಾದರ, ಬಸವರಾಜ ಮುದ್ದಣ್ಣವರ, ಮಂಜುನಾಥ್ ಬಂದಕನವರ, ಮಾರುತಿ ವನ್ನೂರ್, ಪರಮೇಶ್ ಮಾದರ, ಪಕ್ಕೀರಪ್ಪ ಭಜಂತ್ರಿ, ರತ್ನವ್ವ ಮಾದರ, ರಮಜವ್ವ ಬೆಟಗೇರಿ, ಶಾಂತವ್ವ ಉಪ್ಪಾರ, ಗೌರವ್ವ ಉಪ್ಪಾರ, ದ್ರವಪದಿ ಪಾಟೀಲ, ನಾಗತೇವ್ವಾ ಮಣ್ಣಿಕೇರಿ ಮತ್ತಿತರಿದ್ದರು.



ನೂತನ ತಾಲೂಕಿಗೆ ಸಿಗುವುದೇ ಅನುದಾನ? । ಮೂಲ ಸೌಲಭ್ಯಕ್ಕೆ ಬೇಕಿದ ಹಣ

ಬಜೆಟ್‌ನತ್ತ ಯರಗಟ್ಟಿ ಚಿತ್ತ

▶**ಈರಣ್ಣಾ ಹೂಲ್ಲೂರ**

◆**ಯರಗಟ್ಟಿ:** 2026-27ನೇ ಸಾಲಿನ ಬಜೆಟ್‌ನಲ್ಲಿ ವಿಶೇಷವಾಗಿ ಹೊಸ ತಾಲೂಕುಗಳ ಅಭಿವೃದ್ಧಿಗೆ ವಿಶೇಷ ಅನುದಾನ ಒದಗಿಸಿದರೆ ಜನತೆಯ ಬಹು ದಿನಗಳ ಬೇಡಿಕೆಗಳು ಈಡೇರುವ ಸಾಧ್ಯತೆ ಇದೆ.

ನೀರಾವರಿ ಯೋಜನೆಗಳು, ಕೈಗಾರಿಕಾ ವಸಾಹತುಗಳು ಮತ್ತು ಪ್ರವಾಸೋದ್ಯಮದಂತಹ ನಿರ್ದಿಷ್ಟ ವಲಯಗಳಿಗೆ ಬೇಡಿಕೆಗಳು ಮತ್ತು ಯೋಜನೆಗಳನ್ನು ಘೋಷಿಸಲಾಗುತ್ತದೆ. ಈ ಬಾರಿ ನೂತನ ತಾಲೂಕಿಗೆ ಅನುದಾನದ ಬಂದರೆ ಮೂಲಸೌಕರ್ಯ ಹಾಗೂ ಅಭಿವೃದ್ಧಿಗೆ ಒತ್ತು ಸಿಗಲಿದೆ. ಹೊಸ ತಾಲೂಕುಗಳ ಅಭಿವೃದ್ಧಿಗೆ ವಿಶೇಷ ಅನುದಾನ ಮತ್ತು ಮೂಲಸೌಕರ್ಯಗಳ ನಿರ್ಮಾಣಕ್ಕೆ ಆದ್ಯತೆ ನೀಡುವ ನಿರೀಕ್ಷೆಯಿದೆ.



ನೀರಾವರಿ ಯೋಜನೆಗಳು: ತಾಲೂಕಿನಲ್ಲಿ ಸತ್ತಿಗೇರಿ ಏತ ನೀರಾವರಿ ಯೋಜನೆ ನಿಧಾನಗತಿಯಲ್ಲಿ ಸಾಗುತ್ತಿದೆ ಹಾಗೂ ತಾಲೂಕಿನ ವಿವಿಧ ಪ್ರದೇಶಗಳಲ್ಲಿ ಬ್ರಿಡ್ಜ್ ಕಂ ಬ್ಯಾರೇಜ್ ಅಥವಾ ಚೆಕ್ ಡ್ಯಾಮ್ ನಿರ್ಮಾಣದ ಯೋಜನೆಗಳಿಗೆ ಅನುದಾನದ ನಿರೀಕ್ಷೆಯಿದೆ.

ಪ್ರವಾಸೋದ್ಯಮ: ತಾಲೂಕಿನವರವಿ ಕೊಳ ಹಾಗೂ ಸೊಗಲ ಸೋಮೇಶ್ವರ, ಪ್ರೇಕ್ಷಣೀಯ ಸ್ಥಳಗಳ ಅಭಿವೃದ್ಧಿ ಮತ್ತು ವಿಶೇಷ ಯೋಜನೆಗಳಿಗೆ ಬಜೆಟ್‌ನಲ್ಲಿ ಅವಕಾಶ ಸಿಗಬೇಕಿದೆ.

ವಿಶೇಷವಾಗಿ, 16ನೇ ಹಣಕಾಸು ಆಯೋಗದ ವರದಿಯ ಅನ್ವಯ ರಾಜ್ಯಕ್ಕೆ ತೆರಿಗೆ ಹಂಚಿಕೆಯಲ್ಲಿ ಹೆಚ್ಚಳವಾಗಿದ್ದು (4.131%), ಇದು ತಾಲೂಕು ಮಟ್ಟದ ಅಭಿವೃದ್ಧಿ ಕಾರ್ಯಗಳಿಗೆ ಹೆಚ್ಚಿನ ಅನುದಾನ ಸಿಗುವ ಸಾಧ್ಯತೆಯನ್ನು ಹೆಚ್ಚಿಸಿದೆ.

> **ನೂತನ ತಾಲೂಕಿನಲ್ಲಿ ವಿವಿಧ ಇಲಾಖೆಗಳು ಪ್ರಾರಂಭಿಸಲು ವಿಶೇಷ ಪ್ಯಾಕೇಜ್ ಘೋಷಣೆ ಮಾಡಿ ನೂತನ ತಾಲೂಕುಗಳಿಗೆ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡಬೇಕು.**
> ■ **ಅಜೀತಕುಮಾರ ದೇಸಾಯಿ, ಜಿಪಂ ಮಾಜಿ ಸದಸ್ಯರು, ಯರಗಟ್ಟಿ**

> **ಯರಗಟ್ಟಿ ತಾಲೂಕಿಗೆ ಈಗಾಗಲೇ ಪೊಲೀಸ್ ಠಾಣೆ ಮತ್ತು ಮಿನಿ ವಿಧಾನಸೌಧ, ಅಗ್ನಿಶಾಮಕ ಠಾಣೆ ಮಂಜುರಾಗಿದೆ ಇನ್ನೂಳಿದ ಇಲಾಖೆಗಳು ಹಂತ ಹಂತವಾಗಿ ಪ್ರಾರಂಭಿಸಲು ಮತ್ತು ತಾಲೂಕಿನ ನೀರಾವರಿ ಯೋಜನೆಗಳಿಗೆ ವಿಶೇಷ ಪ್ಯಾಕೇಜ್ ಕೊಡುವಂತೆ ಕೇಳಿದ್ದೇನೆ.**
> ■ **ವಿಶ್ವಾಸ ವೈದ್ಯ, ಶಾಸಕರು ಸವದತ್ತಿ ಯಲ್ಲಮ್ಮ ವಿಧಾನ ಸಭಾ ಕ್ಷೇತ್ರ**

ದೈಹಿಕ ಶಿಕ್ಷಕ ಶಿವಾನಂದ ಕೊಪ್ಪದ ಕಾರ್ಯಕ್ಕೆ ಮೆಚ್ಚುಗೆ

ಟಾಪರ್ ವಿದ್ಯಾರ್ಥಿಗೆ ಲಕ್ಷ ರೂ. ಬಹುಮಾನ

◆**ಮುಗಳಖೋಡ/ರಾಯಬಾಗ:** ಕಲಿಕೆಗೆ ಒತ್ತು ನೀಡುವ ಉದ್ದೇಶದಿಂದ ಟಾಪರ್ ವಿದ್ಯಾರ್ಥಿಗೆ ಶಿಕ್ಷಕರೊಬ್ಬರೂ ಬರೋಬ್ಬರಿ ಒಂದು ಲಕ್ಷ ಬಹುಮಾನ ನೀಡಲು ಮುಂದಾಗಿದ್ದಾರೆ.

ಇದೇ ತಿಂಗಳು ಮಾರ್ಚ್ 18ರಿಂದ ಏಪ್ರಿಲ್ 2ರ ವರೆಗೆ ಜರುಗಲಿರುವ ಎಸ್ಸೆಸ್ಸೆಲ್ಸಿ ವಾರ್ಷಿಕ ಪರೀಕ್ಷೆಯಲ್ಲಿ ಪರಮಾನಂದವಾಡಿ ಗ್ರಾಮದ ಎಸ್ ಆರ್‌ಡಿ ಪರೀಕ್ಷಾ ಕೇಂದ್ರಕ್ಕೆ ಪ್ರಥಮ ಸ್ಥಾನ ಪಡೆದ ವಿದ್ಯಾರ್ಥಿಗೆ ಒಂದು ಲಕ್ಷ ರೂಪಾಯಿ ನಗದು ಬಹುಮಾನವನ್ನು ಶ್ರೀ ಹಾಲಸಿದ್ದೇಶ್ವರ ಶಿಕ್ಷಣ ಸಂಸ್ಥೆಯ ಎಸ್‌ಆರ್‌ಡಿ ಪ್ರೌಢಶಾಲೆಯ ದೈಹಿಕ ಶಿಕ್ಷಣದ ಶಿಕ್ಷಕರಾಗಿ ಕಾರ್ಯನಿರ್ವಹಿಸುತ್ತಿರುವ ಮುಗಳಖೋಡ ಪಟ್ಟಣದ ರೈತಾಪಿ ಕುಟುಂಬದಿಂದ ಬಂದ ಶಿಕ್ಷಕ ಶಿವಾನಂದ ಶ್ರೀಶೈಲ ಕೊಪ್ಪದ ಅವರು ಘೋಷಿಸಿದ್ದಾರೆ.

ಪರಮಾನಂದವಾಡಿ ಕೇಂದ್ರದಲ್ಲಿ ಒಟ್ಟು 8 ಪ್ರೌಢಶಾಲಾ ವಿದ್ಯಾರ್ಥಿಗಳನ್ನು ಒಳಗೊಂಡು ಎಸ್‌ಆರ್‌ಡಿ ಪ್ರೌಢಶಾಲೆಯ 44 ವಿದ್ಯಾರ್ಥಿಗಳು ಪರೀಕ್ಷೆ ಬರೆಯುತ್ತಿದ್ದಾರೆ. 44 ವಿದ್ಯಾರ್ಥಿಗಳಲ್ಲಿ ಪ್ರಥಮ ಸ್ಥಾನ ಪಡೆಯಲು ಶಿಕ್ಷಕರು ಪ್ರೋತ್ಸಾಹ ನೀಡಲು ಮುಂದಾಗಿದ್ದಾರೆ.



ಈ ಸಂದರ್ಭದಲ್ಲಿ ಸಂಸ್ಥೆಯ ಅಧ್ಯಕ್ಷ ವಸಂತ ದಳವಾಯಿ, ಉಪನ್ಯಾಸಕ ಶಿವಾನಂದ ಚೌಗಲಾ, ಅಶೋಕ ಶಿರಹಟ್ಟಿ, ದೈಹಿಕ ಶಿಕ್ಷಣ ಶಿಕ್ಷಕ ಶಿವಾನಂದ ಕೊಪ್ಪದ, ಸುನಿಲ ಗಿಡವೀರ, ಸಿದ್ದು ಬಳೋಬಾಳ, ಜಿ.ಬಿ.ದಡ್ಡನವರ, ನಿಂಗಪ್ಪ ಬಂಡಗಾರ, ಎಸ್. ಕೆ.ಮಾನೆ, ಅಣ್ಣಪ್ಪ ಗುಳೆದಾರ, ನಾಗೇಶ ಬಸ್ಸಾಪುರ, ಸುಜಾತಾ ದಳವಾಯಿ, ಅಕ್ಷತಾ ಚೌಗಲಾ, ಇತರರು ಉಪಸ್ಥಿತರಿದ್ದರು.

> **ಈಗಿನ ದಿನಗಳಲ್ಲಿ ಮೊಬೈಲ್ ಬಳಕೆಯತ್ತ ಜಾರುವ ವಿದ್ಯಾರ್ಥಿಗಳನ್ನು ಓದಿನತ್ತ ಎಳೆದು ಬೌದ್ಧಿಕ ಶಕ್ತಿ ಹೆಚ್ಚಿಸಲು ನಾನೆ ಯೋಚಿಸಿ ಮನೆಯ ಸದಸ್ಯರ ಪ್ರೇರಣೆಯೊಂದಿಗೆ ಈ ಯೋಜನೆ ಹಾಕಿಕೊಂಡಿದ್ದೇನೆ. ಕಷ್ಟಪಟ್ಟು ಆಳವಾಗಿ ಅಧ್ಯಯನ ಮಾಡಿದ ವಿದ್ಯಾರ್ಥಿ ಈ ಬಹುಮಾನ ಪಡೆಯಬಹುದು.**
> ■ **ಶಿವಾನಂದ ಕೊಪ್ಪದ, ದೈಹಿಕ ಶಿಕ್ಷಕರು ಎಸ್‌ಆರ್‌ಡಿ ಪ್ರೌಢಶಾಲೆ**

> **ಪರಮಾನಂದವಾಡಿ ಪರೀಕ್ಷಾ ಕೇಂದ್ರಕ್ಕೆ ಪ್ರಥಮ ಸ್ಥಾನ ಪಡೆದ ವಿದ್ಯಾರ್ಥಿಗೆ ಶಿವಾನಂದ ಸರ್ ಲಕ್ಷ ರೂಪಾಯಿ ಘೋಷಣೆಯು ನಮಗೆ ಪ್ರೇರಣೆಯಾಗಿದೆ. ನಾನು ಕೂಡ ಮುಂದಿನ ವರ್ಷ ನಮ್ಮ ಸಂಸ್ಥೆಯಲ್ಲಿ 8 ರಿಂದ 10ನೇ ತರಗತಿಯ ವರೆಗೆ ವ್ಯಾಸಾಂಗ ಮಾಡಿ ನಮ್ಮ ಕೇಂದ್ರಕ್ಕೆ ಪ್ರಥಮ ಸ್ಥಾನ ಪಡೆದ ವಿದ್ಯಾರ್ಥಿಗೆ 1ಲಕ್ಷ ರೂಪಾಯಿ ನಗದು ಬಹುಮಾನ ನೀಡುತ್ತೇನೆ.**
> ■ **ವಸಂತ ಭರಮಪ್ಪ ದಳವಾಯಿ, ಅಧ್ಯಕ್ಷರು, ಶ್ರೀ ಹಾಲಸಿದ್ದೇಶ್ವರ ಶಿಕ್ಷಣ ಸಂಸ್ಥೆ, ಪರಮಾನಂದವಾಡಿ**

ಕಿರುಸುದ್ದಿ

ಸೇವಾ ಭದ್ರತೆ ನೀಡಿ

ಹುಬ್ಬಳ್ಳಿ: ರಾಜ್ಯದ ಸರ್ಕಾರಿ ಪ್ರಥಮ ದರ್ಜೆ ಕಾಲೇಜ್‌ಗಳಲ್ಲಿ ಸೇವೆ ಸಲ್ಲಿಸಿ ಯುಜಿಸಿ ಹಾಗೂ ನಾನ್ ಯುಜಿಸಿ ಅಭ್ಯರ್ಥಿಗಳಿಗೆ ಸರ್ಕಾರ ಸೇವಾ ಭದ್ರತೆ ನೀಡಬೇಕು. ಬಜೆಟ್‌ನಲ್ಲಿ ಸರ್ಕಾರ ಸಿಹಿ ಸುದ್ದಿ ನೀಡಬೇಕು ಎಂದು ರಾಜ್ಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜ್‌ಗಳ ಅತಿಥಿ ಉಪನ್ಯಾಸಕರ ಸಂಘ ರಾಜ್ಯಾಧ್ಯಕ್ಷ ಡಾ.ಹನುಮಂತಗೌಡ ಕಲ್ಮನಿ ಆಗ್ರಹಿಸಿದರು.

ನಗರದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇಲ್ಲವಾದರೆ ತುಮಕೂರಿನಿಂದ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದ ವರೆಗೆ ಬೃಹತ್ ಪಾದಯಾತ್ರೆ ಮಾಡಿ ನಮ್ಮ ಬೇಡಿಕೆ ಈಡೇರುವವರೆಗೂ ಹೋರಾಟ ಮಾಡಲಾಗುವುದು. 9375 ಅತಿಥಿ ಉಪನ್ಯಾಸಕರು ಸೇವೆ ಸಲ್ಲಿಸುತ್ತಿದ್ದು, 6300 ನಿವೃತ್ತಿ ಹೊಂದಿದ್ದಾರೆ ಎಂದರು. ಹಿಂದೆ ಚಳಿಗಾಲದ ಅಧಿವೇಶನ ಸಮಯದಲ್ಲಿ ಅತಿಥಿ ಉಪನ್ಯಾಸಕರಿಗೆ ಸೇವಾ ಭದ್ರತೆ ನೀಡಬೇಕು ಎಂದು ಆಗ್ರಹಿಸಿ ಬೃಹತ್ ಪ್ರತಿಭಟನೆ ಮಾಡಲಾಗಿತ್ತು. ಆಗ ಸರ್ಕಾರದ ಪ್ರತಿನಿಧಿಗಳು ಸಮಸ್ಯೆ ಪರಿಹರಿಸುವ ಭರವಸೆ ನೀಡಿದ್ದರು. ಎರಡು ಮೂರು ದಿನ ಬೇಡಿಕೆ ಈಡೇರಿಸುವುದಾಗಿ ಹೇಳಿದ್ದರು. ಮೂರು ತಿಂಗಳು ಕಳೆದರು ಸರ್ಕಾರದ ಸ್ಪಂದಿಸದಿರುವುದು ನೋವಿನ ಸಂಗತಿ ಎಂದು ಬೇಸರ ವ್ಯಕ್ತಪಡಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ, ಉನ್ನತ ಶಿಕ್ಷಣ ಸಚಿವ ಸುಧಾಕರ, ಕಾನೂನು ಸಚಿವ ಎಚ್.ಕೆ.ಪಾಟೀಲ, ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರು ಬರುವ ಬಜೆಟ್ ಪೂರ್ವ ದಿನ ಇಲ್ಲವೇ ಬಜೆಟ್ ದಿನ ನಮ್ಮ ಬೇಡಿಕೆ ಈಡೇರಿಸಿ ಸಿಹಿ ಸುದ್ದಿ ನೀಡಬೇಕು ಎಂದು ಆಗ್ರಹಿಸಿದರು. ಪ್ರಭುರಾಜ ಗೌಡ ಪಾಟೀಲ, ವಿಜಯಕುಮಾರ ದೇಸಾಯಿ, ಜಯಕುಮಾರ, ಲಕ್ಷ್ಮಣ ಗೌಡರ ಇದ್ದರು.

ಉದ್ಘಾಟನೆ ಇಂದು

ಹುಬ್ಬಳ್ಳಿ: ಕರ್ನಾಟಕ ರಾಜ್ಯ ಹಿರಿಯ ನಾಗರಿಕರು ಹಾಗೂ ನಿವೃತ್ತ ನೌಕರರ ಕ್ಷೇಮಾಭಿವೃದ್ಧಿ ಸಂಘಕ್ಕೆ ಗ್ರಂಥಾಲಯ ಇಲಾಖೆ ಹಿರಿಯ ನಾಗರಿಕರಿಗಾಗಿ ವಾಚನಾಲಯ ಸೇವಾ ಕೇಂದ್ರ ಮಂಜೂರ ಮಾಡಿದ್ದು, ಇದರ ಉದ್ಘಾಟನೆ ಸಮಾರಂಭ ಮಾ.6ರಂದು ಸಂಜೆ 5.30ಕ್ಕೆ ಹೊಸೂರಿನಲ್ಲಿರುವ ಸಂಘದ ಕಚೇರಿಯಲ್ಲಿ ನಡೆಯಲಿದೆ. ಮೇಯರ್ ಜ್ಯೋತಿ ಪಾಟೀಲ ಚಾಲನೆ ನೀಡಲಿದ್ದಾರೆ. ಮುಖ್ಯ ಅತಿಥಿ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷೆ ಡಾ. ಮಾನಸಾ, ಗ್ರಾಮೀಣ ತಾಲೂಕು ತಹಶೀಲ್ದಾರ್ ಜೆ.ಬಿ. ಮಜ್ಜಗಿ, ನಗರ ಕೇಂದ್ರ ಗ್ರಂಥಾಲಯ ಉಪನಿರ್ದೇಶಕ ಅಜಯ ಕುಮಾರ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ. ಲಿಂಗರಾಜ ಅಂಗಡಿ ಆಗಮಿಸುವರು. ಸಮಾರಂಭದ ಅಧ್ಯಕ್ಷತೆಯನ್ನು ಸಂಘದ ರಾಜ್ಯಾಧ್ಯಕ್ಷ ಬಿ.ಎ. ಪಾಟೀಲ ವಹಿಸುವರು.

ಸಂಗೀತದಿಂದ ನೆಮ್ಮದಿ

ಹುಬ್ಬಳ್ಳಿ: ಜಂಜಾಟದ ಇಂದಿನ ದಿನಮಾನದಲ್ಲಿ ಸಂಗೀತದಂತಹ ದೇಶಿಯ ಕಲೆಗೆ ಪ್ರಾಶಸ್ತ್ಯ ಕೊಡುವುದರಿಂದ ಮನಸ್ಸಿಗೆ ಒಂದಿಷ್ಟು ನೆಮ್ಮದಿ, ಆನಂದ ಸಿಗುತ್ತದೆ. ಶಾಸ್ತ್ರೀಯ ಸಂಗೀತ ತನ್ನದೇ ಆದ ಮಹತ್ವ ಇಂದಿಗೂ ಉಳಿಸಿಕೊಂಡು ಬಂದಿದೆ ಎಂದು ಸಭಾಪತಿ ಬಸವರಾಜ ಹೊರಟ್ಟಿ ಹೇಳಿದರು.

ಮಂಗಳವಾರ ಗದುಗಿನ ವೀರೇಶ್ವರ ಪುಣ್ಯಾಶ್ರಮದ ಡಾ. ಪುಟ್ಟರಾಜ ಗವಾಯಿಗಳ 115ನೇ ಜನ್ಮದಿನೋತ್ಸವ ಅಂಗವಾಗಿ ಧಾರವಾಡದ ಡಾ. ಪುಟ್ಟರಾಜ ಗವಾಯಿ ಪ್ರತಿಷ್ಠಾನ ಇಲ್ಲಿಯ ಸವಾಯಿ ಗಂಧರ್ವ ಹಾಲ್‌ನಲ್ಲಿ ಏರ್ಪಡಿಸಿದ್ದ ಸಮಾರಂಭದಲ್ಲಿ 2026ರ ಪುಟ್ಟರಾಜ ಸಮ್ಮಾನ ರಾಷ್ಟ್ರೀಯ ಪುರಸ್ಕಾರವನ್ನು ಹಿರಿಯ ವಯೋಲಿನ್ ವಾದಕ ಪಂ. ಬಿ.ಎಸ್. ಮಠ ಅವರಿಗೆ ಪ್ರದಾನ ಮಾಡಿ ಅವರು ಮಾತನಾಡಿದರು.

ಇಂತಹ ಸಂಗೀತ ಕಾರ್ಯಕ್ರಮಗಳಿಗೆ ಇಂದಿನ ಯುವ ಪೀಳಿಗೆ ಮಾತ್ರವಲ್ಲ ಅನೇಕ ಹಿರಿಯರಿಂದಲೂ ಸ್ಪಂದನೆ ಸಿಗದಿರುವುದು ಬೇಸರದ ಸಂಗತಿ. ಇಂದಿನ ಒತ್ತಡದ ಬದುಕಿಗೆ ಶಾಸ್ತ್ರೀಯ ಸಂಗಿತ ಪರಿಹಾರವಾಗಬಲ್ಲದು. ಮುಂಬರುವ ದಿನಗಳಲ್ಲಿ ಜೀವನ ಇನ್ನಷ್ಟು ಜಟಿಲಗೊಳ್ಳುತ್ತದೆ. ವಿಜ್ಞಾನ, ತಂತ್ರಜ್ಞಾನ ಎಷ್ಟೇ ಬೆಳೆದರೂ ಮಕ್ಕಳಿಗೆ ದೇಶಿಯ ಕಲೆಗಳಲ್ಲಿಯೂ ಅಭಿರುಚಿ ಬೆಳೆಸುವುದು ಅಗತ್ಯ ಎಂದರು.

ಶಾಸಕ ಮಹೇಶ ಟೆಂಗಿನಕಾಯಿ ಮಾತನಾಡಿ, ಇಂದು ಎಲ್ಲೇ ಹೋದರೂ ಟೆನ್ಶನ್ ಎನ್ನುತ್ತಾರೆ. ಯಾವುದೇ ದುಡ್ಡಿಲ್ಲದೇ ಇದಕ್ಕೆ ಪರಿಹಾರ ನೀಡುವ ಶಕ್ತಿ ಸಂಗೀತಕ್ಕೆ ಇದೆ ಎಂದರು.

ಮೇಯರ್ ಜ್ಯೋತಿ ಪಾಟೀಲ ಮಾತನಾಡಿ, ಸಂಗೀತ ಪರಂಪರೆ ಉಳಿಸಿಕೊಂಡು ಹೋಗುವಲ್ಲಿ ಪಾಲಿಕೆಯಿಂದ ಅಗತ್ಯ ಸಹಕಾರ ನೀಡುವುದಾಗಿ ಹೇಳಿದರು. ಪ್ರಶಸ್ತಿ ಸ್ವೀಕರಿಸಿದ ಪಂ. ಬಿ.ಎಸ್. ಮಠ ಮಾತನಾಡಿದರು. ಡಾ. ಮಲ್ಲಿಕಾರ್ಜುನ ಸ್ವಾಮೀಜಿ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು. ಪ್ರತಿಷ್ಠಾನದ ಅಧ್ಯಕ್ಷ ಮಹಾಬಲೇಶ್ವರ ಹಾಸಿನಾಳ ಅಧ್ಯಕ್ಷತೆ ವಹಿಸಿದ್ದರು. ಕಾರ್ಯದರ್ಶಿ ಪಂ. ವೆಂಕಟೇಶಕುಮಾರ, ಪಿ.ಎಂ. ಪಾಟೀಲ, ಉದಯ ದೇಸಾಯಿ, ಮಚೇಥಿಯಾ ಫೌಂಡೇಷನ್ ಚೇರ್ಮನ್ ಜಿತೇಂದ್ರ, ಮಚೇಥಿಯಾ ಇತರರು ಪಾಲ್ಗೊಂಡಿದ್ದರು. ರವಿ ಕುಲಕರ್ಣಿ, ಉಪಾಧ್ಯಕ್ಷ ಶಂಕರ ಕುಂಬಿ, ಶುಭಾಂಗಿ ಜಾಧವ ಇದ್ದರು.



ಹುಬ್ಬಳ್ಳಿ: ಹಲಗಿ-ಬಾರಸುವರಿಗೆ ಹಾಗೂ ಚಪ್ಪಲಿ ಹೊಲಿಯುವ ದಲಿತ ಕಾರ್ಮಿಕರಿಗೆ ಸಹಾಧನ ನೀಡಬೇಕು ಎಂದು ಆಗ್ರಹಿಸಿ ದಲಿತ ಕಾರ್ಮಿಕರ ಅಸಂಘಟಿತ ಒಕ್ಕೂಟ ತಹಶೀಲ್ದಾರ್ ಮೂಲಕ ಮುಖ್ಯಮಂತ್ರಿಗೆ ಮನವಿ ಸಲ್ಲಿಸಿದರು.

ನೇಮಕಾತಿ ಪ್ರಕ್ರಿಯೆಯಿಂದ ಅನ್ಯಾಯ: ಅಶೋಕ

ಹುಬ್ಬಳ್ಳಿ: ರಾಜ್ಯ ಸರ್ಕಾರ 56,432 ಹುದ್ದೆಗಳ ಭರ್ತಿ ಮಾಡಲು ಮುಂದಾಗಿದ್ದು, ಶೇ. 56ರ ಮೀಸಲಾತಿಯನ್ನು ಹೊರಗಿಟ್ಟು ನೇಮಕಾತಿ ಮಾಡುತ್ತಿರುವುದು ದಲಿತರಿಗೆ ಮಾಡುತ್ತಿರುವ ಅನ್ಯಾಯವಾಗಿದೆ ಎಂದು ಧಾರವಾಡ ಜಿಲ್ಲಾ ಎಸ್‌ಟಿ ಮೋರ್ಚಾ ಅಧ್ಯಕ್ಷ ಅಶೋಕ ವಾಲ್ಮೀಕಿ ಅಸಮಾಧಾನ ವ್ಯಕ್ತಪಡಿಸಿದರು.

ಗುರುವಾರ ಇಲ್ಲಿಯ ಅರವಿಂದ ನಗರದ ಬಿಜೆಪಿ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನ್ಯಾಯಮೂರ್ತಿ ನಾಗಮೋಹನ ದಾಸ್ ಆಯೋಗ ರಚಿಸುವಾಗ ಹಾಗೂ ಸರ್ಕಾರ ಒಳಮೀಸಲಾತಿ ಮಸೂದೆ ಮಂಡಿಸಿ ರಾಜ್ಯಪಾಲರ ಅನುಮೋದನೆ ಪಡೆಯುವಾಗ ಶೇ. 56 ರ ಮೀಸಲಾಯಿ ಇತ್ತು. ಈಗ ಏಕಾಏಕಿ ಶೇ. 56ರಿಂದ ಶೇ. 50 ಕ್ಕೆ ಇಳಿಸಿದ್ದು, ದಲಿತ ನಾಯಕರ ಹಾಗೂ ಹೋರಾಟಗಾರರ ಪರಿಗಣಿಸದೆ ಕಡೆಗಣಿಸಲಾಗಿದೆ ಎಂದರು.

ರಾಜ್ಯ ಎಸ್‌ಸಿ ಮೋರ್ಚಾ ಪ್ರಧಾನ ಕಾರ್ಯದರ್ಶಿ ಮಹೇಂದ್ರ ಕೌತಾಳ ಮಾತನಾಡಿ, ಅಕ್ಟೋಬರ್ 2025ರಲ್ಲಿ ರಾಜ್ಯ ಹೈಕೋರ್ಟ್ ಶೇ. 56ರ ಮೀಸಲಾತಿಗೆ ಮಧ್ಯಂತರ ಆದೇಶದಲ್ಲಿ ಭಾಗಶಃ ತಡೆ ನೀಡಿರುವುದು ನಿಜ. ಆದರೆ ಸರ್ಕಾರ ನ್ಯಾಯಾಲಯದಲ್ಲಿ ತನ್ನ ಬಲವಾಗಿ ನಿರ್ಧಾರವನ್ನು ಸಮರ್ಥಿಸುವ, ದಾಖಲೆಗಳನ್ನು ಸಲ್ಲಿಸುವಲ್ಲಿ ವಿಫಲವಾಗಿದೆ. ಸರ್ಕಾರ ಸರ್ವಪಕ್ಷಗಳ ಪ್ರಮುಖರ ಸಭೆ ಕರೆದು ಈ ಸಂಬಂಧ ಚರ್ಚೆ ಕೈಗೊಳ್ಳಬೇಕು ಎಂದು ಆಗ್ರಹಿಸಿದರು. ಗ್ರಾಮಾಂತರ ಜಿಲ್ಲಾ ಬಿಜೆಪಿ ಅಧ್ಯಕ್ಷ ನಿಂಗಪ್ಪ ಸುತಗಟ್ಟಿ, ಮಹಾನಗರ ಜಿಲ್ಲಾ ಎಸ್‌ಸಿ ಮೋರ್ಚಾ ಅಧ್ಯಕ್ಷ ಹನಮಂತ ಹರಿವಾಣ, ಗ್ರಾಮಾಂತರ ಜಿಲ್ಲಾ ಎಸ್‌ಸಿ ಮೋರ್ಚಾ ಅಧ್ಯಕ್ಷ ಸಹದೇವ ಮಳಗಿ, ಮುಖಂಡರಾದ ಮಾರುತಿ ಚಾಕಲಬ್ಬಿ, ಹನಮಂತ ಗೌಡ್ರ, ಸುಭಾಷ ಅಂಕಲಕೋಟೆ, ಮಂಜುನಾಥ ಬಿಜವಾಡ ಇದ್ದರು.



ಹುಬ್ಬಳ್ಳಿ: ಇಲ್ಲಿಯ ಹುಬ್ಬಳ್ಳಿ ಕೆಎಲ್‌ಇ ತಾಂತ್ರಿಕ ವಿಶ್ವವಿದ್ಯಾಲಯದ ಭೌತ ಶಾಸ್ತ್ರ ವಿಭಾಗ ವತಿಯಿಂದ ರಾಷ್ಟ್ರೀಯ ವಿಜ್ಞಾನ ದಿನದ ಅಂಗವಾಗಿ ವಿಜ್ಞಾನ ಕ್ಷೇತ್ರ ಹಾಗೂ ವಿಕಸಿತ ಭಾರತದಲ್ಲಿ ಮಹಿಳೆಯರ ಪಾತ್ರ ಕುರಿತು ಉಪನ್ಯಾಸ ಕಾರ್ಯಕ್ರಮ ಆಯೋಜಿಸಲಾಗಿತ್ತು. ಐಐಐಟಿ ಸುರತ್‌ನ ಮಾಜಿ ನಿರ್ದೇಶಕ ಪ್ರೊ. ಜಿ.ಎಸ್. ಭಟ್ ಅವರು ಉಪನ್ಯಾಸ ಮಾಡಿದರು. ಡಾ. ಎಸ್.ಎನ್ ಮಠದ, ಡಾ. ರಾಜಶ್ರೀ ಹೊದಲೂರ ಇದ್ದರು.

ದಶದಿಕ್ಕುಗಳಲ್ಲೂ ಅನುರಣಿಸಿದ ಜಗ್ಗಲಗಿ



ಹುಬ್ಬಳ್ಳಿ: ಹೋಳಿ ಹಬ್ಬದ ಹಿನ್ನೆಲೆ ಹುಬ್ಬಳ್ಳಿ ಜಗ್ಗಲಗಿ ಹಬ್ಬದ ಸಮಿತಿ ವತಿಯಿಂದ ಗುರುವಾರ ನಗರದ ದಶದಿಕ್ಕುಗಳಲ್ಲೂ ಜಗ್ಗಲಗಿಗಳು ಅನುರಣಿಸಿದವು. ರಾಜ್ಯದ ವಿವಿಧ ಭಾಗಗಳಿಂದ ಬಂದಿದ್ದ ಹಲಗಿ, ಡೋಲು ವಾದ್ಯಗಳು, ಕೋಲಾಟದ ತಂಡಗಳು, ವೇಷಧಾರಿಗಳು, ಬಣ್ಣದ ಎರಚಾಟ ಹಬ್ಬಕ್ಕೆ ಮೆರಗು ತಂದಿತು. ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಮಾತನಾಡಿ, ಹೋಳಿ ಹುಣ್ಣಿಮೆಗೆ ಐತಿಹಾಸಿಕ ಮಹತ್ವವಿದೆ. ಹಿಂದು ಪಂಚಾಂಗದ ಪ್ರಕಾರ ಇದು ಪ್ರಸ್ತುತ ವರ್ಷದ ಕೊನೆಯ ಹಬ್ಬವಾಗಿದ್ದು, ಈ ಹಬ್ಬದ ಮೂಲಕ ಹೊಸ ವಸಂತ ಕಾಲವನ್ನು ಸ್ವಾಗತ ಮಾಡಲಾಗುತ್ತಿದೆ. ಇದವೇ ಹೋಳಿ ಹುಣ್ಣಿಮೆ ಹಬ್ಬದ ವಿಶೇಷ ಎಂದರು.

ಹುಬ್ಬಳ್ಳಿ ಜಗ್ಗಲಗಿ ಹಬ್ಬದ ಆಯೋಜಕ ಹಾಗೂ ಶಾಸಕ ಮಹೇಶ ಟೆಂಗಿನಕಾಯಿ ಮಾತನಾಡಿ, ಹುಬ್ಬಳ್ಳಿ ಜಗ್ಗಲಗಿ ಹಬ್ಬ ನಾಡಿ ಸಂಸ್ಕೃತಿ ಬೆಳೆಸುವ ಆಯಾಮವಾಗಿದೆ. ಕಳೆದ 14 ವರ್ಷದಿಂದ ಆಚರಿಸಲಾಗುತ್ತಿದ್ದು, ಹಿಂದೂ ಸಮಾಜ ಸಂಘಟಿಸುವ ಕಾರ್ಯವಾಗುತ್ತಿದೆ. ಹಬ್ಬದಲ್ಲಿ 60 ಜನ ಕಲಾ ತಂಡಗಳು ಭಾಗವಹಿಸಿವೆ ಹಾಗೂ 22 ಜನ ಸ್ವಾಮೀಜಿ ಆಶೀರ್ವಾದ ಮಾಡಲು ಬಂದಿದ್ದಾರೆ ಎಂದು ತಿಳಿಸಿದರು.

- ಹಬ್ಬದ ಮೆರವಣಿಗೆಯನ್ನು ಕಣ್ತುಂಬಿಕೊಳ್ಳಲು ದಾರಿಯುದ್ದಕ್ಕೂ ಜಮಾಯಿಸಿದ್ದ ಜನ, ಕುಣಿದು ಕುಪ್ಪಳಿಸಿದರು
- ಕೇಂದ್ರ ಸಚಿವ ಪ್ರಹ್ಲಾದ ಜೋಶಿ, ಮೂರು ಸಾವಿರ ಮಠದ ಗುರುಸಿದ್ಧರಾಜಯೋಗೀಂದ್ರ ಸ್ವಾಮೀಜಿ ಸೇರಿದಂತೆ 22 ಕ್ಕೂ ಹೆಚ್ಚು ಸ್ವಾಮೀಜಿಗಳು ಜಗ್ಗಲಗಿ ಹಬ್ಬಕ್ಕೆ ಚಾಲನೆ ನೀಡಿದರು
- 60 ಕಲಾವಿದರ ತಂಡಗಳು ನೂರಾರು ಜನರು ಹಬ್ಬದಲ್ಲಿ ಭಾಗಿ

ಬಸವಲಿಂಗ ಸ್ವಾಮೀಜಿ, ಶಿವಕುಮಾರ ಸ್ವಾಮೀಜಿ, ಅಮರ ಸಿದ್ದೇಶ್ವರ ಸ್ವಾಮೀಜಿ, ಅಮರೇಶ್ವರ ಸ್ವಾಮೀಜಿ, ಸಿದ್ದಲಿಂಗ ಸ್ವಾಮೀಜಿ, ಚಂದ್ರಶೇಖರ ಸ್ವಾಮೀಜಿ ಸೇರಿದಂತೆ ಅನೇಕ ಸ್ವಾಮೀಜಿಗಳು ಸಾನ್ನಿಧ್ಯ ವಹಿಸಿದ್ದರು. ಬಿಜೆಪಿ ಶಿಸ್ತು ಸಮಿತಿ ಅಧ್ಯಕ್ಷ ಲಿಂಗರಾಜ ಪಾಟೀಲ, ಮಾಜಿ ಶಾಸಕ ಅಶೋಕ ಕಾಟವೆ, ಮೇಯರ್ ಜ್ಯೋತಿ ಪಾಟೀಲ, ಉಪಮೇಯರ್ ಸಂತೋಷ ಚಹ್ವಾಣ, ಮಹೇಂದ್ರ ಕೌತಾಳ, ದತ್ತಮೂರ್ತಿ ಕುಲಕರ್ಣಿ, ಚಂದ್ರಿಕಾ ಮೇಸ್ತ್ರಿ, ಉಮಾ ಮುಕುಂದ ಇದ್ದರು.

ಪ್ರಶಸ್ತಿಕ್ಕಿಂತ ದೊಡ್ಡದು

ಹುಬ್ಬಳ್ಳಿ ಜಗ್ಗಲಗಿ ಹಬ್ಬವನ್ನು ದೇಶ ಮೂಲೆ ಮೂಲೆಯಿಂದ ಜನರ ಬಂದು ನೋಡುತ್ತಿದ್ದಾರೆ. ವಿಶ್ವದ ಅರ್ಧದಷ್ಟು ದೇಶದಲ್ಲಿ ಯುದ್ಧ ನಡೆಯುತ್ತಿದೆ. ಆ ದೇಶಗಳಲ್ಲಿ ರಕ್ತದೋಕಳಿ ಆಗುತ್ತಿದ್ದು, ಭಾರತದಲ್ಲಿ ನಾವು ಬಣ್ಣದ ಓಕಳಿ ಆಡುತ್ತಿದ್ದೇವೆ. ಇದು ಭಾರತ ದೇಶದ ವಿಶೇಷ. ನಾವೆಲ್ಲರೂ ಭಾರತದಲ್ಲಿ ಜನಿಸಿರುವುದು ಎಲ್ಲ ಪ್ರಶಸ್ತಿಗಳ ಪಡೆದಿರುವುದಕ್ಕಿಂತ ದೊಡ್ಡದು ಎಂದು ಮಣಕವಾಡ ಅಭಿನವ ಮೃತ್ಯುಂಜಯ ಸ್ವಾಮೀಜಿ ಹೇಳಿದರು.

> ಭಾರತ ಅರಿಯಬೇಕಾದರೆ ವಿವೇಕಾನಂದ ಅಧ್ಯಯನ ಮಾಡಬೇಕು. ದೇಶ ಸಂಸ್ಕೃತಿ ಅರಿಯಬೇಕಾದರೆ ಹುಬ್ಬಳ್ಳಿ ಜಗ್ಗಲಗಿ ಹಬ್ಬ ನೋಡಬೇಕು. ಐತಿಹಾಸಿ ಘಟನೆಗಳಿಗೆ ಸಾಕ್ಷಿಯಾದ ಹುಬ್ಬಳ್ಳಿ 15 ವರ್ಷದಿಂದ ಜಗ್ಗಲಗಿ ಹಬ್ಬ ಮಾಡಲಾಗುತ್ತಿದೆ.
> ■ ಸದಾಶಿವ ಸ್ವಾಮೀಜಿ, ಹುಕ್ಕೇರಿ

ನಾಡಿನ ಸಂಸ್ಕೃತಿ, ಪರಂಪರೆ ಉಳಿವು



ಹುಬ್ಬಳ್ಳಿ ಜಗ್ಗಲಗಿ ಹಬ್ಬಕ್ಕೆ ಶಾಸಕ ಮಹೇಶ ಟೆಂಗಿನಕಾಯಿ ಅವರು ಮೂಲ ಕಾರಣ. ಈ ಹಬ್ಬ ಆಚರಿಸುವ ಮೂಲಕ ಎಂಎಲ್‌ಎ ಆಗಿದ್ದಾರೆ. ಒಬ್ಬ ಶಾಸಕರಾಗಿ ನಾಡಿನ ಸಂಸ್ಕೃತಿ, ಪರಂಪರೆ ಬೆಳೆಸುವ ಕಾರ್ಯ ಮಾಡುತ್ತಿದ್ದು, ಉಳಿದವರಿಗೆ ಮಾದರಿಯಾಗಿದ್ದಾರೆ ಎಂದು ಮೂರು ಸಾವಿರ ಮಠದ ಗುರುಸಿದ್ಧರಾಜಯೋಗೀಂದ್ರ ಸ್ವಾಮೀಜಿ ಹೇಳಿದರು.

ಎಸ್‌ಐಆರ್ ರದ್ದತಿ ಅವಶ್ಯ: ಶಿವಸುಂದರ

ಹುಬ್ಬಳ್ಳಿ: ಜನರಲ್ಲಿ ಮತದಾರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಬಗ್ಗೆ ಜಾಗೃತಿ ಮೂಡಿಸಿ ಯುದ್ಧೋಪಾಯದಲ್ಲಿ ಹೋರಾಟ ಮಾಡಿದರೆ ಅದನ್ನು ರದ್ದು ಪಡಿಸಲು ಸಾಧ್ಯ. ಇಲ್ಲವಾದರೆ ಅದು ನಮ್ಮನ್ನು ರದ್ದು ಮಾಡುತ್ತದೆ. ನಾವು ನಾಗರಿಕರಾಗಿ ಉಳಿಯಬೇಕಾದರೆ ಎಸ್‌ಐಆರ್ ರದ್ದಾಗಬೇಕು ಎಂದು ಚಿಂತಕ ಬೆಂಗಳೂರಿನ ಶಿವಸುಂದರ ತಿಳಿಸಿದರು.

ಗುರುವಾರ ಜೆ.ಸಿ.ನಗರದ ಅಕ್ಕನ ಬಳಗದಲ್ಲಿ ಮೇ ಸಾಹಿತ್ಯ ಮೇಳ ಬಳಗ ಹಾಗೂ ಸಂವಿಧಾನ ಸುರಕ್ಷಾ ಸಮಿತಿ ವತಿಯಿಂದ ಹಮ್ಮಿಕೊಂಡಿದ್ದ ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್) ಪೌರತ್ವದ ಪ್ರಶ್ನೆ: ಪ್ರಭುತ್ವದ ಹುನ್ನಾರಗಳು ವಿಚಾರವಾಗಿ ಸಂವಾದ ಗೋಷ್ಠಿಯಲ್ಲಿ ಅವರು ಮಾತನಾಡಿದರು.

ಸಂವಿಧಾನಾತ್ಮಕವಾಗಿ ಎಲ್ಲರಿಗೂ ಮತದಾನದ ಹಕ್ಕು ಸಿಗಬೇಕು ಎಂಬುವುದು ಪ್ರಜಾಪ್ರಭುತ್ವದಲ್ಲಿ ಇದೆ. ನಾವು ಮತದಾರ ಪಟ್ಟಿ ಪರಿಷ್ಕರಣೆ ವಿರೋಧಿಸುತ್ತಿಲ್ಲ, ಆದರೆ ಮತದಾರ ಪಟ್ಟಿ ಪರಿಷ್ಕರಣೆಗೆ ವಿಧಾನಕ್ಕೆ ನಮ್ಮ ವಿರೋಧವಿದೆ ಎಂದರು.

ಸಂವಿಧಾನ ಬಾಹಿರವಾಗಿ ನಾಗರಿಕತ್ವದಿಂದ ಕಿತ್ತು ಹಾಕುವುದೆ ಎಸ್‌ಐಆರ್ ಆಗಿದೆ. ಸರ್ಕಾರ ಕೇಳುವ 11 ದಾಖಲೆಗಳು ನಮ್ಮಲ್ಲಿ ಇಲ್ಲ, ಇದು ನಮ್ಮ ಮೇಲೆ ಆಗುತ್ತಿರುವ ಯುದ್ಧ ಆಗಿದೆ. ದೇಶದ ನಾಗರಿಕನಾಗಿದ್ದರೆ ಮಾತ್ರ ಸಂವಿಧಾನ ನಮ್ಮನ್ನು ರಕ್ಷಿಸುತ್ತದೆ. ಇದು ಮತದ ಪ್ರಶ್ನೆ ಅಲ್ಲ, ನಮ್ಮ ಅಸ್ತಿತ್ವದ ಪ್ರಶ್ನೆ ಆಗಿದೆ. ಅಲ್ಪಸಂಖ್ಯಾತರು, ಹಿಂದುಳಿದವರು ಎಸ್‌ಐಆರ್‌ಗೆ ಬಲಿಯಾಗುತ್ತಾರೆ ಎಂದು ತಿಳಿಸಿದರು.

ಚಿಂತಕ ಧಾರವಾಡದ ಡಾ. ಜಿ.ಎನ್. ದೇವಿ ಮಾತನಾಡಿ, ದೇಶದಲ್ಲಿ ಸಂವಿಧಾನ ಬದಲಿಸುವ ಪ್ರಕ್ರಿಯೆ ನಡೆದಿದೆ. ಎಸ್‌ಐಆರ್ ಜೊತೆಗೆ ರಾಷ್ಟ್ರೀಯ ಜನಸಂಖ್ಯೆ ವರದಿ(ಎನ್‌ಪಿಆರ್) ಸಹ ನಡೆಯುತ್ತಿದೆ. 2027 ಕ್ಕೆ ಇದನ್ನು ಪೂರ್ಣಗೊಳಿಸಿ ನಂತರ ಡಿಲಿಮಿಟೇಷನ್ ಮಾಡಲಿದ್ದಾರೆ. ಮುಸ್ಲಿಂ ಮತದಾರರ ಹೆಚ್ಚಿರುವ ಕ್ಷೇತ್ರ ಇಬ್ಭಾಗಿಸುವ ಮೂಲಕ ಲೋಕಸಭೆಯಲ್ಲಿ ತಮ್ಮ ಬಲ ಹೆಚ್ಚಿಸಿಕೊಳ್ಳುವ ಹುನ್ನಾರ ನಡೆದಿದೆ ಎಂದರು. ಹಿರಿಯ ಪತ್ರಕರ್ತ ಸನತಕುಮಾರ ಬೆಳಗಲಿ ಅಧ್ಯಕ್ಷತೆ ವಹಿಸಿ ಮಾತನಾಡಿ, ಬಿಜೆಪಿ ಸರ್ಕಾರ ದೇಶದಲ್ಲಿ ಆಡಳಿತಕ್ಕೆ ಬಂದ ಮೇಲೆ ಹೊಸ ಹೊಸ ಅಜೆಂಡಾಗಳ ತರಲಾಗುತ್ತಿದೆ. ಪ್ರಜಾಪ್ರಭುತ್ವ ನಾಶ ಮಾಡುವ ಮೂಲಕ ಮನುವಾದಿ ಸಂಸ್ಕೃತಿ ಬೆಳೆಸಲಾಗುತ್ತಿದೆ ಎಂದು ಆರೋಪಿಸಿದರು. ಮಾಜಿ ಸಂಸದ ಐ.ಜಿ. ಸನದಿ, ಬಿ.ಎಸ್. ಸೊಪ್ಪಿನ, ಸಿದ್ದು ತೇಜಿ, ಅನ್ವರ ಮುಧೋಳ, ಮಹೇಂದ್ರ ಸಿಂಘಿ, ರಾಜಶೇಖರ ಮೆಣಸಿನಕಾಯಿ, ಸಂಗಮೇಶ ಮೆಣಸಿನಕಾಯಿ, ಗುರುನಾಥ ಉಳ್ಳಿಕಾಶಿ ಇದ್ದರು.





ಕಲಘಟಗಿ: ತಾಲೂಕಿನ ಬಮ್ಮಿಗಟ್ಟಿ ಗ್ರಾಮದಲ್ಲಿ ಹೋಳಿ ಹಬ್ಬದ ಅಂಗವಾಗಿ ಜನತೆ ಸಂಭ್ರಮದಿಂದ ಬಣ್ಣದಾಟವಾಡಿದರು.



ಹುಬ್ಬಳ್ಳಿ: ಇತ್ತೀಚೆಗೆ ಬಾಗಲಕೋಟೆ ಬಿವಿವಿಎಸ್ ಪಾಲಿಟೆಕ್ನಿಕ್ ಕಾಲೇಜ್‌ನಲ್ಲಿ ನಡೆದ ರಾಜ್ಯ ಮಟ್ಟದ ಐಎಸ್‌ಟಿಇ ವಿದ್ಯಾರ್ಥಿಗಳ ಸಮಾವೇಶ ವತಿಯಿಂದ ಪೇಪರ್ ಪ್ರಸೆಂಟೆಷನ್ ಸ್ಪರ್ಧೆಯಲ್ಲಿ ನಗರದ ಕೆಎಲ್‌ಇ ಸಂಸ್ಥೆ ಶ್ರೀಮತಿ ಸಿ.ಐ. ಮುನವಳ್ಳಿ ಪಾಲಿಟೆಕ್ನಿಕ್ ಇ ಆ್ಯಂಡ್ ಸಿ ವಿಭಾಗದ ವಿದ್ಯಾರ್ಥಿಗಳಾದ ಪ್ರಜ್ವಲ ಕರ್ಲವಾಡ ಹಾಗೂ ಭರತ ಇಂಗಳಹಳ್ಳಿ ಅವರು ತೃತಿಯ ಸ್ಥಾನ ಪಡೆದಿದ್ದಾರೆ. ಸ್ಥಾನಿಕ ಆಡಳಿತ ಮಂಡಳಿಯ ಕಾರ್ಯಾಧ್ಯಕ್ಷ ಮಂಜುನಾಥ ಮುನವಳ್ಳಿಯವರು, ಪ್ರಾಚಾರ್ಯ ವೀರೇಶ ಅಂಗಡಿಯವರು, ವಿಭಾಗದ ಮುಖ್ಯಸ್ಥೆ ಸವಿತಾ ಯಳಸಂಗಿ ಹರ್ಷವ್ಯಕ್ತಪಡಿಸಿದ್ದಾರೆ.

ಶಿಕ್ಷಣಕ್ಕೆ ಹೆಚ್ಚು ಆದ್ಯತೆ ನೀಡಿ: ಕೋನರಡ್ಡಿ



ನವಲಗುಂದ: ಗ್ರಾಮೀಣ ಭಾಗದಲ್ಲಿಯೂ ಕೂಡಾ ಶಿಕ್ಷಣಕ್ಕೆ ಹೆಚ್ಚು ಆದ್ಯತೆ ಕೊಟ್ಟು, ಶೈಕ್ಷಣಿಕ ಪ್ರಗತಿಯ ಜೊತೆಗೆ ಸರ್ವಾಂಗೀಣ ಅಭಿವೃದ್ಧಿಗೆ ಸರ್ಕಾರ ಹಲವು ಯೋಜನೆಗಳನ್ನು ಜಾರಿಗೊಳಿಸಿದೆ ಎಂದು ಶಾಸಕ ಎನ್.ಎಚ್. ಕೋನರಡ್ಡಿ ಹೇಳಿದರು.

ತಾಲೂಕಿನ ಕಡದಳ್ಳಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶಾಲಾ ವಾರ್ಷಿಕೋತ್ಸವ ಹಾಗೂ 8ನೇ ವರ್ಗದ ವಿದ್ಯಾರ್ಥಿಗಳ ಬೀಳ್ಕೊಡುವ ಸಮಾರಂಭ ಉದ್ಘಾಟಿಸಿ ಮಾತನಾಡಿದರು. ತಹಶೀಲ್ದಾರ್ ಸುಧೀರ ಸಾಹುಕಾರ, ತಾಪಂ ಇಓ ಪಿ. ಆರ್. ಬಡೇಖಾನವರ, ಮಲಪ್ರಭಾ ನೀರು ಬಳಕೆದಾರರ ಸಂಘದ ಅಧ್ಯಕ್ಷ ಸದುಗೌಡ ಪಾಟೀಲ, ನಾಗನೂರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘದ ಅಧ್ಯಕ್ಷ ನಿಂಗರಡ್ಡಿ ಕರಮಳ್ಳಿ ಆಗಮಿಸಿದ್ದರು. ಶಾಲಾ ಎಸ್.ಡಿ.ಎಂ.ಸಿ ಅಧ್ಯಕ್ಷ ಕಲ್ಲಪ್ಪ ಕುಂಬಾರ ಅಧ್ಯಕ್ಷತೆ ವಹಿಸಿದ್ದರು. ಪ್ರಧಾನ ಗುರುಗಳಾದ ಬಿ.ಕೆ.ಹಾಲವರ, ಹಿರಿಯ ಶಿಕ್ಷಕ ಡಾ. ಸಿದ್ದಲಿಂಗೇಶ ಹಂಡಿಗಿ, ಸುನಂದಾ ಕುಂಬಾರ, ಜ್ಯೋತಿ ಉಪ್ಪಾರ, ಬಸವರಾಜ ಸಾಲಿಮಠ, ಗಣ್ಯರಾದ ಕಲ್ಲೋಳೆಪ್ಪ ಕರಿಕಟ್ಟಿ, ರುದ್ರಪ್ಪ ಕುಂಬಾರ, ಕಲ್ಲನಗೌಡ ಗುರನಗೌಡ್ರ, ಭೀಮಪ್ಪ ಕೊಳ್ಳಾರ, ಅಲ್ಲಾಸಾಬ ಕಲ್ಲಕುಟ್ರಿ, ಹೆಬ್ಬೆಳೆಪ್ಪ ಮಾದರ, ದಾಕ್ಷಾಯಿಣಿ ಬಡಿಗೇರ ಮುಂತಾದವರು ಉಪಸ್ಥಿತರಿದ್ದರು.



ಉಪ್ಪಿನಬೆಟಗೇರಿ: ಸಮೀಪದ ಹನುಮನಹಾಳ ಗ್ರಾಮದ ಚಿಣ್ಣರು ಹಾಗೂ ಯುವಕರು ಹೋಳಿ ಹಬ್ಬವನ್ನು ಬುಧವಾರದಂದು ಸಂಭ್ರಮದಿಂದ ಆಚರಿಸಿದರು.

ಜಗದೋದ್ಧಾರಕ ಬೂದೀಶ್ವರ ಸ್ವಾಮಿಗಳು: ಚಿಲುಮಿ

ಧಾರವಾಡ: ಬೂದೀಶ್ವರ ಸ್ವಾಮಿಜಿಗಳು ಮಠದ ಅಧಿಪತಿಗಳಾಗಿರಲಿಲ್ಲ, ಲೋಕ ಕಲ್ಯಾಣಕ್ಕೆ ಸಂಚಾರ ಮಾಡುತ್ತಾ 12ನೇ ಶತಮಾನದ ಶರಣರ ಆಶಯಗಳನ್ನು ಅಕ್ಷರಶಃ ಪಾಲಿಸಿದವರು ಎಂದು ಶರಣ ಸಂಸ್ಕೃತಿಯ ಚಿಂತಕ ರುದ್ರಣ್ಣ ಚಿಲುಮಿ ಹೇಳಿದರು.

ನಗರದ ಕರ್ನಾಟಕ ವಿದ್ಯಾವರ್ಧಕ ಸಂಘದ ರಾ.ಹ.ದೇಶಪಾಂಡೆ ಸಭಾಂಗಣದಲ್ಲಿ ಗುರುವಾರ ನಡೆದ ಬೂದೀಶ್ವರ ಸ್ವಾಮೀಜಿ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ ಹೊಸಹಳ್ಳಿ ಬೂದೀಶ್ವರ ಸ್ವಾಮಿಗಳ ಜೀವನ ದರ್ಶನ ಕುರಿತು ಅವರು ಉಪನ್ಯಾಸ ನೀಡಿದರು. ಶರಣ ಸಂಸ್ಕೃತಿಯಲ್ಲಿ ಅರಿವು, ಆಚಾರಕ್ಕೆ ಪ್ರಾಮುಖ್ಯತೆ ಇದೆ. ಶರಣ ಸಂಸ್ಕೃತಿ ಅಂದರೆ ಕೇವಲ ವಚನಗಳನ್ನು ಓದುವುದಲ್ಲ, ಆ ವಚನದಂತೆ ಬದುಕುವುದು. ಬೂದೀಶ್ವರ ಶ್ರೀಗಳು ಅಕ್ಷರಶಃ ಒಬ್ಬ ನಡೆದಾಡುವ ಶರಣರಾಗಿದ್ದರು ಎಂದರು. 12ನೇ ಶತಮಾನದಲ್ಲಿ ಅನುಭವ ಮಂಟಪದಲ್ಲೂ ಕೆಲಸ ಮಾಡಿದ ಬೂದೀಶ್ವರ ಶ್ರೀಗಳು, ಕಲ್ಯಾಣ ಕ್ರಾಂತಿಯ ಬಳಿಕ ಚನ್ನಬಸವಣ್ಣವರ ಆಜ್ಞೆಯಂತೆ ವಚನಗಳು, ಶರಣ ಸಂಸ್ಕೃತಿ ಹಾಗೂ ಲಿಂಗಾಯತ ಧರ್ಮ ಪ್ರಸಾರಕ್ಕೆ ಅಣಿಯಾದರು ಎಂದರು. ಅಡವಿಸಿದ್ದೇಶ್ವರ ಶ್ರೀಗಳು, ಗರಗದ ಮಡಿವಾಳ, ಸಂತ ಶಿಶುವಿನಾಳ ಷರೀಫರು, ನವಲಗುಂದ ನಾಗಲಿಂಗ ಶ್ರೀಗಳು, ದೇವರಹುಬ್ಬಳ್ಳಿ ನಾಗಭೂಷಣ ಶ್ರೀಗಳು, ಗದಗ ಶಿವಾನಂದ ಶ್ರೀಗಳ ಸಮಕಾಲೀನರಾಗಿ ಲೋಕ ಸಂಚಾರ ಮಾಡಿದ್ದಾಗಿ ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ಡಿ.ಎಂ.ನಿಡವಣಿ ಮಾತನಾಡಿ, ಜಾಗತೀಕರಣದ ಅಬ್ಬರದಲ್ಲಿ ನಮ್ಮ ಮೂಲ ಬೇರುಗಳು ಮರೆಯುತ್ತಿದ್ದೇವೆ. ಇಂತಹ ಕಾಲಘಟ್ಟದಲ್ಲಿ ಬೂದೀಶ್ವರ ಶ್ರೀಗಳಂತಹ ಸಂತರ ಸರಳತೆ, ನಿಷ್ಠೆ ಮತ್ತು ನಿಸ್ವಾರ್ಥ ಸೇವೆಯೇ ನಮಗೆ ದಾರಿದೀಪವಾಗಬೇಕು ಎಂದರು. ಇಂದಿನ ಸಮಾಜದಲ್ಲಿ ನೈತಿಕ ಮೌಲ್ಯಗಳು ಕುಸಿಯುತ್ತಿವೆ. ನಮ್ಮಲ್ಲಿರುವ ಭೇದ-ಭಾವ ಅಳಿಸಿ ಹಾಕಿ, ಸಮಾನತೆಯ ಸಮಾಜ ನಿರ್ಮಾಣ ಮಾಡಬೇಕು. ಮುಂದಿನ ದಿನಗಳಲ್ಲಿ ಈ ದತ್ತಿ ಕಾರ್ಯಕ್ರಮ ಶಾಲಾ-ಕಾಲೇಜಿನಲ್ಲಿ ಏರ್ಪಡಿಸುವ ಆಶಯ ವ್ಯಕ್ತಪಡಿಸಿದರು.

ವೇದಿಕೆಯಲ್ಲಿ ದತ್ತಿದಾನಿ ಸಾಗರ ನಿಡವಣೆ, ಮಡಿವಾಳಪ್ಪ ಶಿರಿಯಣ್ಣವರ ಇದ್ದರು. ಕಾರ್ಯಕ್ರಮದಲ್ಲಿ ಹೊಸಹಳ್ಳಿ, ಹಾಲಕುಸಗಲ್ಲ ಗ್ರಾಮಸ್ಥರು ಪಾಲ್ಗೊಂಡಿದ್ದರು. ಕವಿಸಂ ಸದಸ್ಯ ಶಂಕರ ಕುಂಬಿ ಪ್ರಾಸ್ತಾವಿಸಿದರು. ವೀರಣ್ಣ ಒಡ್ಡೀನ ಸ್ವಾಗತಿಸಿದರು.



ಮಾ.7ರಿಂದ ಮಾಸ್ತಮರಡಿ ಪ್ರಭುದೇವರ ಜಾತ್ರೆ

ನೇಸರಗಿ: ಇಲ್ಲಿಗೆ ಸಮೀಪದ ಮಾಸ್ತಮರಡಿ ಗ್ರಾಮದ ಎರಡು ಉದ್ಭವ ಲಿಂಗ ಹೊಂದಿರುವ ಸುಪ್ರಸಿದ್ಧ ಮಠವಾದ ಸುಪ್ರಸಿದ್ದ ಅಲ್ಲಮಪ್ರಭು ಮಹಾಸ್ವಾಮಿಗಳ ಆಶೀರ್ವಾದದ ಶ್ರೀಮದ್ ಜಗದ್ಗುರು ಪ್ರಭುದೇವರ ಸಂಸ್ಥಾನ ಗದ್ದುಗೆ ಮಠ, ತಪ್ಪೋಕ್ಷೇತ್ರ ಮಾಸ್ತಮರಡಿ ನೂತನ ರಥೋತ್ಸವದ ಉದ್ಘಾಟನೆ ಸಮಾರಂಭ ಮತ್ತು ಜಾತ್ರಾ ಮಹೋತ್ಸವವು ಮಾ.7ರಿಂದ ನಡೆಯಲಿದೆ ಎಂದು ಡಾ. ವೀರಪ್ರಭು ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಹೇಳಿದರು.



ಶ್ರೀಮಠದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಗ್ರಾಮದಿಂದ ಪ್ರಭುದೇವರ ಮಠದಿಂದವರೆಗೆ ಸಕಲ ವಾದ್ಯ ಮೇಳಗಳೊಂದಿಗೆ ಮೆರವಣಿಗೆ ಮದ್ಯಾಹ್ನ 11 ಗಂಟೆಗೆ ನೂತನ ದ್ವಾರಬಾಗಿಲು ಹಾಗೂ ದಾಸೋಹ ಮಹಾ ಮನೆಯ ಉದ್ಘಾಟನೆ ಸಂಜೆ 5 ಗಂಟೆಗೆ ಕಳಸಾರೋಹಣ ನೆರವೇರಲಿದೆ.

ಮಾ.8ರಂದು ಬೆಳಿಗ್ಗೆ 7ಗಂಟೆಗೆ ಧ್ವಜಾರೋಹಣ, 8ಕ್ಕೆ ರುದ್ರಹೋಮ, ಮಹಾರುದ್ರಾಭಿಷೇಕ, ನೈವೇದ್ಯ, ಮಧ್ಯಾಹ್ನ 12 ಕ್ಕೆ ಗ್ರಾಮದ ಮುತ್ತೈದೆಯರಿಂದ ಉಡಿ ತುಂಬುವುದು,ರಾತ್ರಿ 8 ಕ್ಕೆ ಭಜನೆ ಮತ್ತು ಸಂಗೀತ ಕಾರ್ಯಕ್ರಮ ನೆರವೇರಲಿವೆ.

ಮಾ.9ರಂದು ಬೆಳಿಗ್ಗೆ 9ಗಂಟೆಗೆ ಕುಂಭಮೇಳ, ಪಲ್ಲಕ್ಕಿ ಉತ್ಸವಗಳಿಂದ ಗ್ರಾಮದಿಂದ ನಾಡಿನ ಶ್ರೀಗಳ ಮೆರವಣಿಗೆ, ಮಧ್ಯಾಹ್ನ 1 ಗಂಟೆಗೆ ಸಾಮೂಹಿಕ ವಿವಾಹ, ಮಧ್ಯಾಹ್ನ 2 ಗಂಟೆಗೆ ಧರ್ಮಸಭೆ, ಸಂಜೆ 4.20ಕ್ಕೆ ನೂತನ ಮಹಾರಥೋತ್ಸವ ಜರುಗಲಿದೆ

ನಾಡಿನ ಅನೇಕ ಪೂಜ್ಯ ಮಹಾಸ್ವಾಮಿಗಳು, ಶರಣರು ಪಾಲ್ಗೊಳ್ಳಲಿದ್ದು, ಕಾರ್ಯಕ್ರಮದಲ್ಲಿ ಶಾಸಕರಾದ ಬಾಬಾಸಾಹೇಬ ಪಾಟೀಲ, ಮಾಜಿ ಶಾಸಕ ಮಹಾಂತೇಶ ದೊಡ್ಡಗೌಡರ, ಕಾಂಗ್ರೆಸ್ ಬ್ಲಾಕ್ ಅಧ್ಯಕ್ಷ ನಿಂಗಪ್ಪ ಅರಿಕೇರಿ, ಯುವ ಮುಖಂಡ ಸಚಿನ ಪಾಟೀಲ ಸೇರಿದಂತೆ ನೇಸರಗಿ ಜಿ ಪಂ ವ್ಯಾಪ್ತಿಯ ರಾಜಕೀಯ ಮುಖಂಡರು ಭಾಗವಹಿಸಲಿದ್ದಾರೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಹಿರಿಯರಾದ ಮಲ್ಲಪ್ಪ ಮುತ್ತೇನ್ನವರ, ಶಂಕರೆಪ್ಪ ಈರಯ್ಯಣ್ಣವರ, ಯಲ್ಲಪ್ಪ ನಾಯಕ, ಉಡಪ್ಪ ಕೋಮಾರ, ಸಿದ್ರಾಮ ತಳವಾರ, ಬಸಪ್ಪ ಕಡಬಿ, ಸಿದ್ದಪ್ಪ ಮಿಂಡ್ರೋಳ್ಳಿ, ಮಲ್ಲೇಶ ಚಿಕ್ಕೋಡಿ,ಪತ್ರಕರ್ತರಾದ ಮಹಾಂತೇಶ ಹಿರೇಮಠ,ಭೀಮಸಿ ಕಮ್ಮಾರ,ಯಲ್ಲಪ್ಪ ಮುತ್ತೇನ್ನವರ, ಯಲ್ಲಪ್ಪ ಆಡಿನ, ಭೀಮಸಿ ಈರಯ್ಯನವರ ಸೇರಿದಂತೆ ಮಠದ ಸದ್ಭಕ್ತರು ಉಪಸ್ಥಿತರಿದ್ದರು.

ಅಧ್ಯಾತ್ಮವೆಂಬುವುದು ಬಿಚ್ಚಿ ಉಣ್ಣುವ ಬುತ್ತಿ

ರಾಯಬಾಗ: ಮನುಷ್ಯನಲ್ಲಿ ಅದಮ್ಯವಾದ ಶಕ್ತಿ ಇದೆ. ಆಯುಷ್ಯ ತುಂಬ ಕಡಿಮೆ ಇದೆ. ಅಲ್ಪ ಆಯುಷ್ಯದಲ್ಲಿ ಉತ್ತಮ ಬದುಕನ್ನು ಹೇಗೆ ಕಟ್ಟಿಕೊಳ್ಳಲು ಸಾಧ್ಯವಿದೆ ಎಂಬುದನ್ನು ಅರಿವುದೇ ಅಧ್ಯಾತ್ಮ ಎಂದು ಬನಹಟ್ಟಿಯ ಹಿರಿಯ ಸಾಹಿತಿ ಬಿ .ಆರ್. ಪೊಲೀಸ್ ಪಾಟೀಲ ಹೇಳಿದರು.



ಅವರು ವಚನ ಪಿತಾಮಹ ಡಾ. ಫ.ಗು.ಹಳಕಟ್ಟಿ ರಾಷ್ಟ್ರೀಯ ಟ್ರಸ್ಟ್ ಅಡಿಯಲ್ಲಿ ಶರಣ ಚೇತನ ಬಳಗ ಹಮ್ಮಿಕೊಂಡಿದ್ದ ತಿಂಗಳ ಆಧ್ಯಾತ್ಮ ಜ್ಞಾನದಾಸೋಹ ಕಾರ್ಯಕ್ರಮದಲ್ಲಿ ಶರಣರು: ಆಧ್ಯಾತ್ಮ ಸಂಸ್ಕೃತಿ ಕುರಿತು 19ನೇ ವಿಶೇಷ ಉಪನ್ಯಾಸ ನೀಡಿದರು. ಶರಣರು ಪ್ರಪಂಚದ ಕಷ್ಟ, ನೋವು ಎಲ್ಲವನ್ನೂ ಅನುಭವಿಸಿದವರು. ಜೀವನದಲ್ಲಿ ಬಂದದ್ದನ್ನೆಲ್ಲ ಒಪ್ಪಿಕೊಂಡು ಬದುಕನ್ನು ಸಾರ್ಥಕಗೊಳಿಸಿಕೊಂಡವರು. ಇದೇ ಆಧ್ಯಾತ್ಮ ಸಂಸ್ಕೃತಿ. ಈ ಆಧ್ಯಾತ್ಮ ಸಂಸ್ಕೃತಿ ಯಾವದೇ ಕಾಲ,ದೇಶ ,ಜಾತಿ ,ಧರ್ಮಕ್ಕೆ ಒಂದೇ ಆಗಿರುತ್ತದೆ. ಆದ್ದರಿಂದ ಆಧ್ಯಾತ್ಮಜ್ಞಾನ ವಿಶ್ವಮಾನವಾದದ್ದು. ಆಧ್ಯಾತ್ಮ ಜ್ಞಾನ ಇಲ್ಲದೆ ಭೌತಿಕ ಸಂಪತ್ತು ಮತ್ತು ಯಾವುದೇ ಜ್ಞಾನ ಎಷ್ಟಿದ್ದರೂ ವ್ಯರ್ಥ ಎಂದು ಹೇಳಿದರು.

ಟ್ರಸ್ಟ್ ಅಧ್ಯಕ್ಷ ಡಾ. ಬಿ. ಎಂ . ಪಾಟೀಲ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮನುಷ್ಯನಲ್ಲಿ ಶಾಂತಿ ಸಂತೃಪ್ತಿ ಕಡಿಮೆ ಆಗಲು ಆತನ ದುರಾಸೆಗಳೇ ಕಾರಣ. ದುರಾಸೆಗಳಿಂದ ಮನುಷ್ಯನ ಮನಸು ತೃಪ್ತಿವಾದದ್ದು ಮಾನವನ ಇತಿಹಾಸದಲ್ಲಿಯೇ ಎಲ್ಲೂ ಇಲ್ಲ, ಮನುಷ್ಯ ದುರಾಶೆ ಚಕ್ರದಿಂದ ಹೊರಬರಲು ಆಧ್ಯಾತ್ಮ ಒಂದೇ ಮಾರ್ಗವಾಗಿದೆ ಎಂದು ಹೇಳಿದರು.

ಸಂವಾದ ಕಾರ್ಯಕ್ರಮದಲ್ಲಿ ಎಚ್ .ಎ .ಭಜಂತ್ರಿ, ತಾನಾಜಿ ಶಿರಗುಪ್ಪಿ, ಪಿ.ಬಿ .ಮುನ್ನಾಳ, ಎಸ್. ಎಸ್. ಮೀಸಿ, ಭರತ ನಾಂದಣಿ, ಪಾಲ್ಗೊಂಡಿದ್ದರು ಅಶೋಕ್ ದೇಸಿಂಗೆ, ಎ .ಎಸ್. ಮುಗಳಖ'ೋಡ, ಕುಮಾರ ಕುಲಗುಡೆ, ಎಸ್. ಆರ್. ಸೊಲ್ಲಾಪುರೆ, ಎಸ್. ಆರ್. ಡೊಂಗರೆ, ಎಂ .ಆರ್. ಹೊಸಮನಿ, ಎಸ್ .ಎಸ್. ಅಮರಶೆಟ್ಟಿ, ವಾಣಿಶ್ರೀ ಶಿರಗುಪ್ಪಿ, ಜಯಶ್ರೀ ಅಮರ ಶೆಟ್ಟಿ , ಬಾಲಚಂದ್ರ ಪಾಟೀಲ, ಮಹಾದೇವ ಗೋಕಾಕ, ಎಂ .ಎಸ್. ಹಿರೇಮಠ, ಕಲ್ಲಪ್ಪ ಹಾರೂಗೇರಿ ಮೊದಲಾದವರು ಉಪಸ್ಥಿತರಿದ್ದರು.

ಪಾವಣಿ ಮತ್ತು ಶಾಂಭವಿ ದೊಡವಾಡ ವಚನ ಪ್ರಾರ್ಥಿಸಿದರು. ಶಿವಾನಂದ ಬೆಳಕೂಡ ಸ್ವಾಗತಿಸಿದರು. ಕಾಲೇಶ ಐಹೊಳೆ ಶರಣು ಸಮರ್ಪಣೆ ಹೇಳಿದರು. ಶಿಲ್ಪಶ್ರೀ ದೊಡವಾಡ ನಿರೂಪಣೆ ಮಾಡಿದವರು. ಸಲೀಂ ಹಳಿಂಗಳಿ ತಮ್ಮ ತಬಲಾ ವಾದ್ಯಗಳಿಂದ ಕಾರ್ಯಕ್ರಮದಲ್ಲಿ ಸೊಗಬನ್ನು ಹೆಚ್ಚಿಸಿದರು.

ಕಿರುಸುದ್ದಿ



ಬಾದಾಮಿ: ನಗರದ ಶಾಸಕರ ಮಾದರಿ, ಪ್ರಾಥಮಿಕ ಶಾಲೆಯಲ್ಲಿ ಸೋಮವಾರ ಸಂಜೆ ನಡೆದ ಚಿಣ್ಣರ ಸಂಭ್ರಮ, ಕಾರ್ಯಕ್ರಮದಲ್ಲಿ ಶಾಸಕ ಭೀಮಸೇನ ಬಿ ಚಿಮ್ಮನಕಟ್ಟಿ ಅವರ ಪುತ್ರಿಯರಾದ ಆದ್ಯಶ್ರೀ ಹಾಗೂ ಧೃತಿ ಅವರು ಮಕ್ಕಳೊಂದಿಗೆ ನೃತ್ಯದಲ್ಲಿ ಪಾಲ್ಗೊಂಡು ಆನಂದಿಸಿದರು.

ಸಂಗೀತ ಸಂಜೆ ಕಾರ್ಯಕ್ರಮ ನಾಳೆ

ಜಮಖಂಡಿ: ಸಮೀರವಾಡಿ ಹುನ್ನೂರಿನ ರಾಘವೇಂದ್ರ ಕಾಲೋನಿಯ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಅಮೇರಿಕೆಯ ನಾದ ಫರ್‍ಫಾರ್ಮನ್ಸ್ ಮತ್ತು ಹುನ್ನೂರು ಬ್ರಾಹ್ಮಣ ಸಂಘದ ಸಹಯೋಗದಲ್ಲಿ ಮಾ.7ರಂದು ಶನಿವಾರ ಸಂಜೆ 6 ಗಂಟೆಗೆ ಅಮೇರಿಕೆಯ ನಿವಾಸಿ ಗಣೇಶ ಮನೋಹರ ಬೆಟಗೇರಿಯವರಿಂದ ಹಿಂದೂಸ್ತಾನಿ ಸಂಗೀತ ಸಂಜೆ ಕಾರ್ಯಕ್ರಮ ಆಯೋಜಿಸಲಾಗಿದೆ. ಈ ಕಾರ್ಯಕ್ರಮಕ್ಕೆ ಸಾರ್ವಜನಿಕರು ಆಗಮಿಸಿ ಶೋಭೆ ತರಬೇಕು ಎಂದು ಪ್ರಕಟಣೆಗೆ ಹುನ್ನೂರು ಬ್ರಾಹ್ಮಣ ಸಂಘದ ಅಧ್ಯಕ್ಷ ರಾಘವೇಂದ್ರ ಉಮರ್ಜಿ, ಮನೋಹರ ಬೆಟಗೇರಿ ಜಂಟಿಯಾಗಿ ತಿಳಿಸಿದ್ದಾರೆ.

ಪಾದಯಾತ್ರಿಕರಿಗೆ ಅನ್ನಸಂತರ್ಪಣೆ



ಮಹಾಲಿಂಗಪುರ: ನಗರದ ಕಾರು ಮಾಲೀಕರ ಮತ್ತು ಚಾಲಕರ ಸಂಘದ ವತಿಯಿಂದ ಶ್ರೀಶೈಲ ಮಲ್ಲಿಕಾರ್ಜುನ ಜ್ಯೋತಿರ್ಲಿಂಗ ದರ್ಶನಕ್ಕೆ ತೆರಳುವ ಪಾದಯಾತ್ರಿಗಳಿಗೆ ನಾಲ್ಕನೇ ವರ್ಷದ ಅನ್ನಸಂತರ್ಪಣೆ ಮತ್ತು ವಿಶ್ರಾಂತಿ ವ್ಯವಸ್ಥೆ ಆಯೋಜಿಸಲಾಗಿತ್ತು. ಪಾದಯಾತ್ರಿಗಳು ಪ್ರಸಾದ ಸೇವೆ ಸ್ವೀಕರಿಸಿ ಯಾತ್ರೆ ಮುಂದುವರಿಸಿದರು. ಮಲ್ಲಿಕಾರ್ಜುನ ಸೈದಾಪುರ, ರಾಘು ಅನೆಪ್ಪಗೋಳ, ಮಹಾದೇವ ಉತ್ನಾಳ, ಸಂಗಮೇಶ ಮಾದರ, ರಾಜು ಕೊಗಟನೂರ, ಭೀಮಶಿ ಹಿಕಡಿ, ರಾಮಲಿಂಗ ಜೀರಗಾಳ, ಮಲ್ಲಪ್ಪ ಕೊಣ್ಣೂರ, ಚನ್ನಗಿರಿ ಚೌಗಲಾ, ಸುದೀಪ ಮೇಟಿ, ಬಸವರಾಜ ಗಾಡೇಕರ, ಮಲ್ಲಿಕಾರ್ಜುನ ಜಂಬಗಿ, ಯಲ್ಲಪ್ಪ ಗೋರನಕೊಳ್ಳ, ಮಹಾಲಿಂಗ ಮಾದರ, ಸಂಜು ಕುಂಬಾರ ನಾಗೇಶ ಮಾದರ, ಮಹಾಲಿಂಗ ಚೌಗಲಾ, ರವಿ ಮಾದರ, ಬಾಳಪ್ಪ ಮಾಗಿ, ಗಿರಿಮಲ್ಲ ದೊಡಮನಿ, ಮಹಾದೇವ ಜಡಿ, ಸಾಗರ ಮಾದರ, ಸಾಗರ ಕೊರಬೆಟ್ಟ, ಶಿವು ಬೆನ್ನೂರ, ಮಲ್ಲಪ್ಪ ನೇಮಗೌಡ, ಮಲ್ಲಿಕ ನದಾಫ, ಮಾಳು ಶಿರಗುಪ್ಪಿ, ಶಿವಪುತ್ರ ಹಿರೇಮಠ, ಮಹಾಲಿಂಗ ದೊಡಮನಿ, ಶಂಕರ ಚಂಡೋಲ, ಲಾಲಾಸಾಬ ಹವಾಲ್ದಾರ, ಸದಾಶಿವ ಹಿಕಡಿ, ಮಹಾಲಿಂಗ ಹೆಗಾಡಿ,ಕಲ್ಲಪ್ಪ ಒಂಟಗೂಡಿ, ರಮೇಶ ಚೌಗಲಾ, ಸೇರಿದಂತೆ ಮಹಾಲಿಂಗಪುರ ನಗರದ ಕಾರು ಮಾಲೀಕರ ಮತ್ತು ಚಾಲಕರ ಸಂಘದ ಅಧ್ಯಕ್ಷರು, ಪದಾಧಿಕಾರಿಗಳು, ಸದಸ್ಯರು ಭಾಗವಹಿಸಿದ್ದರು.

ಪ್ರಶಸ್ತಿಗೆ ಅರ್ಜಿ ಆಹ್ವಾನ

ಜಮಖಂಡಿ: 2026-27ನೇ ಸಾಲಿನಲ್ಲಿ ಡಾ.ಬಾಬು ಜಗಜೀವನ್ ರಾಂ ಅವರ 119ನೇ ಹಾಗೂ ಡಾ.ಬಿ.ಆರ್. ಅಂಬೇಡ್ಕರ್‌ರವರ 135ನೇ ಜನ್ಮ ದಿನಾಚರಣೆ ಅಂಗವಾಗಿ ಪಜಾತಿ, ಪ ವರ್ಗದ ಜನಾಂಗದವರ ಶ್ರೇಯಸ್ಸಿಗಾಗಿ ಪ್ರೋತ್ಸಾಯಿಸಿ, ಶ್ರಮಿಸಿ ಗಣನೀಯ ಸೇವೆ ಸಲ್ಲಿಸಿದ ಅರ್ಹ ವ್ಯಕ್ತಿಗಳನ್ನು ಗುರುತಿಸಿ 2026-27ನೇ ಸಾಲಿನ ಡಾ.ಬಾಬು ಜಗಜೀವನ್ ರಾಂ ಹಾಗೂ ಡಾ ಬಿ.ಆರ್. ಅಂಬೇಡ್ಕರ್ ಪ್ರಶಸ್ತಿಗಳನ್ನು ನೀಡಿ ಗೌರವಿಸಲು ಸರ್ಕಾರದಿಂದ ಉದ್ದೇಶಿಸಲಾಗಿದೆ. ಕಾರಣ ಜಮಖಂಡಿ, ರಬಕವಿ-ಬನಹಟ್ಟಿ ಹಾಗೂ ತೇರದಾಳ ತಾಲೂಕಿನ ಪ.ಜಾತಿ, ಪ.ವರ್ಗದ ಜನಾಂಗದವರ ಶ್ರೇಯಸ್ಸಿಗಾಗಿ ಪ್ರೋತ್ಸಾಯಿಸಿ, ಶ್ರಮಿಸಿ ಗಣನೀಯ ಸೇವೆ ಸಲ್ಲಿಸಿದ ವ್ಯಕ್ತಿಗಳು ಇದ್ದಲ್ಲಿ ಸಮಾಜ ಕಲ್ಯಾಣ ಇಲಾಖೆಯ ಕಾರ್ಯಾಲಯಕ್ಕೆ ಭೇಟಿ ನೀಡಿ ಅರ್ಜಿ ಪಡೆದುಕೊಳ್ಳಬೇಕು. ಮಾ.7ರ ಒಳಗಾಗಿ ಸಹಾಯಕ ನಿರ್ದೇಶಕರು ಸಮಾಜ ಕಲ್ಯಾಣ ಇಲಾಖೆಯ ಕಚೇರಿಗೆ ಸೂಕ್ತ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸುವಂತೆ ಕೋರಲಾಗಿದೆ ಎಂದು ಸಮಾಜ ಕಲ್ಯಾಣ ಇಲಾಖೆ, ಸಹಾಯಕ ನಿರ್ದೇಶಕ ಜಗದೇವ ಪಸೋಡಿ ಪ್ರಕಟಣೆಗೆ ತಿಳಿಸಿದ್ದಾರೆ.



ಬಾಗಲಕೋಟೆ: ಗುರುವಾರ ನಡೆದ ದ್ವಿತೀಯ ಪಿಯುಸಿ ಭೌತಶಾಸ್ತ್ರ ವಿಷಯ ಪರೀಕ್ಷೆ ಹಿನ್ನಲೆಯಲ್ಲಿ ನಗರದ ಬಸವೇಶ್ವರ ವಿಜ್ಞಾನ ಮಹಾವಿದ್ಯಾಲಯದಲ್ಲಿ ಸ್ಥಾಪಿಸಲಾದ ಪರೀಕ್ಷಾ ಕೇಂದ್ರಕ್ಕೆ ಜಿಲ್ಲಾಧಿಕಾರಿ ಸಂಗಪ್ಪ ಅವರು ಭೇಟಿ ನೀಡಿ ಪರಿಶೀಲಿಸಿದರು.

ಉತ್ತಮ ಫಲಿತಾಂಶಕ್ಕೆ ವಿಶೇಷ ತರಗತಿ

ಬಾದಾಮಿ: ತಾಲೂಕಿನ ಮುತ್ತಲಗೇರಿ ಗ್ರಾಮದ ಸರಕಾರಿ ಪ್ರೌಢಶಾಲೆ(ಆರ್ ಎಂಎಸ್ಎ)ಯಲ್ಲಿ ಶಿಕ್ಷಕರಿಂದ ಶಾಲಾ ಮಕ್ಕಳಿಗೆ ಬೆಳಗ್ಗೆ ಮತ್ತು ಸಂಜೆ ವಿಶೇಷ ತರಗತಿ ನಡೆಸಲಾಗುತ್ತಿದೆ. ಶಾಲೆಯಲ್ಲಿ ಪ್ರಸಕ್ತ ವರ್ಷ 8ರಿಂದ 10ನೇ ತರಗತಿವರೆಗೆ ಶಾಲೆಯಲ್ಲಿ ಒಟ್ಟು 266 ಮಕ್ಕಳು ಓದುತ್ತಿದ್ದು, ಈ ಬಾರಿ 56 ಮಕ್ಕಳು ಹತ್ತನೇ ತರಗತಿಯಲ್ಲಿ ಓದುತ್ತಿದ್ದಾರೆ. ಈ ಮಕ್ಕಳಿಗೆ ಇಂಗ್ಲೀಷ, ಗಣಿತ, ವಿಜ್ಞಾನ ಸೇರಿದಂತೆ ಎಲ್ಲ ವಿಷಯಗಳನ್ನು ಬೆಳಗ್ಗೆ 8 ರಿಂದ 10 ಗಂಟೆಯವರೆಗೆ ಸಂಜೆ 4.20ರಿಂದ 7 ಗಂಟೆಯವರೆಗೆ ವಿಶೇಷ ತರಗತಿ ನಡೆಸಿ ಪಾಠ ಮಾಡುತ್ತಿದ್ದಾರೆ. ವಿಶೇಷ ತರಗತಿಗೆ ಹಾಜರಾಗುವ ಹತ್ತನೇ ತರಗತಿಯ ವಿದ್ಯಾರ್ಥಿಗಳಿಗೆ ಬೆಳಗ್ಗೆ ಮತ್ತು ಸಂಜೆ ಉಪಹಾರದ ವ್ಯವಸ್ಥೆ ಶಾಲೆಯ ಎಸ್‌ಡಿಎಂಸಿ ಅಧ್ಯಕ್ಷ ನಿವೃತ್ತ ಅಭಿಯಂತರ ಎಸ್.ಎಸ್.ಮಾಳಗಿ ವ್ಯವಸ್ಥೆ ಮಾಡುತ್ತಿದ್ದಾರೆ. ಎಸ್‌ಡಿಎಂಸಿ.ಅಧ್ಯಕ್ಷ ಎಸ್.ಎಸ್.ಮಾಳಗಿ ಅವರ ಉಪಹಾರದ ಸೇವೆಗೆ, ಶಿಕ್ಷಣ ಪ್ರೇಮಕ್ಕೆ ಗ್ರಾಮಸ್ಥರು, ಪಾಲಕರು ಪ್ರಶಂಸೆ ವ್ಯಕ್ತಪಡಿಸಿದ್ದಾರೆ. ಪ್ರೌಢಶಾಲೆಯ ಮುಖ್ಯಶಿಕ್ಷಕ ಎ.ಪಿ.ಮೇಟಿ ಮಾತನಾಡಿ, ಶಾಲೆಯಲ್ಲಿ ಓದುತ್ತಿರುವ ಎಲ್ಲ ಮಕ್ಕಳು ಹೆಚ್ಚಿನ ಅಂಕ ಪಡೆದು ಉತ್ತೀರ್ಣರಾಗಬೇಕು ಎಂದು ವಿಶೇಷ ತರಗತಿ ನಡೆಸಲಾಗುತ್ತಿದ್ದು, ಎಸ್‌ಡಿಎಂಸಿ ಅಧ್ಯಕ್ಷರು ಉಪಹಾರದ ವ್ಯವಸ್ಥೆ ಮಾಡುತ್ತಿದ್ದಾರೆ ಅವರ ಸೇವೆ ಶ್ಲಾಘನೀಯ ಎಂದು ತಿಳಿಸಿದರು. ನಮ್ಮ ಮಗು ಈ ವರ್ಷ ಹತ್ತನೇ ತರಗತಿಯಲ್ಲಿ ಓದುತ್ತಿದ್ದಾನೆ. ಉತ್ತಮ ಅಂಕ ಪಡೆದು ಪಾಸಾಗಲು ಎಲ್ಲ ಪ್ರಯತ್ನ ಮಾಡುತ್ತಿದ್ದಾರೆ ಎಂದು ಮಗುವಿನ ಪಾಲಕ ಭರಮಣ್ಣ ಗೌಡರ ತಿಳಿಸಿದರು.



ಬಾದಾಮಿ: ತಾಲೂಕಿನ ಮುತ್ತಲಗೇರಿ ಗ್ರಾಮದ ಸರಕಾರಿ ಪ್ರೌಢಶಾಲೆ(ಆರ್‌ಎಂಎಸ್‌ಎ)ಯಲ್ಲಿ ಶಿಕ್ಷಕರಿಂದ ಶಾಲಾ ಮಕ್ಕಳಿಗೆ ಬೆಳಗ್ಗೆ ಮತ್ತು ಸಂಜೆ ವಿಶೇಷ ತರಗತಿ ನಡೆಸಲಾಗುತ್ತಿದೆ. ವಿಶೇಷ ತರಗತಿಗೆ ಹಾಜರಾಗುವ ಹತ್ತನೇ ತರಗತಿಯ ವಿದ್ಯಾರ್ಥಿಗಳಿಗೆ ಬೆಳಗ್ಗೆ ಮತ್ತು ಸಂಜೆ ಉಪಹಾರದ ವ್ಯವಸ್ಥೆ ಶಾಲೆಯ ಎಸ್‌ಡಿಎಂಸಿ ಅಧ್ಯಕ್ಷ ನಿವೃತ್ತ ಅಭಿಯಂತರ ಎಸ್.ಎಸ್.ಮಾಳಗಿ ವ್ಯವಸ್ಥೆ ಮಾಡಿದ್ದಾರೆ.

ಸಮಾಜಕ್ಕೆ ವೈಚಾರಿಕ ಕಾರ್ಯಕ್ರಮಗಳು ಮುಖ್ಯ

ಮುಧೋಳ: ಸಾಮಾಜಿಕ ಜಾಲತಾಣದಲ್ಲಿ ಹೆಚ್ಚು ಸಮಯ ಕಳೆಯುವುದು ಸಾಧಕ ಜೊತೆ ಬಾಧಕಗಳಿವೆ. ಮಿತಿಮೀರಿ ಇದರ ಬಳಕೆಯಿಂದ ಪಾಲಕರ, ಮಕ್ಕಳ ಸಂಬಂಧ ದೂರಾಗುತ್ತಿದೆ ಎಂದು ಜಮಖಂಡಿ ಉಪವಿಭಾಗಾಧಿಕಾರಿ ಶ್ವೇತಾ ಬಿಡಿಕರ ಹೇಳಿದರು.

ನಗರದ ಬಸವೇಶ್ವರ ಭವನದಲ್ಲಿ ಚಿಂತನಸಿರಿ 20ನೇ ವಾರ್ಷಿಕೋತ್ಸವದ ವೈಚಾರಿಕ ಓಕುಳಿ, ಪ್ರಚಲಿತ ಸಮಾಜದಲ್ಲಿ ಸಂಬಂಧಗಳ ಮಹತ್ವ ವಿಚಾರದೋಕಳಿ-1ರ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.



ಅಥಣಿಯ ಸಾಹಿತಿ ಅರ್ಚನಾ ಅಥಣಿ ಮಾತನಾಡಿ, ಮಾನವಿಯತೆಯ ಬದುಕು, ಮನುಷ್ಯನಾಗಿ ಶಾಂತಿ, ನೆಮ್ಮದಿಯಾಗಿ ಬಾಳಲು, ವಿದೇಶದಲ್ಲಿರುವ ಮಕ್ಕಳು ಸಂಪಾದನೆ ಮಾಡಲಿ. ಆದರೆ ಪ್ರೀತಿ, ವಾತ್ಸಲ್ಯ, ಸಂಬಂಧ ಎದುರಿಸುತ್ತಿರುವ ಸಮಸ್ಯೆ ಬಗೆಹರಿಯಲು ಮನ-ಮನಸ್ಸು, ಸಮಾಜ ಒಂದಾಗಿ ಸುಂದರ ವಾತಾವರಣಕ್ಕೆ ಇಂಥ ವೈಚಾರಿಕ ಕಾರ್ಯಕ್ರಮಗಳು ಬುನಾದಿಗಳಾಗಲಿ ಎಂದರು.

ವಿಚಾರೋಕಳಿ-2: ಮನಸ್ಸು, ಭಾವನೆ ಸ್ವಚ್ಛ ಉಳ್ಳವನಿಗೆ ಆ ಪರಮಾತ್ಮ ಸರಳವಾಗಿ ಅವರಿಗೆ ಮೋಕ್ಷ ನೀಡಬಲ್ಲನು, ಧರ್ಮನಿಷ್ಠೆಗೆ ಪ್ರೀತಿ, ನೀತಿ, ರೀತಿ ಮುಖ್ಯವಾಗಿವೆ ಎಂದು ಮನಗೂಳಿಯ ಖಾದ್ರಿ ಚಿಸ್ತಿ ಸೈಯದ ಶಾ ಹುಸೇನಿ ಪೀಠದ ಡಾ.ಸೈಯದ್ ಇನಾಮದಾರ ಹೇಳಿದರು.

ನೆಲದ ಋಣ ಮತ್ತು ಮಾನವ ಜನ್ಮ ವಿಷಯದ ಗೋಷ್ಠಿ-2ರಲ್ಲಿ ಅವರು ಉಪನ್ಯಾಸ ನೀಡಿದರು, ಈ ಭೂಮಿಯಲ್ಲಿ ಅಶಾಂತಿ ಉಂಟು ಮಾಡದೇ ಬದುಕಿದರೆ ಪರಮಾತ್ಮನ ಆರಾಧಕ ಆಗುವೆ ಎಂದು ವಿವರಿಸಿದರು.

ಅಧ್ಯಕ್ಷತೆ ವಹಿಸಿದ್ದ ಉದ್ದಿಮೆದಾರ ಶಶಿಕುಮಾರ ದೇಸಾಯಿ(ಹುಬ್ಬಳ್ಳಿ)ಮಾತನಾಡಿ, ನಮ್ಮನ್ನು ನಾವು ಅರಿತು ಹಿತಚಿಂತನೆ ಮೂಲಕ ಪರರಿಗೆ ಉಪಕಾರ ಮಾಡಬೇಕು ಮತ್ತು ನನ್ನ ಕರ್ತವ್ಯ, ಉದ್ದೇಶ ಪರಿಕಲ್ಪನೆಯ ಮಾನವಜನ್ಮಕ್ಕೆ ಅರಿವು ಇಂದಿನ ದಿನಗಳಲ್ಲಿ ಅವಶ್ಯಕತೆವಿದೆ ಎಂದರು.

ವಿಚಾರದೋಕಳಿ-3: ಚಿಂತನಸಿರಿ ಸಂಸ್ಥಾಪಕ ವಾಸಣ್ಣ ದೇಸಾಯಿರವರ ಸ್ಮರಣಾರ್ಥ 2025.ರ ಕಲಾಶ್ರೀ ಪ್ರಶಸ್ತಿ ಪುರಸ್ಕೃತ ರಬಕವಿಯ ಜಾನಪದ ಸಾಹಿತಿ ಹಾಗು ಗಾಯಕ ಶ್ರೀಕಾಂತ ಕೆಂದೊಳ್ಳಿ ಜನಪದ ಉತ್ಸವದಲ್ಲಿ ಪಾಲ್ಗೊಂಡು ಮಧ್ಯಾಹ್ನದ ಉಪಹಾರ ನಂತರ ಜನಪದ ರಸದೌತಣ ನೀಡಿ ಮನರಂಜಿಸಿದರು.

ಬನಹಟ್ಟಿಯ ಜಾನಪದ ವಿದ್ವಾಂಸ ಪ್ರೊ.ಬಿ.ಆರ್.ಪಾಟೀಲ, ಅಧ್ಯಕ್ಷತೆ ವಹಿಸಿ ಮಾತನಾಡಿದರು. ಹಿರಿಯ ಸಾಹಿತಿರಾದ ಆರ್.ಎಸ್.ಪಾಟೀಲ, ಸುನೀಲ ಬಿರಾದಾರ, ಚಿಂತನಸಿರ ಪದಾಧಿಕಾರಿಗಳಾದ ಡಾ.ಶಿವಾನಂದ ಕುಬಸದ, ಎಂ.ಆರ್.ದೇಸಾಯಿ, ತುಮಕೂರಿನ ದಯಾನಂದ ಶಂಕರ ಶ್ರೀಗಳು, ರಮೇಶ ಅಣ್ಣಿಗೇರಿ, ಬಿ.ಎಂ.ಬೆಣ್ಣೂರ, ಪತಂಜಲಿ ಯೋಗ ಸಮೀತಿಯ ಸವಿತಾ ಅಂಗಡಿ,ಪ್ರೊ.ಸುಲೋಚನಾ ಜವಳಗಿ, ಹಿರಿಯ ನಾಗರಿಕ ಪಿ.ಶ್ಯಾಮಸುಂದರ, ಪತ್ರಕರ್ತ ಬಿ.ಎಚ್.ಬೀಳಗಿ, ಎಸ್.ಡಿ.ನೀಲಗುಂದ, ಸಿ.ಎಲ್.ರೂಗಿ, ಶಿಕ್ಷಕಿ ಪವಿತ್ರಾ, ರಾಣಿ ಬರಗಿ ಇತರರಿದ್ದರು.

ಯುಕೆಪಿ ಯೋಜನೆ ಸಂತ್ರಸ್ತರಿಗೆ ನ್ಯಾಯ ಕಲ್ಪಿಸಿ

ಬೀಳಗಿ: ಅವಳಿ ಜಿಲ್ಲೆಗಳಲ್ಲಿ 2023ರ ವಿಧಾನಸಭಾ ಚುನಾವಣಾ ಪ್ರಚಾರ ಭಾಷಣ ಮಾಡುವ ಸಂದರ್ಭದಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆಯ ಕಾಮಗಾರಿಯನ್ನು ತ್ವರಿತಗತಿಯಲ್ಲಿ ಮುಂದುವರೆಸುವುದಾಗಿ ಹಾಗೂ ಸಂತ್ರಸ್ತರ ಎಲ್ಲ ಸಮಸ್ಯೆಗಳಿಗೆ ಪರಿಹಾರ ನೀಡುವುದಾಗಿಯೂ ಕಾಂಗ್ರೆಸ್ ನಾಯಕರು ನೀರಾವರಿ ಯೋಜನೆಗೆ ಪ್ರತಿ ವರ್ಷ ರೂ. 40,000 ಕೋಟಿಯಂತೆ ಮುಂದಿನ 5 ವರ್ಷಗಳ ಅವಧಿಯಲ್ಲಿ ಎರಡು ಲಕ್ಷ ಕೋಟಿ ಹಣ ಖರ್ಚು ಮಾಡಿ ನೀರಾವರಿ ಯೋಜನೆ ಪೂರ್ತಿಮಾಡುವುದಾಗಿಯೂ ವಾಗ್ದಾನ ಮಾಡಿದ್ದರು. ಆದರೆ ಕಳೆದ 3 ವರ್ಷದಲ್ಲಿ ಯುಕೆಪಿಗೆ ಯಾವುದೇ ಪ್ರಾಧಾನ್ಯತೆ ನೀಡದೆ ಇರುವುದು ಈ ಭಾಗದ ಸಂತ್ರಸ್ತರಿಗೆ ಹಾಗೂ ಜನ ಸಾಮಾನ್ಯರಿಗೆ ನೋವಿನ ಸಂಗತಿಯಾಗಿದೆ ಎಂದು ವಿಧಾನ ಪರಿಷತ್ತ ಸದಸ್ಯ ಎಚ್.ಆರ್.ನಿರಾಣಿ ತಿಳಿಸಿದರು.



ಪತ್ರಿಕೆಯೊಂದಿಗೆ ಅವರು ಮಾತನಾಡಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ.ಶಿವುಕುಮಾರ ಅವರು ಅವಳಿ ಜಿಲ್ಲೆಯ ಜನಪ್ರತಿನಿಧಿಗಳ ಮತ್ತು ಸಂತ್ರಸ್ತರ ಹಾಗೂ ಹಿರಿಯ ನಾಯಕರ ಸಮ್ಮುಖದಲ್ಲಿ ನಡೆದ ಸಭೆಯಲ್ಲಿ ಕ್ಯ.ಮೇ. ಯೋಜನೆಯ ಮೂರನೆ ಹಂತದಲ್ಲಿ ಮುಳುಗಡೆಯಾಗುವ ಪ್ರತಿ ಎಕರೆ ನೀರಾವರಿ ಜಮೀನಿಗೆ 40 ಲಕ್ಷ, ಒಣಬೇಸಾಯ ಜಮೀನಿಗೆ 30 ಲಕ್ಷ ರೂ. ಪರಿಹಾರ ನೀಡುವುದಾಗಿ ಘೋಷಿಸಿ 5-6 ತಿಂಗಳು ಕಳೆದರು ಸರಕಾರ ಯಾವುದೇ ಪರಿಹಾರ ಇನ್ನು ವಿತರಣೆ ಮಾಡಿರುವುದಿಲ್ಲ, ಕಾರಣ ಅವಳಿ ಜಿಲ್ಲೆಯ ಸಂತ್ರಸ್ತರು ನಾಳೆ ಮುಖ್ಯಮಂತ್ರಿಗಳು ಮಂಡಸಲಿರುವ ಬಜೆಟನಲ್ಲಿ ಈ ಯೋಜನೆಗೆ ಹಣ ಇಡುವುರೇ ಎಂದು ಚಾತಕ ಪಕ್ಷಿಯಂತೆ ಅವಳಿ ಜಿಲ್ಲೆಯ ಸಂತ್ರಸ್ತರು ಕಾಯುತ್ತಿದ್ದಾರೆಂದು ಹೇಳಿದರು.

ಸಂತ್ರಸ್ತರ ನಿರೀಕ್ಷೆಯಂತೆ ಮುಖ್ಯಮಂತ್ರಿಗಳು ಬಜೆಟ್ ನಲ್ಲಿ ಕನಿಷ್ಠ ಪಕ್ಷ ಈ ವರ್ಷ 25 ಸಾವಿರ ಕೋಟಿ ರೂ.ಗಳನ್ನು ಮುಳುಗಡೆಯಾಗಲಿರುವ ಜಮೀನುಗಳಿಗೆ ಪರಿಹಾರ ಧನ ವಿತರಿಸಲು ಪ್ರತ್ಯೇಕವಾಗಿ ಈ ಯೋಜನೆಗೆ ಹಣ ಮೀಸಲಿಡಬೇಕು. ಈ ಹಿಂದೆ ಜಮೀನು ಕಳೆದುಕೊಂಡು ನ್ಯಾಯಾಲಯದ ಆದೇಶವಾಗಿ ಪರಿಹಾರಕ್ಕಾಗಿ ಕಾಯುತ್ತಿರುವ ಸಂತ್ರಸ್ತರಿಗೆ ಹಾಗೂ ಮೂರನೇ ಹಂತದಲ್ಲಿ ಮುಳುಗಡೆಯಾಗುವ 20 ಗ್ರಾಮಗಳ ಹಾಗೂ ಬಾಗಲಕೋಟೆ ನಗರವನ್ನು ಒಳಗೊಂಡಂತೆ ಸುಮಾರು 25 ಸಾವಿರ ಕಟ್ಟಡಗಳ ಮೌಲ್ಯಮಾಪನ ಮಾಡಿ ಪರಿಹಾರ ಧನವನ್ನು ವಿತರಿಸಲು ಸಂತ್ರಸ್ತರಿಗೆ ಸರಕಾರ ಮಾತು ಕೊಟ್ಟಂತೆ ನಡೆದುಕೊಳ್ಳಬೇಕು ಎಂದು ಆಗ್ರಹಿಸಿದರು.

ಜಮೀನುಗಳಿಗೆ ಪರಿಹಾರ ನೀಡುವ ದೃಷ್ಟಿಯಿಂದ ಸರಕಾರ ಬಜೆಟ್‌ನಲ್ಲಿ ಹೆಚ್ಚಿನ ಹಣವನ್ನು ಮೀಸಲಿಟ್ಟು ತಮ್ಮ ಸರಕಾರದ ಉಳಿದ ಎರಡು ವರ್ಷದ ಅವಧಿಯಲ್ಲಿ ಮುಳುಗಡೆಯಾಗಲಿರುವ 73 ಸಾವಿರ ಎಕರೆ ಜಮೀನುಗಳಿಗೆ ಹಾಗೂ ಪುನರ್ವಸತಿ ಮತ್ತು ಪುನರ್ ನಿರ್ಮಾಣಕ್ಕೆ ಸ್ವಾಧೀನವಾದ ಸುಮಾರು 6500 ಎಕರೆ ಜಮೀನುಗಳಿಗೆ ಭೂ ಪರಿಹಾರವನ್ನು ವಿತರಿಸಬೇಕು. ಕನಿಷ್ಠ ಪಕ್ಷ ಯುಕೆಪಿ ಸಂತ್ರಸ್ತರ ಅಳಲನ್ನು ಈಡೇರಿಸುವವರು ಎಂದು ಜನರು ಬಜೆಟ್ ಕಾಯುತ್ತಿದ್ದಾರೆಂದು ಹೇಳಿದರು.

ಹೋಳಿ ಹಬ್ಬದ ಬೆಳ್ಳಿ ಮಹೋತ್ಸವಕ್ಕೆ ಚಾಲನೆ

ಜಮಖಂಡಿ: ಕಟ್ಟಿಗೆ ಕುಳ್ಳುಗಳಿಂದ ಕಾಮ ದಹನ ಮಾಡುವುದರ ಜೊತೆಗೆ ಅರಿವಿನ ಅಗ್ನಿಯಲ್ಲಿ ಅವಗುಣ ಸುಟ್ಟುಕೊಳ್ಳಬೇಕು ಎಂದು ಬಸವಜ್ಯೋತಿ ಶಿಕ್ಷಣ ಸಮೂಹ ಸಂಸ್ಥೆಗಳ ಆಡಳಿತಾಧಿಕಾರಿ ಪ್ರೊ.ಬಸವರಾಜ ಕಡ್ಡಿ ಹೇಳಿದರು. ಸ್ಥಳೀಯ ರಾಣಿ ಚನ್ನಮ್ಮ ನಗರದ ನಿವಾಸಿಗಳು ಕಳೆದ 25 ವರ್ಷಗಳಿಂದ ಆಚರಿಸುತ್ತ ಬಂದಿರುವ ಹೋಳಿ ಹಬ್ಬದ ಬೆಳ್ಳಿ ಮಹೋತ್ಸವ ಉದ್ಘಾಟಿಸಿ ಮಾತನಾಡಿದರು. ವಕೀಲ ಡಾ.ತಾತಾಸಾಹೇಬ ಬಾಂಗಿ, ಹಿರಿಯ ಸಾಹಿತಿ ಬಸವರಾಜ ಯಡಹಳ್ಳಿ, ರಾಣಿ ಚನ್ನಮ್ಮ ಮಹಿಳಾ ಮಂಡಳ ಅಧ್ಯಕ್ಷೆ ಆಶಾದೇವಿ ಗುಡಗುಂಟಿ, ವೀಣಾ ಇಂಗಳೆ ಮಾತನಾಡಿದರು. ಅನ್ವಿತಾ, ಅವಿಷ್ಕಾ ಕೊಕಟನೂರ ಪ್ರಾರ್ಥನೆ ಗೀತೆ ಹಾಡಿದರು. ಶಿಕ್ಷಕಿ ಮಹಾನಂದಾ ಡೂಗನವರ ಸ್ವಾಗತಿಸಿದರು. ರೂಪಾ ಅಮ್ಮಲಝರಿ ವಂದಿಸಿದರು.



ಮಾ.19ರಿಂದ ಜಾನುವಾರು ಜಾತ್ರೆ: ಗುಡಗುಂಟಿ

ಜಮಖಂಡಿ: ಐತಿಹಾಸಿಕ ಅಮರಾಯಿ ಜಾತ್ರೆ ಮಾ.19ರಂದು ಯುಗಾದಿ ಅಮವಾಸ್ಯೆಯ ದಿನ ಜಾನುವಾರು ಜಾತ್ರೆ ಪ್ರಾರಂಭವಾಗುತ್ತಿದ್ದು, ಮಾ.20ರಂದು ತೆರಬಂಡಿ ಸ್ಪರ್ಧೆ, ಮಾ.21ರಂದು ಎತ್ತಿನ ಗಾಡಿ ಸ್ಪರ್ಧೆ ಏರ್ಪಡಿಸಿ ಅಂದೇ ಬಹುಮಾನ ವಿತರಣೆ ನಡೆಸಲಾಗುವುದು ಎಂದು ಶಾಸಕ ಜಗದೀಶ ಗುಡಗುಂಟಿ ಹೇಳಿದರು.

ನಗರದ ತಾಲೂಕಾಡಳಿತ ಭವನದ ಆವರಣದಲ್ಲಿ ಎಪಿಎಂಸಿ ಏರ್ಪಡಿಸಿದ್ದ ಐತಿಹಾಸಿಕ ಅಮರಾಯಿ ಜಾನುವಾರು ಜಾತ್ರಾ ಮಹೋತ್ಸವದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಈ ಜಾತ್ರೆಗೆ ಅತಿಯಾದ ಖರ್ಚು ವೆಚ್ಚವಿದ್ದು ಅದನ್ನು ಮೊದಲಿನ ಹಾಗೆ ಎಲ್ಲ ಅಧಿಕಾರಿಗಳು ವಂತಿಕೆ ನೀಡಿ. ನೂತನ ಅಧ್ಯಕ್ಷರು ಉಪಾಧ್ಯಕ್ಷರು ಉತ್ತಮವಾಗಿ ಕೆಲಸ ಮಾಡಿ ರೈತರ ವಸ್ತು ಪ್ರದರ್ಶನ ಸಂಬಂಧಪಟ್ಟ ಇಲಾಖೆಯವರು ನಿರ್ವಹಿಸುತ್ತಾರೆ. ಮಳಿಗೆಗಳು ಖಾಲಿ ಇರದ ಹಾಗೇ ಕೃಷಿಗೆ ಸಂಬಂಧಿಸಿದ ವಸ್ತುಗಳು ಪ್ರದರ್ಶನ ಮಾರಾಟ ಇರಬೇಕು ಎಂದರು.

ತಹಶೀಲ್ದಾರ್ ಅನಿಲ ಬಡಿಗೇರ ಮಾತನಾಡಿ, ಜಾತ್ರೆಗೆ ಎಲ್ಲ ಅಧಿಕಾರಿಗಳ ಸಹಾಯ ಹಸ್ತ ಅಗತ್ಯವಾಗಿ ಇರಬೇಕು. ಅತ್ಯಂತ ಜವಾಬ್ದಾರಿಯುತವಾಗಿ ಕರ್ತವ್ಯ ನಿರ್ವಹಿಸಬೇಕು. ಜಾತ್ರೆಗೆ ಕುಂದು ತರಬಾರದು ಎಂದು ಹೇಳಿದರು. ವಿಪ ಮಾಜಿ ಸದಸ್ಯ ಜಿ.ಎಸ್.ನ್ಯಾಮಗೌಡ ಮಾತನಾಡಿ, ಜಮಖಂಡಿ ಸಂಸ್ಥಾನಿಕರು ಮಾವಿನ ತೋಪಿನಲ್ಲಿ ನಡೆಯುತ್ತಿದ್ದ, ಜಾತ್ರೆಯು ನಗರ ಬೆಳೆದಂತೆ ಮುಧೋಳ ರಸ್ತೆಯ ಹತ್ತಿರ ಜಾತ್ರೆ ನಡೆಯುತ್ತಿದೆ. ಮೊದಲು ಜಾತ್ರೆಯಲ್ಲಿ ಜಾನುವಾರಗಳು ಹೆಚ್ಚಿಗೆ ಬರುತ್ತಿದ್ದು, ಆಧುನಿಕತೆಯಲ್ಲಿ ಜಾನುವಾರು ಸಂಖ್ಯೆ ಕಡಿಮೆಯಾಗುತ್ತಿದೆ. ಇದ್ದ ಸ್ಥಿತಿಯಲ್ಲಿ ಜಾತ್ರೆಯನ್ನು ಸುಸಜ್ಜಿತವಾಗಿ ನಡೆಯಬೇಕು. ಮೊದಲಿನಿಂದಲೂ ಈ ಜಾತ್ರೆ ಸ್ಪರ್ಧೆ ಗೆ ಹೆಸರುವಾಸಿಯಾಗಿದೆ. ಇದು ಸಮಸ್ತ ತಾಲೂಕಿನ ಜಾತ್ರೆಯಾಗಿದೆ. ಜಾತ್ರಾ ಕಮೀಟಿ ಜೊತೆಗೆ ರೈತರು ಕೂಡಾ ಸಹಭಾಗಿಯಾಗಬೇಕು ಎಂದರು.

ಯುಗಾದಿಯಂದು ನಡೆಯುವ ಜಾತ್ರೆಗೆ ನೂತನ ಅಧ್ಯಕ್ಷರಾಗಿ ನಂದೆಪ್ಪ ನ್ಯಾಮಗೌಡ, ಉಪಾಧ್ಯಕ್ಷರಾಗಿ ಸಚಿನ ತುಪ್ಪದ, ಸರ್ವಾನುಮತದಿಂದ ಆಯ್ಕೆಯಾಗಿದ್ದಾರೆ. ಈಶ್ವರ ವಾಳೆಣ್ಣವರ, ಕೆ.ಕೆ.ತುಪ್ಪದ, ಸಿದ್ರಾಮ ಜಂಬಗಿ, ಮಲ್ಲು ಹೇಸಮನಿ, ರುದ್ರಯ್ಯಾ ಕರಡಿ, ಸುರೇಶಗೌಡ ಪಾಟೀಲ, ಅರ್ಬನ ಬ್ಯಾಂಕ ನಿರ್ದೇಶಕ ಫಕೀರಸಾಬ ಬಾಗವಾನ, ರಾಮಪ್ಪ ರಾಮಗೊಂಡ, ಎಪಿಎಂಸಿ ಕಾರ್ಯದರ್ಶಿ ಆನಂದ ರತ್ನಾಕರ, ಎಪಿಎಂಸಿ ಆಡಳಿತಾಧಿಕಾರಿ ಬಾಳಗೌಡ ಬಾವಿಹಾಳ ಇನ್ನಿತರರಿದ್ದರು.



ವಿಜ್ಞಾನದಿಂದ ದೇಶದ ಅಭಿವೃದ್ಧಿ ಸಾಧ್ಯ: ಶಿಕ್ಷಕ ಪಾಟೀಲ

ಗುಳೇದಗುಡ್ಡ: ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ವಿದ್ಯಾರ್ಥಿಗಳು ಯಶಸ್ಸು ಸಾಧಿಸಲು ವಿಜ್ಞಾನದ ಮೂಲ ಪರಿಕಲ್ಪನೆಗಳನ್ನು ವಿವೇಕದಿಂದ ಪ್ರಶ್ನಿಸುವ ಮೂಲಕ ಜ್ಞಾನವನ್ನು ಪಡೆದುಕೊಳ್ಳಬೇಕು. ವಿಜ್ಞಾನದಿಂದ ದೇಶದ ದೇಶದ ಅಭಿವೃದ್ಧಿ ಸಾಧ್ಯ ಎಂದು ಶಿಕ್ಷಕ ಬಿ.ಎಸ್.ಪಾಟೀಲ್ ಹೇಳಿದರು.



ಸಮೀಪದ ಹಾನಾಪೂರ ಎಲ್‌ಟಿ ಗ್ರಾಮದ ಬಿ.ಆರ್.ಚವ್ಹಾಣ ಸರ್ಕಾರಿ ಪ್ರೌಢಶಾಲೆಯಲ್ಲಿ ಹಮ್ಮಿಕೊಂಡಿದ್ದ ರಾಷ್ಟ್ರೀಯ ವಿಜ್ಞಾನ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ನಮ್ಮ ಎಲ್ಲಾ ದೈನಂದಿನ ಜೀವನವು ವಿಜ್ಞಾನದ ಸಿದ್ಧಾಂತಗಳ ಮೇಲೆ ನಿಂತಿದೆ. ಭಾರತವು ಇಂದು ವಿಜ್ಞಾನ ಮತ್ತು ತಂತ್ರಜ್ಞಾನದ ಸಹಾಯದಿಂದ ಜಗತ್ತಿನ ಎಲ್ಲ ದೇಶಗಳೊಂದಿಗೆ ಸ್ಪರ್ಧಿಸಿ ಮುನ್ನಡೆಯುತ್ತಿದೆ. ಮೇಕ್ ಇನ್ ಇಂಡಿಯಾ ಅಭಿಯಾನದ ಮೂಲಕ ಸ್ವದೇಶಿಯವಾಗಿ ತಂತ್ರಜ್ಞಾನ ಅಭಿವೃದ್ಧಿಪಡಿಸಿ ಎಲ್ಲಾ ಕ್ಷೇತ್ರಗಳಲ್ಲಿ ಬಳಸಿಕೊಳ್ಳುತಿದೆ ಎಂದರು.

ವಿಜ್ಞಾನ ವಿಷಯದ ರಂಗೋಲಿ, ವಿಜ್ಞಾನ ವಸ್ತು ಪ್ರದರ್ಶನ ಹಾಗೂ ರಸಪ್ರಶ್ನೆ ಸ್ಪರ್ಧೆ ಹಮ್ಮಿಕೊಂಡು, ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು. ಶಾಲೆಯ ಮುಖ್ಯೋಪಾಧ್ಯಾಯನಿ ಆರ್.ಬಿ.ಹುಣಸಿ ಮರದ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಪರುತಗೌಡ ಪಾಟೀಲವ, ಎಸ್.ಬಿ.ಗಾರವಾಡ, ಆರ್.ಜೆ.ಪೆಂಡಾರಿ, ಜಿ.ಎಸ್.ಸಂಗನಾಳ, ಎ.ಎಂ.ಹಿರೇಮಠ, ಬಿ.ಎಚ್.ಬಂಡಿವಡ್ಡರ, ಬಿ.ಬಿ.ಬೂದಿನಗಡೆ, ಎಸ್.ಪಿ.ಕಂದಗಲ, ಬೂದಿನಗಡೆ ಮತ್ತಿತರರು ಉಪಸ್ಥಿತರಿದ್ದರು.

ರಾಜ್ಯಮಟ್ಟದ ಐಎಸ್‌ಟಿಇ ಸ್ಪರ್ಧೆ: ಪ್ರಥಮ



ಮಹಾಲಿಂಗಪುರ: ಬಾಗಲಕೋಟೆ ಬಿವಿವಿಎಸ್ ಪಾಲಿಟೆಕ್ನಿಕ್‌ನಲ್ಲಿ ಇತ್ತೀಚೆಗೆ ವಿದ್ಯಾರ್ಥಿಗಳಿಗಾಗಿ ಹಮ್ಮಿಕೊಂಡಿದ್ದ ಕರ್ನಾಟಕ ರಾಜ್ಯಮಟ್ಟದ 5ನೇ ಐಎಸ್‌ಟಿಇ ಸ್ಪರ್ಧೆಗಳಲ್ಲಿ ಮಹಾಲಿಂಗಪುರದ ಕೆಎಲ್‌ಇ ಪಾಲಿಟೆಕ್ನಿಕ್ ವಿದ್ಯಾರ್ಥಿಗಳು ಗಣನೀಯ ಸಾಧನೆ ಮಾಡಿದ್ದಾರೆ.ಮೆಕ್ಯಾನಿಕಲ್ ವಿಭಾಗದ ಭಾವಿಕ್ ಓಸ್ವಾಲ್ ಪೇಪರ್ ಪ್ರೆಜೆಂಟೇಶನ್‌ನಲ್ಲಿ ಪ್ರಥಮ, ಇಲೆಕ್ಟ್ರಿಕಲ್ ವಿಭಾಗದ ಶಿವಾನಂದ ನಾಗನೂರ ಪೋಸ್ಟರ್ ಮೇಕಿಂಗ್‌ನಲ್ಲಿ ತೃತೀಯ ಸ್ಥಾನ ಪಡೆದಿದ್ದಾರೆ. ಇವರಿಗೆ ವಂದನಾ ಪಸಾರ, ಯು.ಡಿ.ಹಾದಿಮನಿ, ಸುಭಾಸ್ ಮೂಶಿ, ಲಕ್ಷ್ಮೀ ಅಂಗಡಿ, ಚೇತನ ಕುಂದರಗಿ, ಲಕ್ಷ್ಮೀ ಪಾಟೀಲ, ಮಂಜುನಾಥ ಅರಕೇರಿ, ವಿಶಾಲ ಮೆಟಗುಡ್ಡ ಮಾರ್ಗದರ್ಶನಮಾಡಿದ್ದರು.ದೂರದಮಂಗಳೂರು,ಮೂಡಬಿದರೆ, ಬೆಂಗಳೂರು, ಗದಗ, ಹುಬ್ಬಳ್ಳಿ, ನಿಡಸೋಸಿ, ಬಾಗಲಕೋಟೆ, ಬೀಳಗಿ ಸೇರಿದಂತೆ 20 ಪಾಲಿಟೆಕ್ನಿಕ್‌ನಿಂದ 180 ವಿದ್ಯಾರ್ಥಿಗಳು ಸ್ಪರ್ಧೆಗಳಲ್ಲಿ ಭಾಗವಹಿಸಿದ್ದರು. ಅದರಲ್ಲಿ ಗ್ರಾಮೀಣ ಭಾಗದ ಮಹಾಲಿಂಗಪುರದ ಕೆಎಲ್‌ಇ ಪಾಲಿಟೆಕ್ನಿಕ್ ವಿದ್ಯಾರ್ಥಿಗಳ ಸಾಧನೆ ಹೆಮ್ಮೆ ತಂದಿದೆ ಪ್ರಾಚಾರ್ಯ ಎಸ್.ಐ.ಕುಂದಗೋಳ ತಿಳಿಸಿದ್ದಾರೆ.

ಮಂಜುನಾಥಗೆ ಪಿಎಚ್‌ಡಿ ಪ್ರದಾನ

ಬಾದಾಮಿ: ತಾಲೂಕಿನ ಗಿಡ್ಡನಾಯಕನಾಳ ಗ್ರಾಮದ ಮಂಜುನಾಥ ಕರಿಲಿಂಗನ್ನವರ ಅವರಿಗೆ ಹಂಪಿ ಕನ್ನಡ ವಿಶ್ವವಿದ್ಯಾಲಯದಲ್ಲಿ ಇತ್ತೀಚೆಗೆ ನಡೆದ ಘಟಿಕೋತ್ಸವದಲ್ಲಿ ಕುಲಾಧಿಪತಿ, ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರು ಪಿಎಚ್‌ಡಿ ಪ್ರದಾನ ಮಾಡಿದರು. ಡಾ.ಎಂ.ಮಲ್ಲಿಕಾರ್ಜುನಗೌಡ ಅವರ ಮಾರ್ಗದರ್ಶನದಲ್ಲಿ ಕನ್ನಡ ಕಥಾಸಾಹಿತ್ಯ ಕುರಿತ ವಿಮರ್ಶೆಗಳ ಅಧ್ಯಯನ ಎಂಬ ವಿಷಯದಲ್ಲಿ ಕನ್ನಡ ಸಾಹಿತ್ಯ ಅಧ್ಯಯನ ವಿಭಾಗಕ್ಕೆ ಸಲ್ಲಿಸಿದ ಪಿಎಚ್‌ಡಿ ಮಹಾಪ್ರಬಂಧಕ್ಕೆ ಪದವಿ ನೀಡಲಾಗಿದೆ. ಪಿಎಚ್‌ಡಿ ಪದವಿ ಪಡೆದಿರುವ ಮಂಜುನಾಥ ಎಂ.ಕರಿಲಿಂಗಣ್ಣವರ ಅವರನ್ನು ಗಿಡ್ಡನಾಯಕನಾಳ ಗ್ರಾಮದ ಹಿರಿಯರು, ಬಂಧುಗಳು, ಸ್ನೇಹಿತರು, ಕನ್ನಡ ವಿವಿಯ ಆಪ್ತರು ಅಭಿನಂದಿಸಿದ್ದಾರೆ.



ಸಿದ್ಧಾರೂಢ ರಥೋತ್ಸವ ಅದ್ದೂರಿ

ಬೀಳಗಿ: ತಾಲೂಕಿನ ಚಿಕ್ಕಾಲಗುಂಡಿ ಗ್ರಾಮದಲ್ಲಿ ಸಿದ್ಧಾರೂಢ ಮಠದ ರಥೋತ್ಸವ ಸಡಗರ, ಸಂಭ್ರಮ, ಶ್ರದ್ಧಾಭಕ್ತಿಯಿಂದ ನಡೆಯಿತು.



ಬೆಳಗ್ಗೆ ಶ್ರೀ ಮಲ್ಲಿಕಾರ್ಜುನ ಮಠದಲ್ಲಿ ಮುತ್ತೈದೆಯರಿಗೆ ಉಡಿ ತುಂಬುವುದರೊಂದಿಗೆ ಪೂರ್ಣ ಕುಂಭ, ಆರತಿ ಸಕಲ ವಾದ್ಯ ವೈಭವದೊಂದಿಗೆ ಸಿದ್ಧಾರೂಢರ ಉತ್ಸವ ಮೂರ್ತಿಯ ಮೆರವಣಿಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಸಿದ್ಧಾರೂಢ ಮಠಕ್ಕೆ ಆಗಮಿತು.

ಸಂಜೆ ಬೀದರ ಚಿದಂಬರಾಶ್ರಮದ ಡಾ. ಶಿವಕುಮಾರ ಮಹಾಸ್ವಾಮಿಗಳ ದಿವ್ಯ ಸಾನ್ನಿಧ್ಯದಲ್ಲಿ, ಸಕಲ ಪೂಜ್ಯರ ನೇತೃತ್ವದಲ್ಲಿ ಶಿವಭಜನೆ, ಪಲ್ಲಕ್ಕಿ, ನಂದಿಕೋಲು, ಸುಮಂಗಲೆಯರ ಆರತಿ, ವಾದ್ಯ ವೈಭವಗಳೊಂದಿಗೆ ಭಕ್ತರ ಜೈಕಾರದೊಂದಿಗೆ ಸಡಗರ, ಸಂಭ್ರಮದಿಂದ ರಥೋತ್ಸವ ಜರುಗಿತು. ಗವಿಮಠದ (ಬಸ್ ನಿಲ್ದಾಣದ) ವರೆಗೆ ಸಾಗಿ ಮರಳಿ ಶ್ರೀಮಠಕ್ಕೆ ಆಗಮಿಸಿತು.

ಮಕ್ಕಳು, ಮಹಿಳೆಯರು, ಪುರುಷರು, ಯುವಕರು, ಯುವತಿಯರು ರಥಕ್ಕೆ ಬೆಂಡು, ಬೆತ್ತಾಸು, ಉತ್ತತ್ತಿ, ಚುರುಮುರಿ ಹಾರಿಸಿ ಭಕ್ತಿ ಮೆರೆದರು.

ಎಸ್ಪಿ ಗೋಯಲ್ ದಂಪತಿಯಿಂದ ಭಕ್ತಿ ಸೇವೆ

ಬಾಗಲಕೋಟೆ: ಲಕ್ಷಾಂತರ ಭಕ್ತರನ್ನು ಹೊಂದಿರುವಂತಹ ಶ್ರೀಶೈಲ ಮಲ್ಲಿಕಾರ್ಜುನ ದರ್ಶನಕ್ಕೆ ಹೋಗುವ ಬಾಗಲಕೋಟೆ ನಗರದ ಮಾರ್ಗವಾಗಿ ರಸ್ತೆಯ ಮೂಲಕ ಪಾದಯಾತ್ರಿಕ ರಿಗೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿದ್ಧಾರ್ಥ ಗೋಯಲ್ ದಂಪತಿ ಭಕ್ತಿಯ ಪೂರ್ವಕವಾಗಿ ಮಜ್ಜಿಗೆ, ಹಣ್ಣು-ಹಂಪಲು, ಕುಡಿಯುವ ನೀರಿನ ಸೇವೆ ಮಾಡಿ ಪ್ರೇರಣೆಯಾದರು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ತಮ್ಮ ಪತ್ನಿ ಜತೆ ಸೇರಿ ರಸ್ತೆಯಲ್ಲಿ ಹೋಗುವ ಪಾದಯಾತ್ರಿ ಕರಿಗೆ ಹಣ್ಣು ಹಂಪಲು ನೀಡುದರು. ನೂರಾರು ಭಕ್ತರು ಇವರ ಸೇವೆ ಪಡೆದುಕೊಂಡರು.ಹೋಳಿ ಹಬ್ಬದ ಕಾಮಣ್ಣನ ದಹನವಾಗುತ್ತಿದ್ದಂತೆ ಜಿಲ್ಲೆಯಜಮಖಂಡಿ ರಬಕವಿ ಬನಹಟ್ಟಿ ಮುಧೋಳ ಲೋಕಾಪುರ ಕಲಾದಗಿ ಸೇರಿದಂತೆ ಅನೇಕ ಊರುಗಳಿಂದ ಬಾಗಲಕೋಟೆ ಮಾರ್ಗವಾಗಿ ಹೋಗುವ ಭಕ್ತಾದಿಗಳಿಗೆ ಬೆಳಗ್ಗೆಯಿಂದಲೇ ಅನ್ನಪ್ರಸಾದ ಸೇವೆ ಮಾಡಲಾಗುತ್ತು. ಅಲ್ಲಲ್ಲಿ ಭಕ್ತರಿಗೆ ವಿಶ್ರಾಂತಿ ಪಡೆದುಕೊಳ್ಳಲು ವ್ಯವಸ್ಥೆ ಕೂಡ ಮಾಡಲಾಗಿತ್ತು. ಗದ್ದನಕೇರಿ, ತುಳಸಿಗೇರಿ, ವಿದ್ಯಾಗಿರಿ ಹಾಗೂ ಹೊಸ ಪ್ರವಾಸಿ ಮಂದಿರ ಗದ್ದನಕೇರಿ ಕ್ರಾಸ್, ಶಿರೂರ ಅಗಸಿ, ಶಿರೂರು ಕಮತಗಿ ಕ್ರಾಸ್ ಸೇರಿದಂತೆ ರಸ್ತೆಯುದ್ದಕ್ಕೂ ಅನೇಕ ಕಡೆ ಪ್ರಸಾದ ವ್ಯವಸ್ಥೆ ಮಾಡಲಾಗಿತ್ತು.ಬೆಳಗ್ಗೆಯಿಂದಲೇ ರಸ್ತೆಯ ಮೂಲಕ ಹೋಗುವ ಪಾದಯಾತ್ರಾರ್ಥಿಗಳಿಗೆ ಹಣ್ಣು, ಬ್ರೆಡ್, ಎಳನೀರು ಹೀಗೆ ಅನೇಕ ಉಪಹಾರದ ಪದಾರ್ಥಗಳನ್ನು ನೀಡಿಭಕ್ತಿ ಸಮರ್ಪಿಸಿದರು. ಕಂಬಿಗಳಿಗೆ, ರಥಕ್ಕೆ ಭಕ್ತರ ಪೂಜೆ ಸಲ್ಲಿಸಿದರು.



ಹೋಳಿ ರಂಗಿನಾಟಕ್ಕೆ ಅದ್ದೂರಿ ಚಾಲನೆ

ಬಾಗಲಕೋಟೆ: ಐತಿಹಾಸಿಕ ಹೋಳಿ ಹಬ್ಬದ ಅಂಗವಾಗಿ ನಗರದಲ್ಲಿ ಮೂರು ದಿನ ನಡೆಯುವ ರಂಗಿನಾಟಕ್ಕೆ ಅದ್ದೂರಿ ಚಾಲನೆ ದೊರೆಯಿತು.

ಗುರುವಾರದಿಂದ ಶನಿವಾರದವರೆಗೆ ನಡೆಯುವ ಬಣ್ಣದೋಕಳಿಗೆ ಸಂಭ್ರಮದ ಚಾಲನೆ ದೊರೆತಿದ್ದು, ಮೊದಲ ದಿನ ಕಿಲ್ಲಾದ ಬಣ್ಣಾದಾಟ ನಡೆಯಿತು.ಕಿಲ್ಲಾದಿಂದ ಹತ್ತಾರು ಬಣ್ಣದ ಗಾಡಿಗಳು ಮೆರವಣಿಗೆ ಮೂಲಕ ಹೊರಟಾಗ ರಸ್ತೆಯ ಪಕ್ಕದ ನಿಂತಿದ್ದ ಯುವಕರಿಗೆ ಬಣ್ಣದ ನೀರನ್ನು ಗೊಜ್ಜುತ್ತಿರುವುದು ಆಕರ್ಷಣೀಯವಾಗಿತ್ತು. ಕಿಲ್ಲಾ ಓಣಿಯಿಂದ ಆರಂಭಗೊಂಡ ಬಣ್ಣದಾಟ ನಡೆಯಿತು.ಅದ್ದೂರಿಯಾಗಿ ಜರುಗಿತು. ಮಹಿಳೆಯರು,ಮಕ್ಕಳು, ವಯಸ್ಸಾದವರು ಒಬ್ಬರಿಗೊಬ್ಬರು ಪರಸ್ಪರ ಬಣ್ಣ ಹಚ್ಚಿಕೊಳ್ಳುವ ಮೂಲಕ ಬಣ್ಣದ ಹಬ್ಬ ರಂಗಿನಾಟಕ್ಕೆ ಕಳೆತಂದರು.

ಜಿಲ್ಲಾಧಿಕಾರಿ ಸಂಗಪ್ಪ,ಎಡಿಸಿ ತೇಲಿ ಹಾಗೂ ಬಾಗಲಕೋಟೆ ಉಪವಿಭಾಗಾಧಿಕಾರಿ ಸಂತೋಷ ಜಗಲಾಸಾರ್ ಅವರು ಪರಸ್ಪರ ಗುಲಾಲ ಹಚ್ಚುವ ಮೂಲಕ ಹೋಳಿ ಆಚರಿಸಿದರೆ ಜಿಪಂ ಸಿಬ್ಬಂದಿ ಕೂಡ ಬಣ್ಣದ ಆಟದಲ್ಲಿ ಮಿಂದೆದ್ದರು. ಬಾಗಲಕೋಟೆಯಲ್ಲಿ ಮೂರು ದಿನ ನಡೆಯುವ ಹೋಳಿ ಹಬ್ಬದ ಬಣ್ಣದಾಟಕ್ಕೆ ಭಾರೀ ಪೊಲೀಸ್ ಭದ್ರತೆಯನ್ನು ಎಸ್ಪಿ ಸಿದ್ಧಾರ್ಥ ಗೋಯಲ್ ನೇತೃತ್ವದಲ್ಲಿ ಕೈಗೊಳ್ಳಲಾಗಿತ್ತು. ಭದ್ರತೆಗಾಗಿ ಐವರು ಡಿವೈಎಸ್ ಪಿ,12 ಜನ ಸಿಪಿಐ, 28 ಪಿಎಸ್‌ಐ, 57 ಎಎಸ್ ಐ, 369 ಪೊಲೀಸ್ ಸಿಬ್ಬಂದಿ, 300 ಗೃಹ ರಕ್ಷಕ ದಳ ನಿಯೋಜಿಸಲಾಗಿದೆ.



ನೂತನ ಬಸ್ ಸಂಚಾರಕ್ಕೆ ಶಾಸಕ ಚಾಲನೆ



ಬಾದಾಮಿ: ಮತಕ್ಷೇತ್ರದ ಗುಳೇದಗುಡ್ಡ ಘಟಕಕ್ಕೆ ಎರಡು, ಬಾದಾಮಿ ಘಟಕಕ್ಕೆ ಆರು ನೂತನ ಬಸ್ ಗಳು ಬಂದಿದ್ದು, ಬರುವ ದಿನಗಳಲ್ಲಿ ಪಲ್ಲಕ್ಕಿ, ಎಸಿ, ಸೇರಿದಂತೆ ಇನ್ನಷ್ಟು ಹೆಚ್ಚು ಬಸ್ ತರಲು ಪ್ರಯತ್ನಿಸುತ್ತೇನೆ ಎಂದು ಶಾಸಕ ಭೀಮಸೇನ ಚಿಮ್ಮನಕಟ್ಟಿ ಹೇಳಿದರು. ಗುರುವಾರ ಪಟ್ಟಣದ ಕೆ.ಎಸ್.ಆರ್.ಟಿ.ಸಿ. ಬಸ್ ಘಟಕದಲ್ಲಿ ಹಮ್ಮಿಕೊಂಡಿದ್ದ ನೂತನ ಬಸ್ ಸಂಚಟರಕ್ಕೆ ಚಾಲನೆ ನೀಡಿ ಮಾತನಾಡಿದರು. ಕಳೆದ ಎರಡು ವರೆ ವರ್ಷದ ಅವಧಿಯಲ್ಲಿ ಗುಳೇದಗುಡ್ಡಕ್ಕೆ ಹತ್ತು ಮತ್ತು ಬಾದಾಮಿ ಘಟಕಕ್ಕೆ ಹನ್ನೆರಡು ಬಸ್ ಗಳು ಬಂದಿವೆ. ಕಳೆದ ಎಪ್ರಿಲ್ ನಿಂದ ಇಲ್ಲಿಯವರೆಗೆ ಬಾದಾಮಿ ಘಟಕಕ್ಕೆ ಒಂದು ಕೋಟಿ ರೂ. ಹಾಗೂ ಗುಳೇದಗುಡ್ಡ ಘಟಕಕ್ಕೆ ರೂ.1.40 ಕೋಟಿ ರೂ.ಲಾಭ ಗಳಿಸಿದೆ. ಸರಕಾರದ ಪಂಚಗ್ಯಾರಂಟಿ ಯೋಜನೆಗಳಲ್ಲಿ ಒಂದಾದ ಶಕ್ತಿ ಯೋಜನೆ ಜಾರಿಯಿಂದ ಮಹಿಳೆಯರ ಪ್ರಯಾಣ ಹೆಚ್ಚಳವಾಗಿದೆ. ಪ್ರಯಾಣಿಕರು ಸಹಿತ ಸಾರಿಗೆ ಇಲಾಖೆಯ ಸಿಬ್ಬಂದಿಗೋಂದಿಗೆ ಸಹಕರಿಸಬೇಕು ಎಂದು ಮನವಿ ಮಾಡಿದರು. ಘಟಕ ವ್ಯವಸ್ಥಾಪಕ ಅಶೋಕ ಕೋರಿ ಮಾತನಾಡಿದರು. ಪಾಂಡಪ್ಪ ಕಟ್ಟೀಮನಿ, ಶಂಕರ ಕನಕಗಿರಿ, ಅಶೋಕ ಕೋಟನಕರ, ಗ್ಯಾರಂಟಿ ಅನುಷ್ಠಾನ ಸಮಿತಿಯ ತಾಲೂಕಾಧ್ಯಕ್ಷ ಎಂ.ಎಂ.ಬೂದಿಹಾಳ, ಸೇರಿದಂತೆ ಸಾರಿಗೆ ಇಲಾಖೆಯ ಚಾಲಕರು, ನಿರ್ವಾಹಕರು, ಸಿಬ್ಬಂದಿ ಹಾಜರಿದ್ದರು.

ಕಿರುಸುದ್ದಿ

ರಾಜ್ಯಮಟ್ಟದ ಮಾಸ್ತರ ಪ್ರಶಸ್ತಿ ಪ್ರದಾನ ಇಂದು

ಇಂಡಿ: ತಾಲೂಕಿನ ಹರಳಯ್ಯನಹಟ್ಟಿ (ಬೆನಕನಳ್ಳಿ)ಯಲ್ಲಿ ಮಾ.6ರಂದು ಬೆಳಗ್ಗೆ 10 ಗಂಟೆಗೆ ಅಪ್ಪ ಅವ್ವ ಕಲಾ ಮತ್ತು ಸಾಹಿತ್ಯ, ಸಂಸ್ಕೃತಿ ಸಂಸ್ಥೆಯಿಂದ ದಿ.ಚಂದ್ರಾಮಯ ಹೊನ್ನಕಟ್ಟಿ(ಮಾಸ್ತರ) ಅವರ 24ನೇ ಪುಣ್ಯಾರಾಧನೆ ನಿಮಿತ್ತ ರಾಜ್ಯಮಟ್ಟದ ಮಾಸ್ತರ ಪ್ರಶಸ್ತಿ ಮತ್ತು ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿದ ಮಹನೀಯರಿಗೆ ಕಾಯಕ ಪ್ರಶಸ್ತಿ ಪ್ರದಾನ ಹಾಗೂ ಸಿದ್ದೇಶ್ವರ ಸ್ವಾಮಿಜಿ ಅವರ ನುಡಿನಮನ ಕಾರ್ಯಕ್ರಮ ನಡೆಯಲಿದೆ.

ಡಾ.ಜ್ಯೋತಿರ್ಲಿಂಗ ಹೊನ್ನಕಟ್ಟಿ ಸಿಪಿಐ ಹುಬ್ಬಳ್ಳಿ ಧಾರವಾಡ ಇವರು ಬರೆದ ಚಂದ್ರಾಮ ಮಾಸ್ತರ ಬದುಕು ಹಾಗೂ ಪ್ರೊ.ಬಿ.ಆರ್.ಪೊಲೀಸ್ ಪಾಟೀಲ ಅವರ ಇನ್ನಸು ದಿನ ಇರತಿ ಪುಸ್ತಕ ಬಿಡುಗಡೆಗೊಳ್ಳಲಿದೆ. ಕನ್ನಡ ನಾಡಿನಲ್ಲಿ ಉತ್ತಮ ಸೇವೆಗೈದ ಮಹನೀಯರನ್ನು ಗುರುತಿಸಿ ಕಾಯಕ ಮತ್ತು ಮಾಸ್ತರ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ ಎಂದು ಸಂಸ್ಥೆಯ ಸದಸ್ಯ ಡಾ.ಜ್ಯೋತಿರ್ಲಿಂಗ ಹೊನ್ನಕಟ್ಟಿ, ಸಿಪಿಐ ಹುಬ್ಬಳ್ಳಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಡಿವೈಎಸ್‌ಪಿ ಇಂಡಿ ಸದಾಶಿವ ಕಟ್ಟಿಮನಿ, ರೈತ ಹೋರಾಟಗಾರ ಧರ್ಮರಾಜ ಗೌಡರ, ಮೇರಿ ಜೇವಿಯರ್ ನೇತ್ರಾಧಿಕಾರಿ ಪ್ರಕಾಶ ಪರಣಕರ, ಪ್ರಭುಗೌಡ ಲಿಂಗದಳ್ಳಿ, ಡಾ.ಮಹಾಂತೇಶ ಬಿರಾದಾರ, ಡಾ.ಎಂ.ಕೆ.ಹದರಿ, ಡಾ.ಸಮೀರ ಹಾದಿಮನಿ, ಇಮಾಮಸಾಬ ವಲ್ಲೆಪ್ಪನವರ, ಲಿಂಗರಾಜು ಕಂಬಳಿ, ಅಶ್ವಿನಿ ರೆಡ್ಡಿ, ಧನರಾಜ ಮುಜಗೊಂಡ, ಶ್ರೀಶೈಲ ಎಸ್. ಕಾಯಕ ಪ್ರಶಸ್ತಿಗೆ ಭಾಜನರಾಗಿದ್ದಾರೆ. ರಂಗಮ್ಮ ರಾಜಾಪೂರ, ಎಸ್.ಕೆ.ಕವಜಲಗಿ, ತಿಪ್ಪಣ್ಣ ನಾಗೂರ, ಚಂದ್ರಶೇಖರ ಪಡಗಣ್ಣವರ, ರಮೇಶ ಮೂಲಿಮನಿ, ವಿದ್ಯಾ ಕಲ್ಯಾಣಶೆಟ್ಟಿ, ಎಂ.ಎಂ.ಪಡಶೆಟ್ಟಿ, ಬಿ.ಆರ್.ಪೊಲೀಸ್ ಪಾಟೀಲ ಮಾಸ್ತರ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಸದಾಶಿವ ವರದಿ ಜಾರಿಗೆಗೆ ರಾಜಶೇಖರ ಆಗ್ರಹ

ಸಿಂದಗಿ: ಬಲಗೈ ನಾಯಕರು ಎಡಗೈ ನಾಯಕರನ್ನು ಓಲೈಸುವ ಸಲುವಾಗಿ ಅವರಿಗೆ ಏನು ಅನ್ನದೇ ಅವರಿಗೆ ಸಚಿವ ಸ್ಥಾನ ಮತ್ತು ಎಂಎಲ್‌ಸಿ ಮಾಡಿರುವ ಉದಾಹರಣೆಗಳು ಸಹ ಸಾಕ್ಷಿವೆ. ಅವರನ್ನು ಓಲೈಕೆ ಮಾಡುವುದನ್ನು ಬಿಟ್ಟು ನಮ್ಮ ಸಮುದಾಯದ ಮೇಲೆ ಪ್ರೀತಿ ತೋರಿಸಬೇಕು. ನಮ್ಮ ಸಮಾಜಕ್ಕೂ ಕೊಡುಗೆ ನೀಡಬೇಕು. ಸದಾಶಿವ ವರದಿ ಆಯೋಗ ಮೊದಲಿನಂತೆ ಮುಂದುವರೆಸಿದ್ದೆ ಆದಲ್ಲಿ ಮುಂದಿನ ದಿನಮಾನಗಳಲ್ಲಿ ಹೋರಾಟ ಮಾಡಲಾಗುವುದು ಎಂದು ನ್ಯಾಯವಾದಿ ರಾಜಶೇಖರ ಚೌರ ಎಚ್ಚರಿಕೆ ನೀಡಿದರು. ನಗರದ ಪ್ರವಾಸಿ ಮಂದಿರದಲ್ಲಿ ಹಮ್ಮಿಕೊಂಡ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸದಾಶಿವ ಆಯೋಗ ಜಾರಿಗೆ ತರಬೇಕು ಎಂದು ಮಾದಿಗ ಸಮಾಜದ ಭಾಸ್ಕರ್ ಪ್ರಸಾದ್ ಹಾಗೂ ಅರುಣಕುಮಾರ ಅವರು ಹೋರಾಟವನ್ನು ಮಾಡುತಿದ್ದಾರೆ. ನ್ಯಾ.ನಾಗಮೋಹನದಾಸ ವರದಿಯಲ್ಲಿ ಶೇ.17ರಷ್ಟು ಮೀಸಲಾತಿ ಇದೆ. ಅದರಲ್ಲಿ ಬಲಗೈ ಸಮಾಜಕ್ಕೆ ಶೇ.06, ಎಡಗೈ ಸುಮುದಾಯಕ್ಕೆ ಸಂಬಂದಿಸಿದ್ದು, ಉಳಿದ ಶೇ.05ರಷ್ಟು ಸ್ಪರ್ಶ ಸಮುದಾಯಕ್ಕೆ ಮಿಸಲಿಟ್ಟಿದೆ. ಆದರೆ ಪ್ರಸ್ತುತ ನೇಮಕಾತಿಯಲ್ಲಿ ಹಳೆಯ ಪದ್ಧತಿಯನ್ನೇ ಅನುಕರಣೆ ಮಾಡುತ್ತಿರುವುದು ಸರಿಯಲ್ಲಿ, ಇದರಿಂದ ಬಲಗೈ ಸಮುದಾಯಕ್ಕೆ ಮುಂಬರುವ 32ವರ್ಷಗಳವರೆಗೆ ಸರ್ಕಾರಿ ನೌಕರಿಯಿಂದ ವಂಚಿತರಾಗುತ್ತಾರೆ. ಸದಾಶಿವ ಆಯೋಗ ಹಾಗೂ ಮೀಸಲಾತಿಯಿಂದ ಬಲಗೈ ಸಮುದಾಯ ಮತ್ತೆ ಮೂಲ ಅಸ್ಪೃಶ್ಯತೆಗೆ ಹೋಗುವ ಎಲ್ಲ ಲಕ್ಷಣಗಳು ಎದ್ದು ಕಾಣುತ್ತಿವೆ ಎಂದರು. ಸಮತೋಲನ ಕಾಪಾಡದಿದ್ದರೆ ಪರಿಶಿಷ್ಟ ಜಾತಿಗಳಿಗೆ ಕಡಿಮೆ ಹುದ್ದೆಗಳ ನೇಮಕಾತಿ ನಡೆಯುವ ಸಂದರ್ಭದಲ್ಲಿ ಪ್ರವರ್ಗ–ಬಿ ಮತ್ತು ಪ್ರ–ಸಿ ಸಮುದಾಯಗಳು ಅವಕಾಶದಿಂದ ವಂಚಿತರಾಗುವ ಅಪಾಯ ಎದ್ದು ಕಾಣುತ್ತಿದೆ.

ತಾಪಮಾನ: ಮುನ್ನೆಚ್ಚರಿಕೆ ವಹಿಸುವಂತೆ ಡಿಸಿ ಸೂಚನೆ

ವಿಜಯಪುರ: ಅತಿ ಹೆಚ್ಚು ತಾಪಮಾನ ಸಮಯದಲ್ಲಿ ಪ್ರತಿಕೂಲ ಪರಿಣಾಮ ಕಡಿಮೆ ಮಾಡಲು ವಿಪತ್ತು ನಿರ್ವಹಣಾ ಪ್ರಾಧಿಕಾರದಿಂದ ನೀಡಲಾದ ಸಲಹೆ ಸೂಚನೆಗಳನ್ನು ಪಾಲಿಸುವ ನಿಟ್ಟಿನಲ್ಲಿ ಸಾರ್ವಜನಿಕರು ಮುನ್ನೆಚ್ಚರಿಕಾ ಕ್ರಮ ವಹಿಸುವಂತೆ ಜಿಲ್ಲಾಧಿಕಾರಿ ಡಾ.ಆನಂದ ಕೆ. ಅವರು ಮನವಿ ಮಾಡಿದ್ದಾರೆ. ರಾಜ್ಯದ ಕೆಲ ಜಿಲ್ಲೆಗಳಲ್ಲಿ 3ರಿಂದ 6 ದಿನಗಳವರೆಗೆ ಬಿಸಿಗಾಳಿಯ ಪ್ರಭಾವ ಕಂಡುಬರುವ ಸಾಧ್ಯತೆಯಿದೆ. ತೀವ್ರ ತಾಪಮಾನವು ಸಾರ್ವಜನಿಕರ ಆರೋಗ್ಯದ ಮೇಲೆ, ವಿಶೇಷವಾಗಿ ಮಕ್ಕಳು, ವೃದ್ಧರು ಮತ್ತು ಅನಾರೋಗ್ಯ ಪೀಡಿತರ ಮೇಲೆ ಗಂಭೀರ ಪರಿಣಾಮ ಬೀರಬಹುದು. ಬಿಸಿಲಿನಿಂದ ಉಂಟಾಗುವ ಬಳಲಿಕೆ, ನಿರ್ಜಲೀಕರಣ ಮತ್ತು ಹೀಟ್ ಸ್ಟ್ರೋಕ್ ತಡೆಗಟ್ಟಲು ಮತ್ತು ತಗ್ಗಿಸಲು ಸಾರ್ವಜನಿಕರು ಗಮನ ಹರಿಸಬೇಕು. ಗರಿಷ್ಠ ತಾಪಮಾನದ ಅವಧಿಯಲ್ಲಿ ಅದರಲ್ಲೂ ಮಧ್ಯಾಹ್ನ 12 ರಿಂದ 3 ಗಂಟೆರವರೆಗೆ ಬಿಸಿಲಿನಲ್ಲಿ ಹೊರಗೆ ಹೋಗುವುದನ್ನು ತಪ್ಪಿಸಬೇಕು. ಬಾಯಾರಿಕೆ ಇಲ್ಲದಿದ್ದರೂ ಸಾಕಷ್ಟು ನೀರು ಕುಡಿಯಬೇಕು. ಹಗುರವಾದ, ತಿಳಿ ಬಣ್ಣದ ಸಡಿಲವಾದ ಮತ್ತು ಹತ್ತಿ ಬಟ್ಟೆಗಳನ್ನು ಧರಿಸಬೇಕು. ಬಿಸಿಲಿನಲ್ಲಿ ಹೊರಗೆ ಹೋಗುವ ಅನಿವಾರ್ಯತೆಯಿದ್ದರೆ ರಕ್ಷಣೆಗಾಗಿ ಕನ್ನಡಕ, ಛತ್ರಿ, ಟೋಪಿ, ಬೂಟುಗಳು ಅಥವಾ ಚಪ್ಪಲಿಗಳನ್ನು ಬಳಸಬೇಕು. ಹೊರಗಿನ ಉಷ್ಣತೆ ಅಧಿಕವಾಗಿರುವಾಗ ಶ್ರಮದಾಯಕ ಚಟುವಟಿಕೆಗಳನ್ನು ನಿಲ್ಲಿಸಬೇಕು ಎಂದು ತಿಳಿಸಿದ್ದಾರೆ.



ಮುದ್ದೇಬಿಹಾಳ: ನಗರದಲ್ಲಿ ಎರಡನೇ ದಿನದ ಹೋಳಿಯ ಸಂದರ್ಭದಲ್ಲಿ ಗುರುವಾರ ಅಡತಿ ಭಜಾರ್ ವ್ಯಾಪಾರಸ್ಥರ ವತಿಯಿಂದ ಹೋಳಿ ಹಬ್ಬದ ಆಚರಣೆ ನಡೆಯಿತು. ಕರ್ನಾಟಕ ಸಹಕಾರಿ ಅರ್ಬನ್ ಬ್ಯಾಂಕಿನ ಅಧ್ಯಕ್ಷ ಮಲ್ಲನಗೌಡ ಬಿರಾದಾರ ಸೇರಿದಂತೆ ವ್ಯಾಪಾರಸ್ಥರು, ಹಾಮಾಲರ ಸಂಘದ ಸದಸ್ಯರು ಹೋಳಿಯಲ್ಲಿ ಆಚರಣೆಯಲ್ಲಿ ಭಾಗವಹಿಸಿದ್ದರು.

ವಸ್ತಿ ಶಾಲೆ ಮುಚ್ಚುವುದನ್ನು ಖಂಡಿಸಿ ಪ್ರತಿಭಟನೆ

ವಿಜಯಪುರ: ಕೆಪಿಎಸ್ ಮ್ಯಾಗ್ನೇಟ್ ಯೋಜನೆ ಹೆಸರಿನಲ್ಲಿ ವಿವಿಧ ತೋಟದ ವಸ್ತಿ ಶಾಲೆಗಳನ್ನು ಮುಚ್ಚುವುದನ್ನು ಖಂಡಿಸಿ ಎಐಡಿಎಸ್‌ಒ ಜಿಲ್ಲೆಯ ಅರಕೇರಿ ಶಾಲೆ ಬಳಿ ಪ್ರತಿಭಟನೆ ನಡೆಸಿದರು. ಈ ಪ್ರತಿಭಟನೆಗೆ ಮಕ್ಕಳು ಸಾಥ್ ನೀಡಿದರು. ಅರಕೇರಿಯ ಮಾನೆ ಭಂಡಾರಿ, ಸೋಮಪೂರ ವಸ್ತಿ, ತಾಂಡಾದಲ್ಲಿರುವ ಸರ್ಕಾರಿ ಶಾಲೆ ನಂ.6 ಸೇರಿದಂತೆ ಹತ್ತಾರು ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳು ಈ ಪ್ರತಿಭಟನೆಯಲ್ಲಿ ಭಾಗಿಯಾಗಿ ಸರ್ಕಾರಿ ಶಾಲೆ ಮುಚ್ಚಬೇಡಿ–ನಮ್ಮನ್ನು ಶಿಕ್ಷಣ ವಂಚಿತರನ್ನಾಗಿ ಮಾಡಬೇಡಿ ಎಂಬ ಪ್ರದರ್ಶನ ಫಲಕಗಳನ್ನು ಪ್ರದರ್ಶಿಸಿ ಸರ್ಕಾರಕ್ಕೆ ಒತ್ತಾಯಿಸಿದರು. ಎಸ್‌ಡಿಎಂಸಿ ಅಧ್ಯಕ್ಷ ಬಾಲಕೃಷ್ಣ ಭಂಡಾರಿ ಮಾತನಾಡಿ, ಒಂದು ಸರ್ಕಾರಿ ಶಾಲೆ ಮುಚ್ಚುವುದರ ಪರಿಣಾಮ ಏನೆಂಬುದರ ಅರಿವು ನಮಗಿಲ್ಲವೇ? ಕೆಲವು ವರ್ಷಗಳ ಹಿಂದೆ, ಬಾಗಲಕೋಟೆಯ ಒಂದು ಪುಟ್ಟ ಹಳ್ಳಿಯಲ್ಲಿ, ಸ್ಥಳೀಯ ಸರ್ಕಾರಿ ಶಾಲೆಯನ್ನು ವಿಲೀನಗೊಳಿಸಿದ ನಂತರ, ಪುಟ್ಟ ಬಾಲಕಿ ಸವಿತಾ, ಮುಂದಿನ ಶಾಲೆಗೆ 6 ಕಿಮೀ ಗಳಷ್ಟು ದೂರ ನಡೆದುಕೊಂಡು ಹೋಗಬೇಕಾಯಿತು ಎಂದರು. ಎಐಡಿವೈಒ ಧುರೀಣ ಸಿದ್ದಲಿಂಗ ಬಾಗೇವಾಡಿ ಮಾತನಾಡಿ, ಮ್ಯಾಗ್ನೆಟ್ ಶಾಲೆಗಳ ಯೋಜನೆ ಎಂಬ ವಂಚನೆಯ ಮುಖವಾಡದ ಅಡಿಯಲ್ಲಿ, ಸರ್ಕಾರವು ರಾಜ್ಯದಾದ್ಯಂತ 40,000ಕ್ಕೂ ಹೆಚ್ಚು ಶಾಲೆಗಳನ್ನು ವಿಲೀನಗೊಳಿಸಿ ಮುಚ್ಚಲು ಸಿದ್ಧತೆ ನಡೆಸುತ್ತಿದೆ. ಗುಣಮಟ್ಟ ಮತ್ತು ಮಾದರಿ ಶಾಲೆಗಳು ಎಂಬ ಆಕರ್ಷಕ ಪದಗಳ ಹಿಂದೆ ಉಚಿತ ಮತ್ತು ಸಾರ್ವತ್ರಿಕ ಶಿಕ್ಷಣದ ನಮ್ಮ ನವೋದಯ ಚಿಂತಕರು, ಕ್ರಾಂತಿಕಾರಿಗಳು ಕಷ್ಟಪಟ್ಟು ಗಳಿಸಿದ ವ್ಯವಸ್ಥೆ ನಾಶಪಡಿಸುವ ಒಂದು ನಿಷ್ಕರುಣೆಯ ಪ್ರಯತ್ನ ಅಡಗಿದೆ ಎಂದು ದೂರಿದರು.



ವಿಜಯಪುರ: ಕೆಪಿಎಸ್ ಮ್ಯಾಗ್ನೇಟ್ ಯೋಜನೆ ಹೆಸರಿನಲ್ಲಿ ವಿವಿಧ ತೋಟದ ವಸ್ತಿ ಶಾಲೆಗಳನ್ನು ಮುಚ್ಚುವುದನ್ನು ಖಂಡಿಸಿ ಎಐಡಿಎಸ್‌ಒ ಜಿಲ್ಲೆಯ ಅರಕೇರಿ ಶಾಲೆ ಬಳಿ ಪ್ರತಿಭಟನೆ ನಡೆಸಿದರು.ಗ್ರಾಮ ಪಂಚಾಯಿತಿ ಸದಸ್ಯ ಶೀನು ರಾಠೋಡ, ಪಾಲಕ ಚಂದ್ರಬಾನ ಭಂಡಾರಿ, ಎಐಎಂಎಸ್‌ಎಸ್ ಸಂಘಟನೆಯ ಜಿಲ್ಲಾ ಕಾರ್ಯದರ್ಶಿ ಶಿವರಂಜಿನಿ, ಅಡಿವೆಪ್ಪ ಚನಬಸಪ್ಪಗೋಳ, ಕಾವೇರಿ ರಜಪೂತ, ಶ್ರೀಕಾಂತ ಕೊಂಡಗೂಳಿ ಇದ್ದರು.

ಕನ್ನೂರ ಕೆಇಬಿ ಉದ್ಘಾಟಿಸುವಂತೆ ಆಗ್ರಹ

ವಿಜಯಪುರ: ಜಿಲ್ಲೆಯ ಕನ್ನೂರ ಬಳಿ ನಿರ್ಮಾಣಗೊಂಡ ಕೆಇಬಿ ಘಟಕ ಕಳೆದ ವರ್ಷದಿಂದ ಉದ್ಘಾಟನೆಗೊಳ್ಳದೆ ಇರುವುದನ್ನು ಖಂಡಿಸಿ ತಿಡಗುಂದಿಯ 110 ಕೆವಿ ಕೆಇಬಿ ಘಟಕದ ಎದುರು ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಪಾಧಿಕಾರಿಗಳು ಪ್ರತಿಭಟನೆ ನಡೆಸಿದರು.

ಸೇನೆ ಜಿಲ್ಲಾಧ್ಯಕ್ಷ ಸಂಗಮೇಶ ಸಗರ ಮಾತನಾಡಿ, ಗುತ್ತಿಗೆದಾರನ ವಿಳಂಭನೀತಿಯಿಂದ 2 ವರ್ಷದ ಹಿಂದೆ ಉದ್ಘಾಟನೆ ಆಗಬೇಕಿರುವ ಕನ್ನೂರಿನ ಹೊಸ ಕೆಇಬಿ ಇಲ್ಲಿಯವರೆಗೆ ಆಗಿಲ್ಲ ಎಂದರೆ ಇದಕ್ಕೆ ಅಧಿಕಾರಿಗಳ ನಿರ್ಲಕ್ಷ್ಯ ಕೂಡ ಪ್ರಮುಖ ಕಾರಣವಾಗಿದೆ. ಅಧಿಕಾರಿಗಳು ಕೂಡ ಇದರ ಜವಾಬ್ದಾರಿಯನ್ನು ಹೊರಬೇಕು ಎಂದು ಒತ್ತಾಯಿಸಿದರು.

ಸ್ಥಳಕ್ಕೆ ಆಗಮಿಸಿದ ಅಧಿಕಾರಿ ಇಇ ಸಂತೋಷ ಪಾಟೀಲ, ಎಇಇ ಅನೀಲ ಪೂಜಾರಿ, ಎಇಇ ಗಂಗಾಧರ ಲೋಣಿ, ಎಇಇ ಎಸ್.ಎಸ್ ಸಿದ್ದಾಪುರ ಹಾಗೂ ಸ್ಥಳೀಯ ಶಾಸಕ ವಿಠ್ಠಲ ಕಟಕಧೋಂಡ ಅವರು ಗುತ್ತಿಗೆದಾರನ್ನ ಹಿಗ್ಗಾ ಮುಗ್ಗಾ ಜಾಡಿಸಿ ಶೀಘ್ರದಲ್ಲಿ ಕನ್ನೂರಿನ ಕೆಇಬಿ ಪ್ರಾರಂಭಿಸಬೇಕು



ಎಂದರು. ಆಗ ಗುತ್ತಿಗೆದಾರ ಮಾರ್ಚ್ 15 ರ ಒಳಗಾಗಿ ಮುಗಿಸುವುದಾಗಿ ತಿಳಿಸಿದಾಗ ಅಧಿಕಾರಿಗಳು ಮಾ.22ರ ವರೆಗೆ ಕಾಲಾವಕಾಶ ಕೊಡಿ ಎಂದು ರೈತರಿಗೆ ಮನವಿ ಮಾಡಿದರು.

ಸ್ಥಳೀಯ ಶಾಸಕ ವಿಠ್ಠಲ ಕಟಕಧೋಂಡ ಗುತ್ತಿಗೆದಾರ ಸರಿ ಇಲ್ಲ, ಸಾಕಷ್ಟು ಬಾರಿ ನಾನೆ ಫೋನ್ ಹಚ್ಚಿ ಮತ್ತೆ ಸಭೆಯಲ್ಲಿಯೂ ಕೂಡ ಕೇಳಿದಾಗ ಕೇವಲ ನೆಪ ಹೇಳಿ ತಪ್ಪಿಸಿಕೊಳ್ಳುತ್ತಿದ್ದ ಎಂದು ಗುತ್ತಿಗೆದಾರನಿಗೆ ತಾಕೀತು ಮಾಡಿ, ಮಾರ್ಚ್ 12 ರ ಒಳಗಾಗಿ ಕೆಲಸ ಮುಗಿಸಬೇಕು, ಹಗಲು– ರಾತ್ರಿ ಆದರೂ ಪರವಾಗಿಲ್ಲ ಕೂಡಲೇ ಕೆಲಸ ಮುಗಿಸಿ ಎಂದರು.

ಮುಖಂಡರಾದ ಅನಮೇಶ ಜಮಖಂಡಿ, ರಾಮಸಿಂಗ್ ರಜಪೂರ, ಸತೀಶ ದಾಶ್ಯಾಳ, ಗೆನ್ನಪ್ಪ ಬಿರಾದಾರ, ಮಹಾಂತಗೌಡ ಬಿರಾದಾರ, ಗಿರೀಶ ತಾಳಿಕೋಟಿ, ರಾಮನಗೌಡ ಬಿರಾದಾರ, ರಾಮನಗೌಡ ಪಾಟೀಲ, ಮುದಕಣ್ಣ ಬಿರಾದಾರ, ಕಾಶಿರಾಯಗೌಡ ಪಾಟೀಲ, ಕಲ್ಲಪ್ಪ ಹತ್ತಿ, ಶ್ರೀನಾಥ ದಾಶ್ಯಾಳ, ಸಂಗನಗೌಡ ಬಿರಾದಾರ, ಪ್ರಕಾಶಗೌಡ ಪಾಟೀಲ, ಪ್ರಕಾಶ ಜಾಧವ, ವಿರೇಶ ಮುರಗುಂಡಿ, ದೇವೆಗೌಡ ಬಿರಾದಾರ ಇದ್ದರು.

ಸಾಮಾನ್ಯ ಸಭೆ: ವಿವಿಧ ವಿಷಯಗಳು ಚರ್ಚೆ

ದೇವರಹಿಪ್ಪರಗಿ: ಸ್ಥಳೀಯ ಪಟ್ಟಣ ಪಂಚಾಯತಿ ಸಭಾಂಗಣದಲ್ಲಿ ಗುರುವಾರ ನಡೆದ ಸಾಮಾನ್ಯ ಸಭೆಯಲ್ಲಿ 2026–27ನೇ ಸಾಲಿನ ವಾರ್ಷಿಕ ಬಜೆಟ್‌ನ್ನು ಪಪಂ ಅಧ್ಯಕ್ಷೆ ಜಯಶ್ರೀ ಬಸಪ್ಪ ದೇವಣಗಾಂವ ಅವರ ಅಧ್ಯಕ್ಷತೆಯಲ್ಲಿ ನಡೆಯಿತು.

ಸಿಬ್ಬಂದಿ ಎಸ್.ಪಿ.ಹಿರೇಮಠ ಮಾತನಾಡಿ, ರೂ. 6.8655 ಕೋಟಿ ಅಂದಾಜು ಆದಾಯ ಹಾಗೂ ರೂ. 6.8370ಕೋಟಿಅಂದಾಜುವೆಚ್ಚದೊಂದಿಗೆ ರೂ. 2.85 ಲಕ್ಷ ಉಳಿತಾಯವಿದೆ ಎಂದು ತಿಳಿಸಿದರು.

ವಾರ್ಷಿಕ ಬಜೆಟ್, ಸಾಮಾನ್ಯ ಸಭೆ ವಿಷಯಗಳ ಕುರಿತು ಚರ್ಚೆ ನಡೆಯಿತು. ನಂತರ ಮೌಲಾನ ಆಜಾದ್ ಶಾಲೆಗೆ ಜಾಗ ನೀಡುವುದು. ಪಟ್ಟಣದಲ್ಲಿ ಪಡೆದಿರುವ ಉದ್ಯಮಿ ಪರವಾನಗಿ ರದ್ದು ಮಾಡುವುದು. ಪಟ್ಟಣ ವ್ಯಾಪ್ತಿಯಲ್ಲಿ ಕಟ್ಟಡದ ಪರವಾನಗಿ ತೆಗೆದುಕೊಳ್ಳುವುದು. ಎಲ್ಲಾ 17 ವಾರ್ಡಗಳಲ್ಲಿ ಬರುವ ದೇವಸ್ಥಾನಗಳ ಸರ್ವೆ ಮಾಡುವುದು. ಮಾಲಿಕತ್ವ, ವಾಣಿಜ್ಯ ಮಳಿಗೆ, ಭೂ ಬಾಡಿಗೆ ಕರ, ಅಮೃತ–2.0 ಕಾಮಗಾರಿ ಪ್ರಗತಿ ಪರಿಶೀಲನೆ. ಪಟ್ಟಣದ ಮುಖ್ಯ ರಸ್ತೆಯ ಮಧ್ಯದಿಂದ ಬಡಾವಣೆ ನಿರ್ಮಿಸಿದ ಆಸ್ತಿಗಳ ಅಳತೆ ಮಾಡುವುದು. ಪಟ್ಟಣದ ಎಲ್ಲ ಸಿಎ ಸೈಟ್ ನಲ್ಲಿ ನಿರ್ಮಾಣವಾಗಿರುವ ಶೇಡ್ ತೆರವು ಮಾಡುವುದು. ಒಬಿಸಿ ಸ್ಮಶಾನದಲ್ಲಿ ಗಟಾರಗಳ ನೀರು ತೆರವುಗೊಳಿಸುವುದು, ವಾರ್ಡ್–08ರಲ್ಲಿ ಗಟಾರ ನಿರ್ಮಿಸುವುದು, ಬಂದ ಅರ್ಜಿಗಳ ವಿಲೇವಾರಿ ಮಾಡುವುದ ಕುರಿತು ಸರ್ವ ಸದಸ್ಯರ ಸಭೆಯಲ್ಲಿ ಪರ–ವಿರೋಧ ಚರ್ಚೆ ಸೇರಿ ವಿವಿಧ ವಿಷಯಗಳನ್ನು ಚರ್ಚಿಸಲಾಯಿತು.

ಪಪಂ ಉಪಾಧ್ಯಕ್ಷ ರಮೇಶ ಮಸಬಿನಾಳ, ಮುಖ್ಯಾಧಿಕಾರಿ ಅಫ್ರೋಜ ಅಹಮದ ಪಟೇಲ, ಸದಸ್ಯರಾದ ಕಾಸುಗೌಡ ಬಿರಾದಾರ, ಕಾಸಪ್ಪ ಜಮಾದಾರ, ಬಸೀರಹ್ಮದ ಬೇಪಾರಿ(ಕಸಾಬ), ಉಮೇಶ ರೂಗಿ, ಕಾಸಪ್ಪ ಭಜಂತ್ರಿ, ಡಾ.ಗುರುರಾಜ ಗಡೇದ, ಶಾಂತಯ್ಯ ಜಡಿಮಠ, ಸಿಂದೂರ ಡಾಲೇರ, ಅರೀಫಾ ಬೇಗಂ ಬಾಗವಾನ, ರತ್ನವ್ವ ದೇವೂರ, ಸುಮಂಗಲಾ ಸೇಬೆನವರ, ಶೋಭಾ ಮಲ್ಲಾರಿ,ದಾನಾಬಾಯಿ ಚವ್ಹಾಣ, ನಾಮ ನಿರ್ದೇಶಿತ ಸದಸ್ಯರಾದ ರಾಜು ಮೇಟಗಾರ, ಹುಸೇನ ಕೂಕಟನೂರ ಹಾಗೂ ಸುನೀಲ ಕನಮಡಿ, ಕಿರಿಯ ಅಭಿಯಂತರ ಗುರುರಾಜ ಬಿರಾದಾರ, ಸಿಬ್ಬಂದಿ ಮುತ್ತುರಾಜ ಹಿರೇಮಠ, ಸೋಮು ಭೋವಿ, ಸತ್ಯಪ್ಪ ಪೂಜಾರಿ ಸೇರಿ ಸಿಬ್ಬಂದಿ, ಕಾರ್ಮಿಕರು ಉಪಸ್ಥಿತರಿದ್ದರು.





ತಾಳಿಕೋಟೆ: ಪಟ್ಟಣದ ಎಸ್‌ಕೆ ಶಿಕ್ಷಣ ಮಹಾವಿದ್ಯಾಲಯದಲ್ಲಿ ಹೋಳಿ ಹಬ್ಬವನ್ನು ಪ್ರತಿಕ್ಷಣಾರ್ಥಿಗಳು ಹಾಗೂ ಸಿಬ್ಬಂದಿ ಒಟ್ಟಾಗಿ ಬಣ್ಣ, ಸಂಗೀತ ಮತ್ತು ನೃತ್ಯದೊಂದಿಗೆ ಅತ್ಯಂತ ಸಂಭ್ರಮದಿಂದ ಆಚರಿಸಿದರು. ಮಹಾವಿದ್ಯಾಲಯದ ಪ್ರಾಚಾರ್ಯ ಡಾ.ಆರ್.ಎಂ.ಬಂಟನೂರ ಇದ್ದರು.

ಕಿಡಿಗೇಡಿಗಳ ವಿರುದ್ಧ ಕ್ರಮಕೈಗೊಳ್ಳಿ: ಅಣ್ಣಿಗೇರಿ

ವಿಜಯಪುರ: ನಗರದ ವಿವಿಧ ಬಡಾವಣೆಗಳು, ರಸ್ತೆಗಳನ್ನೆ ಬಾರ್ ಮಾಡಿಕೊಂಡು, ಬೇಕೆಂದಲ್ಲಿ ಮದ್ಯದ ಬಾಟಲಿಗಳನ್ನು ಬಿಸಾಕಿ, ರಸ್ತೆಯಲ್ಲಿಯೇ ಆಹಾರ ಪದಾರ್ಥಗಳನ್ನು ತಿಂದು ಎಸೆದು, ಪರಿಸರ ಹಾಳು ಮಾಡಿ, ಗೂಂಡಾಗಿರಿ ಮಾಡುತ್ತಿರುವ ಕಿಡಿಗೇಡಿಗಳ ವಿರುದ್ಧ ಪೊಲೀಸ್ ಇಲಾಖೆ ಕ್ರಮಕೈಗೊಳ್ಳಬೇಕು ಎಂದು ಹಿಂದೂ ಮುಖಂಡ ರಾಘವ್ ಅಣ್ಣಿಗೇರಿ ಒತ್ತಾಯಿಸಿದ್ದಾರೆ. ಈ ಕುರಿತು ಪ್ರಕಟಣೆ ನೀಡಿದ ಅವರು, ನಗರದ ಸೌಂದರ್ಯವನ್ನೇ ಹಾಳು ಮಾಡಿ, ಎಲ್ಲಿಬೇಕೆಂದರಲ್ಲಿ ಮದ್ಯದ ಬಾಟಲಿ ಎಸೆಯುವವರ ವಿರುದ್ಧ ಕ್ರಮ ಕೈಗೊಳ್ಳಬೇಕಿದೆ. ಇಲ್ಲಿನ ಸುಕೂನ್ ಕಾಲೋನಿ ಹಿಂಭಾಗದ ಯೋಗಿ ನಗರ, ಭೂತನಾಳ ಕೆರೆ, ಬೇಗಂ ತಲಾಬ್ ಸೇರಿ ವಿವಿಧ ನೂತನ ಬಡಾವಣೆಗಳಲ್ಲಿ ಇಂತಹ ಘಟನೆಗಳು ದಿನನಿತ್ಯ ನಡೆಯುತ್ತಿವೆ. ಅಲ್ಲದೆ ವಿಜಯಪುರ ಪೊಲೀಸರು ಅತಿ ಹೆಚ್ಚು ಶಬ್ದ ಹೊರ ಹಾಕುವ ದ್ವಿಚಕ್ರ ವಾಹನಗಳ ಸೈಲೆನ್ಸರ್‌ಗಳನ್ನು ವಶಪಡಿಸಿಕೊಂಡು, ನಾಶ ಮಾಡಿರುವುದು ಅತ್ಯಂತ ಶ್ಲಾಘನೀಯ ಎಂದು ತಿಳಿಸಿದ್ದಾರೆ.

ರೈತರ ಸಮೃದ್ಧಿಯಲ್ಲಿ ಸಂತೃಪ್ತಿ ಇದೆ: ಎಂಬಿಪಾ

ವಿಜಯಪುರ: ಅನ್ನದಾತರ ಸಮೃದ್ಧಿಯಲ್ಲಿ ನಮಗೆ ಸಂತೃಪ್ತಿ ಇದೆ. ಈ ನಿಟ್ಟಿನಲ್ಲಿ ಕಾಯಕನಿರತನಾಗಿರುವೆ ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ.ಪಾಟೀಲ ಹೇಳಿದರು.

ಬಬಲೇಶ್ವರ ತಾಲೂಕಿನ ಕಾರಜೋಳ ಗ್ರಾಮದಲ್ಲಿ ಮಹಾತ್ಮ ಗಾಂಧಿ ನರೇಗಾ ಯೋಜನೆ ಮತ್ತು 15ನೇ ಹಣಕಾಸು ಯೋಜನೆಯಡಿಯಲ್ಲಿ ನಿರ್ಮಿಸಿರುವ ಗ್ರಾಮ ಪಂಚಾಯಿತಿ ನೂತನ ಕಟ್ಟಡ, ಎನ್‌ಆರ್‌ಎಲ್‌ಎಂ ಕಲಿಕಾ ಕಟ್ಟಡ, ಗೋದಾಮು ಹಾಗೂ ಜಲ ಸಂಗ್ರಹಕ್ಕೆ ಅನುಕೂಲವಾಗುವ ಕಲ್ಯಾಣಿ ಉದ್ಘಾಟನೆ ಹಾಗೂ ಡೋಣಿ ಪ್ರವಾಹದಿಂದಾಗಿ ಪುನರ್ವಸತಿ ಕೇಂದ್ರದಲ್ಲಿ ವಾಸಿಸುತ್ತಿರುವ ತೊನಶ್ಯಾಳ ಗ್ರಾಮದ 312 ಕುಟುಂಬಗಳಿಗೆ 17 ವರ್ಷಗಳ ನಂತರ ಹಕ್ಕುಪತ್ರ ವಿತರಿಸಿ ಅವರು ಮಾತನಾಡಿದರು. ನೀರಾವರಿ ಕ್ರಾಂತಿಯ ಬಳಿಕ ಈಗ ಶೈಕ್ಷಣಿಕ ಕ್ರಾಂತಿ ಮಾಡಲಾಗುತ್ತಿದೆ. ಜಿಲ್ಲೆಯಲ್ಲಿ ಕಾಲುವೆಗಳ ವ್ಯಾಪ್ತಿಯಲ್ಲಿ ಬರುವ 156 ಹಳ್ಳಗಳಿಗೆ ತುಂಬಿಸುವ ಯೋಜನೆ ರೂಪಿಸಲಾಗಿದೆ. ಹಳ್ಳಗಳಲ್ಲಿ ಹೂಳು ತೆಗೆಯಿಸಿ ಪ್ರತಿ ಕಿಲೋ ಮೀಟರ್ ಅಂತರದಲ್ಲಿ ಒಂದೊಂದು ಚೆಕ್ ಡ್ಯಾಂ ನಿರ್ಮಿಸಲಾಗುತ್ತಿದೆ. ಪ್ರಾಯೋಗಿಕವಾಗಿ ಬಬಲೇಶ್ವರ ಮತಕ್ಷೇತ್ರದಲ್ಲಿ 10 ಪ್ಯಾಕೇಜುಗಳ ಪೈಕಿ ಆರು ಪ್ಯಾಕೇಜುಗಳಿಗೆ ಟೆಂಡರ್ ಕರೆಯಲಾಗಿದೆ. ಈ ಯೋಜನೆ ಪೂರ್ಣಗೊಂಡ ನಂತರ ಅಂತರ್ಜಲ ಮಟ್ಟ ಮತ್ತಷ್ಟು ಹೆಚ್ಚಾಗಲಿದೆ ಎಂದರು.

ಮುಖಂಡ ಸೋಮನಾಥ ಕಳ್ಳಿಮನಿ ಮಾತನಾಡಿ, ಮೊದಲು ಬಂಜರು ಭೂಮಿಯಾಗಿದ್ದ ಈ ಭಾಗದಲ್ಲಿ ಸಚಿವ ಎಂ.ಬಿ.ಪಾಟೀಲ ಅವರು ಕೈಗೊಂಡ ನೀರಾವರಿಯಿಂದಾಗಿ ಕೃಷಿ, ತೋಟಗಾರಿಕೆ, ಹೈನುಕಾರಿಕೆ ಚಟುವಟಿಕೆಗಳು ನಡೆಯುತ್ತಿವೆ. ಉದ್ಯೋಗಕ್ಕಾಗಿ ಬೇರೆ ಊರುಗಳಿಗೆ ಹೋಗುತ್ತಿದ್ದ ಯುವಕರು ಇಂದು ಗ್ರಾಮದತಮ್ಮ ಜಮೀನುಗಳಲ್ಲಿಯೇ ಕಾಯಕ ನಿರತರಾಗಿದ್ದಾರೆ ಎಂದರು.

ಜಿಪಂ ಸಿಇಒ ರಿಷಿ ಆನಂದ ಮಾತನಾಡಿ, ಕಾರಜೋಳ ಗ್ರಾಪಂ ಕಟ್ಟಡ ಜಿಲ್ಲೆಯಲ್ಲಿಯೇ ಅತ್ಯಂತ ಸುಂದರವಾಗಿದೆ. ಇದಕ್ಕೆ ಪ್ರತಿಯೊಬ್ಬರು ಶ್ರಮವಹಿಸಿ ಕೈಜೋಡಿಸಿದ್ದಾರೆ. ಪಿಡಿಒ, ಗ್ರಾಪಂ ಸದಸ್ಯರು, ಗುತ್ತಿಗೆದಾರರು ಆಸಕ್ತಿಯಿಂದ ಕಾರ್ಯ ನಿರ್ವಹಿಸಿದ್ದಾರೆ ಎಂದರು.

ಜಕನೂರಿನ ಮಾದುಲಿಂಗ ಮಹಾರಾಜರು, ಸೋಮದೇವರಹಟ್ಟಿ ಜಗನು ಮಹಾರಾಜರು, ಗ್ರಾಪಂ ಅಧ್ಯಕ್ಷೆ ಶ್ರೀದೇವಿ ಜಾಧವ, ಬಿ.ಡಿ.ಆಸಂಗಿ, ಗಿರಮಲ್ಲ ಮಾದರ, ಅಡಿವೆಪ್ಪ ಕೊಲ್ಹಾಕಾರ, ವಿ.ಎಸ್.ಪಾಟೀಲ, ವಿ.ಎನ್. ಬಿರಾದಾರ, ಮಲ್ಲು ಪರಸಣ್ಣವರ, ಸಿ.ಜಿ.ಪಾರೆ, ರಫೀಕ್ ಸೂನಾರ, ಬಸವರಾಜ ಯಳವಾರ ಇದ್ದರು.



10ನೇ ದಿನಕ್ಕೆ ಕಾಲಿಟ್ಟ ಧರಣಿ ಸತ್ಯಾಗ್ರಹ

ತಾಳಿಕೋಟೆ: ತಾಲೂಕಿನ ಮೇಲೆಶ್ವರ ಗ್ರಾಮದ ಹತ್ತಿರ ಪ್ರಜಾಸೌಧ ಕಟ್ಟಡ ನಿರ್ಮಾಣಕ್ಕೆ ಗುರುತಿಸಲಾದ ಸ್ಥಳವನ್ನು ವಿರೋಧಿಸಿ ಪಟ್ಟಣದಲ್ಲಿಯೇ ಪ್ರಜಾಸೌಧ ಕಟ್ಟಡ ನಿರ್ಮಿಸುವಂತೆ ಒತ್ತಾಯಿಸಿ ತಾಳಿಕೋಟೆ ತಾಲ್ಲೂಕು ಹೋರಾಟ ಸಮಿತಿ ವತಿಯಿಂದ ಪಟ್ಟಣದ ಬಸವೇಶ್ವರ ವೃತ್ತದ ಬಳಿ ನಡೆಸುತ್ತಿರುವ ಅನಿರ್ಧಿಷ್ಟಅವಧಿ ಧರಣಿ ಸತ್ಯಾಗ್ರಹವು ಗುರುವಾರ ಒಂಬತ್ತನೇ ದಿನದ ಸತ್ಯಾಗ್ರಹವು ತಾಳಿಕೋಟೆಯ ಎಲ್ಲಾ ಸಮಾಜದ ವತಿಯಿಂದ ಈ ಹೋರಾಟಕ್ಕೆ ಸಂಪೂರ್ಣ ಬೆಂಬಲಿಸಿ ಸತ್ಯಾಗ್ರಹ ನಡೆಸಿದರು.

ಹೋರಾಟ ಸಮಿತಿಯ ಗೌರವ ಅಧ್ಯಕ್ಷ ಎಸ್.ಬಿ.ಕಟ್ಟಿಮನಿ ಮಾತನಾಡಿ, ಈಗಾಗಲೇ ಪ್ರಜಾಸೌಧಕ್ಕೆ ನಿಗದಿ ಪಡಿಸಿರುವ ಸ್ಥಳ ತಾಳಿಕೋಟಿ ಪಟ್ಟಣದಿಂದ ನಾಲ್ಕೈದು ಕೀ ಮೀ ದೂರವಿದ್ದು ಕಾರಣ ವೃದ್ಧರಿಗೆ, ಮಹಿಳೆಯರಿಗೆ, ವಿದ್ಯಾರ್ಥಿಗಳಿಗೆ, ಅಂಗವಿಕಲರಿಗೆ, ರೈತರಿಗೆ ತುಂಬಾ ಅನಾನುಕೂಲವಾಗಿರುವುದರಿಂದ ಪಟ್ಟಣದಲ್ಲಿಯೇ ಸಾಕಷ್ಟು ಸರ್ಕಾರಿ ಜಮೀನುಗಳು ಇದ್ದು ಅವುಗಳಲ್ಲಿಯೇ ಪ್ರಜಾಸೌಧ ನಿರ್ಮಾಣ ಮಾಡಬೇಕು ಹಾಗೂ ಈಗ ನಿಗದಿ ಪಡಿಸಿರುವ ಸ್ಥಳ ಕೂಡಲೇ ರದ್ದು ಪಡಿಸಬೇಕು. ನಮಗೆ ನ್ಯಾಯ



ಸಿಗುವವರೆಗೂ ಈ ಹೋರಾಟ ನಿಲ್ಲಿಸುವುದಿಲ್ಲ ಎಂದರು.

ಹೋರಾಟ ಸಮಿತಿ ಅಧ್ಯಕ್ಷ ದಶರತಸಿಂಗ್ ಮನಗೂಳಿ, ಮುತ್ತಪ್ಪ ಚಮಲಾಪುರ, ಮೆಹಬೂಬ ಚೋರಗಸ್ತಿ, ಪರಶುರಾಮ ತಂಗಡಗಿ, ವಿಜಯಸಿಂಗ್ ಹಚೇರಿ, ಪ್ರಕಾಶ ಹಚೇರಿ, ಮಯೂರ ಪಾಟೀಲ, ದಸ್ತಗೀರಸಾಬ್ ಕೆಂಭಾವಿ, ಮುದಕಪ್ಪ ಬಡಿಗೇರ, ಸಂಬಾಜಿ ವಾಡಕರ, ಅಮಿತ್ ಮನಗೂಳಿ, ದತ್ತು ಉಬಾಳೆ, ಅನಿಲಸಿಂಗ್ ವಿಜಾಪುರ, ರವಿ ಕಟ್ಟಿಮನಿ, ಮಂಜುನಾಥ ಶೆಟ್ಟಿ, ತಿಪ್ಪಣ್ಣ ಸಜ್ಜನ, ಸುರೇಶ ಹಚೇರಿ, ರಾಮಣ್ಣ ಕಟ್ಟಿಮನಿ, ಸಂಜು ಬರದೇನಾಳ, ಸದ್ದಾಮ್ ಹುಸೇನ್ ಬೀಳಗಿ, ರಾಜು ಹಚೇರಿ, ನಿತಿನ್ ವಿಜಾಪುರ, ಸಿರಸಕುಮಾರ ಹಚೇರಿ, ರಾಗು ಪಡಾಸಲಿ, ಬಸವರಾಜ ಬಿಸನಾಳ ಹಾಗೂ ಪಟ್ಟಣದ ಹಿರಿಯರು ಹಾಜರಿದ್ದರು.

ನಾಳೆಯಿಂದ ಯಮನೂರೇಶ್ವರ, ಚಾಂಗದೇವನ ಜಾತ್ರಾ ಮಹೋತ್ಸವ

ಬಸವನ ಬಾಗೇವಾಡಿ: ತಾಲೂಕಿನ ನಾಗೂರ ಗ್ರಾಮದ ಯಮನೂರೇಶ್ವರ, ಯೋಗಿ ಚಕ್ರವರ್ತಿ, ಚಾಂಗದೇವನ ಜಾತ್ರಾ ಮಹೋತ್ಸವವು ಮಾ.7ರಿಂದ 10ರ ವರೆಗೆ ಪ್ರತಿನಿತ್ಯ ದೇವರ ಮಹಾಪೂಜೆ, ಅಭಿಷೇಕದೊಂದಿಗೆ ವಿವಿಧ ಧಾರ್ಮಿಕ, ಮನರಂಜನಾ ಕಾರ್ಯಕ್ರಮ ಸೇರಿ ಜಾತ್ರಾಮಹೋತ್ಸವ ವಿಜೃಂಭಣೆಯಿಂದ ಜರುಗಲಿದೆ ಎಂದು ಚಂದ್ರಶೇಖರ ಮುಳವಾಡ, ಚಂದ್ರಶೇಖರ ಮರೋಳ, ಬಸಯ್ಯ ಶೀಕಳವಾಡಿಮಠ ಜಂಟಿಯಾಗಿ ಹೇಳಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ಫೆ.24ರಿಂದ ಆರಂಭವಾಗಿದ ಪುರಾಣ ಮಾ.6ರಂದು ಮಂಗಲಗೊಳ್ಳಲಿದೆ, ವಿರಕ್ತಮಠದ ಸಿದ್ಧಲಿಂಗ ಸ್ವಾಮೀಜಿ ಸಾನಿಧ್ಯವಹಿಸುವರು, ಲಿಂ.ಪಂ. ಕೂ.ಮಹಾಪೀಠದ ಪ್ರಥಮ ಜಗದ್ಗುರು ಬಸವ ಜಯಮೃತ್ಯುಂಜಯ ಸ್ವಾಮೀಜಿ ದಿವ್ಯಸಾನಿಧ್ಯವಹಿಸುವರು, ಮಾ. 7ರಂದು ಸಾಯಂಕಾಲ 5ಗಂಟೆಗೆ ಚಾಂಗದೇವರ ಭಾವಚಿತ್ರ ಮೆರವಣಿಗೆ, 1111 ದೀಪೋತ್ಸವ, ರಾತ್ರಿ 9–30ಕ್ಕೆ ಗಂಧಾಭಿಷೇಕ(ಸದಲ್) ಸಕಲ ವಾದ್ಯವೈಭವಗಳೊಂದಿಗೆ ನೆರವೇರುವುದು, ರಾತ್ರಿ 10–30ಕ್ಕೆ ವಾದಿ ಪ್ರತಿವಾದಿಯರಿಂದ ಡೊಳ್ಳಿನ ಪದಗಳು, ಮಾ.8ರಂದು ಯೋಗಿಚಕ್ರವರ್ತಿ, ಚಾಗದೇವರ ಪುಣ್ಯದಿನ, ಜಾತ್ರಾ ಮಹೋತ್ಸವ(ಉರಸ್) ಬೆಳಗ್ಗೆ 10ಗಂಟೆಗೆ ಭಜನಾಪದಗಳು, 11ಗಂಟೆಗೆ ಟಗರಿನ ಕಾಳಗ, ರಾತ್ರಿ 10–30ಕ್ಕೆ ಸಾಹುಕಾರನಸಂಪತ್ತು ಬಡವನ ತಾಕತ್ತು ನಾಟಕ, ಮಾ.9ರಂದು ಬೆಳಗ್ಗೆ 9ಕ್ಕೆ ಭಾರ



ಎತ್ತವುದು, ಕಸರತ್ತಿನ ಕೆಲಸಗಳು, ಸಂಜೆ 4–30ಕ್ಕೆ ಜಂಗೀ ಕುಸ್ತಿಗಳು, 9ಗಂಟೆಗೆ ರಿವಾಯಿತ ಪದಗಳು ಜರುಗುವವು, ಶಿರಹಟ್ಟಿಯ ದಿಂಗಾಲೇಶ್ವರ ಸ್ವಾಮೀಜಿ, ಬಸವನಬಾಗೇವಾಡಿ ಶಿವಪ್ರಕಾಶ ಶಿವಾಚಾರ್ಯರು, ಕಣಕಾಲ ದರ್ಗಾದ ಭದ್ರಿ ಅಲ್ಲಮ್ಮ ಖಾದ್ರಿ, ಖ್ಯಾತ ಪ್ರವಚನಕಾರ ಲಾಲಹುಸೇನ ಕಂದಗಲ್ಲ ದಿವ್ಯ ಸಾನ್ನಿಧ್ಯವಹಿಸುವರು, ಮಾ.10ರಂದು ರಾತ್ರಿ 10.30ಕ್ಕೆ ನಾಟಕ ಎರಡನೇ ಪ್ರಯೋಗ ನಡೆಯಲಿದೆ. ಪ್ರತಿನಿತ್ಯ ಪ್ರಸಾದ ವ್ಯವಸ್ಥೆ ಮಾಡಲಾಗಿದೆ ಎಂದು ಹೇಳಿದರು. ರುದ್ರಯ್ಯ ಶೀಕಳವಾಡಿಮಠ, ಶಿವಾನಂದ ಡೋಣೂರ, ಮಲ್ಲಪ್ಪ ಪೂಜಾರಿ, ಧರ್ಮಣ್ಣ ಪೂಜಾರಿ, ಮಹೇಶ ಮುಳವಾಡ, ಶಿವಾನಂದ ಬೆಲ್ಲದ, ಶರಣು ಮರೋಳ, ರೇವಣಸಿದ್ಧ ನಂದಿಹಾಳ,ಯಮನೂರಿ ಅಂಗಡಗೇರಿ, ರಮೇಶ ಮುಳವಾಡ,ಬಂದೇನಾವಾಜ ವಾಲಿಕಾರ, ಭಾಷಾಸಾಬ ಚಪ್ಪರಬಂದ, ಬಾಬುಸಾಬ ಚಪ್ಪರಬಂದ, ಹೈದರಸಾಬ ಚಪ್ಪರಬಂದ ಇದ್ದರು.

ಲಿಂಗ ಸಮಾನತೆ ಎತ್ತಿ ಹಿಡಿದ ಶರಣ ಪರಂಪರೆ



ಮುದ್ದೇಬಿಹಾಳ: ನಗರದ ಖಾಸ್ಗತೇಶ್ವರ ಮಠದಲ್ಲಿ ತಾಲೂಕು ಶರಣ ಸಾಹಿತ್ಯ ಪರಿಷತ್ ಹಾಗೂ ಕದಳಿ ವೇದಿಕೆಯಿಂದ ಶರಣ ಬೆಳಗು ಹುಣ್ಣಿಮೆಯ ಕಾರ್ಯಕ್ರಮದ ಅಂಗವಾಗಿ ಶರಣರ ಆದರ್ಶ ದಾಂಪತ್ಯ ಜೀವನ ಎಂಬ ಅನುಭಾವ ದತ್ತಿ ಉಪನ್ಯಾಸ ಕಾರ್ಯಕ್ರಮ ನಡೆಯಿತು.

ಶರಣ ಸಾಹಿತ್ಯ ಪರಿಷತ್ತಿನ ತಾಲೂಕು ಪ್ರಧಾನ ಕಾರ್ಯದರ್ಶಿ, ನಿವೃತ್ತ ಶಿಕ್ಷಕ ಸಿ.ಜಿ.ನಾಗರಾಳ ಮಾತನಾಡಿ, ಶರಣ ಸತಿ ಲಿಂಗಪತಿ ಎನ್ನುವ ಭಾವ ಲಿಂಗ ತಾರತಮ್ಯ ಹೊಡೆದು ಹಾಕಿ, ಹೆಣ್ಣು ಗಂಡು ಎಂಬ ಭೇದ ಭಾವ ನಿವಾರಿಸುವ ಮಹೋನ್ನತ ವಿಚಾರವಾಗಿದೆ. ಜಾತಿ, ವರ್ಣ, ವರ್ಗ, ಲಿಂಗ ಭೇದವನ್ನು ಖಡಾ ಖಂಡಿತವಾಗಿ ನಿರಾಕರಿಸಿದ ಶರಣ ಪರಂಪರೆ. ಜಗತ್ತಿನ ಎಲ್ಲಾ ವಿಚಾರಗಳಿಗೂ ಮಾದರಿ ಧರ್ಮವಾಗಿದೆ. ಮೂಢನಂಬಿಕೆ ಕಂದಾಚಾರಗಳನ್ನು ವಿರೋಧಿಸಿ, ಸಮ ಸಮಾಜವನ್ನು ನಿರ್ಮಾಣ ಮಾಡುವುದು ಸಾಧ್ಯ ಎಂಬುದನ್ನು ಶರಣ ಪರಂಪರೆ ನಿರೂಪಿಸಿದೆ ಎಂದು ಹೇಳಿದರು.

ಶರಣ ಸಾಹಿತ್ಯ ಪರಿಷತ್ತಿನ ಬಸವರಾಜ ನಾಲತವಾಡ, ಪ್ರಭು ಕಡಿ, ಕದಳಿ ವೇದಿಕೆಯ ಅಧ್ಯಕ್ಷೆ ಕಾಶಿಬಾಯಿ ರಾಂಪುರ, ಸರೋಜಿನಿ ನಾಲತವಾಡ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಸಿದ್ದಲಿಂಗಯ್ಯ ಕಲ್ಯಾಣಮಠ ಬಸವ ಭಾವಪೂಜೆ ನೆರವೇರಿಸಿದರು. ಬಾಪುಗೌಡ ಪಾಟೀಲ, ಸಿದ್ದನಗೌಡ ಬಿಜ್ಜೂರು ಉಪಸ್ಥಿತರಿದ್ದರು.

ಆತ್ಮವಿಶ್ವಾಸದಿಂದ ಪರೀಕ್ಷೆ ಎದುರಿಸಿ: ಗುಡಿ

ಬಸವನಬಾಗೇವಾಡಿ: ಪ್ರತಿನಿತ್ಯ ಹತ್ತು ನಿಮಿಷಗಳಾದರೂ ಮಾತನಾಡುವುದರಿಂದ ನಮ್ಮಲ್ಲಿ ಪರೀಕ್ಷಾ ಒತ್ತಡ, ಭಯ ನಿವಾರಣೆ ಮಾಡಿಕೊಳ್ಳಲು ಸಾಧ್ಯ, ಇದರೊಂದಿಗೆ ಕೀಳರಿಮೆ, ನಕಾರಾತ್ಮಕ ಮನೋಭಾವನೆ ಕಡಿಮೆ ಮಾಡಿಕೊಂಡು ಆತ್ಮವಿಶ್ವಾಸದಿಂದ ಪರೀಕ್ಷೆ ಎದುರಿಸಿ ಗುರಿಮುಟ್ಟುವ ಮೂಲಕ ಜೀವನದಲ್ಲಿ ಯಶಸ್ವಿಯಾಗಬೇಕೆಂದು ಚಿಂತಕ, ಶಿಕ್ಷಕ ಯುವ ಸಾಹಿತಿ ಡಾ.ಮಾಧವ ಗುಡಿ ಹೇಳಿದರು.

ತಾಲೂಕಿನ ಮನಗೂಳಿ ಪಟ್ಟಣದ ವಿವೇಕಾನಂದ ಪ್ರೌಢಶಾಲೆಯಲ್ಲಿ ಹಮ್ಮಿಕೊಂಡ ವ್ಯಕ್ತಿತ್ವ ವಿಕಸನ ಮಾಲಿಕೆಯಲ್ಲಿ ವಿಶೇಷ ಉಪನ್ಯಾಸ ನೀಡಿ ಮಾತನಾಡಿದ ಅವರು ಕಠಿಣ ಪರಿಶ್ರಮದಿಂದ ಅಧ್ಯಯನ ನಡೆಸಿದರೆ ಯಶಸ್ಸು ಕಾಣಲು ಸಾಧ್ಯ. ವಿದ್ಯಾರ್ಥಿಗಳ ಸರ್ವಾಂಗೀಣ ಅಭಿವೃದ್ಧಿಯಲ್ಲಿ ಪಾಲಕರು, ಶಿಕ್ಷಕರು, ಸಮಾಜ, ಸಹಪಾಠಿಗಳ ಪಾತ್ರ ಅಪಾರವಾಗಿದೆ ಎಂದರು.

ಮನಗೂಳಿಯ ಚುಟುಕು ಕವಿ, ಹವ್ಯಾಸಿ ಬರಹಗಾರ ಶಿವಾಜಿ ಮೋರೆ ಮಾತನಾಡಿ, ಪಾಲಕರ ಕನಸು ನನಸು ಮಾಡುವಲ್ಲಿ ತಾವು ನಿರಂತರವಾಗಿ ಅಧ್ಯಯನದಲ್ಲಿ ತೊಡಗಬೇಕು. ಯೋಜನಾಬದ್ಧ ದಿನಚರಿಯೊಂದಿಗೆ ಅಭ್ಯಾಸ ಮಾಡಿ ಜನ್ಮ ನೀಡಿದ ಪಾಲಕರಿಗೂ,ವಿದ್ಯಾದಾನ ಮಾಡಿದ ಗುರುಗಳು, ಗುರುಮಾತೆಯರಿಗೂ, ಶಿಕ್ಷಣ ನೀಡಿದ ಇಂತಹ ಶ್ರೇಷ್ಠ ಸಂಸ್ಥೆಗೂ ಕೀರ್ತಿ ತರುವಂತಹ ಕಾರ್ಯ ಮಾಡುವಂತೆ ಹೇಳಿದರು.

ಪ್ರೌಢಶಾಲೆಯ ಮುಖ್ಯಗುರು ಡಿ.ಎಲ್.ರಜಪೂತ, ಗಿರೀಶ ಕುಲಕರ್ಣಿ, ರತ್ನಾ ಕನಮಡಿ, ಅಶ್ವಿನ ಹಾವಣ್ಣವರ ಮಾತನಾಡಿದರು.



ಮರಗಾಲಲ್ಲಿ ಶ್ರೀಶೈಲಕ್ಕೆ ತೆರಳಿದ ಆನಂದ

ನಾಲತವಾಡ: ಸಮೀಪದ ಹಿರೇಮುರಾಳ ಗ್ರಾಮದ 25 ವರ್ಷದ ಯುವ ಭಕ್ತರಾದ ಆನಂದ ವಾಲೀಕಾರ ಅವರು ಸತತ 3ನೇ ವರ್ಷದ ಮರಗಾಲಿನಿಂದ ಶ್ರೀಶೈಲ ಪಾದಯಾತ್ರೆ ಕೈಗೊಳ್ಳುವ ಮೂಲಕ ಗುರುವಾರ ಗಮನ ಸೆಳೆದರು.



ಇಟಗಿ ಗ್ರಾಮದ ಕೊಂಬೆ ಯೊಂದಿಗೆ ಆಗಮಿಸಿದ ನೂರಾರು ಹಿರೇ ಮುರಾಳ ಗ್ರಾಮದಲ್ಲಿ ವಾಸ್ತವ್ಯ ಹೂಡಿ ನಂತರ ಹೋಳಿ ಹುಣ್ಣಿಮೆಯ ಕಾಮದಹನದ ಬೂದಿ ಚೆಲ್ಲುವ ದಿನದಂದು ಗ್ರಾಮದಿಂದನಾಲತವಾಡ ಮಾರ್ಗವಾಗಿ ತೆರಳಿದರು.

ಸಾವಿರಾರು ವರ್ಷಗಳ ಇತಿಹಾಸವಿರುವ ದೂರದ ಆಂದ್ರಪ್ರದೇಶದ ಶ್ರೀಶೈಲಕ್ಕೆ ಮರಗಾಲು ಪಾದಯಾತ್ರೆ ಕೈಗೊಂಡ ವಾಲೀಕಾರ ಮನೆತನದ ಆನಂದ ಅವರು ನೆತ್ತಿ ಸುಡುವ ಬಿಸಿಲನ್ನು ಲೆಕ್ಕಿಸದೇ ಭಕ್ತರ ಮಧ್ಯೆ ಹೊರಡಿದರು. ಸುಮಾರು 500 ಕಿಮೀ ಕ್ಕೂ ಹೆಚ್ಚು ದೂರವಿರುವ ಶ್ರೀಶೈಲಕ್ಕೆ ತೆರಳುವ ಇವರು ಯುಗಾದಿ ವೇಳೆಗೆ ಸುಕ್ಷೇತ್ರ ತಲುಪುತ್ತಾರೆ ಎನ್ನಲಾಗಿದೆ.

ನಿಡಗುಂದಿಯಲ್ಲಿ ಸಂಭ್ರಮದ ಹೋಳಿ

ನಿಡಗುಂದಿ: ಹೋಳಿ ಹಬ್ಬದ ಸಂಭ್ರಮದಲ್ಲಿ ಪಟ್ಟಣವು ಗುರುವಾರ ಬಣ್ಣಗಳ ರಂಗೇರಿತು. ಬೆಳಗ್ಗೆಯಿಂದಲೇ ಮನೆಮನೆಗಳಲ್ಲಿ ಹಬ್ಬದ ವಾತಾವರಣ ಮಿಂಚಿದ್ದು, ಕುಟುಂಬದವರು ಹಾಗೂ ಸ್ನೇಹಿತರು ಪರಸ್ಪರ ಬಣ್ಣ ಎರಚಿಕೊಂಡು ಶುಭಾಶಯ ವಿನಿಮಯ ಮಾಡಿಕೊಂಡರು.



ಯುವಕರು ಹಲಗೆ ನಾದಕ್ಕೆ ತಕ್ಕಂತೆ ಹೆಜ್ಜೆ ಹಾಕಿ ಸಂಭ್ರಮವನ್ನು ಇನ್ನಷ್ಟು ಕಳೆಗಟ್ಟಿಸಿದರು. ಸ್ನೇಹಿತರ ಮನೆಗಳಿಗೆ ತೆರಳಿ ಬಣ್ಣದಲ್ಲಿ ಮುಳುಗಿಸಿ ಅವರನ್ನು ಬಣ್ಣದಾಟಕ್ಕೆ ಕರೆತರುವ ದೃಶ್ಯಗಳು ಎಲ್ಲೆಡೆ ಕಂಡುಬಂದವು. ಮಕ್ಕಳು ಪಿಚಕಾರಿಗಳನ್ನು ಹಿಡಿದು ರಸ್ತೆಯಲ್ಲಿ ಸಂಚರಿಸುವವರ ಮೇಲೆ ಬಣ್ಣದ ನೀರು ಎರಚಿ ಖುಷಿಯಿಂದ ಕುಣಿದಾಡಿದರು. ಪಟ್ಟಣದ ಪ್ರದೇಶದಲ್ಲಿ ಬೆಳಗ್ಗೆಯಿಂದ ಮಧ್ಯಾಹ್ನ 3 ಗಂಟೆಯವರೆಗೆ ಯುವಕ– ಯುವತಿಯರು ಬಣ್ಣದಾಟದಲ್ಲಿ ಮಿಂದೆದ್ದು ಸಂಭ್ರಮಿಸಿದರು. ಬಳಿಕ ಪಟ್ಟಣದ ರುದ್ರೇಶ್ವರ ದೇವಸ್ಥಾನ ಮತ್ತು ಗೌರೀಶ್ವರ ದೇವಸ್ಥಾನ ಹತ್ತಿರ ಬಣ್ಣದ ಬ್ಯಾರೆಲ್‌ಗಳನ್ನು ತುಂಬಿದ ಟ್ರ್ಯಾಕ್ಟರ್‌ಗಳು ಸಂಭ್ರಮದ ಕಳೆ ಹೆಚ್ಚಿಸಿತು. ಬಣ್ಣದ ಟ್ರ್ಯಾಕ್ಟರ್‌ಗಳು ಪರಸ್ಪರ ಎದುರಾಗುತ್ತಿದ್ದಂತೆ ನಡೆದ ಬಣ್ಣದ ಕಾಳಗ ರೋಮಾಂಚನ ಮೂಡಿಸಿತು. ಎರಡು ಗಂಟೆಗೂ ಹೆಚ್ಚು ಕಾಲ ನಡೆದ ಈ ಬಣ್ಣದ ಹೋಳಿಯಾಟ ತಾರಕ್ಕೇರಿದ್ದು, ಸಾರ್ವಜನಿಕರು ಹರ್ಷೋದ್ಗಾರಗಳಿಂದ ಪಾಲ್ಗೊಂಡರು. ತಾಲೂಕಿನ ಬಹುತೇಕ ಗ್ರಾಮಗಳಲ್ಲಿ ಮಧ್ಯಾಹ್ನದ ಹೊತ್ತಿಗೆ ಬಣ್ಣದಾಟ ಸಮಾಪ್ತಿಗೊಂಡಿತು. ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಪೊಲೀಸರು ಕಟ್ಟುನಿಟ್ಟಿನ ಬಂದೋಬಸ್ತ್ ಕೈಗೊಂಡಿದ್ದರು.



ಕೊಪ್ಪಳ:ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಗುರುವಾರ ಕೊಪ್ಪಳದ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು ಹಾಗೂ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ ಇವರ ಸಹಯೋಗದಲ್ಲಿ ಹಮ್ಮಿಕೊಂಡಿದ್ದ 2025-26 ಸಾಲಿನ ಅಂತರ ಮಹಾವಿದ್ಯಾನಿಲಯಗಳ ಪೆಂಕಾಕ್ ಸೀಲಾತ್ ಪಂದ್ಯಾವಳಿ ಹಾಗೂ ವಿಶ್ವವಿದ್ಯಾನಿಲಯ ತಂಡದ ಆಯ್ಕೆ ಕಾರ್ಯಕ್ರಮವನ್ನು ಭಾರತೀಯ ಪೆಂಕಾಕ್ ಸೀಲಾತ್ ಸಂಸ್ಥೆಯ ತಾಂತ್ರಿಕ ನಿರ್ದೇಶಕ ಅಬ್ದುಲ್ ರಜಾಕ್ ಅವರು ಉದ್ಘಾಟಿಸಿದರು.

ಕುಡಿಯುವ ನೀರಿನ ಅರವಟಿಗೆ ಉದ್ಘಾಟನೆ

ಯಲಬುರ್ಗಾ: ಬೇಸಿಗೆಯ ತೀವ್ರತೆಯನ್ನು ಗಮನದಲ್ಲಿಟ್ಟುಕೊಂಡು ಹಿರೇವಂಕಲಕುಂಟಾ ಶಾಖೆಯಲ್ಲಿ ಸಾರ್ವಜನಿಕರಿಗೆ ಕುಡಿಯುವ ನೀರು ಒದಗಿಸುವ ಉದ್ದೇಶದಿಂದ ಕುಡಿಯುವ ನೀರಿನ ಅರವಟಿಗೆಯನ್ನು ಉದ್ಘಾಟಿಸಲಾಯಿತು.

ಸಮುದಾಯ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳಾದ ಡಾ.ಪುಷ್ಪಾವತಿ ಮೇಡಂ ಅವರು ಅರವಟಿಗೆಯನ್ನು ಉದ್ಘಾಟಿಸಿದರು. ಡಾ.ತುಳಜರಾಮ್ ಘಾಟಗೆ ಹಾಗೂ ಡಾ.ಬಸವರಾಜ ಗಾಣದಾಳ ಅವರು ಅತಿಥಿಗಳಾಗಿ ಆಗಮಿಸಿ ಕಾರ್ಯಕ್ರಮಕ್ಕೆ ಶುಭ ಹಾರೈಸಿದರು.

ಮುಂಜಾವು ಸಹಕಾರಿಯ ನಿರ್ದೇಶಕರಾದ ಶೇಕಮ್ಮ ಕನಕಪ್ಪ ತಾಳಕೇರಿ ಮಾತನಾಡಿ, ಕುಡಿಯುವ ನೀರಿನ ಅರವಟಿಗೆಯಿಂದ ಸಾರ್ವಜನಿಕರಿಗೆ ಹೆಚ್ಚಿನ ಅನುಕೂಲವಾಗುತ್ತದೆ ಎಂದು ತಿಳಿಸಿದರು.

ಮುಂಜಾವು ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕರಾದ ಜಯಂತಿ ಮಾತನಾಡಿ, ಸಹಕಾರಿಯಿಂದ ರಕ್ತದಾನ ಶಿಬಿರ, ಪ್ರತಿಭಾವಂತ ವಿದ್ಯಾರ್ಥಿನಿಯರಿಗೆ ಪ್ರತಿಭಾ ಪುರಸ್ಕಾರ, ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಹಾಗೂ ಕುಡಿಯುವ ನೀರಿನ ಅರವಟಿಗೆಯಂತಹ ಹಲವು ಸಮಾಜಮುಖಿ ಕಾರ್ಯಕ್ರಮಗಳನ್ನು ಸಂಸ್ಥೆ ಪ್ರತಿ ವರ್ಷ ಆಯೋಜಿಸಲಾಗುತ್ತಿದೆ ಎಂದು ಹೇಳಿದರು.ದಾರಿದೀಪ ಸಂಸ್ಥೆಯ ಸಂಯೋಜಕರಾದ ಉಮೇಶ್ ಬೆಳದಡಿ ಹಾಗೂ ಜಿಲ್ಲಾ ಸಂಯೋಜಕರಾದ ಹನುಮಂತರೆಡ್ಡಿ ಉಪಸ್ಥಿತರಿದ್ದರು. ಸಿಬ್ಬಂದಿ ಬಳ್ಳೇಶ, ಅಮರೇಶ್, ಸಾದಿಕ್, ತಿಮ್ಮಜ್ಜ, ಸುರೇಶ್, ಮಂಜುಳಾ, ಅಕ್ಷತಾ, ಶರಣಯ್ಯ, ಹನಮಕ್ಕ, ನಾಗರತ್ನ ಹಾಗೂ ದಾರಿದೀಪ ಸಂಪನ್ಮೂಲ ವ್ಯಕ್ತಿಗಳು ಭಾಗವಹಿಸಿದ್ದರು.



ಯಲಬುರ್ಗಾ: ಬೇಸಿಗೆಯ ತೀವ್ರತೆಯನ್ನು ಗಮನದಲ್ಲಿಟ್ಟುಕೊಂಡು ಹಿರೇವಂಕಲಕುಂಟಾ ಶಾಖೆಯಲ್ಲಿ ಸಾರ್ವಜನಿಕರಿಗೆ ಕುಡಿಯುವ ನೀರು ಒದಗಿಸುವ ಉದ್ದೇಶದಿಂದ ಕುಡಿಯುವ ನೀರಿನ ಅರವಟಿಗೆಯನ್ನು ಉದ್ಘಾಟಿಸಲಾಯಿತು.

ಕಿರುಸುದ್ದಿ

ಮಕ್ಕಳ ಆರೋಗ್ಯಕ್ಕೆ ಮುಂಜಾಗ್ರತೆ ಅಗತ್ಯ



ಗಂಗಾವತಿ: ತಾಲೂಕಿನಲ್ಲಿ ಈ ವರ್ಷ ಬೇಸಿಗೆ ಗರಿಷ್ಠ ತಾಪಮಾನವು ಸಾಮಾನ್ಯಕ್ಕಿಂತ ಹೆಚ್ಚಾಗಿದೆ. ಬಿಸಿಗಾಳಿ ಬೀಸುವ ಸಂಭವನೀಯತೆ ತಾಲೂಕಿನಲ್ಲಿ ಗರಿಷ್ಠ ಪ್ರಮಾಣಕ್ಕಿಂತ ಹೆಚ್ಚಿದೆ. ಬಿಸಿಲಿನ ಪ್ರಖರತೆ ಮತ್ತು ತೀವ್ರತೆ ಜಾಸ್ತಿ ಕಂಡು ಬಂದ ಹಿನ್ನೆಲೆ ವಿಶೇಷವಾಗಿ ತಾಲ್ಲೂಕಿನ ಅಂಗನವಾಡಿ ಕೇಂದ್ರದ ಮಕ್ಕಳ ಆರೋಗ್ಯದ ಬಗ್ಗೆ ಮುಂಜಾಗ್ರತಾ ಕ್ರಮಕ್ಕೆ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಜಯಶ್ರೀ ಆರ್. ತಿಳಿಸಿದ್ದಾರೆ. ಗಂಗಾವತಿ ತಾಲೂಕಿನ ಎಲ್ಲ ಅಂಗನವಾಡಿ ಕಾರ್ಯಕರ್ತೆಯರು, ಸಹಾಯಕಿಯರು ಅಂಗನವಾಡಿ ಕೇಂದ್ರಕ್ಕೆ ಬರುವ ಮಕ್ಕಳಿಗೆ ಹೆಚ್ಚು ನೀರನ್ನು ಕುಡಿಸಲು ಮುಂದಾಗಬೇಕು. ಮಕ್ಕಳ ಪಾಲಕರಿಗೆ ನೀರಿನ ಅಂಶ ಹೆಚ್ಚಾಗಿರುವ ತರಕಾರಿಗಳು, ಹಣ್ಣುಗಳನ್ನು ಹಾಗೂ ಸಡಿಲವಾದ ತೆಳುಬಣ್ಣದ ಹತ್ತಿಯ ಬಟ್ಟೆಗಳನ್ನು ಧರಿಸುವುದಕ್ಕೆ ಸೂಚನೆ ನೀಡಬೇಕು ಎಂದು ಸಲಹೆ ನೀಡಿದರು.ಪಾಲಕರು ಸಣ್ಣ ಮಕ್ಕಳನ್ನು ಆದಷ್ಟು ಬೆಳಗ್ಗೆ 11 ಗಂಟೆಯ ಒಳಗೆ ಮತ್ತು ಸಂಜೆ 4 ಗಂಟೆಯ ನಂತರ ಹೊರಗಡೆ ಓಡಾಡುವುದಕ್ಕೆ ಬಿಡಬೇಕು. ಮಕ್ಕಳ ಆರೋಗ್ಯ ದೃಷ್ಟಿಯಿಂದ ಕಿತ್ತಳೆ, ಸೇಬು, ಅತಿ ಹೆಚ್ಚು ನೀರಿನ ಅಂಶ ಇರುವ ಹಣ್ಣುಗಳನ್ನು ಮಕ್ಕಳಿಗೆ ನೀಡಿ. ಬೇಕರಿ ಪದಾರ್ಥ ಸಕ್ಕರೆ ಅಂಶ ಇರುವ ಆಹಾರವನ್ನು ಆದಷ್ಟು ಮಕ್ಕಳಿಗೆ ನೀಡಬೇಡಿ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಜಯಶ್ರೀ ಆರ್. ಪ್ರಕಟಣೆಯಲ್ಲಿ ತಿಳಿಸಿದೆ.

ಎನ್ಎಸ್ಎಸ್ ವಿಶೇಷ ಶಿಬಿರ



ಮಾನ್ವಿ: ಮೂಢನಂಬಿಕೆ ಗ್ರಾಮೀಣ ಭಾಗದಲ್ಲಿ ಅತಿ ಹೆಚ್ಚು ಆಚರಿಸುತ್ತಾ ಬಂದಿರುತ್ತಾರೆ. ಸಾಮಾಜಿಕ ಪಿಡುಗುವಾಗಿ ಎಂದು ಅಧ್ಯಕ್ಷ ರವಿ ಪಾಟೀಲ ಹೇಳಿದರು. ಅವರು ಸಿರವಾರ ತಾಲೂಕಿನ ಕೆ.ಗುಡದಿನ್ನಿ ಗ್ರಾಮದಲ್ಲಿ ಮಾನ್ವಿ ಪಟ್ಟಣದ ಕಲ್ಮಠದ ಕೆಪಿಎಸ್ಎಸ್ ಪದವಿ ಮಹಾವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನಾ ಘಟಕ ಆಯೋಜಿಸಿರುವ 2025–26ನೇ ಸಾಲಿನ ವಿಶೇಷ ಶಿಬಿರದಲ್ಲಿ 'ಮೂಢನಂಬಿಕೆಯ ದುಷ್ಪರಿಣಾಮಗಳು' ವಿಷಯು ಕುರಿತು ವಿಶೇಷ ಉಪನ್ಯಾಸ ನೀಡಿದರು.

ಗ್ರಾಮೀಣ ಭಾಗದಲ್ಲಿ ಮೂಢನಂಬಿಕೆ ಅತಿ ಹೆಚ್ಚು ಆಚರಿಸುತ್ತಾ ಬರುತ್ತಾರೆ ಇದರಿಂದ ಕುಟುಂಬ ಕಲಾಗಲು ಅಪನಂಬಿಕೆ ವೈಶಮ್ಯ ಬರುತ್ತವೆ ನಾವು 21ನೇ ಶತಮಾನದಲ್ಲಿ ಇದ್ದರೂ ಈ ಮೂಢನಂಬಿಕೆ ಆಚರಿಸುವುದು ಬಿಡಬೇಕೆಂದು ಹೇಳಿದರು.

ವಿಶೇಷ ಶಿಬಿರದ ಉಪನ್ಯಾಸ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಲ್ಮಠ ಪದವಿ ಕಾಲೇಜಿನ ದೈಹಿಕ ನಿರ್ದೇಶಕ ವಿರುಪಣ್ಣ ಪಾಟೀಲ ವಹಿಸಿದ್ದರು. ರಾಷ್ಟ್ರೀಯ ಸೇವಾ ಯೋಜನಾ ಘಟಕದ ಕಾರ್ಯಕ್ರಮಾಧಿಕಾರಿ ಆನಂದ ಉಪ್ಪಳ, ಉಪನ್ಯಾಸಕ ದೇವೇಂದ್ರಪ್ಪ ಪುಲದಿನ್ನಿ ಉಪನ್ಯಾಸಕಿ ಶರಣಮ್ಮ ಉಪಸ್ಥಿತರಿದ್ದರು. ಶಿಬಿರಾರ್ಥಿ ನರಸಮ್ಮ ವರದಿ ವಾಚಿಸಿದರು. ಭಾರತಿ ಸ್ವಾಗತಿಸಿದರು. ನೀಲಾಂಬಿಕ ನಿರೂಪಿಸಿದರು.

ಶ್ರೀಶೈಲ ಯಾತ್ರಿಕರಿಗೆ ದಾಸೋಹ ಕಾರ್ಯಕ್ಕೆ ಚಾಲನೆ

ಸಿಂಧನೂರು: ಶ್ರೀಶೈಲ ಮಲ್ಲಿಕಾರ್ಜುನ ಪಾದಯಾತ್ರೆಗಳಿಗೆ ದಾಸೋಹ ಸೇವಾ ಕಾರ್ಯವನ್ನು ಕಳೆದ ಎರಡು ದಶಕಗಳಿಂದ ಬಸನಗೌಡ ಬಾದರ್ಲಿ ಫೌಂಡೇಶನ್‌ನಿಂದ ಮಾಡುತ್ತಿದ್ದಾರೆ.ಪ್ರತಿ ವರ್ಷ ಸಿಂಧನೂರು ಸೇರಿದಂತೆ ಬೇರೆ ಬೇರೆ ಜಿಲ್ಲೆಗಳ ತಾಲೂಕುಗಳಿಂದ ಶ್ರೀಶೈಲ ಮಲ್ಲಿಕಾರ್ಜುನ ದರ್ಶನಕ್ಕಾಗಿ ಪಾದಯಾತ್ರೆ ಹಮ್ಮಿಕೊಂಡು ಬರುವ ಭಕ್ತರಿಗೆ ಮಾರ್ಗ ಮಧ್ಯೆ ಅನ್ನ, ನೀರು, ಹಣ್ಣು ಒದಗಿಸುವ ವ್ಯವಸ್ಥೆಯನ್ನು ಕಲ್ಪಿಸುವ ಕೆಲಸ ಫೌಂಡೇಶನ್‌ನಿಂದ ಹಮ್ಮಿಕೊಳ್ಳಲಾಗಿದೆ. ತಾಲೂಕಿನ ರಾಗಲಪರ್ವಿ ಕ್ರಾಸ್ ಬಳಿ ಬಸನಗೌಡ ಬಾದರ್ಲಿ ಫೌಂಡೇಶನ್ ವತಿಯಿಂದ ಹಮ್ಮಿಕೊಂಡಿದ್ದ ದಾಸೋಹ ಸೇವೆಗೆ ಗುರುವಾರ ಯದ್ದಲದೊಡ್ಡಿಯ ಮಹಾಲಿಂಗ ಮಹಾಸ್ವಾಮಿಗಳು ಪೂಜೆ ಸಲ್ಲಿಸುವ ಮೂಲಕ ಚಾಲನೆ ನೀಡಿ,ಮಾತನಾಡಿದ ಅವರು ಬಸನಗೌಡ ಬಾದರ್ಲಿ ಕುಟುಂಬದಿಂದ ಈ ಕಾರ್ಯ ಆಯೋಜನೆ ಮಾಡಿರುವುದು ಶ್ಲಾಘನೀಯವಾಗಿದೆ. ಪ್ರತಿಯೊಬ್ಬರಿಗೂ ಇವರ ಕಾರ್ಯ ಮಾದರಿಯಾಗಿದೆ ಎಂದರು.ವಿಧಾನಪರಿಷತ್ ಶಾಸಕ ಬಸನಗೌಡ ಬಾದರ್ಲಿ, ಆರ್‌ಕೆಡಿಸಿಸಿ ಬ್ಯಾಂಕ್ ನಿರ್ದೇಶಕ ಸೋಮನಗೌಡ ಬಾದರ್ಲಿ ಸೇರಿದಂತೆ ತಾಲೂಕಿನ ಮುಖಂಡರು, ಶ್ರೀಶೈಲ ಪಾದಯಾತ್ರಿಗಳು ಇದ್ದರು.

ಪುಸ್ತಕಗಳಿಲ್ಲದೆ ಬಣಗುಡುತ್ತಿರುವ ರ‍್ಯಾಕ್‌ಗಳು

ಮಕ್ಕಳ ಗ್ರಂಥಾಲಯಕ್ಕೆ ಬೇಕಿದೆ ಕಾಯಕಲ್ಪ

ವಾಗೀಶ ವೀ.ಪಾಟೀಲ

ದಿಗಂತ ವಿಶೇಷ

ರಾಯಚೂರು: ಚಿಣ್ಣರಲ್ಲಿ ಪುಸ್ತಕ ಓದುವ ಹವ್ಯಾಸವನ್ನು ಬೆಳೆಸುವುದಕ್ಕೆ ಹಾಗೂ ಪುಸ್ತಕ ಓದಿನೆಡೆಗೆ ಆಕರ್ಷಿಸುವುದಕ್ಕೆ ನಗರ ಗ್ರಂಥಾಲಯದಲ್ಲಿ ನೂತನವಾಗಿ ಆರಂಭಿಸಿರುವ ಮಕ್ಕಳ ಗ್ರಂಥಾಲಯಕ್ಕೆ ಬೇಕಿದೆ ಹೆಚ್ಚಿನ ಕಾಯಕಲ್ಪ.

ನಗರದ ಜಿಲ್ಲಾ ಗ್ರಂಥಾಲಯದ ಆವರಣದಲ್ಲಿ ಕೆಕೆಆರ್‌ಡಿಬಿಯ 66.41 ಲಕ್ಷ ಅನುದಾನದಲ್ಲಿ ನಿರ್ಮಿಸಿರುವ ನೂತನ ಕಟ್ಟದಲ್ಲಿ ಚಿಣ್ಣರಿಗಾಗಿನೇ ಪ್ರತ್ಯೇಕ ಮಕ್ಕಳ ಗ್ರಂಥಾಲಯವನ್ನು ಆರಂಭಿಸಲಾಗಿದೆ. ಆದರೆ, ಗ್ರಂಥಾಲಯಕ್ಕೆ ತಕ್ಕಂತೆ ಚಿಣ್ಣರಿಗಾಗಿ ರಚಿಸಲ್ಪಟ್ಟಿರುವ ಪುಸ್ತಕಗಳ ಕೊರತೆ ಎದ್ದುಕಾಣುತ್ತಿದೆ.

ಆಟದೊಂದಿಗೆ ಪಾಠ ಎನ್ನುವುದು ಚಿಕ್ಕ ಮಕ್ಕಳಲ್ಲಿರುವ ಮನೋಭಾವನೆ. ಅದಕ್ಕೆ ತಕ್ಕಂತೆ ಆಟಿಕೆಯ ಕೆಲ ವಸ್ತುಗಳನ್ನು ಇಡಲಾಗಿದೆ. ಆದರೆ, ಪುಸ್ತಕದ ಜ್ಞಾನವನ್ನು ಹೆಚ್ಚಿಸುವುದಕ್ಕೆ ಬೇಕಾದ ಪುಸ್ತಕ ಭಂಡಾರದ ಕೊರತೆ ಕಂಡುಬರುತ್ತಿದೆ.

ನಗರದ ಗ್ರಂಥಾಲಯದಲ್ಲಿನ ಸುಸ್ಥಿತಿಯಲ್ಲಿರುವ ಒಟ್ಟು 17 ಸಾವಿರಕ್ಕೂ ಅಧಿಕ ಪುಸ್ತಕಗಳನ್ನು ಆಯ್ದು ನೂರಾರು ಚೀಲಗಳಲ್ಲಿ ಮೂಟೆಕಟ್ಟಿ ಗ್ರಂಥಾಲಯದ ಮಹಡಿಯಪಡಸಾಲೆಯಲ್ಲಿನಿಟ್ಟುಹಚ್ಚಿಇಡಲಾಗಿದೆ. ಇದರಲ್ಲಿ ಅಪಾರ ಪ್ರಮಾಣದಲ್ಲಿ ಚಿಕ್ಕ ಮಕ್ಕಳಿಗಾಗಿ ರಚನೆಯಾಗಿರುವ ಅನೇಕ ಲೇಖಕರ ಪುಸ್ತಕಗಳೂ ಸೇರಿವೆ. ಹೀಗಾಗಿ ಮಕ್ಕಳ ಗ್ರಂಥಾಲಯ ಸೇರಿದಂತೆ ನಗರ ಗ್ರಂಥಾಲಯದಲ್ಲಿನ ಪುಸ್ತಕಗಳನ್ನಿಡುವ ರ‍್ಯಾಕ್‌ಗಳು ಪುಸ್ತಕಗಳಿಲ್ಲದೆ ಬಣಗುಡುತ್ತಿವೆ.

ಈ ಹಿಂದೆ ಇದ್ದ ಉಪವಿಭಾಗಾಧಿಕಾರಿಗಳು



ಗ್ರಂಥಾಲಯಕ್ಕೆ ನೂತನ ಪುಸ್ತಕಗಳನ್ನು ಪೂರೈಕೆ ಮಾಡುವದಾಗಿ ಹೇಳಿದ್ದರಲ್ಲದೆ. ಅವರ ನಿರ್ದೇಶನದಂತೆ ಗ್ರಂಥಾಲಯದ ಸಿಬ್ಬಂಧಿಗಳಲ್ಲದೆ ನಾಲ್ಕು ವಿದ್ಯಾರ್ಥಿಗಳನ್ನೊಳಗೊಂಡ ತಂಡ ಹಲವುದಿನಗಳ ಕಾಲ 1964 ರಿಂದ 2015ರ ನಡುವೆ ಪ್ರಕಟವಾಗಿರುವ ನೂರಾರು ಹೆಸರಾಂತ ಲೇಖಕರ ಅತ್ಯಂತ ಸುಸ್ಥಿತಿಯಲ್ಲಿರುವ ಸಾವಿರ ಸಾವಿರ ಪುಸ್ತಕಗಳನ್ನು ರದ್ದಿಗೆ ಹಾಕುವುದಕ್ಕೆ ತಗೆದಿರಿಸಿರುವುದು ಖೇದದ ಸಂಗತಿ. ಪ್ರಸಕ್ತ ಮಾರುಕಟ್ಟೆಯಲ್ಲಿ ಅನೇಕ ಲೇಖಕರ ಪುಸ್ತಕಗಳು ಲಭ್ಯವೂ ಇರುವುದಿಲ್ಲ ಇಂತಹವನ್ನು ಮೂಟೆ ಕಟ್ಟಿ ಇಟ್ಟಿರುವುದೇಕೆ ಎನ್ನುವುದು ಮಾತ್ರ ಯಕ್ಷ ಪ್ರಶ್ನೆಯಾಗಿ ಕಾಡದಿರದು.

ಪ್ರಸಕ್ತ ಮೊಬೈಲ್ ಯುಗದಲ್ಲಿ ಮಕ್ಕಳು ಪುಸ್ತಕ ಓದುವುದೇ ವಿರಳವಾಗಿದೆ. ಇಂತಹ ಸಂದರ್ಭದಲ್ಲಿ ಮಕ್ಕಳಲ್ಲಿ ಪುಸ್ತಕ ಓದುವ ಹವ್ಯಾಸವನ್ನು ಎಲ್ಲರೂ ಸೇರಿ ಮಾಡಬೇಕಾಗಿದೆ. ಇತ್ತೀಚೆಗೆ ಕೆಲಪಾಲಕರು ರಜಾ ದಿನಗಳಲ್ಲಿ ಮಕ್ಕಳನ್ನು ಗ್ರಂಥಾಲಯಕ್ಕೆ ಕರೆತಂದು ಪುಸ್ತಕ ಓದುವ ಹವ್ಯಾಸವನ್ನು ಬೆಳೆಸುತ್ತಿದ್ದಾರೆ. ಚಿಣ್ಣರು ಚಿತ್ರಗಳುಳ್ಳ ಪುಸ್ತಕಗಳನ್ನು ನೋಡುವುದಕ್ಕೆ ಮತ್ತು ಓದುವುದಕ್ಕೆ ಹೆಚ್ಚಿಗೆ ಇಷ್ಟಪಡುತ್ತಾರೆ. ಆದರೆ ಮಕ್ಕಳ ಗ್ರಂಥಾಲಯದಲ್ಲಿ ಇಂತಹ ಹೆಚ್ಚಿನ ಪುಸ್ತಕಗಳು ನೋಡುವುದಕ್ಕೆ ಸಿಗುವುದಿಲ್ಲ.

> **ಮೇಲಧಿಕಾರಿಗಳ ಆದೇಶದಂತೆ 17 ಸಾವಿರಕ್ಕೂ ಅಧಿಕ ಪುಸ್ತಕಗಳನ್ನು ತೆಗೆದಿರಿಸಲಾಗಿದೆ. ಹೊಸ ಪುಸ್ತಕಗಳನ್ನು ಒದಗಿಸುವುದಾಗಿ ಮೇಲಧಿಕಾರಿಗಳು ಹೇಳಿದ್ದರು. ಆದರೆ, ಇನ್ನು ಪುಸ್ತಕಗಳು ಪೂರೈಕೆ ಆಗಿಲ್ಲ. ಹೀಗಾಗಿ ರ‍್ಯಾಕ್‌ಗಳು ಖಾಲಿ ಖಾಲಿ ಎನ್ನುಸುತ್ತಿವೆ ಅಷ್ಟೆ. ಅಧಿಕಾರಿಗಳು ಸೂಚಿಸಿದರೆ ಸಂಪೂರ್ಣ ಹಾಳಾಗದೇ ಇರುವ ಮತ್ತು ಕೆಲ ಹೆಸರಾಂತ ಲೇಖಕರ ಪುಸ್ತಕಗಳನ್ನು ಮತ್ತೆ ಓದುಗರಿಗೆ ನೀಡಲು ನಮ್ಮದೇನೂ ಅಭ್ಯಂತರವಿಲ್ಲ.**
> ■ ನಿರ್ಮಲಾ ಹೊಸೂರ, ಮುಖ್ಯ ಗ್ರಂಥಾಲಯಾಧಿಕಾರಿ ನಗರ ಕೇಂದ್ರ ಗ್ರಂಥಾಲಯ

ನಗರದ ಆಝಾದ್ ನಗರದ ಮಾವಿನಕೇರಿ ಉದ್ಯಾನವನ ರಸ್ತೆಯಲ್ಲಿನ ಮಕ್ಕಳ ಗ್ರಂಥಾಲಯಕ್ಕೆ ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಬರುವುದಿಲ್ಲ ಎಂಬ ಕಾರಣಕ್ಕೆ ಅಲ್ಲಿನ ಸಿಬ್ಬಂದಿಗಳನ್ನು ನಗರ ಗ್ರಂಥಾಲಯಕ್ಕೆ ಕರೆಸಿಕೊಳ್ಳಲಾಗಿದೆ. ಹೀಗಾಗಿ ಈ ಮಕ್ಕಳ ಗ್ರಂಥಾಲಯವನ್ನು ಕಳೆದ 15 ದಿನಗಳಿಂದ ಮುಚ್ಚಲಾಗಿದೆ. ಈ ಗ್ರಂಥಾಲಯ ಹಾಳಾಗಿದ್ದು ಇದನ್ನು ನವೀಕರಿಸುವುದು ಅವಶ್ಯಕವಾಗಿದೆ.

ಬೆಳದಿಂಗಳ ಬುತ್ತಿ ಜಾತ್ರೆ ಅದ್ದೂರಿ

ಕುಷ್ಟಗಿ: ತಾಲೂಕಿನ ತಳವಗೇರಾ ಗ್ರಾಮದ ಆದರ್ಶ ವಿದ್ಯಾಲಯದ ಶಾಲಾ ಆವರಣದಲ್ಲಿ ಬುಧವಾರ ಸಂಜೆ ಬೆಳದಿಂಗಳ ಬುತ್ತಿ ಜಾತ್ರೆ ಅತ್ಯಂತ ವಿಜೃಂಭಣೆಯಿಂದ ಜರುಗಿತು.

ರಬಕವಿ-ಸಂಶಿಯ ಬ್ರಹ್ಮಾನಂದ ಮಠದ ಗುರುಸಿದ್ದೇಶ್ವರ ಮಹಾಸ್ವಾಮೀಜಿ ಆಶೀರ್ವಚನ ನೀಡಿ, ದಾಸೋಹ ಪಾರಂಪರಿಕದ ಪ್ರತಿರೂಪ ಬೆಳದಿಂಗಳ ಬುತ್ತಿ ಜಾತ್ರೆ ನಿಮ್ಮೆಲ್ಲರ ಭಕ್ತಿಯ ಪಾರಕಷ್ಠೆಯಲ್ಲಿ ಮಿಂದೆಳುವಂತೆ ಮಾಡಿದೆ. ದಾಸೋಹ ಎಂಬುವುದು ನಾವೆಲ್ಲರೂ ಒಂದೆಡೆ ಸೇರಿ ಊಟ ಮಾಡುವದರಿಂದ ಶಿವನೇ ಬಂದು ಊಟ ಮಾಡಿದಂತೆ ಆಗುತ್ತದೆ. ದಾಸೋಹ ಸಾಮರಸ್ಯದ, ಸಹಬಾಳ್ವೆಯ, ಭಾವೈಕ್ಯತೆಯ ಸಂಕೇತವಾಗಿದೆ. ಕಾಯಕಮಾಡಿ ಬೆವರಿನ ಪ್ರತಿಫಲದಿಂದ ಪ್ರಸಾದ ಮಾಡಿಸುವುದು ಶಿವನಿಗೆ ಮುಟ್ಟುತ್ತದೆ. ಒಬ್ಬ ಶಿವಯೋಗಿ ಪ್ರಸಾದ ಮಾಡಿದರೆ ಇಡೀ ಶತಕೋಟಿ ಜೀವರಾಶಿಗಳು ಊಟ ಮಾಡಿದಂತೆ

ಕಾಯಕದಿಂದ ಪ್ರತಿಫಲವಾಗಿರಬೇಕು ಮನಪೂರ್ತಿಯಾಗಿ ದಾನ ಮಾಡಬೇಕು ದಾನಮಾಡುವಾಗ ನಿಂದೆ ಎನ್ನುವ ಭಾವ ಇರಬೇಕು ಎಂದರು.

ಬಳ್ಳಾರಿ ವಿಭಾಗೀಯ ಸರ್ಕಾರಿ ವಕೀಲರು ಬಿ.ಎಸ್.ಪಾಟೀಲ ಮಾತನಾಡಿ, ದಾಸೋಹದ ಪರಿಕಲ್ಪನೆಯಲ್ಲಿ ಪಾಲ್ಗೊಳ್ಳುವುದು ಶರಣರ ಸೇವೆ ಮಾಡಿದಂತೆ, ಪ್ರೀತಿ, ಸ್ನೇಹ ವಿಶ್ವಾಸ ಕಲ್ಪಿಸುವ ಈ ಬುತ್ತಿ ಜಾತ್ರೆಯ ವಿಶೇಷವಾಗಿದೆ. ದಾಸೋಹಕ್ಕೆ ಜಾತಿ ಗಡಿ ಮೀರಿರುವಂತದ್ದು, ತನುಮನದಿಂದ ಮಾಡಿದ ಬದುಕು ಪ್ರಾಮಾಣಿಕವಾಗಿ ಮಾಡಿದಂತೆ ಆಗುತ್ತದೆ. ಪ್ರೀತಿ ವಿಶ್ವಾಸದ ಕಲ್ಪನೆ ಮೂಡಿಸುವಂತದು. ನೊಂದವರ ಧ್ವನಿಯಾಗಿಬೇಕು. ಬುತ್ತಿ ಜಾತ್ರೆಯ ಜಾತ್ಯಾತೀತವಾಗಿ ಬೆಳೆಯುತ್ತದೆ. ಮಕ್ಕಳು ಮತ್ತು ಯುವಕರಲ್ಲಿ ಜಾಗೃತಿ ಮೂಡಿಸುತ್ತದೆ. 2015ರಿಂದ ಪ್ರಾರಂಭವಾಗಿ ಹನ್ನೊಂದನೇ ವರ್ಷದ ಬುತ್ತಿ ಜಾತ್ರೆ ನಡೆಯಿತು. ನಿಡಶೇಸಿಯ ಚನ್ನಬಸವ ಶಿವಚಾರ್ಯ ಸ್ವಾಮೀಜಿ ಉಪಸ್ಥಿತರಿದ್ದರು.

ಶಾಸಕ ದೊಡ್ಡನಗೌಡ ಪಾಟೀಲ, ಮಾಜಿ ಸಚಿವ ಅಮರೇಗೌಡ ಪಾಟೀಲ ಬಯ್ಯಾಪುರ, ಕೆ.ಮಹೇಶ, ಮುಖಂಡರಾದ ಬಸವರಾಜ ಕೆ.ಪಾಟೀಲ, ಮಲ್ಲಿಕಾರ್ಜುನ ಮೇಟಿ, ಮಲ್ಲಯ್ಯ ಗುರುಸ್ಥಳಮಠ, ಶರಣಗೌಡ ಮಾಲಿಪಾಟೀಲ, ಬಾಲಪ್ಪ ಚಾಕರಿ, ಮಲ್ಲಪ್ಪ ಗೊಣ್ಣಾಗರ, ಮೈಲಾರಪ್ಪ ಮಂತ್ರಿ ಸೇರಿದಂತೆ ಗ್ರಾಮದ ಗುರು, ಹಿರಿಯರು ಹಾಗೂ ಮಹಿಳೆಯರು ಮತ್ತು ಮಕ್ಕಳು ಹಾಗೂ ಸುತ್ತಮುತ್ತಲಿನ ಗ್ರಾಮಸ್ಥರು ಸಾವಿರಾರು ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು.ಯುವರಾಜ ಪ್ರಾರ್ಥಿಸಿದರು. ಪಂಪನಗೌಡ ಪೊಲೀಸ್ ಪಾಟೀಲ ಸ್ವಾಗತಿಸಿದರು. ಉಮೇಶ ಮೇಳಿ ನಿರ್ವಹಿಸಿದರು.



ಭಕ್ತರ ಆಶೆಯಂತೆ ಸಾಯಿಬಾಬಾರ ಮೂರ್ತಿ ಪ್ರತಿಷ್ಠಾಪನೆ: ದೇಸಾಯಿ

ಯಲಬುರ್ಗಾ: ಅಗಾಧ ಶಕ್ತಿಯನ್ನು ಹೊಂದಿರುವ ಅಸಾಮಾನ್ಯ ದೈವಿ ಸ್ವರೂಪಿಯಾದ ಶಿರಡಿ ಸಾಯಿಬಾಬಾ ಅವರ ಮೂರ್ತಿಯನ್ನು ಶೀಘ್ರದಲ್ಲಿಯೇ ಪ್ರತಿಷ್ಠಾಪನೆ ಮಾಡಲಾಗುವುದು ಎಂದು ಸಾಯಿಮಂದಿರದ ಮುಖ್ಯಸ್ಥರು ಹಾಗೂ ಬೆಂಗಳೂರಿನ ಮುಖ್ಯ ನ್ಯಾಯಾಲಯದ ನ್ಯಾಯವಾದಿಗಳಾದ ವಿಜಯಕುಮಾರ ದೇಸಾಯಿ ಹೇಳಿದರು.

ಪಟ್ಟಣದ ಸಾಯಿ ಧ್ಯಾನ ಮಂದಿರದಲ್ಲಿ ಆಯೋಜಿಸಿದ ಎಂಟನೇ ವಾರ್ಷಿಕೋತ್ಸವದಲ್ಲಿ ಭಾಗಿಯಾಗಿ ಮಾತನಾಡಿದ ಅವರು, ಈಗಾಗಲೇ ಜೈಪುರದಲ್ಲಿ ಸಾಯಿ ಬಾಬಾರವರ ಮೂರ್ತಿಯನ್ನು ಮಾಡಲು ಹಾಕಲಾಗಿದೆ. ಆ ದಿವ್ಯಮೂರ್ತಿಯನ್ನು ಇನ್ನು ನಾಲ್ಕು ತಿಂಗಳದ ಒಳಗಡೆ ಮಂದಿರದಲ್ಲಿ ಸ್ಥಾಪಿಸಲು ಭಕ್ತಾದಿಗಳ ಸಲಹೆಯಂತೆ ಕ್ರಮಕೈಗೊಳ್ಳಲಾಗಿದೆ ಎಂದೆನ್ನುತ್ತಾ ಯಾರು ತಮ್ಮ ಮೇಲೆ ನಂಬಿಕೆಯನ್ನು ಇಟ್ಟುಕೊಂಡಿರುತ್ತಾರೆಯೋ ಅವರಿಗೆ ದೇವರು ಇದ್ದಾನೆ ಯಾರಿಗೂ ತಮ್ಮ ಮೇಲೆ ನಂಬಿಕೆ ಇಲ್ಲವ್ಹೋ ಅವರಿಗೆ ದೇವರು ಪ್ರತ್ಯಕ್ಷನಾಗುವುದಿಲ್ಲ ಎಂದೆನ್ನುತ್ತಾ ತಂದೆಯರು ಹಾಗೂ ನಿ.ನ್ಯಾಯಧೀಶರಾದ ಮಹಿಪಾಲ ದೇಸಾಯಿ ಅವರು ಬಾಬರವರ ಪರಮ ಭಕ್ತರು ಆಗಿದ್ದರು. ಈಗಾಗಲೇ ಪಟ್ಟಣದಲ್ಲಿ ಧ್ಯಾನಮಂದಿರ ಅವರ ಜೀವಿತ ಕಾಲಾವಧಿಯಲ್ಲಿಯೆ ನಿರ್ಮಾಣವಾಗಿದೆ ಆದಕ್ಕೆ ಪಟ್ಟಣದ ಜನತೆ ಸಹಕಾರ ನೀಡಿದಂತೆ ಮೂರ್ತಿಪ್ರತಿಷ್ಠಾಪನೆಗೂ ಸಹಕರಿಸುವಂತೆ ಕರೆ ನೀಡಿದರು.

ಹಿರಿಯ ನ್ಯಾಯವಾದಿಗಳಾದ ಬಿ.ಎಂ. ಶಿರೂರ, ವರ್ತಕರಾದ ಸಂಗಣ್ಣ ಟೆಂಗಿನಕಾಯಿ ಮಲ್ಲಿಕಾರ್ಜುನ ಉಳ್ಳಾಗಡ್ಡಿ, ವೀರಣ್ಣ ನಿಂಗೋಜಿ ಇತರರು ಮಾತನಾಡಿದರು.

ಜಿಪಂ ಮಾಜಿ ಉಪಾಧ್ಯಕ್ಷ ಶಿವಶಂಕರರಾವ ದೇಸಾಯಿ, ಗಿರಿಜಾದೇವಿ ದೇಸಾಯಿ, ಅನುಸೂಯಾ ಟೆಂಗಿನಕಾಯಿ, ಬಸವಲಿಂಗಪ್ಪ ಭೂತೆ, ಶರಣಕುಮಾರ ಅಮರಗಟ್ಟಿ, ಮುದಕಪ್ಪ ಗಾಣಗೇರ, ಎಂ.ಎಫ್.ನಡಾಫ್, ವೀರನಗೌಡ ಪಾಟೀಲ, ಫಕೀರಪ್ಪ ಕಜ್ಜಿ, ಶಶಿದರ ಪಾಟೀಲ, ಸಿದ್ಧಪ್ಪ ಕಟ್ಟಿಮನಿ, ವೆಂಕಣ್ಣ ಮುಕ್ತೆದಾರ, ಮಲ್ಲಪ್ಪಮಡಿವಾಳರ ಮತ್ತಿತರರಿದ್ದರು. ವಿಶೇಷ ಪೂಜೆ ಹಾಗೂ ಧಾರ್ಮಿಕ ಬೋಧನೆಯನ್ನು ಅರ್ಚಕರು ನಡೆಸಿಕೊಟ್ಟರು. ನಂತರ ಎಲ್ಲರೂ ಸಹ ಭೋಜನವನ್ನು ಸ್ವೀಕರಿಸಿದರು.

ಸಂಗೀತಕಾರ್ಯಕ್ರಮವನ್ನು ಶರಣಕುಮಾರ ಬಂಡಿ ಸಂಗೀತಾ ಶರಣಪ್ಪ ಗಂಗಾವತಿ ದಂಪತಿ ನಡೆಸಿಕೊಟ್ಟರು. ನಿ.ಶಿಕ್ಷಕರಾದ ಅಶೋಕ ಪಾಟೀಲ ನಿರೂಪಿಸಿ ವಂದಿಸಿದರು.



ಹಳೆ ಬಜಾರ್ ರಸ್ತೆ ಅತಿಕ್ರಮಿಸಿದ ಕಟ್ಟಡಗಳ ತೆರವಿಗೆ ಆಗ್ರಹ

ಸಿಂಧನೂರು: ನಗರದ ಚನ್ನಮ್ಮ ಸರ್ಕಲ್ (ಹಳೆ ಬಜಾರ್)ನಿಂದ ಟಿಪ್ಪು ಸುಲ್ತಾನ್ ಸರ್ಕಲ್‌ವರೆಗೆ ಎಡ ಮತ್ತು ಬಲ ಭಾಗದ ರಸ್ತೆ ಅತಿಕ್ರಮಿಸಿದ ಕಟ್ಟಡಗಳನ್ನು (ಬಿಲ್ಡಿಂಗ್) ತೆರವುಗೊಳಿಸಿ ಸಾರ್ವಜನಿಕರ ಸುಗಮ ಸಂಚಾರಕ್ಕೆ ಅನುಕೂಲ ಕಲ್ಪಿಸಬೇಕೆಂದು ಒತ್ತಾಯಿಸಿ ಕರ್ನಾಟಕ ರೈತ ಸಂಘದ (ಎಐಯುಕೆಎಸ್) ವತಿಯಿಂದ ತಹಶೀಲ್ದಾರ ಅರುಣ್ ದೇಸಾಯಿ ಅವರ ಮೂಲಕ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು.

ನಗರ ದಿನದಿಂದ ದಿನಕ್ಕೆ ವೇಗವಾಗಿ ಬೆಳೆಯುತ್ತಿದೆ. ಇದರಿಂದಾಗಿ ನಗರದ ಪ್ರಮುಖ ಏರಿಯಾಗಳಲ್ಲಿ ಜನ ಸಂದಣಿ ಜಾಸ್ತಿಯಾಗುತ್ತಿದ್ದು, ಹೆಚ್ಚು ಜನನಿಬಿಡತೆ ಇರುವ ಪ್ರದೇಶಗಳಲ್ಲಿ ಹಳೆಬಜಾರ್ ಪ್ರದೇಶವೂ ಒಂದಾಗಿದೆ. ಈ ಪ್ರದೇಶದ ರಸ್ತೆಯಲ್ಲಿ ಜನ ಸಾಮಾನ್ಯರು ಸಂಚರಿಸುವುದಕ್ಕೆ ದಿನವೂ ಹರಸಾಹಸಪಡುತ್ತಿದ್ದಾರೆ. ಹಾಗಾಗಿ ರಸ್ತೆ ಅಗಲೀಕರಣ ಅತ್ಯಂತ ಅವಶ್ಯಕತೆ ಇರುತ್ತದೆ ಎಂದು ಮನವಿಯಲ್ಲಿ ಸಂಘಟಕರು ಪ್ರಸ್ತಾಪಿಸಿದ್ದಾರೆ.

ಸಿಂಧನೂರಿನ ಹಳೆ ಬಜಾರ್‌ನ ಎರಡೂ ಬದಿಯ ರಸ್ತೆಗಳನ್ನು ಅತಿಕ್ರಮಿಸಿದ ಕಟ್ಟಡಗಳನ್ನು ಈ ಕೂಡಲೇ ತೆರವುಗೊಳಿಸಿ ಸಾರ್ವಜನಿಕ ಸಂಚಾರಕ್ಕೆ ಅನುಕೂಲ ಕಲ್ಪಿಸಬೇಕು. ಯಾವುದೇ ರಾಜಕೀಯ ಪ್ರಭಾವಕ್ಕೆ ಒಳಗಾಗದೇ ರಸ್ತೆ ಅತಿಕ್ರಮಿಸಿದ ಮಾಲೀಕರ ಕಟ್ಟಡಗಳನ್ನು ತೆರವುಗೊಳಿಸಿ, ನಿರ್ದಾಕ್ಷಿಣ್ಯ ಕ್ರಮ ಜರುಗಿಸಬೇಕು



ಹಾಗೂ ರಸ್ತೆ ಅತಿಕ್ರಮಿಸಿದ ಕಟ್ಟಡ ಮಾಲೀಕರ ಮೇಲೆ ಕ್ರಿಮಿನಲ್ ಕೇಸ್ ದಾಖಲಿಸಬೇಕು. ಯಾಕೆಂದರೆ ಹಳೆ ಬಜಾರ್ ರಸ್ತೆ ಚಿಕ್ಕದಾಗಿರುವುದರಿಂದ ಆಂಬ್ಯುಲೆನ್ಸ್ ಓಡಾಟ,ಸಾರ್ವಜನಿಕ ವಾಹನಗಳ ಸಂಚಾರ, ಜನ ಸಂಚಾರಕ್ಕೆ ತೀವ್ರ ಸಮಸ್ಯೆಯಾಗಿದ್ದು, ಕೂಡಲೇ ತೆರವು ಕಾರ್ಯಾಚರಣೆ ನಡೆಸಿ,ರಸ್ತೆ ಅಗಲೀಕರಣ ಮಾಡಬೇಕು ಎಂದು ಒತ್ತಾಯಿಸಿದ್ದಾರೆ.

ಕೆಆರ್‌ಎಸ್ ಜಿಲ್ಲಾ ಕಾರ್ಯದರ್ಶಿ ಚಿಟ್ಟಿಬಾಬು, ಟಿಯುಸಿಐ ಜಿಲ್ಲಾಧ್ಯಕ್ಷ ಬಿ.ಎನ್.ಯರದಿಹಾಳ, ಕೆಆರ್‌ಎಸ್ ತಾಲೂಕು ಅಧ್ಯಕ್ಷ ರಮೇಶ ಪಾಟೀಲ ಬೇರಗಿ ಇತರರರಿದ್ದರು.

ವಿದ್ಯಾರ್ಥಿಗಳು ಕ್ರೀಡೆಗಳ ಮೂಲಕ ಬೆಳಕಿಗೆ ಬರಲಿ: ರಜಾಕ್

ಕೊಪ್ಪಳ: ಕ್ರೀಡೆಗಳ ಮೂಲಕ ವಿದ್ಯಾರ್ಥಿಗಳು ಬೆಳಕಿಗೆ ಬರಬೇಕು ಎಂದು ಭಾರತೀಯ ಪೆಂಕಾಕ್ ಸೀಲಾತ್ ಸಂಸ್ಥೆಯ ತಾಂತ್ರಿಕ ನಿರ್ದೇಶಕ ಅಬ್ದುಲ್ ರಜಾಕ್ ತಿಳಿಸಿದರು.

ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಗುರುವಾರ ಕೊಪ್ಪಳದ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು ಹಾಗೂ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ ಇವರ ಸಹಯೋಗದಲ್ಲಿ ಹಮ್ಮಿಕೊಂಡಿದ್ದ 2025–26 ಸಾಲಿನ ಅಂತರ ಮಹಾವಿದ್ಯಾನಿಲಯಗಳ ಪೆಂಕಾಕ್ ಸೀಲಾತ್ ಪಂದ್ಯಾವಳಿ ಹಾಗೂ ವಿಶ್ವವಿದ್ಯಾನಿಲಯ ತಂಡದ ಆಯ್ಕೆ ಕಾರ್ಯಕ್ರಮವನ್ನು ಉದ್ಘಾಟನೆ ಮಾಡಿ ಅವರು ಮಾತನಾಡಿದರು.

ಇಂದು ಕ್ರೀಡಾ ಕ್ಷೇತ್ರದಲ್ಲಿ ಬಹಳಷ್ಟು ಸ್ಪರ್ಧೆ ಇದೆ. ಆದರೆ ಪೆಂಕಾಕ್ ಸೀಲಾತ್ ಕ್ರೀಡೆಯಲ್ಲಿ ಸ್ಪರ್ಧೆ ಕಡಿಮೆ ಇದೆ. ಸ್ವಲ್ಪ ಚನ್ನಾಗಿ ಆಟ ಆಡಿದರೆ ಖಂಡಿತಬಹುಮಾನಪಡೆಯುತ್ತಿರಿ. ಸರಕಾರದಿಂದ ಕ್ರೀಡೆಗಳಿಗೆ ಬರುವ ಅನುದಾನವನ್ನು ಸದುಪಯೋಗ ಪಡೆದುಕೊಂಡು ಕ್ರೀಡೆಗಳ ಮೂಲಕ ಬೆಳಕಿಗೆ ಬನ್ನಿ ಎಂದು ತಿಳಿಸಿದರು.

ಪ್ರೊ.ಅಲ್ಲಮ ಪ್ರಭು ಬೆಟ್ಟದೂರು, ದೈಹಿಕ ಶಿಕ್ಷಣ ಭೋಧಕರಾದ ಪ್ರದೀಪ್ ಕುಮಾರ ಮಾತನಾಡಿದರು.

ಕಾಲೇಜಿನ ಪ್ರಾಚಾರ್ಯ ಡಾ.ಗಣಪತಿ ಲಮಾಣಿ ಅಧ್ಯಕ್ಷತೆ ವಹಿಸಿದ್ದರು.

ಬಿ.ಜಿ.ಕರಿಗಾರ, ವಿಠಲ ಬಿ.ಚಾಬಗೌಡರ್, ಎ.ಬಸವರಾಜ, ಮಂಜುನಾಥ್ ಅರೇಂಟು ನೂರು, ಗವಿಸಿದ್ದಪ್ಪ ಮುತ್ತಾಳ, ಮಂಜುನಾಥ್ ಗೊಂಡಬಾಳು, ವಿನೋದು, ವಿಶ್ವನಾಥ್ ನಡುಕಟ್ಟಿ, ಶುಭ, ಸುಮಿತ್ರಾ ಹಾಗೂ ಸುಮಯ್ಯ ಇತರರು ಉಪಸ್ಥಿತರಿದ್ದರು.

ಕಾರ್ಯಕ್ರಮವನ್ನು ಡಾ.ಹುಲಿಗೆಮ್ಮ ಅವರು ನಿರೂಪಿಸಿದರು. ಡಾ.ನರಸಿಂಹ ಸ್ವಾಗತಿಸಿ ವಂದಿಸಿದರು. ಕಾಲೇಜಿನ ವಿದ್ಯಾರ್ಥಿನಿಯರು ಪ್ರಾರ್ಥನೆ ಗೀತೆ ಹಾಡಿದರು.

ತಾಲೂಕು ಸಮ್ಮೇಳನದ ಬಗ್ಗೆ ಕಾರ್ಯಕಾರಿ ಸಮಿತಿ ಸಭೆ

ಗಂಗಾವತಿ: ಕನ್ನಡ ಸಾಹಿತ್ಯ ಪರಿಷತ್ತಿನ ತಾಲೂಕುಮಟ್ಟದ 9ನೇ ಸಮ್ಮೇಳನವನ್ನು ಈ ಬಾರಿ ಗ್ರಾಮೀಣ ಪ್ರದೇಶಕ್ಕೆ ಆತಿಥ್ಯ ವಹಿಸಲು ಅವಕಾಶ ಮಾಡಿಕೊಡಬೇಕು ಎಂದು ಕಸಾಪದ ಗಂಗಾವತಿ ತಾಲೂಕು ಅಧ್ಯಕ್ಷ ರುದ್ರೇಶ ಆರ್ಹಾಳ ಹೇಳಿದರು.

ನಗರದ ಕಸಾಪ ಭವನದಲ್ಲಿ ಬುಧವಾರ ಸಂಜೆ ನಡೆದ ನಿವೃತ್ತ ಶಿಕ್ಷಕ ವೆಂಕಟರಾವ್ ಕುಲಕರ್ಣಿ ನಿಧನನಕ್ಕೆ ಕಸಾಪದಿಂದ ನುಡಿನಮನ ಸಲ್ಲಿಸಲಾಯಿತು. ಬಳಿಕ ಗಂಗಾವತಿ ತಾಲೂಕು ಮಟ್ಟದ 9ನೇ ಸಮ್ಮೇಳನ ನಡೆಸುವ ಬಗ್ಗೆ ಕಾರ್ಯಕಾರಿ ಮಂಡಳಿಯ ಪೂರ್ವಭಾವಿ ಸಭೆಯಲ್ಲಿ ಚರ್ಚಿಸಲಾಯಿತು.

ಅಧ್ಯಕ್ಷತೆ ವಹಿಸಿದ್ದ ಕಸಾಪದ ಜಿಲ್ಲಾಧ್ಯಕ್ಷ ಶರಣೇಗೌಡ ಪೊಲೀಸ್‌ಪಾಟೀಲ ಮಾತನಾಡಿ, ಗ್ರಾಮೀಣ ಭಾಗದಲ್ಲಿ ಈ ಬಾರಿ ಸಾಹಿತ್ಯ ಸಮ್ಮೇಳನ ಆಯೋಜಿಸುವ ಮೂಲಕ ಹಳ್ಳಿಗಾಡಿನ ಸೊಗಡಿನಲ್ಲಿ ಕನ್ನಡದ ಕಂಪನ್ನು ಚೆಲ್ಲೋಣ ಎಂದರು.

ಗ್ರಾಮೀಣ ಪ್ರದೇಶ ಆರ್ಹಾಳ, ಕೇಸರಹಟ್ಟಿ, ಹೇರೂರು, ಬಸಾಪಟ್ಟಣ, ಹಿರೇಬೆಣಕಲ್, ವೆಂಕಟಗಿರಿ ಸೇರಿದಂತೆ ವಿವಿಧ ಗ್ರಾಮಗಳ ಹೆಸರು ಪ್ರಸ್ತಾಪವಾದವು. ಆದರೆ ಯಾವ ಗ್ರಾಮಸ್ಥರು ಮೊದಲಿಗೆ ಆಸಕ್ತಿ ವಹಿಸಿ ಆತಿಥ್ಯ ನೀಡಲು ಮುಂದೆ



ಬರುತ್ತಾರೋ ಆ ಗ್ರಾಮಕ್ಕೆ ಸಮ್ಮೇಳನ ನಡೆಸುವ ಅವಕಾಶ ಮಾಡಿ ಕೊಡೋಣ ಎಂಬ ಸಲಹೆ ವ್ಯಕ್ತವಾಯಿತು.

ಎಪ್ರಿಲ್ ಮೊದಲ ವಾರದಲ್ಲಿ ಎಸ್ಸೆಸ್ಸೆಲ್ಸಿ ಪರೀಕ್ಷೆ ನಡೆಯಲಿದ್ದು, ಆ ಬಳಿಕವೇ ಸಮ್ಮೇಳನ ಆಯೋಜಿಸಬೇಕು. ಎಪ್ರಿಲ್ ಎರಡು ಅಥವಾ ಮೂರನೇ ವಾರದಲ್ಲಿ ಸಮ್ಮೇಳನ ಆಯೋಜಿಸಿದರೆ ಹೆಚ್ಚು ಸೂಕ್ತ ಎಂಬ ಅಭಿಪ್ರಾಯ ಸದಸ್ಯರು ವ್ಯಕ್ತಪಡಿಸಿದರು.

ಕುಲಕರ್ಣಿಗೆ ನುಡಿನಮನ: ಇದಕ್ಕೂ ಮೊದಲು ನಿವೃತ್ತ ಶಿಕ್ಷಕ ವೆಂಕಟರಾವ್ ಕುಲಕರ್ಣಿ ಅವರ ನಿಧನಕ್ಕೆ ಸಂತಾಪ ಸೂಚಿಸಿ, ಅವರ ಗೌರವಾರ್ಥ ನುಡಿನಮನ ಸಲ್ಲಿಸಲಾಯಿತು. ಸಿಪಿಎಸ್, ಹಿರೇಜಂತಕಲ್ ಸೇರಿದಂತೆ ಶಿಕ್ಷಕರಾಗಿ ವೆಂಕಟ್ರಾವ್ 38 ವರ್ಷ ಕಳೆದಿದ್ದರ ಬಗ್ಗೆ ಸಭೆಯಲ್ಲಿ ಸ್ಮರಿಸಲಾಯಿತು.

ಕಸಾಪದ ತಾಲೂಕು ಘಟಕದ ಮಾಜಿ ಅಧ್ಯಕ್ಷ ಅಂಗಡಿ ಶ್ರೀನಿವಾಸ ಮಾತನಾಡಿದರು.

ಕಸಾಪದ ಪದಾಧಿಕಾರಿಗಳಾದ ಜಿಲ್ಲಾ ಕೋಶಾಧ್ಯಕ್ಷ ರಮೇಶ ಕುಲಕರ್ಣಿ ಮರಳಿ, ತಾಲೂಕಾ ಕೋಶಾಧ್ಯಕ್ಷ ಚಂದ್ರಶೇಖರ ಅಕ್ಕಿ, ಗೌರವ ಕಾರ್ಯದರ್ಶಿ ಶಿವಾನಂದ ತಿಮ್ಮಾಪುರ, ಗೌರವ ಕಾರ್ಯದರ್ಶಿ ರಮೇಶ ಬಾಳಿಕಾಯಿ, ಸಂಘಟನಾ ಕಾರ್ಯದರ್ಶಿ ಶರಣಪ್ಪ ಮಟ್ಟಿ, ಗೌರವ ಸಲಹೆಗಾರ ಶಿವಾನಂದ ಶಿಲ್ಪಿನ್, ಮಂಜುನಾಥ ಕುರಿ ಇತರರಿದ್ದರು.

ರಾಜ್ಯ ಮಟ್ಟದ ಸರ್ವೋತ್ತಮ ಕ್ರೀಡಾ ಸೇವಾರತ್ನ ಪ್ರಶಸ್ತಿ

ಮುನಿರಾಬಾದ್: ವಿಜಯನಗರ ಸಂಯುಕ್ತ ಪದವಿ ಪೂರ್ವ ಕಾಲೇಜು, ಮುನಿರಾಬಾದ್‌ನ ದೈಹಿಕ ಶಿಕ್ಷಣ ಉಪನ್ಯಾಸಕ ತಿರುಪತಿ ನಾಯಕ ಅವರಿಗೆ ಬಳ್ಳಾರಿ ಜಿಲ್ಲೆಯ ಸಿರಗುಪ್ಪ ತಾಲೂಕಿನ ನೇತ್ರ ಕಲಾ ಸಂಘ ವತಿಯಿಂದ ನೀಡುವ ರಾಜ್ಯ ಮಟ್ಟದ ಸರ್ವೋತ್ತಮ ಕ್ರೀಡಾ ಸೇವಾ ರತ್ನ ಲಭಿಸಿದೆ.



ತಿರುಪತಿ ನಾಯಕ ಕಳೆದ ಸುಮಾರು 10 ವರ್ಷಗಳಿಂದ ವಿದ್ಯಾರ್ಥಿಗಳನ್ನು ಈಜು, ಕುಸ್ತಿ, ಜಂಪ್ ರೋಪ್, ವಾಲಿಬಾಲ್, ಕರಾಟೆ, ಟೆನ್ನಿಸ್ ವಾಲಿಬಾಲ್, ಥ್ರೋ ಬಾಲ್, ಟೆನ್ನಿಕ್ವಾಯಿಟ್, ಕಬ್ಬಡಿ ಹೀಗೆ ಇನ್ನೂ ಹಲವಾರು ಕ್ರೀಡೆಗಳನ್ನು ಜಿಲ್ಲಾ, ಹಾಗೂ ರಾಜ್ಯ ಮತ್ತು ರಾಷ್ಟ್ರ ಮಟ್ಟಕ್ಕೆ ಆಯ್ಕೆಯಾಗುವಲ್ಲಿ ಇವರ ಪಾತ್ರ ಬಹುದೊಡ್ಡದು ಶ್ರಮವಿದೆ. ಇವರ ಶಿಸ್ತು,ಗ್ರಾಮೀಣ ಪ್ರದೇಶದಲ್ಲಿ ಇರುವ ವಿದ್ಯಾರ್ಥಿಗಳಿಗೆ ಉತ್ತಮ ವಾಗಿ ಕ್ರೀಡಾ ತರಬೇತಿ ನೀಡುವುದರ ಜೊತೆಯಲ್ಲಿ ಅವರನ್ನು ತಯಾರು ಮಾಡಿದ್ದಾರೆ ಇವರ ಉತ್ತಮ ಕಾರ್ಯಕ್ಕೆ ರಾಜ್ಯ ಮಟ್ಟದ ಪ್ರಶಸ್ತಿ ಬಂದಿದೆ. ಈ ಪ್ರಶಸ್ತಿ ಬಳ್ಳಾರಿಯ ಡಾ.ಜೋಳದ ರಾಶಿ ದೊಡ್ಡನಗೌಡ ರಂಗ ಮಂದಿರದಲ್ಲಿ ಮಾ.8ರಂದು ಪ್ರಶಸ್ತಿ ವಿತರಣಾ ಕಾರ್ಯಕ್ರಮ ನಡೆಯಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಾ.8ಕ್ಕೆ ಹಿಂದೂ ಸಮಾಜೋತ್ಸವ

ಕುಕನೂರ: ಹಿಂದೂಗಳನ್ನು ಒಗ್ಗೂಡಿಸುವ ಉದ್ದೇಶದಿಂದ ಯಾವುದೇ ಜಾತಿ, ಭೇದವಿಲ್ಲದೆ ಹಿಂದೂ ಸಮಾಜೋತ್ಸವ ಕಾರ್ಯಕ್ರಮ ಆಯೋಜನೆ ಮಾಡಲಾಗಿದೆ ಎಂದು ನಿಕಟಪೂರ್ವ ಬಿಜೆಪಿ ಜಿಲ್ಲಾ ಅಧ್ಯಕ್ಷ ನವೀನಕುಮಾರ್ ಗುಳಗಣ್ಣವರ್ ಹೇಳಿದರು.

ತಾಲೂಕಿನ ಇಟಗಿ ಹೋಬಳಿ ಮಟ್ಟದ ಹಿಂದೂ ಸಮಾಜೋತ್ಸವ ಕಾರ್ಯಕ್ರಮದ ಪೂರ್ವಭಾವಿ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಅವರು ಹಿಂದೂಗಳನ್ನು ಒಗ್ಗೂಡಿಸುವ ಉದ್ದೇಶದಿಂದ ಯಾವುದೇ ಜಾತಿ, ಭೇದವಿಲ್ಲದೆ ಗ್ರಾಮೀಣಮಟ್ಟದಲ್ಲಿ ಹಿಂದೂಗಳನ್ನು ಒಗ್ಗೂಡಿಸುವ ಹಿಂದೂ ಸಮಾಜೋತ್ಸವ ಕಾರ್ಯಕ್ರಮವನ್ನು ಮಾ.8ರಂದು ನಡೆಯಲಿದ್ದು ಗ್ರಾಮೀಣ ಮಟ್ಟದ ಎಲ್ಲಾ ಹಿಂದೂಗಳು ಭಾಗಿಯಾಗಿ ಯಶಸ್ವಿಗೊಳಿಸಲು ಮುಂದಾಗಬೇಕು ಹಾಗೆ ಗ್ರಾಮದ ಹಿರಿಯರು ಹಾಗೂ ಎಲ್ಲಾ ನಾಗರಿಕ ವರ್ಗದ ಒಪ್ಪಿಗೆಯ ಮೇರೆಗೆ ಹುಲಿಗೆಮ್ಮ ಬಾಳಪ್ಪ ಹುರಕಣ್ಣವರ್ ಅವರನ್ನು ಸಮ್ಮೇಳನದ ಅಧ್ಯಕ್ಷರನ್ನಾಗಿ ನೇಮಿಸಿ, ಅವರ ಮನೆಗೆ ತೆರಳಿ ಅಧಿಕೃತ ಆಹ್ವಾನವನ್ನು ಈಗಾಗಲೇ



ನೀಡಲಾಗಿದೆ ಎಂದು ಹೇಳಿದರು.

ಭೀಮರಾವ್ ದೇಶಪಾಂಡೆ, ಜಿ.ರಾಘವೇಂದ್ರ ದೇಸಯಿ, ಜಿ.ಬಿ.ಎಂ. ಹಳ್ಳಿ, ಸಿದ್ದಪ್ಪ ಸಜ್ಜನ, ಶ್ರೀಕಾಂತ್ ಪೂಜಾರ, ಅಂದಾನಪ್ಪ ಅಂಗಡಿ ಶಿವಯೋಗಿ ಕಾಸಿಮಠ, ಸೋಮಣ್ಣ ಬಡಿಗೇರ್, ಮಹೇಶ್ ದೊಡ್ಡಮನಿ, ಪ್ರಭು ಹಳ್ಳಿ, ಲಕ್ಷ್ಮಣ್ಣ ಮ್ಯಾಗೇರಿ, ಮಹೇಶ್ ಹಿರೇಮನಿ, ಮಾಂತೇಶ ಕೌದಿ,ಯಲ್ಲಮ್ಮ ಕೌದಿ, ಗೌರಮ್ಮ ಗಿರಡ್ಡಿ, ಹಾಗೂ ಗ್ರಾಮದ, ಗುರುಹಿರಿಯರು ಯುವಕ ಮಿತ್ರರು ಉಪಸ್ಥಿತರಿದ್ದರು.

ಕಿರುಸುದ್ದಿ

ಆರ್ಥಿಕ ಸ್ವಾವಲಂಬನೆಗೆ ಹೈನುಗಾರಿಕೆ ಸಹಕಾರಿ

ಕುರುಗೋಡು: ಸಮೀಪದ ಶ್ರೀರಾಮಚಂದ್ರ ಪುರ ಕ್ಯಾಂಪಿನಲ್ಲಿ ಗುರುವಾರ ಪಶುಪಾಲನಾ ಹಾಗೂ ವೈದ್ಯಕೀಯ ಸೇವಾ ಇಲಾಖೆ ಮಿಶ್ರ ತಳಿ ಹಸುಗಳ ಅಧಿಕ ಹಾಲು ಇಳುವರಿ ಸ್ಪರ್ಧೆ ಕಾರ್ಯಕ್ರಮ ಜರುಗಿತು.

ಪಶು ವೈದ್ಯಾಧಿಕಾರಿ ಕೆ.ಯು.ಬಸವರಾಜ ಮಾತನಾಡಿ, ಸರ್ಕಾರದ ವಿವಿಧ ಯೋಜನೆಯನ್ನು ಸದ್ಬಳಕೆ ಮಾಡಿ ಕೊಂಡು ಮಹಿಳೆ ಆರ್ಥಿಕ ಸದೃಢ ನೆಲೆಯಾಗಬೇಕು. ರಾಸುಗಳಿಗೆ ಕೆಚ್ಚಲು ಬಾಹು ಬಂದಾಗ ಯವುದೇ ಆತಂಕಕ್ಕೆ ಒಳಗಾಗದೆ ಸಮೀಪದ ಪಶು ವೈದ್ಯಾಧಿಕಾರಿ ಆಸ್ಪತ್ರೆ ಸಂಪರ್ಕಿಸಬೇಕು. ಅಮೃತ ಯೋಜನೆ ಅಡಿಯಲ್ಲಿ ಸಮಯ ಅನುಸಾರವಾಗಿ ರಾಶುಗಳಿಗೆ ಜಂತು ನಾಶಕ, ಲಸಿಕೆ ಹಾಕಿಸಿ, ಇತರೆ ಯೋಜನೆ ಸದ್ಬಳಕೆ ಮಾಡಿಕೊಳ್ಳಿ ಎಂದರು.

ಪ್ರಥಮ ಎಂ.ಪಾವನಿ, ದ್ವಿತೀಯ ಲಕ್ಷ್ಮೀ, ತೃತೀಯ ಜಿ.ದೇವಿ ಅವರಿಗೆ ಹಾಲಿನ ಕ್ಯಾನ್ ಪರಿಕರುಗಳು ವಿತರಿಸಲಾಯಿತು. 18 ಮಹಿಳೆಯರಿಗೆ ಸಮಾಧಾನಕರ ಬಹುಮಾನ ವಿತರಸಲಾಯಿತು. ಹಾಲು ಉತ್ಪಾದಕರ ಸಂಘದ ಅಧ್ಯಕ್ಷೆ ಎ.ರಾಧಾ, ಕಾರ್ಯದರ್ಶಿ ಪ್ರಭಾವತಿ, ಮುಖಂಡರಾದ ಚಂದ್ರಶೇಖರ್, ನಾಗೇಶ್ವರಾವು, ಹಿರಿಯ ಪಶುವೈದ್ಯಕೀಯ ಪರೀಕ್ಷಕ ಶಿವಪ್ಪ ದೇವಿಕಿ, ಮುಖ್ಯ ಪಶು ವೈದ್ಯಾಧಿಕಾರಿ ಪ್ರಧೀಪಕುಮಾರ್, ಪರೀಕ್ಷಕ ಕೆ.ದೇವಂದ್ರಪ್ಪ, ಟಿ.ರಾಮಚಂದ್ರಪ್ಪ, ಡಿ.ದರ್ಜೆಯ ವಿನಾಯಕ, ರವಿ, ಮೈತ್ರಿ ಕಾರ್ಯಕರ್ತೆ ಎಲ್.ರಾಕೇಶ, ಪಶುಸಖಿ ರೋಜಾ, ಸಂಘದ ಕಾರ್ಯದರ್ಶಿ ಮುರಳಿ ಇದ್ದರು.

ರಸ್ತೆ ನಿರ್ಮಾಣ ಕಾಮಗಾರಿಗೆ ಶಾಸಕ ಚಾಲನೆ



ಕುರುಗೋಡು: ಸಮೀಪದ ಶ್ರೀರಾಮಚಂದ್ರಪುರ ಕ್ಯಾಂಪಿಗೆ ರಸ್ತೆ ನಿರ್ಮಾಣಕ್ಕೆ ಕಾಮಗಾರಿಗೆ ಕಂಪ್ಲಿ ಶಾಸಕ ಜೆ.ಎನ್.ಗಣೇಶ ಚಾಲನೆ ನೀಡಿದರು.

ಅವರು ಮಾತನಾಡಿ ಮುಖ್ಯಮಂತ್ರಿಗಳ 2025-26 ಸಾಲಿನ ರೂ. 3 ಕೋಟಿ ವೆಚ್ಚದ ವಿಶೇಷ ಅನುದಾನ ಅಡಿಯಲ್ಲಿ ಚಾಲನೆ ನೀಡಿ, ಬಹು ವರ್ಷಗಳಿಂದ ಈ ಭಾಗದಲ್ಲಿನ ಕ್ಯಾಂಪ್‌ನ ನಿತ್ಯ ಸಂಚರಿಸಲು ಸಮಸ್ಯೆಯಾಗಿದ್ದು, ಗುತ್ತಿಗೆದಾರರು ಉತ್ತಮ ರಸ್ತೆ ನಿರ್ಮಾಣ ಮಾಡಬೇಕು ಎಂದರು. ರೈತರು ಟ್ರ್ಯಾಕ್ಟರ್ ವಿಲ್ ಬಳಸದೆ ಸದುಪಯೋಗ ಬಳಿಸಿಕೊಳ್ಳಲು ಸಲಹೆ ನೀಡಿದರು.ನಂತರ 1ನೇ ವಾರ್ಡ್ ಸರ್ಕಾರಿ ಶಾಲೆಗೆ ಭೇಟಿ ನೀಡಿ, ವಾಸ್ತವ ಬಗ್ಗೆ ಗಮನಿಸಲಾಗಿತು. ಮುಂದಿನ ದಿನಗಳಲ್ಲಿ ಗ್ರಾಮ ಹಾವಿನಹಾಳ್ ರಸ್ತೆ ಮುಂದಿನ ಕ್ಷೇತ್ರದ ಅಬಿವೃದ್ಧಿಗೆ ಜನಪರ ಕಾಮಗಾರಿ ಕೈಗೆತ್ತಿಗೊಳ್ಳಲಾಗುವುದು ಎಂದರು. ಮುಖಂಡರಾದ ಎನ್.ಸುಗಪ್ಪ, ಎ.ರಾಮಚಂದ್ರಪ್ಪ, ಬಿ. ಸಾದಶಿವಪ್ಪ, ವೈ. ರಾಘವೇಂದ್ರರೆಡ್ಡಿ, ಎಂ.ವೆಂಕಟರಾಜು, ಸುಬ್ಬರಾಜು, ಸಿ.ಎಚ್.ರಾಮರಾಜು, ತಿರುಪತಿಯ್ಯ, ಶ್ರೀನಿವಾಸ, ಇಂದಗೂರು ನರಸಿಂಹರಾಜು, ರಾಮಕೃಷ್ಣರಾಜು, ಸಿ.ಚ್ .ನಾಗರಾಜು, ಶಿವರಾಮರಾಜು, ಸಿ.ಎಚ್.ಸುಬ್ಬರಾಜು, ಜಡೆಪ್ಪ, ರಾಮಾಂಜಿನಿ, ಎಚ್.ಗಾದಿಲಿಂಗಪ್ಪ ಇದ್ದರು.

ಮಾ.10ಕ್ಕೆ 'ಭೀಮ ಗಾಯನ'

ಕಲಬುರಗಿ: ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಮತ್ತು ಕಲಬುರಗಿ ಜಿಲ್ಲಾಡಳಿತ ಸಂಯುಕ್ತಾಶ್ರಯದಲ್ಲಿ ಇದೇ ಮಾರ್ಚ್ 10 (ಮಂಗಳವಾರ) ರಂದು ಬೆಳಿಗ್ಗೆ 11.30ಕ್ಕೆ ನಗರದ ಡಾ.ಎಸ್.ಎಂ.ಪಂಡಿತ್ ರಂಗಮಂದಿರದಲ್ಲಿ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಸಾಮಾಜಿಕ ಮಹಾನ್ ಚಿಂತನೆಗೆ ಗಾನ ನಮನ ಅರ್ಪಿಸುವ 'ಭೀಮ ಗಾಯನ' ಆಯೋಜಿಸಲಾಗಿದೆ. ಡಾ.ಬಾಬಾಸಾಹೇಬ್ ಅಂಬೇಡ್ಕರ್ ಅವರ ಜೀವನ ಸಾಧನೆ, ಸಮಾನತೆಯ ಹೋರಾಟ, ಅಸ್ಪೃಶ್ಯತೆ ನಿರ್ಮೂಲನೆ, ಸ್ತ್ರೀಸಮಾನತೆ ಕುರಿತ ಗೀತೆಗಳನ್ನೊಳಗೊಂಡ ಸಮಾನತೆಯ ಸ್ವರ ಸಂಭ್ರಮ ಇದಾಗಿದೆ. ಭೀಮನ ಆದರ್ಶಗಳನ್ನು ಸ್ವರಗಳಲ್ಲಿ ಜೀವಂತಗೊಳಿಸುವ ಜಾಗೃತಿ, ಆತ್ಮಗೌರವ ಮತ್ತು ಸಮಾನತೆಯ ಸಂಗೀತ ಕಾರ್ಯಕ್ರಮವೇ ಭೀಮ ಗಾಯನವಾಗಿದೆ.ಚಿಕ್ಕಬಳ್ಳಾಪುರದ ಸಿದ್ಧಾರ್ಥ ಯುವ ಕ್ರೀಡಾ ಸಾಂಸ್ಕೃತಿಕ ಅಭಿವೃದ್ಧಿ ಸಂಘವು ಭೀಮ ಗಾಯನವನ್ನು ಪ್ರಸ್ತುತಪಡಿಸಲಿದೆ. ಡಾ.ಬಿ.ಆರ್. ಅಂಬೇಡ್ಕರ್ ಅವರು ಭೇಟಿ ನೀಡಿರುವ ರಾಜ್ಯದ ಪ್ರಮುಖ ಸ್ಥಳಗಳ ಪೈಕಿ ಆಯ್ದ 10 ಸ್ಥಳಗಳಲ್ಲಿ ಇಲಾಖೆಯಿಂದ ಭೀಮ ಗಾಯನ ಕಾರ್ಯಕ್ರಮ ಆಯೋಜಿಸಲಾಗಿದೆ. ಅದರಂತೆ ಕಲಬುರಗಿಯ ಜಿಲ್ಲೆಯ ವಾಡಿ ಪಟ್ಟಣಕ್ಕೆ ಅಂಬೇಡ್ಕರ್ ಭೇಟಿ ನೀಡಿದ ಸ್ಮರಣಾರ್ಥವಾಗಿ ಕಲಬುರಗಿ ಜಿಲ್ಲೆಯಲ್ಲಿಯೂ ಈ ಕಾರ್ಯಕ್ರಮ ಆಯೋಜಿಸಿದೆ ಎಂದು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಉಪನಿರ್ದೇಶಕ ಜಡಿಯಪ್ಪ ಗೆದ್ಲಗಟ್ಟೆ ತಿಳಿಸಿದ್ದಾರೆ.



ಕುರುಗೋಡು: ಸಮೀಪದ ಶ್ರೀರಾಮಚಂದ್ರ ಪುರ ಕ್ಯಾಂಪಿನಲ್ಲಿ ಗುರುವಾರ ಪಶುಪಾಲನಾ ಹಾಗೂ ವೈದ್ಯಕೀಯ ಸೇವಾ ಇಲಾಖೆ ಮಿಶ್ರ ತಳಿ ಹಸುಗಳ ಅಧಿಕ ಹಾಲು ಇಳುವರಿ ಸ್ಪರ್ಧೆ ಕಾರ್ಯಕ್ರಮ ಜರುಗಿತು. ಪಶು ವೈದ್ಯಾಧಿಕಾರಿ ಕೆ.ಯು.ಬಸವರಾಜ,ಹಾಲು ಉತ್ಪಾದಕರ ಸಂಘದ ಅಧ್ಯಕ್ಷೆ ಎ.ರಾಧಾ, ಕಾರ್ಯದರ್ಶಿ ಪ್ರಭಾವತಿ, ಮುಖಂಡರಾದ ಚಂದ್ರಶೇಖರ್, ನಾಗೇಶ್ವರಾವು, ಹಿರಿಯ ಪಶುವೈದ್ಯಕೀಯ ಪರೀಕ್ಷಕ ಶಿವಪ್ಪ ದೇವಿಕಿ, ಮುಖ್ಯ ಪಶು ವೈದ್ಯಾಧಿಕಾರಿ ಪ್ರಧೀಪಕುಮಾರ್, ಪರೀಕ್ಷಕ ಕೆ.ದೇವಂದ್ರಪ್ಪ, ಟಿ.ರಾಮಚಂದ್ರಪ್ಪ, ಡಿ.ದರ್ಜೆಯ ವಿನಾಯಕ, ಮತ್ತಿತರರಿದ್ದರು.

ಖಾಲಿಯಿರುವ ಹುದ್ದೆಗಳ ಭರ್ತಿಗೆ ಆಗ್ರಹ

ವಿಜಯನಗರ: ಕೇಂದ್ರ ಮತ್ತು ರಾಜ್ಯ ಸರ್ಕಾರಗಳಲ್ಲಿ ಖಾಲಿ ಇರುವ ಎಲ್ಲ ಹುದ್ದೆಗಳನ್ನು ತಕ್ಷಣವೇ ಭರ್ತಿ ಮಾಡಬೇಕು ಮತ್ತು ಹೊಸ ಉದ್ಯೋಗಗಳನ್ನು ಸೃಷ್ಟಿಸಬೇಕು ಎಂದು ಎಐಡಿವೈಓ ಒತ್ತಾಯಿಸಿದೆ.

ಈ ಕುರಿತು ಎಐಡಿವೈಓ ಪ್ರಮುಖರು ಗುರುವಾರ ಜಿಲ್ಲಾಧಿಕಾರಿ ಮೂಲಕ ಸಿಎಂ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಿ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳಲ್ಲಿ ಲಕ್ಷಾಂತರ ಹುದ್ದೆಗಳು ಖಾಲಿಯಿವೆ. ಕಳೆದೊಂದು ದಶಕದಿಂದ ಕಾಲಕಾಲಕ್ಕೆ ನೇಮಕಾತಿ ನಡೆಯದೇ, ನಿರುದ್ಯೋಗ ಸಮಸ್ಯೆ ತೀವ್ರವಾಗಿದೆ. ಎಲ್ಲಾ ನೇಮಕಾತಿಗಳ ವಯೋಮಿತಿಯಲ್ಲಿ ಕನಿಷ್ಠ 5 ವರ್ಷಗಳ ಸಡಿಲಿಕೆ ನೀಡಬೇಕು. ನೇಮಕಾತಿ ಪ್ರಕ್ರಿಯೆಯಲ್ಲಿ ಸಂಪೂರ್ಣ ಪಾರದರ್ಶಕತೆ ಇರಬೇಕು. ಎಲ್ಲ ತೆರನಾದ ಪರೀಕ್ಷಾ ಅಕ್ರಮಗಳನ್ನು ತಡೆಗಟ್ಟಬೇಕು. ಕೆಪಿಎಸ್‌ಸಿ ಯಲ್ಲಿನ ಅಕ್ರಮ ತಡೆಗಟ್ಟಲು ರಾಜ್ಯ ಸರ್ಕಾರ ಹೋಟಾ ಸಮಿತಿ ಶಿಫಾರಸುಗಳನ್ನು ಜಾರಿಗೊಳಿಸಬೇಕು. ಗುತ್ತಿಗೆ ವ್ಯವಸ್ಥೆಯನ್ನು ರದ್ದುಗೊಳಿಸಬೇಕು ಮತ್ತು ಎಲ್ಲಾ ಹುದ್ದೆಗಳಿಗೂ ಖಾಯಂ ನೇಮಕಾತಿ ಮಾಡಬೇಕು. ದೇಶಾದ್ಯಂತ ಗಿಗ್ ಕಾರ್ಮಿಕರಿಗೆ ಕಾರ್ಮಿಕರೆಂದು ಪರಿಗಣಿಸಿ ಮತ್ತು ಕನಿಷ್ಠ ವೇತನ ಮತ್ತು ಸಾಮಾಜಿಕ ಭದ್ರತೆಯನ್ನು ಖಚಿತಪಡಿಸಬೇಕು. ನೇಮಕಾತಿಗಳಲ್ಲಿ ದುಬಾರಿ ಪರೀಕ್ಷಾ ಶುಲ್ಕ ಕೈಬಿಡಬೇಕು ಎಂದು ಮನವಿ ಮಾಡಿದರು.

ಎಐಡಿವೈಓ ಯುವಜನ ಸಂಘಟನೆಯ ಪ್ರಮುಖರಾದ ಚಲುವಾದಿಕೇರಿ ಸಮೀರ್, ಬಸವನದುರ್ಗ ಅರವಿಂದ್, ಪಾಲಾಕ್ಷ ಹಡಗಲಿ, ಪ್ರಕಾಶ್ ನಾಯಕ್, ಬಸವನ ದುರ್ಗದ ಶ್ರೀಹರ್ಷಾ ಇದ್ದರು.



ವಿಜಯನಗರ: ಕೇಂದ್ರ ಮತ್ತು ರಾಜ್ಯ ಸರ್ಕಾರಗಳಲ್ಲಿ ಖಾಲಿ ಇರುವ ಎಲ್ಲ ಹುದ್ದೆಗಳನ್ನು ತಕ್ಷಣವೇ ಭರ್ತಿ ಮಾಡಬೇಕು ಮತ್ತು ಹೊಸ ಉದ್ಯೋಗಗಳನ್ನು ಸೃಷ್ಟಿಸಬೇಕು ಎಂದು ಎಐಡಿವೈಓ ಒತ್ತಾಯಿಸಿದೆ.

ಡಿಎಲ್‌ಆರ್‌ಸಿ-ಡಿಸಿಸಿ ಸಭೆ | ಸಂಸದ ಈ.ತುಕಾರಾಮ್ ಸೂಚನೆ

ಸಮನ್ವಯತೆಯಿಂದ ಕೆಲಸ ಮಾಡಿ

ಬಳ್ಳಾರಿ: ಕೇಂದ್ರ ಮತ್ತು ರಾಜ್ಯ ಸರ್ಕಾರದ ಬ್ಯಾಂಕ್ ವಲಯ ಯೋಜನೆಗಳನ್ನು ಜನರಿಗೆ ತಲುಪಿಸಲು ಸರ್ಕಾರಿ ಅಧಿಕಾರಿಗಳು ಮತ್ತು ಬ್ಯಾಂಕ್ ಅಧಿಕಾರಿಗಳು ಸಮನ್ವಯತೆಯಿಂದ ಕಾರ್ಯನಿರ್ವಹಿಸಬೇಕು ಎಂದು ಸಂಸದ ಈ.ತುಕಾರಾಮ್ ಹೇಳಿದರು.

ನಗರದ ಜಿಪಂನ ಅಬ್ದುಲ್ ನಜೀರ್ ಸಾಬ್ ಸಭಾಂಗಣದಲ್ಲಿ ಬಳ್ಳಾರಿ ಜಿಲ್ಲಾ ಮಟ್ಟದ ಲೀಡ್ ಬ್ಯಾಂಕ್‌ನ ಜಿಲ್ಲಾ ಮಟ್ಟದ ಪರಿಶೀಲನಾ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಸರ್ಕಾರಿ ಅಧಿಕಾರಿಗಳು ಮತ್ತು ಬ್ಯಾಂಕ್ ಅಧಿಕಾರಿಗಳ ನಡುವೆ ಸಮನ್ವಯತೆ ಇಲ್ಲ, ಇದರಿಂದ ಸರ್ಕಾರದ ಯೋಜನೆಗಳು ಸಫಲತೆ ಕಾಣುತ್ತಿಲ್ಲ ಎಂದು ಕಳವಳ ವ್ಯಕ್ತಪಡಿಸಿದ ಅವರು, ಅಧಿಕಾರಿಗಳು ಮಾನವೀಯತೆಯಿಂದ ಕೆಲಸ ಮಾಡಬೇಕು ಎಂದು ತಿಳಿಸಿದರು.

ಬಡಜನರು ಆರ್ಥಿಕವಾಗಿ ಸ್ವಾವಲಂಬನೆ ಬದುಕು ನಡೆಸಲು ಬ್ಯಾಂಕ್‌ಗಳು ಸಹಕಾರಿಯಾಗಬೇಕು. ಜನರು ನೆರವಿಗಾಗಿ ಸಲ್ಲಿಸುವ ಲೋನ್ ಅರ್ಜಿಗಳನ್ನು ಸಕಾಲದಲ್ಲಿ ಇತ್ಯರ್ಥಗೊಳಿಸುವ ಮೂಲಕ ಬಡಜನರ ಕಣ್ಣೊರೆಸುವ ಕೆಲಸ ಮಾಡಬೇಕು ಎಂದು ಸಂಸದರು ಸೂಚಿಸಿದರು.

ಸರ್ಕಾರದಿಂದ ಜಾರಿಗೊಂಡಿರುವ ವಿವಿಧ ಜನಪರ ಯೋಜನೆಗಳ ಆರ್ಥಿಕ ಸೌಲಭ್ಯವನ್ನು ಬ್ಯಾಂಕ್‌ಗಳ ಮುಖಾಂತರ ನಿಗದಿತ ಕಾಲಮಿತಿಯಲ್ಲಿಯೇ ದೊರಕಿಸಿದರೆ ಫಲಾನುಭವಿಗಳಿಗೆ ಹೆಚ್ಚಿನ ಅನುಕೂಲವಾಗಲಿದೆ ಎಂದರು.

ಬ್ಯಾಂಕ್ ಅಧಿಕಾರಿಗಳು ಪರಿಣಾಮಕಾರಿ ಅಭಿವೃದ್ಧಿಗಾಗಿ ಕ್ರಿಯಾಶೀಲರಾಗಿ ಕೆಲಸ ಮಾಡಬೇಕು. ವಿಶೇಷ ಆಸಕ್ತಿಯಿಂದ ಕೆಲಸ ನಿರ್ವಹಿಸಿದರೆ ಯೋಜನೆಗಳ ಫಲಾನುಭವಿಗಳಿಗೆ ಸೌಲಭ್ಯ ಒದಗಿಸಲು ಸಾಧ್ಯವಾಗುತ್ತದೆ ಎಂದು ಹೇಳಿದರು.

ಜಿಪಂ ಸಿಇಒ ಮುಹಮ್ಮದ್ ಹಾರೀಸ್ ಸುಮೇರ್ ಮಾತನಾಡಿ, ಬ್ಯಾಂಕ್‌ಗಳು ಸಾಮಾನ್ಯ ಜನರ ಬೆನ್ನೆಲುಬಾಗಬೇಕು. ಬ್ಯಾಂಕ್‌ಗಳು ನೀಡುವ ಲೋನ್‌ಗಳು ಉಪಕಾರ ಮತ್ತು ವ್ಯವಹಾರವೇ ಹೊರತು, ದಾನಧರ್ಮವಲ್ಲ; ಈ ಅಂಶವನ್ನು ಬ್ಯಾಂಕ್ ಅಧಿಕಾರಿಗಳು ಮನವರಿಕೆ ಮಾಡಿಕೊಳ್ಳಬೇಕು ಎಂದು ಹೇಳಿದರು.

ಇದೇ ವೇಳೆ ಉದ್ಯೋಗಿನಿ, ಪಿಎಂಇಜಿಪಿ, ಪಿಎಂ ಸ್ವನಿಧಿ ಸೇರಿದಂತೆ ವಿವಿಧ ಯೋಜನೆಗಳ ಪ್ರಗತಿ ಪರಿಶೀಲನೆ ಸಭೆ ನಡೆಸಿ ಮಾಹಿತಿ ಪಡೆದುಕೊಂಡರು. ಸಭೆಗೂ ಮುನ್ನ ಪ್ರಧಾನಮಂತ್ರಿ ಜೀವನ್ ಜ್ಯೋತಿ ಬಿಮಾ ಯೋಜನೆ ಮತ್ತು ಪ್ರಧಾನ ಮಂತ್ರಿ ಸುರಕ್ಷಾ ಬಿಮಾ ಯೋಜನೆಯಡಿ ವಿಮೆ ಹೊಂದಿದ್ದ ಇಬ್ಬರು ವಿಮಾದಾರರ ನಾಮನಿರ್ದೇಶಿತರಿಗೆ ತಲಾ 2 ಲಕ್ಷ ರೂ. ಚೆಕ್‌ಗಳನ್ನು ಹಸ್ತಾಂತರಿಸಿದರು.

ಜಿಪಂ ಉಪಕಾರ್ಯದರ್ಶಿ ಶಶಿಕಾಂತ್ ಶಿವಪುರೆ, ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಬೆಂಗಳೂರು ಎಜಿಎಂ ಪ್ರಭಾಕರ್.ಆರ್, ಕೆನರಾ ಬ್ಯಾಂಕ್ ನ ಪ್ರಾದೇಶಿಕ ವ್ಯವಸ್ಥಾಪಕ ಅರುಣ್ ಕುಮಾರ್ ಎ.ಜೆ., ಲೀಡ್ ಬ್ಯಾಂಕ್ ವ್ಯವಸ್ಥಾಪಕ ಗಿರೀಶ್ ವಿ.ಕುಲಕರ್ಣಿ, ನಬಾರ್ಡ್‌ನ ಎಜಿಎಂ ಯುವರಾಜ ಕುಮಾರ್ ಆರ್.ಎಸ್ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಇದ್ದರು.



> ಲೋನ್ ಮಂಜೂರು ಮಾಡದ ಬ್ಯಾಂಕ್‌ಗಳಿಗೆ ನೋಟಿಸ್ ಜಾರಿ ಮಾಡುವಂತೆ ಮತ್ತು ಅತೃಪ್ತಿಕರವಾಗಿ ಕಾರ್ಯನಿರ್ವಹಿಸುತ್ತಿರುವ ಬ್ಯಾಂಕ್‌ಗಳ ಕುರಿತು ಕೇಂದ್ರ ಆರ್ಥಿಕ ಇಲಾಖೆಗೆ ಪತ್ರ ಬರೆಯಬೇಕು. ಕೇಂದ್ರ ಮತ್ತು ರಾಜ್ಯ ಸರ್ಕಾರದ ಯೋಜನೆಗಳ ಕುರಿತ ಜನಸಾಮಾನ್ಯರಿಗೆ ಮಾಹಿತಿ ನೀಡಲು ಸಿಎಸ್ ಆರ್ ಅನುದಾನದಡಿ ಎಲ್‌ಇಡಿ ವಾಹನ ಖರೀದಿಸಬೇಕು.
>
> ■ ಈ.ತುಕಾರಾಮ್, ಸಂಸದ

ಉಚಿತ ಕಣ್ಣಿನ ಪೊರೆ ಶಸ್ತ್ರಚಿಕಿತ್ಸೆ

ಬಳ್ಳಾರಿ: ಸಂಡೂರು ತಾಲೂಕಿನ ತೋರಣಗಲ್ಲು ಜಿಂದಾಲ್ ಸಂಜೀವನಿ ಆಸ್ಪತ್ರೆ ಮತ್ತು ಜೆಎಸ್‌ಡಬ್ಲ್ಯೂ ಫೌಂಡೇಶನ್ ಸಹಯೋಗದ ದೃಷ್ಟಿ ಯೋಜನೆಯಡಿ ಒಟ್ಟು 250 ಜನರಿಗೆ ಉಚಿತ ಕಣ್ಣಿನ ಪೊರೆ ಶಸ್ತ್ರಚಿಕಿತ್ಸೆ ನಡೆಸಲಾಯಿತು.

ಗ್ರಾಮೀಣ ಪ್ರದೇಶಗಳಲ್ಲಿ ಆರೋಗ್ಯ ಹಾಗೂ ದೃಷ್ಟಿ ತಪಾಸಣಾ ಶಿಬಿರಗಳನ್ನು ಆಯೋಜಿಸಿ ಶಿಫಾರಸು ಕಾರ್ಡ್ ಪಡೆದ ರೋಗಿಗಳಿಗೆ ಆಸ್ಪತ್ರೆಯಲ್ಲಿ ಆಹಾರ, ವಸತಿ ಸೇರಿದಂತೆ ಎಲ್ಲ ಚಿಕಿತ್ಸಾ ಸೌಲಭ್ಯಗಳನ್ನು ಒದಗಿಸಲಾಯಿತು. ಕಣ್ಣಿನ ಪೊರೆ ಚಿಕಿತ್ಸೆಗೆ ಆಸ್ಪತ್ರೆಯಲ್ಲಿ ಅತ್ಯಾಧುನಿಕ ಎಬಿ ಸ್ಕ್ಯಾನ್ ತಂತ್ರಜ್ಞಾನವನ್ನು ಬಳಸಲಾಗುತ್ತಿದ್ದು, ಇದು ಶೇ.100ರಷ್ಟು ನಿಖರ ಫಲಿತಾಂಶಗಳನ್ನು ನೀಡುತ್ತದೆ. ಚಿಕಿತ್ಸೆ ಪಡೆದ ಎಲ್ಲ ರೋಗಿಗಳು ಬಡತನ ರೇಖೆಗಿಂತ ಕೆಳಗಿನ (ಬಿಪಿಎಲ್) ಕುಟುಂಬಗಳಿಗೆ ಸೇರಿದವರಾಗಿದ್ದು, ಚಿಕಿತ್ಸೆಯ ಸಂಪೂರ್ಣ ವೆಚ್ಚವನ್ನು ಜೆಎಸ್ ಡಬ್ಲ್ಯೂ ಫೌಂಡೇಶನ್ ಭರಿಸಿದೆ. ಎಲ್ಲ ಶಸ್ತ್ರ ಚಿಕಿತ್ಸೆಗಳನ್ನು ನೇತ್ರ ತಜ್ಞ ಡಾಕ್ಟರ್ ಭರತ್ ವಾರಕನಹಳ್ಳಿ ಮತ್ತು ತಂಡ ನೆರವೇರಿಸಿದ್ದು ಚಿಕಿತ್ಸೆ ಪಡೆದ ಕಂದಕೂರು ಗ್ರಾಮದ ಪವಾಡೆಪ್ಪ ಮತ್ತು ಈರಮ್ಮ ಹಾಗು ಇತರರು ಸಂತಸ ವ್ಯಕ್ತಪಡಿಸಿ, ನಾವು ದಿನಗೂಲಿ ಮಾಡಿ ಜೀವನ ನಡೆಸುತ್ತಿದ್ದು, ಹಣದ ಕೊರತೆಯಿಂದ ಕಣ್ಣಿನ ಪೊರೆ ಚಿಕಿತ್ಸೆ ಮಾಡಿಸಲಾಗಲಿಲ್ಲ, ಜೆಎಸ್‌ಡಬ್ಲ್ಯೂ ನಮಗೆ ಉಚಿತವಾಗಿ ಚಿಕಿತ್ಸೆ ಒದಗಿಸಿದ್ದು ಆದಷ್ಟು ಬೇಗ ಚೇತರಿಸಿಕೊಂಡು ಮತ್ತೆ ಕೆಲಸಕ್ಕೆ ಹೋಗುವೆ ಎಂದು ಸಂತಸ ವ್ಯಕಪಡಿಸಿದರು.

ಗ್ರಾಮೀಣಪ್ರದೇಶಗಳಲ್ಲಿಜನರಿಗೆದೃಷ್ಟಿ ಮರುಕಳಿಸಿ ಅವರ ಜೀವನಮಟ್ಟವನ್ನು ಉತ್ತಮಗೊಳಿಸಲು ಜಿಂದಾಲ್ ಸಂಜೀವಿನಿ ಆಸ್ಪತ್ರೆ ಹಾಗೂ ಜೆಎಸ್ ಡಬ್ಲ್ಯೂ ಕಾರ್ಯವು ಸಾರ್ವಜನಿಕರಿಂದ ಮೆಚ್ಚುಗೆ ಪಡೆದಿದೆ. ಸಮಾರೋಪ ಸಮಾರಂಭದಲ್ಲಿ ವೈದ್ಯಕೀಯ ಸೇವೆಗಳ ಮುಖ್ಯಸ್ಥ ಡಾ.ಸನ್ನಿ ಈಯಪ್ಪನ್, ಜೆಎಸ್ ಡಬ್ಲ್ಯೂ ಫೌಂಡೇಶನ್ ದಕ್ಷಿಣ ವಲಯ ಮುಖ್ಯಸ್ಥ ಪೆದ್ದಣ್ಣ ಬೀಡಲಾ, ಆಸ್ಪತ್ರೆ ಸೌಕರ್ಯಗಳ ನಿರ್ದೇಶಕ ಮಂಜುನಾಥ್, ರಾಘವೇಂದ್ರ, ಶಿಲ್ಪಾ ಮುತ್ತು ಕೃಷ್ಣ ಸೇರಿದಂತೆ ತಂಡದ ಸದಸ್ಯರು ಇದ್ದರು.



ಶಿಕ್ಷಕರು ಸಮಾಜದ ಅಮೂಲ್ಯ ಸಂಪತ್ತು

ಹೂವಿನಹಡಗಲಿ: ತಾಲೂಕಿನ ಬಾವಿಹಳ್ಳಿ ಗ್ರಾಮದಲ್ಲಿ ಸೋಮವಾರ ಇತ್ತೀಚೆಗೆ ವಯೋನಿವೃತ್ತಿ ಹೊಂದಿದ ಮುಖ್ಯ ಶಿಕ್ಷಕ ಹಾವನೂರು ಕೊಟ್ರಪ್ಪ ಅವರಿಗೆ ಅಭಿನಂದನಾ ಸಮಾರಂಭವನ್ನು ಹಮ್ಮಿಕೊಳ್ಳಲಾಗಿತ್ತು.

ಸಮಾರಂಭದ ಸಾನಿಧ್ಯವನ್ನು ವಹಿಸಿ ಮಾತನಾಡಿದ ಹಡಗಲಿ ಗವಿಸಿದ್ದೇಶ್ವರ ಮಠದ ಪೀಠಾಧಿಪತಿ ಡಾ.ಹಿರಿಶಾಂತವೀರ ಸ್ವಾಮೀಜಿ, ಕೊಟ್ರಪ್ಪ ಅವರಂತಹ ಸಮರ್ಪಿತ ಶಿಕ್ಷಕರು ಸಮಾಜದ ಅಮೂಲ್ಯ ಸಂಪತ್ತಾಗಿದ್ದಾರೆ. ತಮ್ಮ ಜೀವನವನ್ನೇ ಶಿಕ್ಷಣ ಸೇವೆಗೆ ಸಮರ್ಪಿಸಿದ ಶಿಕ್ಷಕರು ಸಮಾಜದ ಬೆಳವಣಿಗೆಗೆ ಮೂಲಸ್ತಂಭರಾಗಿದ್ದಾರೆ. ಅವರು ಕೇವಲ ಪಾಠ ಹೇಳುವವರಲ್ಲ, ವಿದ್ಯಾರ್ಥಿಗಳ ಭವಿಷ್ಯ ರೂಪಿಸುವ ಮಾರ್ಗದರ್ಶಕರು ಎಂದರು.

ತಾಲೂಕು ದೈಹಿಕ ಶಿಕ್ಷಣ ಪರಿವೀಕ್ಷಕ ರಫೀಕ್ ಅಹ್ಮದ್ ಖವಾಸ ಕೊಟ್ರಪ್ಪ, ತಾಲೂಕು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ವಿ.ಬಿ ಜಗದೀಶ್ ಮಾತನಾಡಿದರು.

ಹಾವನೂರು ಕೊಟ್ರಪ್ಪ ದಂಪತಿಗೆ ಸನ್ಮಾನಿಸಲಾಯಿತು.

ಎಸ್‌ಡಿಎಂಸಿ ಅಧ್ಯಕ್ಷ ಹುಲವತಿ ಸುಲೇಮಾನ್ ಅಧ್ಯಕ್ಷತೆ ವಹಿಸಿದ್ದರು.

ಮಾಹಿತಿ ಹಕ್ಕು ಸಂಪನ್ಮೂಲ ವ್ಯಕ್ತಿ ಎಎಂಪಿ ವಾಗೀಶ, ತಾಲೂಕು ಪದವಿಪೂರ್ವ ಉಪನ್ಯಾಸಕರ ಸಂಘದ ಅಧ್ಯಕ್ಷ ಬಸೆಟ್ಟಿ ಪ್ರಕಾಶ್, ಹರಪನಹಳ್ಳಿ ತಾಲೂಕು ಪಂಚಾಯಿತಿ ಮಾಜಿ ಅಧ್ಯಕ್ಷ ಬೇಲೂರು ಅಂಜನಪ್ಪ ನಿಲಗುಂದ, ಹಿರೇಮಲ್ಲನ ಕೆರೆ ಕ್ಲಸ್ಟರ್‌ನ ಸಮೂಹ ಸಂಪನ್ಮೂಲ ವ್ಯಕ್ತಿ ಸುನಿಲ್ ಆರ್., ಕರ್ನಾಟಕ ರಾಜ್ಯ ಸರ್ಕಾರಿ ನೌಕರ ಸಂಘದ ಸಹ ಕಾರ್ಯದರ್ಶಿ ಶಿವಕುಮಾರ್ ಗಡ್ಡಿ., ಮಾಜಿ ಗ್ರಾಪಂ ಉಪಾಧ್ಯಕ್ಷ ಎ.ಗುರುಬಸವರಾಜ, ಅಂಬಾಯಿ ರಮೇಶ್, ಗ್ರಾಪಂ ಮಾಜಿ ಅಧ್ಯಕ್ಷ ಬಾಣದ ಸಿದ್ದಮ್ಮ, ಮಾಜಿ ಸದಸ್ಯರಾದ ರವೀಶ ಎಲ್., ಜಬಿನಾಬಿ, ಎಸ್‌ಡಿಎಂಸಿ ಮಾಜಿ ಅಧ್ಯಕ್ಷ ಹುಗಲೂರು ಗೌರಮ್ಮ, ನಿವೃತ್ತ ಪಶು ನೀರಿಕ್ಷಕ ಪಿ.ಎಂ.ಚನ್ನವೀರಯ್ಯ, ಪತ್ರಕರ್ತ ಎಚ್.ಕೆ.ಮಹೇಶ. ಎಲ್.ತುಕಾರಾಮ್ ನಾಯ್ಕ ಇತರರಿದ್ದರು. ಬಾವಿಹಳ್ಳಿ ಸರಕಾರಿ ಶಾಲೆಯ ಶಿಕ್ಷಕ ಗುರುಬಸವರಾಜ, ಕಾವ್ಯ ಎಎಂಪಿ, ಸುಜಾತಾ, ಲೋಕನಾಥ್, ಪ್ರಭಾರಿ ಮುಖ್ಯಗುರು ಕೊಟ್ರಪ್ಪ ಕೊಟಗಿ ನಿರ್ವಹಿಸಿದರು.



ಗಾಣಗಟ್ಟೆ ಮಾಯಮ್ಮ ದೇವಿ ರಥೋತ್ಸವ



ಕೊಟ್ಟೂರು: ತಾಲೂಕಿನ ಗಾಣಗಟ್ಟೆ ಗ್ರಾಮದ ಅಧಿದೇವತೆ ಶ್ರೀಮಾಯಮ್ಮ ದೇವಿ ಮಹಾರಥೋತ್ಸವ ಲಕ್ಷಾಂತರ ಭಕ್ತರ ಸಮ್ಮುಖದಲ್ಲಿ ಬುಧವಾರ ಸಂಜೆ ಅದ್ದೂರಿಯಾಗಿ ಜರುಗಿತು.

ರಥೋತ್ಸವ ಪ್ರಯುಕ್ತ ದೇವಿ ದರ್ಶನಕ್ಕಾಗಿ ಬೆಳಗಿನಿಂದ ಭಕ್ತರು ದೇವಸ್ಥಾನದ ಮುಂಭಾಗದಲ್ಲಿ ನಿಂತು ದೇವಿ ದರ್ಶನ ಪಡೆದರು. ಸಂಜೆ ಹೊತ್ತಿನಲ್ಲಿ ದೇವಸ್ಥಾನದ ಮುಂದಿನ ಆವರಣದಲ್ಲಿನ ರಥದ ಬಳಿ ದೇವಿ ಮೂರ್ತಿಯನ್ನು ಸಕಲ ವಾದ್ಯಗಳೊಂದಿಗೆ ಕರೆತಂದ ಅರ್ಚಕರ ಬಳಗದವರು, ಮೂರು ಸುತ್ತು ಪ್ರದಕ್ಷಿಣೆ ಹಾಕಿ ದೇವಿ ಮೂರ್ತಿಯನ್ನು ರಥದಲ್ಲಿ ಪ್ರತಿಷ್ಠಾಪಿಸಿದರು. ನಂತರ ನಡೆದ ದೇವಿಯ ಪಟ ಹರಾಜಿನಲ್ಲಿ ಸೂಲದಹಳ್ಳಿ ಗ್ರಾಮದ ಗಾದ್ರೆಪ್ಪ ಎಂಬುವರು 2,10101 ರೂ.ಗಳಿಗೆ ಪಡೆದುಕೊಂಡರು. ಇದಾದ ಬಳಿಕ ರಥ ಚಾಲನೆಗೆ ಸೂಚನೆ ನೀಡುತ್ತಿದ್ದಂತೆ ನೆರೆದಿದ್ದ ಭಕ್ತರು ಸಾಗಿದ ರಥಕ್ಕೆ ಬಾಳೆಹಣ್ಣು ಎಸೆದು ಭಕ್ತಿ ಸಮರ್ಪಿಸಿದರು. ಪಾದಗಟ್ಟೆವರೆಗೆ ಸಾಗಿದ ರಥ ಮತ್ತೆ ಅದೇ ಮಾರ್ಗದಲ್ಲಿ ಬಂದು ದೇವಸ್ಥಾನ ಮುಂಭಾಗದಲ್ಲಿ ನೆಲೆ ನಿಂತಿತು.

ರಥಗಳಿಗೆ ಹಗ್ಗ ಕಟ್ಟಿ ಭಕ್ತರು ಎಳೆಯುವುದು ಸಾಮಾನ್ಯ. ಆದರೆ ಗಾಣಗಟ್ಟಿ ಮಾಯಮ್ಮ ದೇವಿ ರಥಕ್ಕೆ ಹಗ್ಗವನ್ನು ಕಟ್ಟಿರುವುದಿಲ್ಲ, ನೆರೆದ ಭಕ್ತರು ರಥವನ್ನು ತಳ್ಳಿ ಸಾಗಿಸುವುದು ವಿಶೇಷ. ಜಿಲ್ಲೆ ಸೇರಿ ಬಳ್ಳಾರಿ, ದಾವಣಗೆರೆ, ಚಿತ್ರದುರ್ಗ ಮತ್ತು ನೆರೆಯ ಆಂಧ್ರ, ತೆಲಂಗಾಣದಿಂದಲೂ ಭಕ್ತರು ಆಗಮಿಸಿದ್ದರು. ಕೂಡ್ಲಿಗಿ ಶಾಸಕ ಡಾ.ಎನ್.ಟಿ.ಶ್ರೀನಿವಾಸ ಹಾಗೂ ಇತರರು ಪಾಲ್ಗೊಂಡಿದ್ದರು. ಪೊಲೀಸರು ಸೂಕ್ತ ಬಂದೋಬಸ್ತು ಮಾಡಿದ್ದರು.

ವಿದ್ಯಾರ್ಥಿಗಳ ಕಲಿಕೆಗೆ ಪ್ರೋತ್ಸಾಹಿಸಿ

ಹಗರಿಬೊಮ್ಮನಹಳ್ಳಿ: ಜಯ ಕರ್ನಾಟಕ ಸಂಘಟನೆಯ ಕಾರ್ಯಕರ್ತರು ತಮ್ಮ ಸಂಘಟನೆಯ ರಾಜ್ಯಾಧ್ಯಕ್ಷರ ಹುಟ್ಟು ಹಬ್ಬದ ನಿಮಿತ್ತ ಸ್ಪೋಕನ್ ಇಂಗ್ಲಿಷ್ ಕಲಿಕೆಯುವ ಮಕ್ಕಳಿಗೆ ಟೆಸ್ಟ್ ನಡೆಸಿ ಬಹುಮಾನ ವಿತರಣೆ ಮಾಡುವುದು ವಿದ್ಯಾರ್ಥಿಗಳ ಕಲಿಕೆಯನ್ನು ಉತ್ತೇಜಿಸುವಂತಾಗಿದೆ ಎಂದು ಮಾಲವಿ ಗ್ರಾಪಂ ಪಿಡಿಒ ಶ್ರೀಕಾಂತ್ ನಾಯ್ಕ್ ತಿಳಿಸಿದರು.

ಗುರುವಾರ ಜಯ ಕರ್ನಾಟಕ ಸಂಘಟನೆಯ ರಾಜ್ಯಾಧ್ಯಕ್ಷ ಡಾ.ಜಗದೀಶ್ ಜನ್ಮದಿನದ ಅಂಗವಾಗಿ ತಾಲೂಕಿನ ಮಾಲವಿ ಗ್ರಾಮದ ಶ್ರೀಗುರು ಕೊಟ್ಟೂರೇಶ್ವರ ಪ್ರೌಢಶಾಲೆಯಲ್ಲಿ ಸ್ಪೋಕನ್ ಇಂಗ್ಲಿಷ್ ಕಲಿಯುತ್ತಿರುವ ಮಕ್ಕಳಿಗೆ ಟೆಸ್ಟ್ ನಡೆಸಿ ಇದರಲ್ಲಿ ಉತ್ತಮ ಅಂಕ ಪಡೆದ ವಿದ್ಯಾರ್ಥಿಗಳಿಗೆ ಜಯ ಕರ್ನಾಟಕ ಸಂಘಟನೆಯ ವತಿಯಿಂದ ಪ್ರಥಮ, ದ್ವಿತೀಯ, ತೃತೀಯ ಬಹುಮಾನ ವಿತರಿಸಿ ಮಾತನಾಡಿದ ಅವರು, ಜನ್ಮದಿನದ ನೆಪದಲ್ಲಿ ಹಲವು ದುಂದುವೆಚ್ಚ ಅರ್ಥವಿಲ್ಲದ ಆಡಂಬರದ ಕಾರ್ಯ ಮಾಡುವ ಬದಲು ಜಯ ಕರ್ನಾಟಕ ಸಂಘಟನೆಯ ಕಾರ್ಯಕರ್ತರು ಅರ್ಥ ಪೂರ್ಣ ಕಾರ್ಯಕ್ರಮವನ್ನು ಆಯೋಜಿಸಿದ್ದಾರೆ. ವಿದ್ಯಾರ್ಥಿಗಳ ಕಲಿಕೆಯನ್ನು ಉತ್ತೇಜಿಸುವ ಮತ್ತು ಮಕ್ಕಳಲ್ಲಿ ಸ್ಪರ್ಧಾತ್ಮಕ ಮನೋಭಾವ ಉಂಟು ಮಾಡುವ ಸ್ಫೂರ್ತಿದಾಯಕ ಕಾರ್ಯಕ್ರಮವಾಗಿದೆ ಎಂದರು.

ಗುರು ಕೊಟ್ಟೂರೇಶ್ವರ ಪ್ರೌಢಶಾಲೆಯ ನಿವೃತ್ತ ಶಿಕ್ಷಕ ಶಿವಪ್ರಕಾಶ್ ಹಾಗೂ ಜಯ ಕರ್ನಾಟಕ ಸಂಘಟನೆಯ ತಾಲೂಕು ಘಟಕದ ಗೌರವ ಅಧ್ಯಕ್ಷ ಪ್ರಕಾಶ್ ಮತ್ತು ಸಂಘಟನೆಯ ಸುಲ್ತಾನ್ ಸಾಬ್ ಬೋವಿ ಅಭಿಷೇಕ ಮಾತನಾಡಿದರು.

ಸ್ಪೋಕನ್ ಇಂಗ್ಲಿಷ್ ಶಿಕ್ಷಕರಾದ ಷಣ್ಮುಖಪ್ಪ ಹಾಗೂ ಮಂಜುನಾಥ ಹಾಗೂ ಸಂಘಟನೆಯ ಪದಾಧಿಕಾರಿಗಳಾದ ಅಕ್ಕಸಾಲಿ ರಮೇಶ್ ಕುಂಬಾರ್ ಸಿದ್ದೇಶ್ ವಿದ್ಯಾರ್ಥಿ ವಿದ್ಯಾರ್ಥಿನಿಯರು ಇತರರಿದ್ದರು.



ಎಸ್ಸಿಪಿ, ಟಿಎಸ್ಪಿ ಅನುದಾನ ಬಳಸುವುದಿಲ್ಲವೆಂದು ಸರ್ಕಾರ ಘೋಷಿಸಿಲಿ

ವಿಜಯನಗರ: ಯಾವುದೇ ಕಾರಣಕ್ಕೂ ಎಸ್‌ಸಿಪಿ/ಟಿಎಸ್‌ಪಿ ಅನುದಾನಕ್ಕೆ ಕೈಹಾಕುವುದಿಲ್ಲ, ಈ ಅನುದಾವನ್ನು ಇತರೆ ಉದ್ದೇಶಗಳಿಗೆ ಬಳಕೆ ಮಾಡುವುದಿಲ್ಲವೆಂದು ರಾಜ್ಯ ಬಜೆಟ್ ಮಂಡನೆ ವೇಳೆ ಮುಖ್ಯಮಂತ್ರಿ ಸಿದ್ದರಾಮಯ್ಯ ವಾಗ್ದಾನ ಮಾಡಬೇಕು ಎಂದು ಬಿಜೆಪಿ ಎಸ್ಸಿ ಮೋರ್ಚಾ ರಾಜ್ಯ ಸಮಿತಿ ಸದಸ್ಯ ಓದೋ ಗಂಗಪ್ಪ ಆಗ್ರಹಿಸಿದರು.

ಹೊಸಪೇಟೆಯ ಪತ್ರಿಕಾ ಭವನದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ಸರ್ಕಾರ ಸತತ 3 ವರ್ಷಗಳ ಕಾಲ ಗ್ಯಾರಂಟಿ ಯೋಜನೆಗಳ ಅನುಷ್ಠಾನಕ್ಕಾಗಿ ಎಸ್ ಸಿಎಸ್ ಪಿ-ಟಿಎಸ್ ಪಿಯ 39 ಸಾವಿರ ಕೋಟಿ ರೂ ದುರುಪಯೋಗ ಮಾಡಿಕೊಂಡಿದೆ. ಇದೀಗ ಮತ್ತೊಂದು ಬಜೆಟ್ ಮಂಡನೆ ಹೆಸರಿನಲ್ಲಿ ಸಿದ್ದರಾಮಯ್ಯನವರು ಮತ್ತೆ 15 ಸಾವಿರ ಕೋಟಿ ರೂ.ಗಳನ್ನು ಮುಳುಗಿಸಲು ಸಜ್ಜಾಗಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಒಳಗೊಳಗೆ '7ಸಿ' ಮೂಲಕ ದಲಿತರ ಮೀಸಲು ನಿಧಿಗೆ ಕನ್ನ ಹಾಕುತ್ತಿದ್ದಾರೆ ಎಂದು ಆರೋಪಿಸಿದರು.

ಕಳೆದ 2023 ರ ಚುನಾವಣಾ ಪ್ರಚಾರದಲ್ಲಿ ಸಿದ್ದರಾಮಯ್ಯನವರು' ಮಹದೇವಪ್ಪ ನಿಂಗೂ ಫ್ರೀ, ಕಾಕಾಪಾಟೀಲ ನಿಂಗೂ ಫ್ರೀ! ನಿನ್ನ ಹೆಂಡ್ತಿಗೂ ಫ್ರೀ, ನನ್ನ ಹೆಂಡ್ತಿಗೂ ಫ್ರೀ' ಎಂದು ಹೇಳಿದ್ದು ವ್ಯಾಪಕ ಪ್ರಚಾರ ಪಡೆದುಕೊಂಡಿತ್ತು. ಆದರೆ ಆದದ್ದು ಏನು? ಕಾಕಾಪಾಟೀಲರಿಗೆ ಖಜಾನೆ ಹಣದಿಂದ ಗ್ಯಾರಂಟಿ ಕೊಡಲಾಯಿತು. ಪಾಪಾ ಅದೇ ಮಹದೇವಪ್ಪನವರಿಗೆ ಎಸ್ ಸಿಎಸ್ ಪಿ-ಟಿಎಸ್ ಪಿ ಹಣದಿಂದ ಗ್ಯಾರಂಟಿ ಕೊಟ್ಟಿರುವುದು ಸರಿಯೇ. ಮುಸ್ಲಿಮರಿಗೆ ಗ್ಯಾರಂಟಿ ಸೌಲಭ್ಯ ಕೊಡಲು ಅಲ್ಪ ಸಂಖ್ಯಾತರ ಕಲ್ಯಾಣ ನಿಧಿ ಹಣಕ್ಕೆ ಕೈಹಾಕುವುದಿಲ್ಲ, ಅದೇ ದಲಿತರಿಗೆ, ಆದಿವಾಸಿಗಳಿಗೆ 'ದಲಿತರ ಮೀಸಲು ನಿಧಿ' ಯ ಹಣ ಕೈ ಹಾಕುವುದು ಇದು ಯಾವ ನ್ಯಾಯ ಎಂದು ಆಕ್ರೋಶ ವ್ಯಕ್ತಪಡಿಸಿದರು.




ಸಂವಿಧಾನ ರಕ್ಷಣೆ ಅಭಿಯಾನಕ್ಕೆ ಖಜಾನೆಯಿಂದ ಹಣ ಕೊಡಬೇಕು.ಕಳೆದ 3 ವರ್ಷದಿಂದ ದುರ್ಬಳಕೆಯಾಗಿರುವ 39ಸಾವಿರ ಕೋಟಿಗಳನ್ನು ದಲಿತರಿಗೆ ವಾಪಸ್ ಕೊಡಬೇಕು. 39 ಸಾವಿರ ಕೋಟಿ ಹಣದಲ್ಲಿ ಎಲ್ಲಾ ಜಿಲ್ಲೆಗಳ ದಲಿತರ ಅಭಿವೃದ್ಧಿಗೆ, ಮೂಲಭೂತ ಸೌಲಭ್ಯ ಒದಗಿಸಲು ತಲಾ ಒಂದು ಸಾವಿರ ಕೋಟಿ ಕೊಡಬೇಕು. ಎಲ್ಲಾ ಎಸ್ಸಿ ಎಸ್ಟಿ ನಿಗಮಗಳಿಗೆ ತಲಾ ಒಂದು ಸಾವಿರ ಕೋಟಿ ರೂ ಕನಿಷ್ಟ ಅನುದಾನ ಘೋಷಿಸಿ. ದುರ್ಬಳಕೆಗೆ ದಾರಿ ಮಾಡಿ ಕೊಡುತ್ತಿರುವ 7ಸಿ ಕಾಯ್ದೆಯನ್ನು ರದ್ದು ಮಾಡಬೇಕು ಎಂದು ಒತ್ತಾಯಿಸಿದರು. ಮುಖಂಡರಾದ ಕೃಷ್ಣ ನಾಯ್ಕ, ಜಗದೀಶ್ ಕಮಟಗಿ, ಶಂಕರ್ ಮೇಟಿ, ಅನುರಾಧ ಜೋಶಿ ಇತರರಿದ್ದರು.

ಮಾ.11ರಿಂದ ಅನಿರ್ದಿಷ್ಟಾವಧಿ ಮುಷ್ಕರ

ಸಿರುಗುಪ್ಪ: ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿ ನೌಕರರ ನ್ಯಾಯಯುತ ಬೇಡಿಕೆಗಳನ್ನು ಈಡೇರಿಸುವಂತೆ ಮುಖ್ಯಮಂತ್ರಿಗಳಿಗೆ ತಹಶೀಲ್ದಾರ್ ಮೂಲಕ ಉಪತಹಶೀಲ್ದಾರ್ ಸಿದ್ಧಾರ್ಥ ಕಾರಂಜಿ ಅವರಿಗೆ ಆರೋಗ್ಯ ನೌಕರರು ಮನವಿ ಸಲ್ಲಿಸಿದರು.

ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಟಿ.ಹುಚ್ಚೀರಪ್ಪ ಮಾತನಾಡಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ ನೌಕರರ ಸಂಖ್ಯೆ ವಯೋನಿವೃತ್ತಿ ಮತ್ತು ಇತರೆ ಕಾರಣಗಳಿಂದಾಗಿ ಕಡಿಮೆಯಾಗುತ್ತಿದ್ದು ಖಾಲಿ ಹುದ್ದೆಗಳು ಭರ್ತಿಯಾಗದೆ ಇರುವದರಿಂದ ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ ನೌಕರರ ಮೇಲೆ ಹೆಚ್ಚಿನ ಕಾರ್ಯ ಒತ್ತಡ ಉಂಟಾಗುತ್ತಿದ್ದು ನೌಕರರ ನ್ಯಾಯಯುತ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಲಾಗುವುದು ಎಂದರು. ನಮ್ಮ ಬೇಡಿಕೆಗಳನ್ನು ನಿಗದಿತ ಅವಧಿಯಲ್ಲಿ ಈಡೇರಿಸದಿದ್ದಲ್ಲಿ ಇಲಾಖೆಯ ಎಲ್ಲಾ ವೃಂದದ ಸಂಘಗಳ ಸಹಯೋಗದೊಂದಿಗೆ ಮಾ.11ರಿಂದ ಅನಿರ್ದಿಷ್ಟಾವಧಿ ಮುಷ್ಕರವನ್ನು ಹಮ್ಮಿಕೊಳ್ಳಲು ನಿರ್ಣಯವನ್ನು ಕೈಗೊಳ್ಳಲಾಗಿದೆ. ಮಾ.11 ರಿಂದ 15ರವರೆಗೆ ಕಪ್ಪು ಪಟ್ಟಿಧರಿಸಿ ಹೊರರೋಗಿಗಳ ಚಿಕಿತ್ಸೆಯನ್ನು ಸ್ಥಗಿತಗೊಳಿಸಿ, ತುರ್ತು ಸೇವೆಗಳನ್ನು ಮಾತ್ರ ನಿರ್ವಹಿಸಲಾಗುವುದು ಎಂದು ಎಚ್ಚರಿಸಿದರು.

ತಾಲೂಕು ವೈದ್ಯಾಧಿಕಾರಿ ದಮ್ಮೂರು ಬಸವರಾಜ, ತಾಲೂಕು ಸಾರ್ವಜನಿಕ ಆಸ್ಪತ್ರೆಯ ಆಡಳಿತ ಅಧಿಕಾರಿ ವೈದ್ಯ ವಿವೇಕಾನಂದ ಸೇರಿದಂತೆ ಆರೋಗ್ಯಕ್ಕೆ ಸಿಬ್ಬಂದಿ ಭಾಗವಹಿಸಿದ್ದರು.



ರಾಜ್ಯ ಬಜೆಟ್‌ನತ್ತ ಕೊಟ್ಟೂರಿಗರ ಚಿತ್ತ

ಅರವಿಂದ್ ಬಸಾಪುರ್

ಕೊಟ್ಟೂರು: ಕೊಟ್ಟೂರು ಹೆಸರಿಗಷ್ಟೇ ತಾಲೂಕು ಕೇಂದ್ರವಾಗಿದ್ದರೂ ಇಲ್ಲಿ ಸರ್ಕಾರಿ ಪದವಿ ಕಾಲೇಜು, ಸರ್ಕಾರಿ ಐಟಿಐ ಕಾಲೇಜು, ಬಸ್ ಡಿಪೋ, ಕೆರೆಗಳಿಗೆ ತುಂಗಭದ್ರಾ ನದಿಯಿಂದ ಶಾಶ್ವತ ನೀರು ತುಂಬಿಸುವ ಯೋಜನೆಗಳು ನೆನೆಗುದಿಗೆ ಬಿದ್ದಿದ್ದು ಈ ಸಾಲಿನ ಬಜೆಟ್‌ನಲ್ಲಾದರೂ ಈ ಬೇಡಿಕೆಗಳು ಈಡೇರುವಂತೆ ಬಜೆಟ್ ಪೂರಕವಾಗಿರಲಿ ಎಂಬ ನಿರೀಕ್ಷೆಯಲ್ಲಿ ಕೊಟ್ಟೂರು ತಾಲೂಕಿನ ಜನತೆ ಇದ್ದಾರೆ.

ಈ ಹಿಂದೆ ರಾಜ್ಯದಲ್ಲಿ ಬಿಜೆಪಿ ಸರ್ಕಾರವಿದ್ದಾಗ ಕಾಂಗ್ರೆಸ್‌ನ ಶಾಸಕರು, ಈಗ ಕಾಂಗ್ರೆಸ್ ಆಡಳಿತದಲ್ಲಿರುವಾಗ ಜೆಡಿಎಸ್‌ನ ಶಾಸಕರು ಕ್ಷೇತ್ರದಲ್ಲಿರುವುದರಿಂದ ವಿರೋಧ ಪಕ್ಷಗಳ ಶಾಸಕರ ಕ್ಷೇತ್ರಗಳ ಅಭಿವೃದ್ಧಿಗೆ ಸರಿಯಾದ ಅನುದಾನ ದೊರಕುತ್ತಿಲ್ಲ ಎಂಬ ಆರೋಪವಿದ್ದು, ನಿಧಾನ ಗತಿಯಲ್ಲಿ ಸಾಗುತ್ತಿರುವ ಅಭಿವೃದ್ಧಿಯನ್ನು ಗಮನಿಸಿದಾಗ ಇದು ನಿಜ ಅನಿಸುತ್ತದೆ.

ಕೊಟ್ಟೂರು ಬರಪೀಡಿತ ತಾಲೂಕು ಎಂಬ ಹಣೆ ಪಟ್ಟಿ ಹೊಂದಿದ್ದು ಇದನ್ನು ಹೋಗಲಾಡಿಸಬೇಕಾದರೆ ಕೊಟ್ಟೂರು ಸೇರಿ ತಾಲೂಕಿನ ಎಲ್ಲಾ ಕೆರೆಗಳನ್ನು ತುಂಗಭದ್ರಾ ನದಿಯಿಂದ ನೀರು ತುಂಬಿಸುವ ಯೋಜನೆ ಸಾಕಾರಗೊಳ್ಳಬೇಕಾಗಿದೆ. ಪಕ್ಕದ ಕೂಡ್ಲಿಗಿ ತಾಲೂಕಿನ ಕೆರೆಗಳಿಗೆ ತುಂಗಭದ್ರಾ ನದಿಯಿಂದ ನೀರು ತುಂಬಿಸುವ ಯೋಜನೆಯ ಪೈಪ್‌ಲೈನ್ ಕೊಟ್ಟೂರು ಸಮೀಪವೇ ಹಾದು ಹೋಗಿದ್ದರು ಕೂಡ ನೀರು ತುಂಬಿಸುವ ಯೋಜನೆಯಿಂದ ಕೊಟ್ಟೂರು ಕೆರೆ ವಂಚಿತವಾಗಿದೆ. ಈ ಸಾಲಿನ ಬಜೆಟ್ ನಲ್ಲಾದರೂ ಕೆರೆ ತುಂಬಿಸುವ ಯೋಜನೆಗೆ ಅನುದಾನವನ್ನು ಒದಗಿಸಬೇಕೆಂಬುದು ತಾಲೂಕಿನ ರೈತರ ಬೇಡಿಕೆಯಾಗಿದೆ.

ಕೊಟ್ಟೂರು ಎಪಿಎಂಸಿ ಜಿಲ್ಲೆಯಲ್ಲಿಯೇ ಎರಡನೇ ದೊಡ್ಡ ಮಾರುಕಟ್ಟೆಯಾಗಿದ್ದು ತಾಲೂಕಿನಲ್ಲಿ ರೈತರು ಅತಿ ಹೆಚ್ಚು ಈರುಳ್ಳಿ ಮತ್ತು ಮೆಕ್ಕೆಜೋಳವನ್ನು ಬೆಳೆಯುತ್ತಿದ್ದು ಇವುಗಳನ್ನು ಸಂರಕ್ಷಿಸಲು ಸರಿಯಾದ ಗೋಧಾಮಗಳಿಲ್ಲ. ಆದ್ದರಿಂದ ರೈತರ ಬೆಳೆದ ಧಾನ್ಯಗಳನ್ನು ರಕ್ಷಿಸಲು ಕೋಲ್ಡ್ ಸ್ಟೋರೇಜ್ ಘಟಕ ಹಾಗೂ ಹೆಚ್ಚಿನ ಪ್ರಮಾಣದ ಗೋಧಾಮುಗಳನ್ನು ನಿರ್ಮಿಸಲು ಬಜೆಟ್‌ನಲ್ಲಿ ಅನುದಾನವನ್ನು ಒದಗಿಸಬೇಕೆಂಬುದು ರೈತರ ಬೇಡಿಕೆಯಾಗಿದೆ.

ಒಟ್ಟಾರೆಯಾಗಿ ಈ ಸಾಲಿನ ಬಜೆಟ್ ನಲ್ಲಾದರೂ ಕೊಟ್ಟೂರಿಗರು ನಿರೀಕ್ಷೆ ಹೊಂದಿರುವ ಈ ಎಲ್ಲಾ ಯೋಜನೆಗಳು ಈ ಸಾಲಿನ ಬಜೆಟ್ ನಲ್ಲಿ ಸಾಕಾರಗೊಳ್ಳಬೇಕೆಂಬುದು ನಾಗರಿಕರ ಬಯಕೆಯಾಗಿದೆ.

> ಕ್ಷೇತ್ರದ 17 ಕೆರೆಗಳಿಗೆ ನೀರು ತುಂಬಿಸುವ ಯೋಜನೆಗೆ ರಾಜ್ಯ ಸರ್ಕಾರ ಅನುದಾನ ಒದಗಿಸಬೇಕು. ಜೊತೆಗೆ ಸರ್ಕಾರಿ ಪದವಿ ಕಾಲೇಜು ಸ್ಥಾಪನೆಗೂ ಸಹ ಒತ್ತಾಯಿಸಲಾಗಿದೆ. ರಾಜ್ಯ ಸರ್ಕಾರದ ಮೇಲೆ ಒತ್ತಡ ತಂದು ತಾಲೂಕು ಕೇಂದ್ರದಲ್ಲಿ ಇಲಾಖೆಗಳ ಕಚೇರಿಗಳ ಆರಂಭಕ್ಕೆ ಒತ್ತಾಯಿಸಲಾಗಿದೆ.
>
> ■ ಕೆ.ನೇಮೀರಾಜ್ ನಾಯ್ಕ್, ಶಾಸಕ